ಪುನರ್ವಸತಿ ಎನ್ನುವುದು ಜನಕೇಂದ್ರಿತ ಪ್ಯಾಕೇಜ್ ಆಗಿರದೇ ಕೇವಲ ಅರಣ್ಯ ಕೇಂದ್ರಿತ ಪ್ಯಾಕೇಜ್ ಆಗಿದೆ ಎಂದು ಅರಣ್ಯವಾಸಿಗಳು ಆರೋಪಿಸುತ್ತಾರೆ. 18 ವರ್ಷದ ಒಳಗೆ ಎಷ್ಟೇ ಮಕ್ಕಳಿದ್ದರೂ ಪತಿ, ಪತ್ನಿ ಇಬ್ಬರಿಗೂ ಸೇರಿದಂತೆ ಕೊಡುವುದು ಕೇವಲ ₹ 15 ಲಕ್ಷ. ಇಷ್ಟರಲ್ಲಿ ಕಾಡಿನಿಂದ ಹೊರಗೆ ಜಮೀನು ಖರೀದಿಸಿ ಮನೆ ಕಟ್ಟಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದಕ್ಕೆ ಸಾಧ್ಯವೇ ಎಂಬುದು ಅವರ ಪ್ರಶ್ನೆ. ಹೋಗಲಿ, ಪುನರ್ವಸತಿ ಯೋಜನೆಯನ್ನಾದರೂ ಒಪ್ಪೋಣ ಎಂದರೆ, ಈಗಾಗಲೆ ಪುನರ್ವಸತಿಗೊಂಡಿರುವವರಿಗೆ ನೀಡಿರುವ ಮನೆಗಳು, ಅವರಿಗೆ ಕೊಟ್ಟಿರುವ ಸೌಲಭ್ಯಗಳು, ಅವರನ್ನು ನಡೆಸಿಕೊಳ್ಳುತ್ತಿರುವ ರೀತಿ ನೋಡಿದರೆ ಕಾಡಿನೊಳಗೆ ವನ್ಯಜೀವಿಗಳೊಂದಿಗೆ ಬದುಕುವುದೇ ವಾಸಿ ಎಂದು ಅರಣ್ಯವಾಸಿಗಳು ಹೇಳುತ್ತಾರೆ.

ಪ್ಯಾಕೇಜ್ ಒಪ್ಪಿದರೂ ಕೃಷಿ ಮಾಡಲು ಬರದ ಗಿರಿಜನರಿಗೆ ನಾಗರೀಕ ಸಮಾಜಕ್ಕೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ. ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡಿದರೆ ಅನುಕೂಲವಾಗುತ್ತದೆ ಎನ್ನುವ ಆಗ್ರಹ ಸಹ ಇದೆ. ಪ್ಯಾಕೇಜ್ ಮೊತ್ತವನ್ನು ಏರಿಕೆ ಮಾಡಿ, ಪುನರ್ವಸತಿ ಹೊಂದುವ ಗಿರಿಜನರಿಗೆ ಯೋಜನಾ ನಿರಾಶ್ರಿತ ಪ್ರಮಾಣಪತ್ರ ನೀಡಿ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು ಎಂದು ಪರಿಸರ ಕಾರ್ಯಕರ್ತ ಗಿರಿಧರ ಕುಲಕರ್ಣಿ ಮಾಡಿರುವ ಮನವಿಗೆ ಸರ್ಕಾರ ಕಿವುಡಾಗಿದೆ.

ಒತ್ತುವರಿದಾರರಿಗೂ ಪರಿಹಾರ: ಇದೇ ಮಾರ್ಚ್ 10ರಂದು ವಿಧಾನ ಪರಿಷತ್ ಸದಸ್ಯ ಎಸ್. ರವಿ ಅವರು ಕನಕಪುರ ತಾಲ್ಲೂಕಿನ ಕುರಿಮಂದೆ ಹಾಗೂ ಸಂಭಾಪುರ ಗ್ರಾಮಗಳ ಜನರಿಗೆ ಪರ್ಯಾಯ ವಾಸಸ್ಥಳ ಕಲ್ಪಿಸುವ ಕುರಿತು ಕೇಳಿದ್ದ ಪ್ರಶ್ನೆಗೆ ಉತ್ತರಿಸಿದ್ದ ಅರಣ್ಯ ಸಚಿವರು, 'ಸದರಿ ಗ್ರಾಮಗಳು ಅರಣ್ಯ ಒತ್ತುವರಿ ಗ್ರಾಮಗಳಾಗಿದ್ದು, ಇಲ್ಲಿರುವ ಜನರಿಗೆ ಪರ್ಯಾಯ ಗ್ರಾಮ ಅಥವಾ ವಾಸಸ್ಥಳ ಕಲ್ಪಿಸಲು ಕಾನೂನಿನ ಅಡಿಯಲ್ಲಿ ಅವಕಾಶವೇ ಇಲ್ಲ' ಎಂದು ಉತ್ತರಿಸಿದ್ದಾರೆ.

ಕುಳಗಿ ವನ್ಯಜೀವಿ ವಲಯ ವ್ಯಾಪ್ತಿಯ ಕಲಭಾವಿ, ಆಡಿಟ್ ಸಂಖ್ಯೆ 2, ಅಮಗಾವ್ ಹಾಗೂ ಕುಂಬಾರವಾಡ ವನ್ಯಜೀವಿ ವಲಯ ವ್ಯಾಪ್ತಿಯ ಸುಲಾವಳಿ ಸೇರಿದಂತೆ ಹಲವೆಡೆ ಅರಣ್ಯ ಅತಿಕ್ರಮಣ ಆಗಿದೆ ಎಂದು ಪುನರ್ವಸತಿ ಪೂರ್ವಭಾವಿ ಸಭೆಯಲ್ಲಿ ಅಂದಿನ ಡಿಸಿಎಫ್ ಅವರೇ ಮಾಹಿತಿ ನೀಡಿದ್ದರು. ಈ ಮಾಹಿತಿ ಸಭೆಯ ನಡಾವಳಿಯಲ್ಲಿ ದಾಖಲಾಗಿದೆ. ಆದರೂ ಅಲ್ಲಿದ್ದ ನೂರಾರು ಕುಟುಂಬಗಳಿಗೆ ಪರಿಹಾರ ನೀಡಿ ಸ್ಥಳಾಂತರಿಸಲಾಗಿದೆ. ಅರಣ್ಯ ಒತ್ತುವರಿಯು ಶಿಕ್ಷಾರ್ಹ ಅಪರಾಧ. ಹೀಗಿರುವಾಗ, ಒತ್ತುವರಿ ಮಾಡಿದವರಿಗೆ ಪರಿಹಾರ ನೀಡಿ ಸ್ಥಳಾಂತರಿಸಿದ್ದು, ಕಾಯ್ದೆಗಳ ಉಲ್ಲಂಘನೆ. ಅಧಿಕಾರಿಗಳೇ ಕಾನೂನು ಮುರಿದರೆ ಯಾರ ಬಳಿ ದೂರುವುದು ಎಂದು ಪರಿಸರವಾದಿಗಳ ತಕರಾರು ತೆಗೆಯುತ್ತಾರೆ.

ನಡೆಯದ ಗ್ರಾಮಸಭೆ: ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಭೀಮಗಡ ಅಭಯಾರಣ್ಯದ ತಳೇವಾಡಿ ಗ್ರಾಮಸ್ಥರ ಸ್ಥಳಾಂತರ ಪ್ರಕ್ರಿಯೆ ಕೂಡ ಅನುಮಾನಗಳನ್ನು ಹುಟ್ಟುಹಾಕಿದೆ. ಇಲ್ಲಿ ಈಗಲೂ 13 ಹಾಡಿಗಳಿವೆ. 754 ಕುಟುಂಬಗಳಿವೆ. 3,059 ಜನ ವಾಸವಿದ್ದಾರೆ. ಇದರಲ್ಲಿ ತಳೇವಾಡಿಯ ಜನ ಮಾತ್ರ ಸ್ಥಳಾಂತರಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಮೇ 17ರಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ತಲಾ ₹ 10 ಲಕ್ಷದ ಪರಿಹಾರದ ಚೆಕ್ ಕೂಡ ನೀಡಿದ್ದಾರೆ. ಇಲ್ಲಿನ ಕುಟುಂಬಗಳ ಪುನರ್ವಸತಿ ಕುರಿತು 2024ರ ಆಗಸ್ಟ್‌ನಲ್ಲಿ ಜರುಗಿದ ಸಭೆಗೆ ಯಾವೊಬ್ಬ ಅಧಿಕಾರಿಯೂ ಹಾಜರಾಗಿಲ್ಲ. 2025ರ ಜನವರಿಯಲ್ಲಿ ಜರುಗಿದ ಸಭೆಗೂ ಕಿರಿಯ ಅಧಿಕಾರಿಗಳು ಮಾತ್ರ ಹಾಜರಾದರು.

'ಸ್ಥಳಾಂತರಕ್ಕೂ ಮುನ್ನ ಗ್ರಾಮಸಭೆ ನಡೆಸಿ ಪ್ರಸ್ತಾವಗಳನ್ನು ಜಿಲ್ಲಾ ಮಟ್ಟದ ಸಮಿತಿ ಮುಂದೆ ಇಡಬೇಕು ಎಂದು ಕೇಂದ್ರ ಬುಡಕಟ್ಟು ಸಚಿವಾಲಯದ ನಿಯಮ ಇದ್ದರೂ ತಳೇವಾಡಿಯಲ್ಲಿ ಗ್ರಾಮಸಭೆಯನ್ನೇ ನಡೆಸಿಲ್ಲ. ಬದಲಿಗೆ ಅರಣ್ಯ ಇಲಾಖೆಯ ಕೋರಿಕೆ ಮೇರೆಗೆ 'ನಿರಾಕ್ಷೇಪಣಾ ಪತ್ರ' ನೀಡಲಾಗಿದೆ ಎಂಬುದು ಮಾಹಿತಿ ಹಕ್ಕು ಕಾಯ್ದೆ ಅಡಿ ಗೊತ್ತಾಗಿದೆ. ಸ್ಥಳಾಂತರ ಮಾಡುವ ಪೂರ್ವದಲ್ಲಿ ಹಕ್ಕುಗಳನ್ನು ಗುರುತಿಸಿ ಇತ್ಯರ್ಥ ಮಾಡುವ ಪ್ರಕ್ರಿಯೆ ಆಗಬೇಕು ಹಾಗೂ ಗ್ರಾಮ ಸಭೆಯ ಒಪ್ಪಿಗೆಯನ್ನು ಕಡ್ಡಾಯವಾಗಿ ಪಡೆಯಬೇಕು. ಆದರೆ, ತಳೇವಾಡಿ ಗ್ರಾಮಸ್ಥರ ಪುನರ್ವಸತಿ ವಿಚಾರದಲ್ಲಿ ಈ ಎಲ್ಲ ನಿಯಮ ಉಲ್ಲಂಘಿಸಲಾಗಿದೆ' ಎಂದು ಬೆಳಗಾವಿಯ ಆರ್‌ಟಿಐ ಕಾರ್ಯಕರ್ತ ರಾಘವೇಂದ್ರ ಆರೋಪಿಸುತ್ತಾರೆ.

ಈ ಕುರಿತು ಪ್ರತಿಕ್ರಿಯಿಸಿದ ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, 'ಅರಣ್ಯವಾಸಿಗಳು ಇಚ್ಛಿಸಿದಲ್ಲಿ ಮಾತ್ರ ಸ್ಥಳಾಂತರಿಸಲು ಕೇಂದ್ರ ಸರ್ಕಾರದ ಅನುಮತಿ ಇದೆ. ಇದಕ್ಕೆ ಗ್ರಾಮಸಭೆ ನಡೆಸಿ ನಿರ್ಣಯ ಅಂಗೀಕರಿಸಬೇಕು ಎಂಬ ನಿಯಮವಿಲ್ಲ. ತಳೇವಾಡಿ ಗ್ರಾಮ ಸ್ಥಳಾಂತರದಲ್ಲಿ ಯಾವುದೇ ಲೋಪ ಆಗದಂತೆ ಕ್ರಮ ವಹಿಸಲಾಗಿದೆ. 27 ಕುಟುಂಬಗಳು ಈಗಾಗಲೇ ಸ್ವಯಂಪ್ರೇರಣೆಯಿಂದ ಹೊರಬರಲು ಒಪ್ಪಿಕೊಂಡಿವೆ. ತಲಾ ಕುಟುಂಬಕ್ಕೆ ₹ 10 ಲಕ್ಷದ ಚೆಕ್ ನೀಡಲಾಗಿದೆ. 2ನೇ ಕಂತಿನಲ್ಲಿ ₹ 5 ಲಕ್ಷ ನೀಡಲಾಗುವುದು' ಎಂದು ಹೇಳಿದರು.

ಸಂಪುಟ ಸಭೆ ನಡೆದರೂ ಮುಗಿಯದ ಬವಣೆ: ಮಲೆ ಮಹದೇಶ್ವರ ಬೆಟ್ಟದಲ್ಲಿ ಈಚೆಗೆ ಸಂಪುಟ ಸಭೆ ನಡೆದರೂ ಅಲ್ಲಿನ ಗಿರಿಜನರಿಗೆ ಅಭಿವೃದ್ಧಿ ಕುರಿತ ಲವಲೇಶ ಭರವಸೆಯೂ ಇಲ್ಲ. ಇಲ್ಲಿರುವ 11 ಹಾಡಿಗಳಲ್ಲಿ 9 ಹಾಡಿಗಳಿಗೆ ಇನ್ನೂ ವಿದ್ಯುತ್ ಸಂಪರ್ಕವೇ ಇಲ್ಲ. ರಸ್ತೆ ಸೌಲಭ್ಯವಂತೂ ಹೇಳತೀರದಾಗಿದೆ. ಅನಾರೋಗ್ಯಪೀಡಿತರನ್ನು ಡೋಲಿಯಲ್ಲಿ ಎತ್ತಿಕೊಂಡು ಹೋಗಬೇಕಿದೆ. ಎಷ್ಟೋ ಗರ್ಭಿಣಿಯರಿಗೆ ಹೀಗೆ ಎತ್ತಿಕೊಂಡು ಹೋಗುವಾಗಲೇ ಹೆರಿಗೆಯಾಗಿದೆ. 'ಬರೀ ಭರವಸೆಗಳಷ್ಟೇ ಸಿಗುತ್ತಿವೆ. ಊರು ಹುಟ್ಟಿದಾಗ ಹೇಗಿತ್ತೋ ಹಾಗೆಯೇ ನಮ್ಮ ಪರಿಸ್ಥಿತಿ ಇದೆ' ಎಂದು ನಿರಾಶೆಯಿಂದ ಹೇಳುತ್ತಾರೆ ಇಲ್ಲಿನ ಮೆಂದಾರೆ ಗ್ರಾಮ ಪಂಚಾಯಿತಿ ಸದಸ್ಯ ಮಾದಯ್ಯ.

ಇಂತಹ ಉಸಿರುಗಟ್ಟುವ ಸ್ಥಿತಿಯ ವಿರುದ್ಧ ಸಿಡಿದೆದ್ದ ಇಂಡಿಗನತ್ತ ಗ್ರಾಮಸ್ಥರು ಕಳೆದ ವಿಧಾನಸಭಾ ಚುನಾವಣೆಯ ವೇಳೆ ಮತಗಟ್ಟೆಯನ್ನೇ ಧ್ವಂಸಗೊಳಿಸಿ ಆಕ್ರೋಶ ವ್ಯಕ್ತಪಡಿಸಿದ್ದರು. ಆದರೆ ಪುನರ್ವಸತಿಗೆ ಒಪ್ಪಿದ ಅರಣ್ಯದಂಚಿನ ಚಂಗಡಿ ಗ್ರಾಮಸ್ಥರು ಇನ್ನೂ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ವರ್ಷಗಳು ಉರುಳಿದರೂ ಇದರ ಕಡತ ಸರ್ಕಾರದ ತಿಜೋರಿಯಲ್ಲೆ ದೂಳು ತಿನ್ನುತ್ತಿದೆ.

ಕಾಡಿನಲ್ಲಿರುವ ದಯನೀಯ ಪರಿಸ್ಥಿತಿ ಬೇಡ ಎಂದು ಸರ್ಕಾರದ ಮಾತುಗಳನ್ನು ನಂಬಿ ಕಾಡಿನಿಂದ ಹೊರ ಬಂದ ನಾಗರಹೊಳೆ ಗಿರಿಜನ ಸಮುದಾಯದವರ ಬದುಕು ಹಸನಾಗಿಲ್ಲ. 3,418 ಕುಟುಂಬಗಳು 1972 ರಿಂದಲೂ ಪುನರ್ವಸತಿಗಾಗಿ ಹೋರಾಟ ನಡೆಸಿವೆ ಎನ್ನುತ್ತಾರೆ 'ಡೀಡ್' ಸಂಸ್ಥೆಯ ನಿರ್ದೇಶಕ ಶ್ರೀಕಾಂತ್.

ಪುನರ್ವಸತಿಯಾದ ಕೇಂದ್ರದಲ್ಲೂ ಮೂಲಸೌಕರ್ಯ ಮರೀಚಿಕೆ ಎನಿಸಿದೆ. ಕೊಟ್ಟಿರುವ ಭೂಮಿಯನ್ನು ಶುಂಠಿ ಬೆಳೆಯುವವರಿಗೆ ಗುತ್ತಿಗೆ ನೀಡಿದ್ದು, ಲಾಭ ಶುಂಠಿ ಬೆಳೆಗಾರರ ಪಾಲಾಗುತ್ತಿದೆ. ಕಾಡಿನೊಳಗೆ ಇದ್ದಿದ್ದರೆ ಚೆನ್ನಾಗಿತ್ತು ಎಂಬ ಭಾವನೆ ಹಲವರಲ್ಲಿವೆ. ಈ ಪರಿಸ್ಥಿತಿ ಕಂಡ ಬಹಳಷ್ಟು ಹಾಡಿಗಳ ನಿವಾಸಿಗಳು ಕಾಡಿನಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ.

ಅತ್ತ ಮೂಲ ಸೌಕರ್ಯವೂ ಇಲ್ಲ, ಇತ್ತ ಪುನರ್ವಸತಿಯೂ ಇಲ್ಲದಂತಹ ಸ್ಥಿತಿ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಸುತ್ತಮುತ್ತ ಮತ್ತು ಉದ್ಯಾನದೊಳಗೇ ಇರುವ ಹಳ್ಳಿಗಳದ್ದಾಗಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗಿನ ಕಂದಾಯ ಜಾಗದಲ್ಲಿರುವ 1,300 ಕುಟುಂಬಗಳನ್ನು ಅರಣ್ಯ ಇಲಾಖೆ ಗುರುತಿಸಿದೆ. ಅವುಗಳ ಪೈಕಿ 650 ಕುಟುಂಬಗಳು ಸ್ವಇಚ್ಛೆಯಿಂದ ಹೊರಬರಲು ಒಪ್ಪಿದ್ದು, 350 ಸ್ಥಳಾಂತರವೂ ಆಗಿದೆ. ಇನ್ನೂ 300ಕ್ಕೂ ಹೆಚ್ಚು ಕುಟುಂಬಗಳು ಹೊರಬರಲು ಸಾಧ್ಯವಾಗಿಲ್ಲ. ಅದಕ್ಕೆ ಬೇಕಿರುವ ಪ್ರಕ್ರಿಯೆ ಮತ್ತು ಜಾಗ ಗುರುತಿಸುವ ಕೆಲಸ ಆಗಿಲ್ಲ. ಸ್ಥಳಾಂತರದ ಕನವರಿಕೆಯಲ್ಲೇ ಕಾಡಿನ ವಾಸ ಗಿರಿಜನರಿಗೆ ಮುಂದುವರಿದಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನದ ಕಾಡಂಚಿನ ಹಳ್ಳಿಗಳಿಗೆ ರಸ್ತೆ ಮಾಡಲು ಅರಣ್ಯ ಅವಕಾಶ ನೀಡುತ್ತಿಲ್ಲ. ಅವರನ್ನು ಅಲ್ಲಿಂದ ಹೊರಗೆ ತರಬೇಕು ಎಂಬ ಉದ್ದೇಶ ಇದೆ. ಆದರೆ, ಆ ಪ್ರಕ್ರಿಯೆ ಆಗದೆ, ಇತ್ತ ರಸ್ತೆ ಸೇರಿ ಮೂಲ ಸೌಕರ್ಯ ಇಲ್ಲವಾಗಿದೆ. ಇಷ್ಟೆಲ್ಲ ಸಮಸ್ಯೆಗಳಿಂದ ಕಾಡಿನೊಳಗೆ ಜನರು ನರಳುತ್ತಿದ್ದರೂ ಅರಣ್ಯ ಇಲಾಖೆ ಸಫಾರಿಗಾಗಿ ಎಲ್ಲ ಬಗೆಯ ಮೂಲಸೌಕರ್ಯ ನೀಡಿ, ಲಾಭ ಮಾಡಿಕೊಳ್ಳುತ್ತಿದೆ. ಇದು ಕಾಡಿನೊಳಗಿನ ಜನರಲ್ಲಿ ಸಿಟ್ಟು ತರಿಸಿದ್ದು, 'ನಮಗೊಂದು ನಿಯಮ, ಅವರಿಗೊಂದು ನಿಯಮವಾ' ಎಂದು ಕೋಪದಲ್ಲೇ ಪ್ರಶ್ನಿಸುತ್ತಾರೆ.

ಪರಿಕಲ್ಪನೆ: ಜಿ.ಡಿ.ಯತೀಶ್‌ಕುಮಾರ್
ಪೂರಕ ಮಾಹಿತಿ: ಎಸ್.ರವಿಪ್ರಕಾಶ್, ಮಲ್ಲಿಕಾರ್ಜುನ ನಾಲವಾರ, ಎಚ್.ಎಸ್.ಸಚ್ಚಿತ್, ಮೋಹನ್‌ಕುಮಾರ್ ಸಿ., ಬಿ.ಜೆ.ಧನ್ಯಪ್ರಸಾದ್, ಸಂತೋಷ್ ಚಿನಗುಡಿ, ಎಸ್.ಕೆ.ವಿಜಯಕುಮಾರ್.

ಹುಲಿ ಯೋಜನೆಯಡಿ ಪುನರ್ವಸತಿ; ಯಾವುದಕ್ಕೆ ಎಷ್ಟು ಹಣ?

ಹುಲಿ ಯೋಜನೆಯ ಪುನರ್ವಸತಿ ಯೋಜನೆಯಡಿ ಸ್ಥಳಾಂತರಗೊಳ್ಳುವ ಕುಟುಂಬಗಳಿಗೆ ತಲಾ ₹15 ಲಕ್ಷ ನೀಡಲಾಗುತ್ತದೆ. 2021ಕ್ಕೂ ಮೊದಲು ಈ ಮೊತ್ತ ₹10 ಲಕ್ಷ ಇತ್ತು. ಇದರಲ್ಲಿ ಎರಡು ಆಯ್ಕೆಗಳಿವೆ. ಪುನರ್ವಸತಿ ಅಥವಾ ಸ್ಥಳಾಂತರಕ್ಕೆ ಒಪ್ಪುವ ಆದರೆ, ಅರಣ್ಯ ಇಲಾಖೆಯಿಂದ ಪುನರ್ವಸತಿಗೆ ಒಪ್ಪದ ಕುಟುಂಬಗಳಿಗೆ ₹15 ಲಕ್ಷ ನೀಡಲಾಗುತ್ತದೆ. ಇವರಿಗೆ ಅರಣ್ಯ ಇಲಾಖೆಯಿಂದ ಯಾವುದೇ ರೀತಿ ವ್ಯವಸ್ಥೆ ಮಾಡಿಕೊಡುವುದಿಲ್ಲ. ಪುನರ್ವಸತಿಗೆ ಒಪ್ಪುವ ಕುಟುಂಬಗಳಿಗೆ ಕೃಷಿ ಭೂಮಿ,ಮನೆ, ಹಕ್ಕುಪತ್ರ, ಪ್ರೋತ್ಸಾಹ ಧನ ಮತ್ತು ಸಮುದಾಯ ಸೌಲಭ್ಯಗಳನ್ನೂ ನೀಡುತ್ತದೆ. ₹15 ಲಕ್ಷ ವೆಚ್ಚದಲ್ಲಿ ಇವೆಲ್ಲವನ್ನೂ ಮಾಡಿಕೊಡಲಾಗುತ್ತದೆ.

ಒಂದು ಕುಟುಂಬದಲ್ಲಿ ಗಂಡ– ಹೆಂಡತಿ ಮತ್ತು ಅವರಿಗೆ 18 ವರ್ಷ ವಯಸ್ಸು ಮೀರಿದ ಮಕ್ಕಳಿದ್ದರೆ, ಆ ಮಕ್ಕಳಲ್ಲಿ, ಅವಿವಾಹಿತ ಗಂಡು ಅಥವಾ ಹೆಣ್ಣಿದ್ದರೆ ಅವರಿಗೆ ತಲಾ ₹15 ಲಕ್ಷ ನೀಡಬೇಕು ಎಂಬ ನಿಯಮವಿದೆ. ಅವರಿಗೆ ವಿವಾಹವಾಗಿದ್ದರೆ, ಪ್ಯಾಕೇಜ್ ಮೊತ್ತ ಅನ್ವಯವಾಗುವುದಿಲ್ಲ. ಆದರೆ, ಸರ್ಕಾರಗಳು 18 ಮೀರಿದ ಅವಿವಾಹಿತರಿಗೆ ಹಣ ನೀಡುತ್ತಿಲ್ಲ ಎಂಬ ಆರೋಪವಿದೆ.

ಪ್ಯಾಕೇಜ್ ಮೊತ್ತದ ಬಳಕೆ ಹೇಗೆ?: ಕೃಷಿ ಭೂಮಿ ಪಡೆದು ಅಭಿವೃದ್ಧಿ ಮಾಡಲು ಪ್ಯಾಕೇಜ್‌ನ ಮೊತ್ತದಲ್ಲಿ ಶೇ 35 ಬಳಸಲಾಗುತ್ತದೆ. ಮನೆ ಕಟ್ಟಿಕೊಳ್ಳಲು ಜಾಗ ಮತ್ತು ಮನೆ ನಿರ್ಮಾಣಕ್ಕೆ ಶೇ 30 ರಷ್ಟು ಹಣ. ಪ್ರೋತ್ಸಾಹ ಧನಕ್ಕೆ ಶೇ 5. ಸಮುದಾಯ ಸೌಲಭ್ಯಗಳಾದ ಸಂಪರ್ಕ ರಸ್ತೆ, ನೀರಾವರಿ, ಕುಡಿಯುವ ನೀರು ವಿದ್ಯುತ್ ಮತ್ತು ಇತರ ಸೌಲಭ್ಯಗಳಿಗೆ ಪ್ಯಾಕೇಜ್‌ನ ಶೇ 10 ರಷ್ಟು ಮೊತ್ತ ಬಳಸಲಾಗುತ್ತದೆ. ಆದರೆ ಪುನರ್ವಸತಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂಬ ಮಾಹಿತಿಯನ್ನು ಸರ್ಕಾರ ಕೊಡಲು ತಯಾರಿಲ್ಲ.

ಸ್ಥಳಾಂತರಗೊಂಡ ಕುಟುಂಬಗಳು

- ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ **430** ಕುಟುಂಬಗಳು
- ನಾಗರಹೊಳೆಯಲ್ಲಿ **800** ಕುಟುಂಬಗಳು (ಇನ್ನೂ **450** ಕುಟುಂಬಗಳು ಸ್ಥಳಾಂತರ ಆಗಬೇಕಿವೆ)
- ಕಾಳಿ ಹುಲಿ ಸಂರಕ್ಷಿತ ಪ್ರದೇಶ **450** ಕುಟುಂಬಗಳು

ಅರಣ್ಯವಾಸಿಗಳ ಪ್ರತಿಕ್ರಿಯೆ

ಅರಣ್ಯ ಒತ್ತುವರಿ ಮಾಡಿದ ಕುಟುಂಬಗಳಿಗೆ ಪರಿಹಾರ ನೀಡಿ, ಸ್ಥಳಾಂತರ ಮಾಡುವ ಮೂಲಕ ಕಾಯ್ದೆ ಉಲ್ಲಂಘನೆಗೆ ಪ್ರಚೋದಿಸಲಾಗಿದೆ. ಅರ್ಜಿಗಳ ಇತ್ಯರ್ಥ ಆಗುವ ಮುನ್ನವೇ ಸ್ಥಳಾಂತರಿಸಲಾಗಿದೆ. ಇಷ್ಟಾದರೂ ಕಾಳಿ ಹುಲಿ ಮೀಸಲಿನ ಪುನರ್ವಸತಿ ಯೋಜನೆಯನ್ನು 'ಮಾದರಿ ಯೋಜನೆ' ಎಂದು ಬಿಂಬಿಸಲಾಗುತ್ತಿದೆ.

ರೇಷ್ಮಾ, ಮಾನವ ಹಕ್ಕು ಹೋರಾಟಗಾರ್ತಿ, ದಕ್ಷಿಣಕನ್ನಡ ಜಿಲ್ಲೆ

ಸರ್ಕಾರ ಗಿರಿಜನರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ವಿಫಲವಾಗಿದೆ, ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಹಾಗೂ ಮೂಲಭೂತ ಸವಲತ್ತು ಇಲ್ಲ. ವಾಲ್ಮೀಕಿ ಆಶ್ರಮ ವಸತಿ ಶಾಲೆಯಲ್ಲಿ ಅಲ್ಪ ಮಟ್ಟದ ಸುಧಾರಣೆ ಕಂಡಿದ್ದು ಭವಿಷ್ಯದ ಕುಡಿಗಳಿಗೆ ಧ್ವನಿ ಸಿಗುವ ವಿಶ್ವಾಸವಿದೆ.

ಹರ್ಷ, ಆದಿವಾಸಿ ಗಿರಿಜನ ಪಾರ್ಲಿಮೆಂಟ್ ಸಮಿತಿ ಅಧ್ಯಕ್ಷ, ಹೆಮ್ಮಿಗೆ ಹಾಡಿ, ಹುಣಸೂರು ತಾ.

ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಹಾಡಿಗಳು ಮತ್ತು ಕಾಡಂಚಿನ ಕೋಮಲಾಪುರ ಹಾಡಿ, ಹರಳಹಳ್ಳಿಹಾಡಿ, ಅತ್ತಿಗೆಹಾಡಿ ಜನರು ವಿದ್ಯುತ್, ನೀರು, ರಸ್ತೆ, ಮನೆ ಇಲ್ಲದೆ ಕಾಡಿನ ಪ್ರಾಣಿಗಳಂತೆ ವಾಸ ಮಾಡುತ್ತಿದ್ದಾರೆ.

ವಡ್ಡರಗುಡಿ ಪುಟ್ಟಬಸವ, ಲ್ಯಾಂಪ್ಸ್ ಮಾಜಿ ಅಧ್ಯಕ್ಷ, ಎಚ್.ಡಿ.ಕೋಟೆ ತಾಲ್ಲೂಕು.

ನಾಗರಹೊಳೆ ಹಾಡಿಯ ಮಹಿಳೆಯರು ಕೆರೆಯಲ್ಲಿ ನೀರು ಸಂಗ್ರಹಿಸುತ್ತಿರುವ ಚಿತ್ರ.

ಭದ್ರಾ ಹುಲಿ ಯೋಜನೆ: ಪುನರ್ವಸತಿ ಯಶೋಗಾಥೆ

ಯತೀಶಕುಮಾರ್ ಡಿ.

ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಹರಡಿರುವ ಭದ್ರಾ ಹುಲಿ ಯೋಜನೆ ಪ್ರದೇಶದ ಕಾಡಿನಲ್ಲಿದ್ದ 16 ಗ್ರಾಮಗಳ 736 ಕುಟುಂಬಗಳನ್ನು ಯಶಸ್ವಿಯಾಗಿ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಾಗಿದೆ. ದೇಶದಲ್ಲಿ ಯಶಸ್ವಿಯಾಗಿ ಪುನರ್ವಸತಿಯಾದ ಮೊದಲ ಯೋಜನೆ ಎನ್ನುವ ಹೆಗ್ಗಳಿಕೆ ಇದಕ್ಕಿದೆ.

1960ರಲ್ಲಿ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿಯಲ್ಲಿ ಭದ್ರಾ ಅಣೆಕಟ್ಟು ನಿರ್ಮಿಸಲಾಯಿತು. ನರಸಿಂಹರಾಜಪುರ– ತರೀಕೆರೆ, ಚಿಕ್ಕಮಗಳೂರು–ನರಸಿಂಹರಾಜಪುರ ಸಂಪರ್ಕ ರಸ್ತೆಗಳು ಈ ಕಾಡಿನಲ್ಲಿ ಹಾದುಹೋಗಿದ್ದವು. ಹೆಬ್ಬೆ, ಮಾಡ್ಲಾ, ಹಿಪ್ಲಾ, ಕೆಸವೆ, ಮುತ್ತೋಡಿ, ಕರುವಾನೆ, ಮಾಡ್ಲಾ–ವಡ್ಡಿಹಟ್ಟಿ, ಹೆಬ್ಬೆ–ಕುರಕಲುಮನೆ, ಬಿದರೆ, ಶಿರಗೊಳ, ಬಾಳೆಗದ್ದೆ, ಮಠ, ಹುಣಸೆಕಟ್ಟೆ, ಹೆಗ್ಗರಮತ್ತುವಾನೆ, ಕಂಚಗಾರ ಮತ್ತು ಮಧುಗುಣಿ ಗ್ರಾಮಗಳು ಈ ಅರಣ್ಯ ಪ್ರದೇಶದಲ್ಲಿದ್ದವು. ಜಲಾಶಯ ನಿರ್ಮಾಣ ನಂತರ ಈ ಗ್ರಾಮಗಳ ಸಂಪರ್ಕ ರಸ್ತೆಗಳು ಬಂದ್ ಆದವು.

1976ರಲ್ಲಿ ಆಗಿನ ಅರಣ್ಯ ಸಚಿವರು ಈ ಪ್ರದೇಶಕ್ಕೆ ಭೇಟಿ ನೀಡಿ ಚರ್ಚಿಸಿ, ಗ್ರಾಮಗಳ ಸ್ಥಳಾಂತರ ಮತ್ತು ಪುನರ್ವಸತಿಗೆ ನಿರ್ಧರಿಸಿದರು. ಕಾಡಿನಿಂದ ಹೊರಹೋಗಲು ಮೊದಲು ಜನರು ಆಸಕ್ತಿ ತೋರಿರಲಿಲ್ಲ. 1992ರಲ್ಲಿ ಆಗಿನ ಜಿಲ್ಲಾಧಿಕಾರಿ ಸುಬ್ರಹ್ಮಣ್ಯ ಮತ್ತು ಡಿಎಫ್‌ಒ ಅವರು ಕಾಡಿನಲ್ಲಿನ ಈ ಗ್ರಾಮಗಳವರ ಜಮೀನು, ಮನೆ ಆಸ್ತಿ ವಿವರ, ಪುನರ್ವಸತಿಗೆ ಬೇಕಾಗುವ ಅನುದಾನ ಕುರಿತು ವರದಿ ಸಿದ್ಧಪಡಿಸಿದರು.

ಕೇಂದ್ರ ಸರ್ಕಾರವು 1996ರಲ್ಲಿ ಭೂಸ್ವಾಧೀನ ನಿಟ್ಟಿನಲ್ಲಿ ಅರಣ್ಯ ಇಲಾಖೆಗೆ ₹ 1.64 ಕೋಟಿ ಅನುದಾನ ಬಿಡುಗಡೆಗೊಳಿಸಿತು. ಸ್ವಾಧೀನ ಕಾರ್ಯವನ್ನು ಕೇಂದ್ರ ಸರ್ಕಾರ ಹಾಗೂ ಪುನರ್ವಸತಿ ಕಾರ್ಯವನ್ನು ರಾಜ್ಯ ಸರ್ಕಾರ ನಿರ್ವಹಿಸಬೇಕು ಎಂದು ಒಪ್ಪಂದವಾಯಿತು. ಕಾರಣಾಂತರಗಳಿಂದ ಭೂಸ್ವಾಧೀನಕ್ಕೆ ಬಿಡುಗಡೆಯಾಗಿದ್ದ ಅನುದಾನ ಬಳಕೆಯಾಗದೆ ಉಳಿಯಿತು.

1998ರಲ್ಲಿ ಭದ್ರಾ ವನ್ಯಜೀವಿ ವಿಭಾಗದ ಡಿಎಫ್‌ಒ ಆಗಿ ಪ್ರಸ್ತುತ ಧಾರವಾಡ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿರುವ ಯತೀಶ್ ಕುಮಾರ್ ಡಿ. ನೇಮಕವಾದರು. 1999ರಲ್ಲಿ ಅನುದಾನ (₹ 1.64 ಕೋಟಿ) ಪುನರ್‌ವಿನಿಯೋಗಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆದ ನಂತರ, ರಾಜ್ಯ ಸರ್ಕಾರವು ₹ 50 ಲಕ್ಷ ಬಿಡುಗಡೆ ಮಾಡಿತು. 1999ರಲ್ಲಿ ಭೂಸ್ವಾಧೀನ ಶುರುವಾಯಿತು. ಪರಿಹಾರದ ಪ್ಯಾಕೇಜ್ ಕುರಿತು 2001 ಮಾರ್ಚ್ 28ರಂದು ಸಂಪುಟದಲ್ಲಿ ತೀರ್ಮಾನವಾಯಿತು.

ಪುನರ್ವಸತಿ ಕಲ್ಪಿಸಲು ತರೀಕೆರೆ ತಾಲ್ಲೂಕಿನ ಎಂ.ಸಿ.ಹಳ್ಳಿ ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ಕೆಳಗೂರಿನಲ್ಲಿ ಜಾಗ ಗುರುತಿಸಲಾಯಿತು. ಪರಿಹಾರದ ಚೆಕ್ ಅನ್ನು ಮನೆಬಾಗಿಲಿಗೆ ತಲುಪಿಸಿ, ಹಕ್ಕುಪತ್ರಗಳನ್ನು ನೀಡಲಾಯಿತು. 2001ರಲ್ಲಿ ಜಾಗ ಹಂಚಿಕೆ ಮಾಡಲಾಯಿತು. 2002ರಲ್ಲಿ ಕುಟುಂಬಗಳು ಸ್ಥಳಾಂತರದವು. ಇಡೀ ಪ್ರಕ್ರಿಯೆಗೆ ₹ 14 ಕೋಟಿ ವೆಚ್ಚವಾಯಿತು.

ಭೂರಹಿತರಿಗೆ ಮನೆ ಸಹ ನೀಡಲಾಗಿತ್ತು. ಎಂ.ಸಿ.ಹಳ್ಳಿ ಭಾಗದಲ್ಲಿ ನೀರಾವರಿ ಪ್ರದೇಶದ ಭೂಮಿ, ಕುಟುಂಬಗಳಿಗೆ ನಿವೇಶನ, ಜಮೀನು, ಮೂಲಸೌಕರ್ಯ (ಶಾಲೆ, ಆಸ್ಪತ್ರೆ, ರಸ್ತೆ, ನೀರು...) ಒದಗಿಸಲಾಗಿದೆ. ಅದೇ ರೀತಿ ಕೆಳಗೂರಿನಲ್ಲೂ ಸೌಲಭ್ಯ ಕಲ್ಪಿಸಲಾಗಿದೆ. ಕುಟುಂಬಗಳ ಬದುಕು ಹಸನಾಗಿದೆ. ಪುನರ್ವಸತಿ ಆಗಿದ್ದರಿಂದ ಉದ್ಯೋಗ, ಮಕ್ಕಳ ಶಿಕ್ಷಣ, ಎಲ್ಲದಕ್ಕೂ ಅನುಕೂಲವಾಗಿದೆ ಎಂದು ಯತೀಶ್ ಹೇಳುವರು.

ಸ್ಥಳಾಂತರ ಮತ್ತು ಪುನರ್ವಸತಿ ಕಲ್ಪಿಸುವ ಕಾರ್ಯದಲ್ಲಿ ಬಹಳಷ್ಟು ಸವಾಲು, ಅಡೆತಡೆಗಳು ಎದುರಾದವು. ನಿವೇಶನರಹಿತ ಸ್ಥಳೀಯರಿಗೆ ಹಂಚಿಕೆಗೆ ಜಾಗ ಬೇಕು, ಹೊರಗಿನವರಿಗೆ ಎಂ.ಸಿ.ಹಳ್ಳಿಯಲ್ಲಿ ಜಾಗ ಕೊಡಬಾರದು ಎಂದು ತರೀಕೆರೆ ಕ್ಷೇತ್ರದ ಆಗಿನ ಶಾಸಕ ತಕರಾರು ಎತ್ತಿದರು. ಅದನ್ನು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪರಿಹರಿಸಿದರು. ತೊಡಕು, ಸವಾಲುಗಳು, ಸಮಸ್ಯೆಗಳು ಎಲ್ಲವನ್ನು ಯಶಸ್ವಿಯಾಗಿ ನಿಭಾಯಿಸಿದೆವು ಎನ್ನುವರು.

ರಾಷ್ಟ್ರದಲ್ಲಿ ಪುನರ್ವಸತಿ ಹೇಗಿರಬೇಕು ಎನ್ನುವದಕ್ಕೆ ಇದೊಂದು ಸಾಕ್ಷಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಎಂ.ಸಿ.ಹಳ್ಳಿಯಲ್ಲಿ ಪುನರ್ವಸತಿ ಕಲ್ಪಿಸುವ ಸಂದರ್ಭದಲ್ಲಿ ನಿರ್ಮಿಸಿದ್ದ ಮನೆಗಳು. (ಸಂಗ್ರಹ ಚಿತ್ರ)

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 25-5-2000

• ರಾಷ್ಟ್ರೀಯ ಕೃಷಿ ಬೆಳೆ ವಿಮಾ ಯೋಜನೆ ಜಾರಿ

ತುಮಕೂರು, ಮೇ 24– ಪ್ರಸಕ್ತ ಮುಂಗಾರು ಹಂಗಾಮಿನಿಂದ ರಾಷ್ಟ್ರೀಯ ಕೃಷಿ ಬೆಳೆ ವಿಮಾ ಯೋಜನೆಯನ್ನು ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಯೋಜನೆಯನ್ನು ಇಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದ ಕೃಷಿ ಸಚಿವ ಟಿ.ಬಿ.ಜಯಚಂದ್ರ ಅವರು, 'ಈ ವರ್ಷ ವಿಮೆ ವ್ಯಾಪ್ತಿಗೆ ಒಳಪಡುವ ರೈತರು ಜುಲೈ ತಿಂಗಳ ಒಳಗಾಗಿ ವಿಮಾಕಂತು ಪಾವತಿಸಬೇಕಿದೆ' ಎಂದರು.

ಏಕದಳ ಧಾನ್ಯಗಳಾದ ಭತ್ತ, ಜೋಳ, ರಾಗಿ, ಸಜ್ಜೆ. ದ್ವಿದಳ ಧಾನ್ಯಗಳಾದ ತೊಗರಿ, ಹೆಸರು, ಉದ್ದು ಮತ್ತು ಸೋಯಾ, ಅವರೆ ಹಾಗೂ ಎಣ್ಣೆಕಾಳುಗಳಾದ ನೆಲಕಡಲೆ ಹೊಸ ಯೋಜನೆಯ ವ್ಯಾಪ್ತಿಗೆ ಒಳಪಡುತ್ತವೆ.

50 ವರ್ಷಗಳ ಹಿಂದೆ

ಭಾನುವಾರ, 25-5-1975

• 'ಆರ್ಯಭಟ'ದಲ್ಲಿ ವಿದ್ಯುತ್ ಪೂರೈಕೆ ತೊಡಕು: ಪ್ರಯೋಗಗಳು ಸ್ತಬ್ಧ

ನವದೆಹಲಿ, ಮೇ 24– 'ಆರ್ಯಭಟ'ದ ವಿದ್ಯುತ್ ಸರಬರಾಜಿನಲ್ಲಿ ತೊಡಕು ಉಂಟಾದುದರಿಂದ ಆ ಉಪಗ್ರಹದ ಪ್ರಯೋಗಗಳಿಗೆ ಅಡಚಣೆ ಉಂಟಾಯಿತು ಎಂದು ಆ ಉಪಗ್ರಹವನ್ನು ಕುರಿತ ಡೈರೆಕ್ಟರ್ ಪ್ರೊ. ಯು.ಆರ್.ರಾವ್ ಅವರು ಇಂದು ಇಲ್ಲಿ ತಿಳಿಸಿದರು.

ಉಪಗ್ರಹ ಹಾರಿಸಿದ ಐದನೇ ದಿನ ಈ ದೋಷ ಗೋಚರಕ್ಕೆ ಬಂದಿತು. ಅದು ಆ ವೇಳೆಗೆ 60 ಪ್ರದಕ್ಷಿಣೆಗಳನ್ನು ಮುಗಿಸಿತ್ತು. ವಿದ್ಯುತ್ತನ್ನು ಉಳಿಸಲು ಪ್ರಯೋಗಗಳನ್ನು ನಿಲ್ಲಿಸಲಾಯಿತು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಮೇ 25, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ತ್ರಯೋದಶಿ ಗಂ. 15-52 **ನಕ್ಷತ್ರ:** ಅಶ್ವಿನಿ ಗಂ. 11-12 **ಯೋಗ:** ಸೌಭಾಗ್ಯ ಗಂ. 11-06 **ಕರಣ:** ಗರಜೆ ಗಂ. 5-38 ವಣಜಿ ಗಂ. 15-52, ವೃಷಭ ಮಾಸದ 11 ನೇ ದಿನ.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-07 **ಸೂರ್ಯಾಸ್ತ:** 06-48
ಮುಸ್ಲಿಂ ದಿನಾಂಕ: 26 ಜುಲ್ಕಾಯಿದ್
ಅದೃಷ್ಟ ಸಂಖ್ಯೆ: 2, 8

ಮೇಷ: ನಿಮ್ಮ ನಡವಳಿಕೆ ಎಲ್ಲರ ಕೇಂದ್ರ ಬಿಂದುವಾಗಲಿದೆ. ಇಂದು ದೊರೆಯುವ ಖ್ಯಾತಿ ಉಳಿಸಿಕೊಳ್ಳುವತ್ತ ಹೆಚ್ಚು ಗಮನ ಹರಿಸಿ. ಮನರಂಜನೆಗೂ ಸಮಯವನ್ನು ಮೀಸಲಿಟ್ಟು ಮಡದಿ ಮಕ್ಕಳೊಂದಿಗೆ ಸಂತಸದಿಂದಿರುವಿರಿ.

ವೃಷಭ: ರಾಜಕಾರಣಿಗಳು ಜನರೊಂದಿಗೆ ತಾಳ್ಮೆಯಿಂದ ವರ್ತಿಸಿ. ಭೋಗ ವಸ್ತುವಿನ ಖರೀದಿಯ ಅವಕಾಶವು ನಿಮ್ಮದಾಗಲಿದೆ. ಅನಗತ್ಯ ದುಂದುವೆಚ್ಚ ಬೇಡ. ಹಿರಿಯರ ಮಾರ್ಗದರ್ಶನ ಪಡೆಯುವುದು ಉತ್ತಮ.

ಮಿಥುನ: ಕಾರ್ಯ ರಂಗದಲ್ಲಿ ಅನುಭವಿಗಳ ಸಹಾಯದಿಂದಾಗಿ ಪ್ರಗತಿಯನ್ನು, ಯಶಸ್ಸನ್ನು ಕಾಣಬಹುದು. ಮನೆಯಲ್ಲಿ ನಡೆದ ಅಹಿತಕರ ಘಟನೆಯಿಂದಾಗಿ ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ಹಾನಿಯುಂಟಾಗಲಿದೆ.

ಕರ್ಕಾಟಕ: ಈ ದಿನ ನಿಮ್ಮ ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಗಳನ್ನು ಕಲೆ ಹಾಕಿರುವುದರಿಂದ ಮಾರ್ಗಮಧ್ಯದ ಅಡೆತಡೆಗಳು ನಿವಾರಣೆಯಾಗಲಿವೆ. ಈ ದಿನ ಗ್ರಹಗಳು ಪೂರಕವಾಗಿವೆ, ನಿಮ್ಮಿಚ್ಛೆಯಂತೆ ಕಾರ್ಯಗಳು ನಡೆಯಲಿವೆ.

ಸಿಂಹ: ಸಂಬಂಧಿಕರ ಅತಿ ವಿಶ್ವಾಸ, ಪ್ರೀತಿಯನ್ನು ಕಂಡು ಮರುಳಾಗಬೇಡಿ. ನಿಮ್ಮ ಬುದ್ಧಿ ನಿಮ್ಮ ಕೈಯಲ್ಲಿ ಇಟ್ಟುಕೊಳ್ಳುವುದು ಒಳಿತು. ಎಳ್ಳೆಣ್ಣೆ ದೀಪ ಹಚ್ಚುವುದರಿಂದ ಪಾಪ ಪರಿಹಾರವಾಗಲಿದೆ.

ಕನ್ಯಾ: ಸಾಂಸಾರಿಕವಾಗಿ ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ನಿಮ್ಮ ಭಾವನೆ ಸರಿಯಿದೆ. ಸಂಬಂಧಿಗಳಿಗೆ ಅತಿಯಾಗಿ ಬೆಲೆ ಕೊಡುವ ನೀವು ಅವರ ಮೊಸಳೆ ಕಣ್ಣೀರಿಗೆ ಸುಲಭವಾಗಿ ಮರುಳಾಗದಿರಿ.

ತುಲಾ: ನಿಮ್ಮ ವಿನೋದ ಸ್ವಭಾವ, ಬುದ್ಧಿವಂತಿಕೆ ಇತರರನ್ನು ಆಕರ್ಷಿಸುವುದು. ಕೈತಪ್ಪಿ ಹೋಗಿದ್ದ ಕೆಲಸಗಳು ಹಿರಿಯರೊಬ್ಬರ ಸಹಾಯದಿಂದ ನಿಮಗೆ ಪುನಃ ದೊರೆಯಲಿದೆ. ಇದರಿಂದಾಗಿ ನಿಮ್ಮಲ್ಲಿನ ಆತ್ಮವಿಶ್ವಾಸವು ಹೆಚ್ಚುವುದು.

ವೃಶ್ಚಿಕ: ನೆಂಟರ ಸಹಾಯದಿಂದ ನಿಮ್ಮ ಮಗಳ ಮದುವೆ ತಯಾರಿ ಮಾಡಿಕೊಳ್ಳುವಿರಿ. ವಿದೇಶದಿಂದ ಸ್ನೇಹಿತರ ಆಗಮನ ಸಂತೋಷ ತರಲಿದೆ. ವೈದ್ಯರ ಸಲಹೆಯಂತೆ ನಡೆದರೆ ಮಕ್ಕಳ ಆರೋಗ್ಯವು ಉತ್ತಮವಾಗಿರುವುದು.

ಧನು: ಎಲ್ಲರೊಂದಿಗೆ ಸಹಕಾರ ಭಾವನೆಯಿಂದ, ಹೊಂದಾಣಿಕೆಯಿಂದ ಮುಂದುವರಿಯಿರಿ. ವಿದ್ಯಾರ್ಥಿಗಳು ಪರಿಶ್ರಮಕ್ಕೆ ತಕ್ಕ ಯಶಸ್ಸು ಸಾಧಿಸಲು ಕಷ್ಟವಾಗುವುದು. ರಾಜಕಾರಣದಲ್ಲಿ ಮೇಲುಗೈ ಸಾಧಿಸುವಿರಿ.

ಮಕರ: ಉದ್ಯೋಗ ಬದಲಾವಣೆಯ ನಿರ್ಧಾರವನ್ನು ಹಿರಿಯರೊಡನೆ ಚಿಂತಿಸುವುದು ಉತ್ತಮ. ಕಾರ್ಯಕ್ಷೇತ್ರದಲ್ಲಿ ಬದಲಾವಣೆ ಈ ದಿನ ಈಡೇರುವುದು. ಹಾಲು ಉತ್ಪನ್ನಗಳಿಂದ ಲಾಭ ಇರುವುದು.

ಕುಂಭ: ಮಾರಾಟ ಪ್ರತಿನಿಧಿಗಳಿಗೆ ಹೆಚ್ಚಿನ ಕಮಿಷನ್ ದೊರೆಯಲಿದೆ. ನಿಮ್ಮ ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ಹೆಚ್ಚಿಸಿಕೊಳ್ಳಲು ಹೊರ ರಾಜ್ಯಗಳ ಪ್ರವಾಸವನ್ನು ಕೈಗೊಳ್ಳಬೇಕಾಗುತ್ತದೆ. ತಂದೆಯ ಆರೋಗ್ಯ ಸುಧಾರಿಸಲಿದೆ.

ಮೀನ: ಹಲವಾರು ವಿಚಾರಗಳಲ್ಲಿ ತೊಂದರೆ ಕಂಡುಬಂದರೂ ಎಲ್ಲಾ ಸಮಸ್ಯೆಗಳು ಸರಳವಾಗಿ ಪರಿಹಾರವಾಗುವುದು. ಬಂಧುಗಳಿಂದ ಸಂತೋಷ ಕಾಣುವಿರಿ. ದೂರ ಪ್ರಯಾಣದಲ್ಲಿ ಹೆಚ್ಚಿನ ಕಾಳಜಿ ವಹಿಸಿ.

ಪದಬಂಧ 6053

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)
5.ಗುಲಾಬಿ ಹೂ ಹಿಡಿದಿರುವ ಚಾರ (3)
8.ಕನ್ನ ಕೊರೆದಾಗ ಕಾಣಿಸಿದ ದರ್ಪಣ (3)
9.ಮುಳ್ಳುಗಳ ನಡುವೆ ಅರಳುವ ಪುಷ್ಪ (3)
10.ಕರ್ತಾರನಿಗೆ ನಮಿಸುತ್ತಿರುವ ಕೈ! (2)
11.ಕರ್ನಾಟಕದ ಗಾಂಧಿ ಎಂದು ಪ್ರಸಿದ್ಧಿ ಪಡೆದವರು (7)
12.ಹುರಿ ಮಾಡಿದ ಹತ್ತಿ ಎಳೆ (2)
14.ಸೇವಕರು ಎದೆಯ ಮೇಲೆ ಅಡ್ಡ ಧರಿಸುವ ಬಿಲ್ಲೆಯುಳ್ಳ ಪಟ್ಟಿ (3)
17.ವನದೊಳಗೆ ಆಡಿದ ಮಾತು (3)
18.ಚೌಡಯ್ಯನವರು ನುಡಿಸುತ್ತಿದ್ದ ತಂತಿವಾದ್ಯ (3)
19.ಘಟನೆಯಲ್ಲಿ ಕಾಣಿಸಿದ ಮಣ್ಣಿನ ಪಾತ್ರೆ (2)

ಮೇಲಿಂದ ಕೆಳಕ್ಕೆ
1.ಬೆರಳಿಗೆ ಧರಿಸುವ ಆಭರಣ (3)
3.ನೂಲನ್ನು ತೆಗೆಯುವ ಉಪಕರಣ (3)
4.ಬರ ಬಂದಾಗ ತೋರಿದ ಡೌಲು (4)
6.ಮಲಗುತ್ತಿರುವ ಕೂಸು! (2)
7.ತನ್ನ ಹೆಸರನ್ನೇ ನಾಮಾಂಕಿತ ಮಾಡಿಕೊಂಡಿರುವ ಈ ವಚನಕಾರನ ಹುಟ್ಟೂರು ಚೌಡದಾನಪುರ (7)
10.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
11.ಹತ್ತಿರದಲ್ಲೇ ಕಾಣುತ್ತಿರುವ ಅರಳೆ (2)
12.ಬಳಿಯಿದ್ದಾಗ ನೀಡಿದ ಉಡುಗೊರೆ (4)
13.ಬೆಲೆ ಕಟ್ಟಲಾಗದುದು (3)
15.ಚಿಲಿಪಿಲಿಯಲ್ಲಿರುವ ಅಕ್ಷರ! (2)
16.ಕಮ್ಮಾರನ ಒಲೆ (3)



6052ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಮ 3.ಒನಕೆ 5.ಹವೀಜ 7.ಕನ್ನಡಿ 8.ಪುಕಾರು 10.ಖನಿಜ 12.ಎಡಜ 13.ವಾಚಕ 14.ರಸನ 16.ಸಂಕಟ 18.ಸಂಗತಿ 20 ರಜತ 21.ಪನ್ನೀರು 22.ತಿಲಕ

ಮೇಲಿಂದ ಕೆಳಕ್ಕೆ:
1.ಪದಕ 2.ಮಹಡಿ 3.ಒನಪು 4.ಕೆಸರು 6.ಜನನಿ 9.ಕಾಯಕ 10.ಖಚರ 11.ಜವಾನ 12.ಎರಕ 15.ಸಮರ 16.ಸಂತಾಪ 17.ಟಗರು 18.ಸಂತತಿ 19.ತಿರುಕ

ಸುಡೊಕು 6437

				7			4	
		4	6		8			9
7				1				
						6	7	
6		1	7		2			4
								1
9				6		5		
	3	6	2		5			7
8		5		4			6	3

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6436 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಲವಾದಿ ನಾರಾಯಣಸ್ವಾಮಿ ದಿಗ್ಬಂಧನ ಖಂಡಿಸಿ 'ಕಲಬುರಗಿ ಚಲೋ': ಬಿಜೆಪಿ ಮುಖಂಡರಿಂದ ಪ್ರತಿಭಟನೆ

ಸಂಪುಟದಿಂದ ಪ್ರಿಯಾಂಕ್ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದಲ್ಲಿ ಶನಿವಾರ 'ಕಲಬುರಗಿ ಚಲೋ' ಪ್ರತಿಭಟನೆ ನಡೆಸಿದ ಬಿಜೆಪಿ ನಾಯಕರು, ಸಚಿವ ಸಂಪುಟದಿಂದ ಪ್ರಿಯಾಂಕ್ ಖರ್ಗೆ ಅವರನ್ನು ಕೂಡಲೇ ವಜಾ ಮಾಡಬೇಕು ಎಂದು ಆಗ್ರಹಪಡಿಸಿದರು.

'ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರಿಗೆ ಚಿತ್ತಾಪುರದಲ್ಲಿ ದಿಗ್ಬಂಧನದ ಹಿಂದೆ ಸಚಿವ ಪ್ರಿಯಾಂಕ್ ಖರ್ಗೆ ಕೈವಾಡವಿದೆ. ರಿಪಬ್ಲಿಕ್ ಆಫ್ ಕಲಬುರಗಿ ಮಾಡಿಕೊಂಡು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ. ಪ್ರಿಯಾಂಕ್ ರಾಜೀನಾಮೆವರೆಗೂ ಹೋರಾಟ ನಿಲ್ಲಿಸಲ್ಲ' ಎಂದು ನಾಯಕರು ಅಬ್ಬರಿಸಿದರು.

'ದುಷ್ಟತೆಗೆ ಕಲಬುರಗಿ ನೆಲವಲ್ಲ', 'ಸಂವಿಧಾನ ವಿರೋಧಿ ನಡೆ ಸಹಿಸಲ್ಲ', 'ಪ್ರಿಯಾಂಕ್ ಖರ್ಗೆ ದೌರ್ಜನ್ಯ ಕೊನೆಗಾಣಿಸೋಣ' ಎಂಬ ನಾಮ ಫಲಕಗಳನ್ನು ಪ್ರದರ್ಶಿಸಿದ್ದು, ಪಕ್ಷದ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

'ನಾರಾಯಣಸ್ವಾಮಿ ತಪ್ಪು ಮಾಡಿದ್ದರೆ ಪೊಲೀಸ್ ಠಾಣೆ, ಕೋರ್ಟ್‌ಗೆ ಹೋಗಬೇಕಿತ್ತು. ಅದನ್ನು ಬಿಟ್ಟು ಕೂಡಿ ಹಾಕಿ, ಗೂಂಡಾಗಿರಿ ಮಾಡಲು ಸಂವಿಧಾನದಲ್ಲಿ ಹೇಳಿದೆಯಾ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ವಾಗ್ದಾಳಿ ನಡೆಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, 'ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡದ ಜನವಿರೋಧಿಯಾದ ಸರ್ಕಾರ ಬದುಕಿದ್ದೂ ಸತ್ತಂತೆ' ಎಂದು ವಾಗ್ದಾಳಿ ನಡೆಸಿದರು.

ಛಲವಾದಿ ನಾರಾಯಣಸ್ವಾಮಿ ಅವರು, 'ಸ್ವಾತಂತ್ರ್ಯಕ್ಕಾಗಿ ಬಿಜೆಪಿ, ಆರ್‌ಎಸ್‌ಎಸ್‌ನ ಒಂದು ನಾಯಿಯೂ ಸತ್ತಿಲ್ಲ ಎಂದು, ಪ್ರಧಾನಿ ಮೋದಿ ಅವರನ್ನು ವಿಷ ಸರ್ಪ ಎಂದು ಟೀಕಿಸಿದ್ದರೂ ನಾವು ಕಾಂಗ್ರೆಸ್ ನಾಯಕರನ್ನು ಕೂಡಿಹಾಕುವ ಅವಿವೇಕದ ಕೆಲಸ ಮಾಡಲಿಲ್ಲ. ನನ್ನ ಹೇಳಿಕೆಗೆ ಕ್ಷಮೆ ಕೇಳಿಲ್ಲ, ಕೇಳುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಸಂಸದ ಗೋವಿಂದ ಕಾರಜೋಳ ಮಾತನಾಡಿ, 'ಪ್ರತಿ ಪಕ್ಷದ ನಾಯಕನನ್ನು ಆರೇಳು ಗಂಟೆ ಕೂಡಿಹಾಕಿದಾಗ ಅವರ ಮುಂದೆ ಕೈಕಟ್ಟಿ ನಿಲ್ಲಲೂ ಪೊಲೀಸರಿಗೆ ನಾಚಿಕೆ ಆಗುವುದಿಲ್ಲವಾ? ಖಾಕಿ ಬಟ್ಟೆ ಹಾಕಲು ಅವರೆಲ್ಲ ಅಯೋಗ್ಯರು' ಎಂದು ಅವರು ಹರಿಹಾಯ್ದರು.

ಮುಖಂಡರಾದ ಸಿ.ಟಿ. ರವಿ, ಬಿ. ಶ್ರೀರಾಮುಲು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ನಡೆದ 'ಕಲಬುರಗಿ ಚಲೋ' ಪ್ರತಿಭಟನೆಯಲ್ಲಿ ಬಿಜೆಪಿ ನಾಯಕರು ಕೈಗಳನ್ನು ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಬಿಜೆಪಿಗರಿಗೆ ನಾಚಿಕೆ ಇಲ್ಲ: ಪ್ರಿಯಾಂಕ್ ಖರ್ಗೆ

ಬೆಂಗಳೂರು: 'ಕಲಬುರಗಿಗೆ ಪದೇ ಪದೇ ಭೇಟಿ ನೀಡಿ ನನ್ನ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಬಿಜೆಪಿ ನಾಯಕರಿಗೆ ನಾಚಿಕೆ ಇಲ್ಲ. ಪರಿಜ್ಞಾನವೂ ಇಲ್ಲ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್. ಅಶೋಕ, ಬಿ.ವೈ. ವಿಜಯೇಂದ್ರ, ಸಿ.ಟಿ. ರವಿ, ಎನ್. ರವಿಕುಮಾರ್ ಮೊದಲಾದವರು ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಒಮ್ಮೆಯೂ ಕಲಬುರಗಿಗೆ ಭೇಟಿ ನೀಡಿಲ್ಲ. ಇದುವರೆಗೆ ನಾಲ್ಕು ಬಾರಿ ಬಂದು ಪ್ರಿಯಾಂಕ್ ಖರ್ಗೆ ಹಟಾವೊ, ಕಲಬುರಗಿ ಬಚಾವೊ ಎಂದು ಕೆಟ್ಟ ಹೋರಾಟ ಮಾಡುತ್ತಿದ್ದಾರೆ' ಎಂದರು.

'ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ನಾಯಿ ಎಂದು ಬಹಿರಂಗವಾಗಿ ಬೈದಿದ್ದು ನನಗೆ. ಬೈಸಿಕೊಂಡ ಸಂತ್ರಸ್ತ ನಾನು. ಆದರೆ ನನ್ನ ಮೇಲೆಯೇ ಅವರು ಆರೋಪ ಮಾಡುತ್ತಿರುವುದು ಕುಚೋದ್ಯದ ಸಂಗತಿ. ರಾಜ್ಯಪಾಲರನ್ನು ಭೇಟಿಯಾಗಿ ಬಂದು ನಾನು ಪ್ರಿಯಾಂಕ್ ಖರ್ಗೆಗೆ ಏನೂ ಹೇಳೇ ಇಲ್ಲ. ನಾನು ನಾಯಿ ಎಂದಿಲ್ಲ ಎಂದಿದ್ದಾರೆ' ಎಂದ ಪ್ರಿಯಾಂಕ್, ಛಲವಾದಿ ನಾರಾಯಣಸ್ವಾಮಿ ಅವರ ಹೇಳಿಕೆಗಳ ವಿಡಿಯೊ ತುಣುಕು ಪ್ರದರ್ಶಿಸಿದರು.

'ರಿಪಬ್ಲಿಕ್ ಕಲಬುರಗಿ ಎಂದು ಪ್ರತಿಭಟನೆ ಮಾಡಿದ್ದಾರೆ. ಯಾವ ರಿಪಬ್ಲಿಕ್ ಎಂದು ಅವರಿಗೇ ಕೇಳಬೇಕು' ಎಂದರು.

'ರಿಪಬ್ಲಿಕ್ ಆಫ್ ಬಳ್ಳಾರಿ ಕಟ್ಟಿದ ಶ್ರೀರಾಮುಲು ಅವರು ಕಲಬುರಗಿಗೆ ಬಂದು ಕರ್ನಾಟಕದ ಪಪ್ಪು ಎಂದು ನನ್ನನ್ನು ಕರೆದಿದ್ದಾರೆ. ನಾನು ಪಪ್ಪು ಎಂದಾದರೆ ಅವರು ಇನ್ನೇನು? ಹತ್ತು ಸಾಲು ಕನ್ನಡದಲ್ಲಿ ಮಾತನಾಡಲು ಬರುವುದಿಲ್ಲ ಆ ಮನುಷ್ಯನಿಗೆ. ಯಾವುದೇ ವೇದಿಕೆಯಲ್ಲಿ ಆರ್ಥಿಕ, ಸಾಮಾಜಿಕ, ಬುಡಕಟ್ಟು ಸೇರಿದಂತೆ ಯಾವುದೇ ವಿಚಾರವಾಗಿ ಚರ್ಚೆಗೆ ನಾನು ತಯಾರಿದ್ದೇನೆ. ಅವರು ತಯಾರಿದ್ದಾರೆಯೇ' ಎಂದು ಪ್ರಶ್ನಿಸಿದರು.

'ಸಾರಿ' ಪ್ರಕರಣಗಳಲ್ಲಿ ಕೋವಿಡ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ವಾರದಿಂದ ಕೋವಿಡ್ ಪ್ರಕರಣಗಳಲ್ಲಿ ಕೊಂಚ ಏರಿಕೆಯಾಗಿದ್ದು, ತೀವ್ರ ಉಸಿರಾಟ ಸಮಸ್ಯೆ ಪ್ರಕರಣಗಳಲ್ಲಿ (ಸಾರಿ) ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ನಡೆಸಲು ಸೂಚಿಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ರಾಜ್ಯ ಮತ್ತು ಬೆಂಗಳೂರಿನಲ್ಲಿ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳ ಬಗ್ಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶುಕ್ರವಾರ ಚರ್ಚೆ ನಡೆಸಿದೆ' ಎಂದು ತಿಳಿಸಿದರು.

'ಕೋವಿಡ್ ಪೀಡಿತರಿಗೆ ಸಣ್ಣ ಪ್ರಮಾಣದ ಲಕ್ಷಣಗಳನ್ನು ಹೊರತುಪಡಿಸಿದರೆ, ಗಂಭೀರವಾದ ಸಮಸ್ಯೆಗಳು ಕಾಣಿಸಿಕೊಂಡಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಸಾರಿ ಪ್ರಕರಣಗಳಲ್ಲಿ ಕಡ್ಡಾಯವಾಗಿ ಕೋವಿಡ್ ಪರೀಕ್ಷೆಗೆ ಸೂಚನೆ ನೀಡಲಾಗಿದೆ. ಉಸಿರಾಟ ಹಾಗೂ ಹೃದಯ ಸಂಬಂಧಿ ಕಾಯಿಲೆ ಇರುವವರಿಗೆ ದಾಖಲಾದ ಆಸ್ಪತ್ರೆಗಳಲ್ಲಿ ಗಂಟಲ ದ್ರವದ ಮಾದರಿ ಸಂಗ್ರಹಿಸಿ, ಕೋವಿಡ್ ಪರೀಕ್ಷೆ ನಡೆಸಲಾಗುತ್ತದೆ' ಎಂದರು.

ಬೆಂಗಳೂರಿನಲ್ಲಿ ವೃದ್ಧ ಮರಣ

ಬೆಂಗಳೂರು: ಕೊರೊನಾ ಸೋಂಕಿತರಾಗಿದ್ದ 85 ವರ್ಷದ ವ್ಯಕ್ತಿಯೊಬ್ಬರು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಮೃತಪಟ್ಟಿದ್ದಾರೆ.

ಉಸಿರಾಟದ ಸಮಸ್ಯೆ ಹಾಗೂ ಬಹು ಅಂಗಾಂಗ ವೈಫಲ್ಯಕ್ಕೆ ಒಳಗಾಗಿದ್ದ ಅವರು, ಕೆಲ ದಿನಗಳ ಹಿಂದೆ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಇದೇ 17ಕ್ಕೆ ಮರಣ ಹೊಂದಿದ ಅವರಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ಈಗ ಪರೀಕ್ಷಾ ವರದಿಯಲ್ಲಿ ಸೋಂಕು ದೃಢಪಟ್ಟಿದೆ. ಈ ವರ್ಷ ವರದಿಯಾದ ಕೋವಿಡ್ ಮೊದಲ ಮರಣ ಪ್ರಕರಣ ಇದಾಗಿದೆ. ರಾಜ್ಯದಲ್ಲಿ ಶನಿವಾರ 108 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಐದು ಮಂದಿಗೆ ಸೋಂಕು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳು 38ಕ್ಕೆ ಏರಿಕೆಯಾಗಿದೆ.

ಮಾಸ್ಕ್ ಧರಿಸಿ ಪಾಲ್ಗೊಂಡ ಸಿ.ಎಂ

ಮೈಸೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಕೊಂಚ ಹೆಚ್ಚುತ್ತಿವೆ ಎಂಬ ಹಿನ್ನಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಇಲ್ಲಿ ಮಾಸ್ಕ್ ಧರಿಸಿ ಕಾಣಿಸಿಕೊಂಡರು.

ಬೆಳಿಗ್ಗೆ ಇಲ್ಲಿನ ಶಾರದಾದೇವಿ ನಗರದ ತಮ್ಮ ಮನೆಯ ಬಳಿಗೆ ಬಂದಿದ್ದ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ ವೇಳೆ ಹಾಗೂ ತಾಲ್ಲೂಕಿನ ಹಿನಕಲ್‌ನಲ್ಲಿ ನಡೆದ ಇಂದಿರಾ ಕ್ಯಾಂಟೀನ್ ಉದ್ಘಾಟನೆ ಕಾರ್ಯಕ್ರಮ ದಲ್ಲಿ ಮಾಸ್ಕ್ ಹಾಕಿಕೊಂಡಿದ್ದರು. ಅವರ ಪುತ್ರ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಕೂಡ ಮಾಸ್ಕ್ ಧರಿಸಿದ್ದರು. ಆದರೆ, ನಂತರ ಕಲಾಮಂದಿರದಲ್ಲಿ ಬಸವ ಬಳಗಗಳ ಒಕ್ಕೂಟವು ಆಯೋಜಿಸಿದ್ದ 'ನಮ್ಮ ಬಸವ ಜಯಂತಿ' ಸಮಾರಂಭದಲ್ಲಿ ಮುಖ್ಯಮಂತ್ರಿ ಮಾಸ್ಕ್ ಧರಿಸಿರಲಿಲ್ಲ.

ಲೋಕೇಶ್ವರ ಸ್ವಾಮೀಜಿ ಬಂಧನ

ಪ್ರಥಮ ಪಿಯು ವಿದ್ಯಾರ್ಥಿನಿ ಪುಸಲಾಯಿಸಿ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ರಾಯಬಾಗ ತಾಲ್ಲೂಕಿನ ಮೇಕಳಿ ಗ್ರಾಮದ ರಾಮಲಿಂಗ ಮಠದ ಹಠಯೋಗಿ ಲೋಕೇಶ್ವರ ಸ್ವಾಮೀಜಿ ಅವರನ್ನು ಅತ್ಯಾಚಾರ ಮತ್ತು ಅಪಹರಣ ಪ್ರಕರಣದಡಿ ಬಂಧಿಸಲಾಗಿದೆ. ಆರೋಪಿ ವಿರುದ್ಧ ಪೋಕ್ಸೊ ಅನ್ವಯ ಪ್ರಕರಣ ದಾಖಲಾಗಿದೆ.

'ಮೇ 21ರಂದು ಆರೋಪಿಯನ್ನು ಬಂಧಿಸಲಾಗಿದೆ. ಸದ್ಯ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಅವರು ತಿಳಿಸಿದ್ದಾರೆ.

ಪ್ರಥಮ ಪಿಯು ವಿದ್ಯಾರ್ಥಿನಿಯನ್ನು ಮೇ 13ರಂದು ಅಪಹರಿಸಿಕೊಂಡು ಹೋಗಿ ನಿರಂತರ ಮೂರು ದಿನ ಅತ್ಯಾಚಾರ ಎಸಗಿದ ಆರೋಪವಿದ್ದು, ಸಂತ್ರಸ್ತೆ ಖುದ್ದು ದೂರು ನೀಡಿದ್ದಾರೆ.

ಮೂಲತಃ ಕಲಬುರಗಿ ಜಿಲ್ಲೆಯ ಲೋಕೇಶ್ವರ, ಕೆಲ ವರ್ಷಗಳಿಂದ ಮೇಕಳಿಯಲ್ಲಿ ಮಠ ಕಟ್ಟಿಕೊಂಡಿದ್ದು, 'ಹಠಯೋಗಿ ಲೋಕೇಶ್ವರ ಸ್ವಾಮೀಜಿ' ಎಂದು ಘೋಷಿಸಿಕೊಂಡಿದ್ದರು.

ಹಠಯೋಗಿ ಲೋಕೇಶ್ವರ ಸ್ವಾಮೀಜಿ

ಘಟನೆ ವಿವರ: 'ಅನಾರೋಗ್ಯದ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ನಾನು ಹಾಗೂ ತಂದೆ ಮಠಕ್ಕೆ ಬರುತ್ತಿದ್ದೆವು. ಸ್ವಾಮೀಜಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೆವು. ಮೇ 13ರಂದು ಸೋದರ ಮಾವನ ಊರಿಗೆ ಹೋಗಿ ಮರಳಿ ಬರುತ್ತಿದ್ದೆ. ಮಾರ್ಗಮಧ್ಯೆ ನೋಡಿದ ಸ್ವಾಮೀಜಿ, ಮನೆಗೆ ಬಿಡುವುದಾಗಿ ಹೇಳಿ ಕಾರಿನಲ್ಲಿ ಹತ್ತಿಸಿಕೊಂಡಿದ್ದರು. ಆದರೆ, ಮನೆ ಬಳಿ ಇಳಿಸದೇ ಬೆದರಿಕೆ ಹಾಕಿ ರಾಯಚೂರು ಕಡೆಗೆ ಕರೆದೊಯ್ದರು' ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.

'ರಾಯಚೂರಿನಲ್ಲಿ ಮೇ 13-14ರಂದು ಲಾಡ್ಜ್‌ವೊಂದರಲ್ಲಿ ಉಳಿಸಿಕೊಂಡರು. ಬೇಡ ಎಂದರೂ ಅತ್ಯಾಚಾರ ಎಸಗಿದರು. ಮಾರನೇ ದಿನ (ಮೇ 15) ಬಾಗಲಕೋಟೆಗೆ ಕರೆತಂದರು. ಲಾಡ್ಜ್‌ವೊಂದರಲ್ಲಿ ಇಡೀ ದಿನ ಪದೇ ಪದೇ ಅತ್ಯಾಚಾರ ಎಸಗಿದರು. ಮೇ 16ರಂದು ಮನೆಗೆ ಹೋಗಬೇಕು ಎಂದು ಅಳಲು ಶುರು ಮಾಡಿದೆ. ಮಹಾಲಿಂಗಪುರ ಪಟ್ಟಣಕ್ಕೆ ಕರೆತಂದು ಬಸ್ ನಿಲ್ದಾಣದಲ್ಲಿ ಬಿಟ್ಟು ಹೋದರು. ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ನಾನು ಹೆದರಿಕೆಯಿಂದ ಸುಮ್ಮನೆ ಇದ್ದೆ. ತಡವಾಗಿ ತಂದೆಯ ಬಳಿ ಸ್ವಾಮೀಜಿ ಕ್ರೌರ್ಯವನ್ನು ತಿಳಿಸಿದೆ' ಎಂದು ದೂರಿನಲ್ಲಿ ಬರೆದಿದ್ದಾರೆ.

> ಸ್ವಾಮಿಗೆ ಮಹಿಳಾ ಭಕ್ತರೇ ಹೆಚ್ಚಿದ್ದಾರೆ. ಪುರುಷರಿಗೆ ಪ್ರವೇಶವೇ ಇಲ್ಲ. ಒಮ್ಮೊಮ್ಮೆ ಭಕ್ತರನ್ನು ಮಠದಲ್ಲೇ ಉಳಿಸಿಕೊಳ್ಳುತ್ತಿದ್ದ ಬಗ್ಗೆ ದೂರು ನೀಡಿದ್ದೆವು
> **ಕೆಂಚಪ್ಪ ಒಡೇರ್**
> ಗ್ರಾಮಸ್ಥ

'ಎರಡು ವರ್ಷ; ಶಿಕ್ಷಣದಲ್ಲಿ ಹರುಷ' ಕಾರ್ಯಕ್ರಮಕ್ಕೆ 29ರಂದು ಚಾಲನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: '2025– 26ನೇ ಶೈಕ್ಷಣಿಕ ವರ್ಷದ ಶಾಲೆಗಳ ಪ್ರಾರಂಭೋತ್ಸವವನ್ನು ಹಬ್ಬದ ರೀತಿ ಆಚರಿಸಬೇಕು. ಇದಕ್ಕಾಗಿ ರಾಜ್ಯಾದ್ಯಂತ 'ಎರಡು ವರ್ಷ; ಶಿಕ್ಷಣದಲ್ಲಿ ಹರುಷ' ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಿದ್ದೇವೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೇ 29ರಂದು ಬೆಂಗಳೂರಿನಲ್ಲಿ ಚಾಲನೆ ನೀಡುವರು ಎಂದು ಶನಿವಾರ ಅವರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಹಾಗೂ ನಾಗರಿಕರು ವಿದ್ಯಾರ್ಥಿಗಳನ್ನು ಗಣ್ಯ ಅತಿಥಿಗಳ ಹಾಗೆ ವಿಶೇಷವಾಗಿ ಬರಮಾಡಿಕೊಳ್ಳಬೇಕು. ಮೊದಲ ದಿನ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಸಿಹಿ ವಿತರಿಸಬೇಕು' ಎಂದು ಇದೇ ವೇಳೆ ಹೇಳಿದರು.

ಮಧು ಬಂಗಾರಪ್ಪ

'ಕೊಟ್ಟ ಮಾತಿನಂತೆ ಈ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ 51,000 ಅತಿಥಿ ಶಿಕ್ಷಕರನ್ನು ನಾವು ನೇಮಿಸುತ್ತಿದ್ದೇವೆ. ಶಿಕ್ಷಕರ ಗೌರವಧನವನ್ನು ₹2000 ಹೆಚ್ಚಿಸಿದ್ದೇವೆ. ರಾಜ್ಯ ಸರ್ಕಾರ ಎರಡು ವರ್ಷ ಪೂರ್ಣಗೊಳಿಸಿರುವುದು ಹಾಗೂ ಶಿಕ್ಷಣ ಇಲಾಖೆಯಲ್ಲಿ ಆಗಿರುವ ಮಹತ್ತರ ಬದಲಾವಣೆ ಗಮನದಲ್ಲಿಟ್ಟುಕೊಂಡು ಈ ಕಾರ್ಯಕ್ರಮ ಆಯೋಜಿಸಿದ್ದೇವೆ' ಎಂದರು.

ಸಿಇಟಿ ಅಗ್ರಸ್ಥಾನ: ಬಾಲಕರೇ ಮೇಲುಗೈ

ಒಂದನೇ ಪುಟದಿಂದ...

ಪಶು ವೈದ್ಯಕೀಯ, ಎಂಜಿನಿಯರಿಂಗ್, ಯೋಗ ಮತ್ತು ನ್ಯಾಚುರೋಪಥಿ, ಕೃಷಿ ವಿಜ್ಞಾನ, ಬಿ.ಫಾರ್ಮಸಿ, ಫಾರ್ಮಾ ಡಿ ಮತ್ತು ಬಿ.ಎಸ್ಸಿ (ನರ್ಸಿಂಗ್) ಕೋರ್ಸ್‌ಗಳಿಗೆ ಕೆಇಎ ಏಪ್ರಿಲ್ 16 ಮತ್ತು 17ರಂದು ಸಿಇಟಿ ನಡೆಸಿತ್ತು.

'ಭೌತ ವಿಜ್ಞಾನದಲ್ಲಿ ಒಂದು ಕೃಪಾಂಕ ನೀಡಲಾಗಿದೆ. ರಸಾಯನ ವಿಜ್ಞಾನದಲ್ಲಿ ಎರಡು ಪ್ರಶ್ನೆಗಳಿಗೆ, ಜೀವ ವಿಜ್ಞಾನದಲ್ಲಿ ಒಂದು ಪ್ರಶ್ನೆಗೆ ಎರಡು ಸರಿ ಉತ್ತರಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದ್ದು, ಆ ಉತ್ತರಗಳನ್ನು ಗುರುತಿಸಿದವರಿಗೆ ಅಂಕ ನೀಡಲಾಗಿದೆ. ದ್ವಿತೀಯ ಪಿಯುನ ಎರಡು ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಗಳಿಸಿದ ಅತಿ ಹೆಚ್ಚು ಅಂಕಗಳನ್ನು ತೆಗೆದುಕೊಂಡು ರ‍್ಯಾಂಕ್ ಪಟ್ಟಿ ಸಿದ್ಧಪಡಿಸಲಾಗಿದೆ. ಇದೇ ಮೊದಲ ಬಾರಿ ಫಲಿತಾಂಶಕ್ಕೂ ಮೊದಲೇ 3 ಲಕ್ಷ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ಮುಗಿಸಲಾಗಿದೆ. ಅಂಗವಿಕಲರಿಗೆ ಜೂನ್ 3ರಿಂದ 6ರವರೆಗೆ ವೈದ್ಯಕೀಯ ತಪಾಸಣೆ ನಡೆಯಲಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸಹಾಯವಾಣಿ ಸಂಖ್ಯೆ ದ್ವಿಗುಣ: 'ಕೆಇಎ ಕಚೇರಿಯಲ್ಲಿ ವಿದ್ಯಾರ್ಥಿಗಳ ಸಹಾಯವಾಣಿಗೆ ಐದು ಫೋನ್‌ಗಳಿದ್ದವು. ಈಗ ಆ ಸಂಖ್ಯೆಯನ್ನು ದ್ವಿಗುಣಗೊಳಿಸಲಾಗಿದೆ. ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಎಲ್ಲ 10 ಫೋನ್‌ಗಳಲ್ಲಿ ಕರೆ ಸ್ವೀಕರಿಸಲು ಅಗತ್ಯ ಸಿಬ್ಬಂದಿ ನಿಯೋಜಿಸಲಾಗಿದೆ. ವಾರದ ಎಲ್ಲ ದಿನಗಳೂ ಸಹಾಯವಾಣಿ ಕೇಂದ್ರ ಕಾರ್ಯನಿರ್ವಹಿಸಲಿದೆ' ಎಂದರು.

ಚಿತ್ರಹಿಂಸೆ ನೀಡಿ ಮಗುವಿನ ಕೊಲೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಹಾರೂಗೊಪ್ಪ ಗ್ರಾಮದಲ್ಲಿ ಶುಕ್ರವಾರ ರಾತ್ರಿ, ಮೂರು ವರ್ಷದ ಗಂಡು ಮಗುವನ್ನು ಮಲತಂದೆ, ಮೂವರು ಸಂಗಡಿಗರು ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದಾರೆ.

ಬಿಹಾರ ಮೂಲದವರಾದ 30ರಿಂದ 35 ವರ್ಷ ವಯಸ್ಸಿನ ನಾಲ್ವರು ಆರೋಪಿಗಳನ್ನು ಮುರಗೋಡ ಪೊಲೀಸ್ ಠಾಣೆ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ.

ಮಗುವಿನ ತಾಯಿ ರಂಗೀಲಾ ದೂರು ನೀಡಿದ್ದರು. ಇವರ ಪತಿ ಮಹೇಶ್ವರ ಮಾಂಜಿ ಹಾಗೂ ಸಂಗಡಿಗರಾದ ಮಹೇಶ ಮಾಂಜಿ, ರಾಕೇಶ ಮಾಂಜಿ, ಶಿವನಾಥ ಮಾಂಜಿ ಅವರನ್ನು ವಶಕ್ಕೆ ಪಡೆಯಲಾಗಿದೆ. ಮಿಲ್‌ನಲ್ಲಿ ಕೆಲಸ ಮಾಡಲು ಬಿಹಾರದಿಂದ ವಲಸೆ ಬಂದಿದ್ದಾರೆ.

'ರಂಗೀಲಾ ಅವರು ಮೊದಲ ಪತಿ ಬಿಟ್ಟು, ಮಹೇಶ್ವರ ಮಾಂಜಿ ಜತೆಗೆ ಮದುವೆಯಾಗಿದ್ದಾರೆ. ಮೊದಲ ಪತಿಯಿಂದ ಮೂರು ವರ್ಷದ ಮಗು ಇದ್ದು, ಜತೆಗೇ ಕರೆದುಕೊಂಡು ಬಂದಿದ್ದರು. ಮಗುವನ್ನು ಅದರ ತಂದೆ ಜತೆಗೆ ಕಳಿಸುವಂತೆ ಮಹೇಶ್ವರ ಜಗಳ ಮಾಡುತ್ತಿದ್ದ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ತಿಳಿಸಿದರು.

'ಶುಕ್ರವಾರ ರಾತ್ರಿ ಆರೋಪಿಗಳು ಮನೆಯಲ್ಲಿ ಮದ್ಯ ಕುಡಿದಿದ್ದರು. ಮಗುವಿನ ವಿಚಾರವಾಗಿ ರಂಗೀಲಾ ಜತೆಗೆ ಜಗಳ ತೆಗೆದು ಹಲ್ಲೆ ಮಾಡಲು ಶುರು ಮಾಡಿದರು. ಪಾರಾಗಲು ರಂಗೀಲಾ ಓಡಿಹೋದರು. ಮಗು ಮನೆಯಲ್ಲೇ ಮಲಗಿತ್ತು. ಮಗುವಿನ ಮೇಲೆ ಮನಸೋ ಇಚ್ಛೆ ಕಟ್ಟಿಗೆಯಿಂದ ತಲೆಗೆ ಹೊಡೆದಿದ್ದಾರೆ. ಮಗು ಸ್ಥಳದಲ್ಲೇ ಸಾವನ್ನಪ್ಪಿದೆ' ಎಂದು ತಿಳಿಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ
ಗೌರವಾನ್ವಿತ ನ್ಯಾಯಮೂರ್ತಿ
ಡಾ. ಹೆಚ್.ಎನ್.ನಾಗಮೋಹನ ದಾಸ್
ಏಕ ಸದಸ್ಯ ಆಯೋಗ
ಯವನಿಕಾ, ನೃಪತುಂಗ ರಸ್ತೆ, ಬೆಂಗಳೂರು.

ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ - 2025

ಮನೆ-ಮನೆ ಭೇಟಿ ಸಮೀಕ್ಷೆ, ವಿಶೇಷ ಶಿಬಿರ ಹಾಗೂ ಆನ್‌ಲೈನ್ ಸ್ವಯಂ ಘೋಷಣೆಯ ದಿನಾಂಕವನ್ನು ವಿಸ್ತರಿಸಲಾಗಿದೆ.

ಸಮೀಕ್ಷೆಯ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

ಸಮೀಕ್ಷಾದಾರರಿಂದ ಮನೆ-ಮನೆ ಭೇಟಿ ಸಮೀಕ್ಷೆ	26-05-2025 ರಿಂದ 29-05-2025 ರವರೆಗೆ ವಿಸ್ತರಿಸಲಾಗಿದೆ
ವಿಶೇಷ ಶಿಬಿರ (ಮತದಾನದ ಮತಗಟ್ಟೆ ಕೇಂದ್ರಗಳಲ್ಲಿ)	30-05-2025 ರಿಂದ 01-06-2025 ರವರೆಗೆ ಮರು ನಿಗದಿಪಡಿಸಲಾಗಿದೆ
ಆನ್‌ಲೈನ್ ಮೂಲಕ ಸ್ವಯಂ ಘೋಷಣೆ	01-06-2025 ರವರೆಗೆ ಮುಂದುವರೆಯಲಿದೆ

- ಆನ್‌ಲೈನ್ ಮೂಲಕ ಸ್ವಯಂ ಘೋಷಣೆಯನ್ನು ಈ ಆನ್‌ಲೈನ್ ಲಿಂಕ್ https://schedulecastesurvey.karnataka.gov.in/selfdeclaration ನ ಮೂಲಕ ಮಾಡಿಕೊಳ್ಳಬಹುದು.
- ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಮಾಹಿತಿಯನ್ನು ಭರ್ತಿ ಮಾಡಲು ಪಡಿತರ ಚೀಟಿಯ ಸಂಖ್ಯೆ ಅಥವಾ ಆಧಾರ್ ಕಾರ್ಡ್ ನೊಂದಿಗೆ ಜಾತಿ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆ ಅವಶ್ಯಕವಾಗಿರುತ್ತದೆ.
- ಮನೆ-ಮನೆ ಸಮೀಕ್ಷೆ ಸಂದರ್ಭದಲ್ಲಿ ತಮ್ಮ ಮಾಹಿತಿ ನೀಡಲು ಸಾಧ್ಯವಾಗದವರು ವಿಶೇಷ ಶಿಬಿರದ ದಿನದಂದು ಪಡಿತರ ಚೀಟಿ ಅಥವಾ ಆಧಾರ್ ಕಾರ್ಡ್‌ನೊಂದಿಗೆ ಹತ್ತಿರದ ಮತಗಟ್ಟೆ ಕೇಂದ್ರಗಳಿಗೆ ಭೇಟಿ ನೀಡಿ, ತಮ್ಮ ಮಾಹಿತಿಯನ್ನು ಸಲ್ಲಿಸಬಹುದು.

ಸಹಾಯವಾಣಿ 9481359000

ನಿಮ್ಮ ಸಾಮಾಜಿಕ ಜವಾಬ್ದಾರಿಯನ್ನು ಪೂರೈಸಲು ಒಂದು ಸುವರ್ಣಾವಕಾಶ

ನಿಮ್ಮ ಜಾತಿ,
ಆದಿ ಕರ್ನಾಟಕ
ಆದಿ ದ್ರಾವಿಡ
ಆದಿ ಆಂಧ್ರ
ಎಂದು ಇದ್ದಲ್ಲಿ, ಮೂಲ ಜಾತಿಯ ಹೆಸರನ್ನು ನಿಖರವಾಗಿ ನಮೂದಿಸಿ, ಸಮೀಕ್ಷೆಗೆ ಸಹಕರಿಸಿ

ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ರವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿರುವುದು.

ನಮ್ಮ ಕರ್ನಾಟಕ ಗ್ಯಾರಂಟಿ ಕರ್ನಾಟಕ
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ ಬಡವರಿಗೆ ಪ್ರತಿ ತಿಂಗಳು 10 kg
ಗೃಹ ಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ ₹2000
ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.39, ಕೆ.ಐ.ಎ.ಡಿ.ಬಿ., ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ, " ಶಾಂತಿ ಗೃಹ", 4ನೇ ಮಹಡಿ,
ಅರಮನೆ ರಸ್ತೆ, ಬೆಂಗಳೂರು–560001 Phone : 080-22251955, Website:www.kiadb.in, Email ID:slao1@kiadb.in

ಸಂಖ್ಯೆ: ಕೆಐಎಡಿಬಿ/ಎಲ್ಎಕ್ಯೂ/192/2025–26 ದಿನಾಂಕ: 07.05.2025

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28(2)ರ ಮೇರೆಗೆ)

ಶ್ರೀನಿವಾಸಪುರ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು, ಯಲ್ದೂರು ಹೋಬಳಿ, ಯದರೂರು ಗ್ರಾಮದಲ್ಲಿ ಒಟ್ಟು 1273–24¾ ಎ/ಗು ಖರಾಬು 229–17 ಎ/ಗು ಬಾಕಿ 1044–07¾ ಎ/ಗು ಜಮೀನುಗಳಿಗೆ ಕೆಐಎಡಿ ಕಾಯ್ದೆ 1966ರ ವಿಧಿ 28(1)ರ ಸರ್ಕಾರದ ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಸಿಐ 168 ಎಸ್‌ಪಿಕ್ಯೂ(ಇ) 2024 ದಿ:11–06–2024 ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಭೂಸ್ವಾಧೀನಪಡಿಸಿದ್ದು, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 20–06–2024 ರಂದು ಪುಟ ಸಂಖ್ಯೆ:4184 ರಿಂದ 4256 ರಲ್ಲಿ ಪ್ರಕಟಗೊಳಿಸಿರುತ್ತಾರೆ. ಸದರಿ ಸ್ವತ್ತನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿಗೋಸ್ಕರ ಏತಕ್ಕೆ ಸ್ವಾಧೀನಪಡಿಸಿಕೊಳ್ಳಬಾರದೆಂಬುದರ ಬಗ್ಗೆ ಏನಾದರೂ ಆಕ್ಷೇಪಣೆ ಇದ್ದರೆ ಸದರಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಈ ನೋಟೀಸ್ ತಲುಪಿದ 30 ದಿನಗೊಳಗಾಗಿ ಈ ಕೆಳಕಂಡ ಅಧಿಕಾರಿಯವರಿಗೆ ಖುದ್ದಾಗಿ ಲಿಖಿತ ಅಥವಾ ಅಂಚೆ ಮುಖಾಂತರ ಕಳುಹಿಸತಕ್ಕದ್ದು, 30 ದಿನಗಳಾದ ನಂತರ ಬಂದ ಆಕ್ಷೇಪಣೆಗಳನ್ನು ಸ್ವೀಕೃತ ಮಾಡಲಾಗುವುದಿಲ್ಲ ಮತ್ತು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ವೆಂದು ತಿಳಿಯುವುದು ಸದರಿ ಆಕ್ಷೇಪಣೆಗಳನ್ನು ವಿಚಾರಣೆ ಮಾಡಲು ವಿಧಿ 28(3) ರಂತೆ ನಿಮಗೆ ಅವಕಾಶವನ್ನು ಕಲ್ಪಿಸಲಾಗಿದೆ. ನಿಮ್ಮಲ್ಲಿರಬಹುದಾದ ದಸ್ತಾವೇಜುಗಳು ಮತ್ತು ದಾಖಲಾತಿಗಳೊಂದಿಗೆ **ದಿನಾಂಕ 02.06.2025 ರಂದು ಬೆಳಿಗ್ಗೆ 10–00 ಗಂಟೆಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ, ಯದರೂರು ಗ್ರಾಮ** ಇಲ್ಲಿ ಸರಿಯಾಗಿ ರೂಬು ರೂಬು ಖುದ್ದಾಗಿ ಅಥವಾ ಕ್ರಮವಾಗಿ ಮೊಖ್ತಾರಿ ವಹಿಸಿದ ಪ್ರತಿನಿಧಿಗಳ ಮುಖಾಂತರವಾಗಲೀ ಹಾಜರಾಗಬೇಕು ಹಾಗೆ ಮಾಡದೇ ತಪ್ಪಿದಲ್ಲಿ ಕಾನೂನು ಅನುಸರಿಸಿ ಮುಂದಿನ ತೀರ್ಮಾನ ಮಾಡಲಾಗುತ್ತದೆ. ಸದರಿ ಸ್ವತ್ತಿನ ಮೇಲಾಗಲೀ ಅಥವಾ ಯಾವ ಭಾಗದ ಮೇಲಾಗಲೀ ಇತರರಿಗೆ ಇರಬಹುದಾದ ಭೋಗ್ಯ ಆಧಾರ, ಹಿಡುವಳಿ ಅಥವಾ ಸಾಗುವಳಿ ಹಿಸ್ಸೆ ಅಥವಾ ಅನುಭವ ಮುಂತಾದ ಹಕ್ಕು ಬಾದ್ಯತೆಗಳನ್ನು ಸಾಧ್ಯವಾದ ಮಟ್ಟಿಗೂ ಕರಾರುವಕ್ಕು ತೋರಿಸುವಂತೆ, ತಪಶೀಲು ನಮೂದಿಸಿ ಒಂದು ವಾಗ್ಮೂಲವನ್ನು ಹಾಜರುಪಡಿತಕ್ಕದ್ದು.

ಭೂಸ್ವಾಧೀನಕ್ಕೆ ಒಳಪಟ್ಟ ಗ್ರಾಮದ ಜಮೀನುಗಳ ಸರ್ವೆ ನಂಬರ್ ವಿವರಗಳು:–

ಕ್ರ.ಸಂ.	ಗ್ರಾಮ	ದಿನಾಂಕ	ಸಮಯ	ವಿಚಾರಣೆಯ ಸ್ಥಳ
1	2	3	4	5
1	ಯದರೂರು	02.06.2025	ಬೆಳಿಗ್ಗೆ 10–00	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ, ಯದರೂರು ಗ್ರಾಮ

ಗ್ರಾಮ: ಯದರೂರು ಹೋಬಳಿ: ಯೆಲ್ದೂರು ತಾಲ್ಲೂಕು: ಶ್ರೀನಿವಾಸಪುರ ಜಿಲ್ಲೆ: ಕೋಲಾರ

ಕ್ರ.ಸಂ.	ಖಾತೆದಾರರ ಹೆಸರು	ಸರ್ವೆ ನಂ.	ಐನ್ ಎ–ಗು	ಖರಾಬು ಎ–ಗು	ಬಾಕಿ ಎ–ಗು
1	2	3	4	5	6
1.	ವೈ.ಮುನಿಯಪ್ಪ ಬಿನ್ ಯರಪ್ಪ, ಚಿಕ್ಕಮುನಿಯಪ್ಪ ಬಿನ್ ಯರಪ್ಪ, ಎಸ್.ಹನುಮಂತಯ್ಯ ಬಿನ್ ಯರಪ್ಪ, ವೈ.ವೆಂಕಟೇಶಪ್ಪ ಬಿನ್ ಯರಪ್ಪ, ಚಿಕ್ಕವೆಂಕಟೇಶಪ್ಪ ಬಿನ್ ಯರಪ್ಪ, ಮುನಿಸ್ವಾಮಿ ಬಿನ್ ಯರಪ್ಪ, ವೈ.ಕೃಷ್ಣಪ್ಪ ಬಿನ್ ಯರಪ್ಪ	5/1	3-14	0-13	3-01
2.	ಶ್ರೀನಿವಾಸ್ ಬಿನ್ ಲೇಟ್ ಚಿನ್ನಪ್ಪ ಉ॥ ಚನ್ನಪ್ಪ, ನಾರಾಯಣಸ್ವಾಮಿ ಬಿನ್ ರಾಮಪ್ಪ, ನಾಗೇಶ್ ಬಿನ್ ರಾಮಪ್ಪ, ನಾರಾಯಣಮ್ಮ ಕೋಂ ಸಿ.ವೆಂಕಟೇಶ್	5/2	0-30	-	0-30
3.	ಕೆ.ಮುನಿಯಪ್ಪ ಬಿನ್ ಕೆಂಚಪ್ಪ, ಸಾಮಪ್ಪ ಬಿನ್ ಮುನಿಶಾಮಪ್ಪ	5/3ಎ	1-11	-	1-11
4.	ಕೆ.ಮುನಿಯಪ್ಪ ಬಿನ್ ಕೆಂಚಪ್ಪ	5/3ಬಿ	0-16	-	0-16
5.	ಎಂ.ಆನಂದ್ ಕುಮಾರ್ ಬಿನ್ ಹೆಚ್.ಮುನಿಶಾಮಿ, ವೈ.ಕೃಷ್ಣ ಮೂರ್ತಿ ಬಿನ್ ಕೆ.ಯಳಪ್ಪ	5/4	1-06	-	1-06
6.	ಶ್ರೀನಿವಾಸ್ ಬಿನ್ ಲೇಟ್ ಚಿನ್ನಪ್ಪ ಉ॥ ಚನ್ನಪ್ಪ, ನಾರಾಯಣಸ್ವಾಮಿ ಬಿನ್ ರಾಮಪ್ಪ, ನಾಗೇಶ್ ಬಿನ್ ರಾಮಪ್ಪ, ನಾರಾಯಣಮ್ಮ ಕೋಂ ಸಿ.ವೆಂಕಟೇಶ್	6	3-15	0-04	3-11
7.	ತೋಟಿನೌಕರಿ ಇನಾಂತಿ	7	9-37	-	9-37
8.	ಎ.ಕೆ.ನಾರೆಪ್ಪ ಬಿನ್ ಬೈರಪ್ಪ	51/1	0-34	-	0-34
9.	ಮುನಿಯಪ್ಪ ಬಿನ್ ಹೆಚ್.ರಾಮಪ್ಪ, ಲಕ್ಷ್ಮಮ್ಮ ಕೋಂ ಲೇಟ್ ವೆಂಕಟೇಶಪ್ಪ, ಅಂಜಪ್ಪ ಬಿನ್ ಲೇಟ್ ದೊಡ್ಡಹನುಮಪ್ಪ, ನಾರಾಯಣಸ್ವಾಮಿ ಬಿನ್ ಚಿಕ್ಕಹನುಮಪ್ಪ, ಕೃಷ್ಣಪ್ಪ ಬಿನ್ ಚಿಕ್ಕಹನುಮಪ್ಪ, ಸೀನಪ್ಪ ಬಿನ್ ಚಿಕ್ಕಹನುಮಪ್ಪ, ವೆಂಕಟೇಶಪ್ಪ ಬಿನ್ ಚಿಕ್ಕಹನುಮಪ್ಪ (ಮೇಲಿನ ಜಂಟಿ)	51/2	0-33	-	0-33
10.	ತೋಟಿ ಸೊಣ್ಣಪ್ಪ	51/3	0-25	-	0-25
11.	ತೋಟನಲ್ಲಪ್ಪ	51/4	0-07	-	0-07
12.	ನಾರಾಯಣಸ್ವಾಮಿ ಬಿನ್ ವೆಂಕಟರಾಮಪ್ಪ, ನಾಗರತ್ನಮ್ಮ ಕೋಂ ನಾರಾಯಣಸ್ವಾಮಿ, ಮುನೆಪ್ಪ ಬಿನ್ ವೆಂಕಟರಾಮಪ್ಪ	51/5	1-11	-	1-11
13.	ಎಂ.ಆಂಜಪ್ಪ ಬಿನ್ ಮುನಿಶಾಮಪ್ಪ	51/6	1-11	-	1-11
14.	ಸೈಯದ್ ತೌಕೀರ್ ಬಿನ್ ಜೆ.ಸೈಯದ್ ಅಬ್ದುಲ್ ಲತೀಫ್	52/1	1-23	-	1-23
15.	ವೆಂಕಟರತ್ನಮ್ಮ ಬಿನ್ ನಾರಾಯಣಸ್ವಾಮಿ	52/2	1-20	-	1-20
16.	ತಾಜುನ್ನೀಸಾ ಕೋಂ ಲೇಟ್ ಸುಬಾನ್ ಸಾಬಿ	52/3	0-04	-	0-04
17.	ಸೈಯದ್ ತೌಕೀರ್ ಬಿನ್ ಜೆ.ಸೈಯದ್ ಅಬ್ದುಲ್ ಲತೀಫ್	52/4	0-17	-	0-17
18.	ಮೌಸೀನ ಬಿನ್ ಜೆ.ಸೈಯದ್ ಅಬ್ದುಲ್ ಲತೀಫ್	52/5	0-22	-	0-22
19.	ಸೈಯದ್ ಷಂಷೀರ್ ಬಿನ್ ಸೈಯದ್ ಅಬ್ದುಲ್ ಲತೀಫ್	53/2	1-32½	-	1-32½
20.	ವೈ.ಎಲ್.ಚಂದ್ರಶೇಖರ್ ಬಿನ್ ಇರಗಪ್ಪ, ಶಾಂತಮ್ಮ ಕೋಂ ಜಿ.ಎಂ.ಹನುಮಪ್ಪ, ಹೆಚ್.ದಿನೇಶ್ ಕುಮಾರ್ ಬಿನ್ ಜಿ.ಎಂ. ಹನುಮಪ್ಪ	54/1	2-11	-	2-11
21.	ಸೈದ್ ರಹೀಮಾನ್ ಬಿನ್ ಸೈದಹುಸೇನ್	54/2	1-04	-	1-04
22.	ಸೈಯದ್ ಖಾದೀರ್ ಅಹಮದ್ ಬಿನ್ ಜೆ.ಸೈಯದ್ ಅಬ್ದುಲ್ ಲತೀಫ್	56/1 ರ ಪೈಕಿ	2-00	-	2-00
23.	ಷಫಿ ಉಲ್ಲಾ ಬಿನ್ ಖಾಜ ಅಬ್ದುಲ್ ಜಬ್ಬಾರ್, ಹಸೇನ್ ಷರೀಫ್ ಬಿನ್ ಖಾದರ್ ಮೋಹದೀನ್, ಸಗೀರ್ ಅಹಮದ್ ಬಿನ್ ಜೆ.ಅಬ್ದುಲ್ ರಹಿಮಾನ್, ಜಾಕೀರ್ ಅಹಮದ್ ಬಿನ್ ಜೆ.ಅಬ್ದುಲ್ ರಹೀಮಾನ್, ಷಕೀರ್ ಅಹಮ್ಮದ್ ಬಿನ್ ಜೆ.ಅಬ್ದುಲ್ ರಹೀಮಾನ್,(ಮೇಲಿನ ಜಂಟಿ) ಮಹ್ಮದ್ ಸಮೀಹುಲ್ಲಾ ಬಿನ್ ಖಾಜೀ ಅಬ್ದುಲ್ ಜಬ್ಬಾರ್	56/2 ರ ಪೈಕಿ	4-22	0-07	4-15
24.	ಅಬ್ದುಲ್ ಸತ್ತಾರ್	56/3	0-01½	-	0-01½
25.	ಸುಮ್ಮೈಯ್ಯ ಎಸ್ ಕೋಂ ಎಸ್.ಬಿ.ಸಾಬ್ ಜಾನ್ ಸಾಬ್	56/4	1-34½	-	1-34½
26.	ಸೈಯದ್ ಇಲಿಯಾಜ್ ಉ॥ ಅಫ್ಜಲ್ ಬಿನ್ ಸೈಯದ್ ಅಬ್ದುಲ್ ಸಮ್ಮದ್	58/1	1-26	-	1-26
27.	ಸೈಯದ್ ಅಲೀಂ ಬಿನ್ ಸೈಯದ್ ಸುಬಾನೇ ಸಾಬಿ, ಸೈಯದ್ ನದೀಂ ಬಿನ್ ಸೈಯದ್ ಸುಬಾನೇ ಪೋಷ ಸಾಬಿ	58/2	1-24	-	1-24
28.	ಸೈದ್ ಹಿದಾಯುತುಲ್ಲಾ ಕೋಂ ಸೈಯದ್ ಅಬ್ದುಲ್ ವು ಪಾಷ ಸಾಬಿ, ಸೈಯದ್ ರಿಜ್ವಾನ್ ಬಿನ್ ಲೇಟ್ ಸೈಯದ್ ಅಮಾನುಲ್ಲಾ	59/1	2-02	-	2-02
29.	ಸೈಯದ್ ಪರವೀಜ್ ಬಿನ್ ಸೈಯದ್ ರಶೀದ್	59/2	1-23	-	1-23
30.	ಸೈಯದ್ ಅನ್ವರ್, ಫಜಲ್ಲುನ್ನೀಸಾ ಕೋಂ ಲೇಟ್ ಸೈಯದ್ ಅಬ್ದುಲ್ ಅಫೀಸ್	60ರ ಪೈಕಿ	4-01	-	4-01
31.	ಮುಷ್ತಾಕ್ ಬಿನ್ ಕಯ್ಯೂಂಸಾಬಿ	61ರ ಪೈಕಿ	1-20	-	1-20
32.	ಸೈಯದ್ ರಫೀಕ್ ಬಿನ್ ಸೈಯದ್, ಅಬ್ದುಲ್ ಲತೀಫ್ ಉ॥ ಮೇಸ್ತ್ರಿ ಲತೀಫ್	62/2 ರ ಪೈಕಿ	2-00	-	2-00
33.	ಸೈಯದ್ ಯೂಸೂಫ್ ಬಿನ್ ಸೈಯದ್ ಮೀರ್ ಅಹಮೆದ್ ಉಲ್ಲಾ, ಸೈಯದ್ ಅಹ್ಮದ್ ಮುಸ್ತಫ್ ಬಿನ್ ಸೈಯದ್ ಯೂಸೂಫ್ (ಮೇಲಿನ ಜಂಟಿ)	62/3 ರ ಪೈಕಿ	1-32	0-09	1-23
34.	ಸೈಯದ್ ಅಹ್ಮೆದ್ ಮುಸ್ತಫ್ ಬಿನ್ ಸೈಯದ್ ಯೂಸೂಫ್	63	1-02	0-02	1-00
35.	ಸೈಯದ್ ಅಶ್ರಫ್ ಬಿನ್ ಸೈಯದ್ ಅಬ್ದುಲ್ ಸಲಾಂ ಸಾಬಿ, ಸೈಯದ್ ಮುಷ್ತಾಕ್ ಬಿನ್ ಸೈಯದ್ ಅಬ್ದುಲ್ ಸಲಾಂ ಸಾಬಿ (ಮೇಲಿನ ಜಂಟಿ)	64/1 ರ ಪೈಕಿ	3-37	0-07	3-30
36.	ಷಾಹೀನಾಬೇಗಂ ಕೋಂ ಸೈಯದ್ ಯೂಸೂಫ್	64/2	3-33	0-03	3-30
37.	ಲಕ್ಷ್ಮಿದೇವಮ್ಮ ಬಿನ್ ರಾಮಪ್ಪ	65/1	3-28	0-02	3-26
38.	ಜಿ.ಕೆ.ವೆಂಕಟೇಶ್ ಬಿನ್ ಜಿ.ಕೃಷ್ಣಪ್ಪ	65/2	1-34	-	1-34
39.	ಎನ್.ರಮೇಶ್ ಗೌಡ ಬಿನ್ ಜಿ.ನಾರಾಯಣಸ್ವಾಮಿ	65/3	1-33	-	1-33
40.	ಎನ್.ನಾರಾಯಣಪ್ಪ ಬಿನ್ ಲೇಟ್ ನಂಜುಂಡಪ್ಪ	66	5-15	-	5-15
41.	ಸರ್ಕಾರಿ ಬೀಳು	71/1	5-33	0-10	5-23
42.	ಸರ್ಕಾರಿ ಬೀಳು	71/2	3-00	-	3-00
43.	ಕಂಪ್ಯೂಟರ್‌ನಲ್ಲಿ ಪಹಣಿ ಲಭ್ಯವಿರುವುದಿಲ್ಲ	71/3	3-02	0-02	3-00
44.	ನಂಗಲಿ ವೆಂಕಟಬೋಯಿ, ಚಿಕ್ಕನಾರಾಯಣಸ್ವಾಮಿ ಬಿನ್ ದೊಡ್ಡಅಕ್ಕಲಪ್ಪ, ವೆಂಕಟ್ರಾಮಪ್ಪ ಬಿನ್ ಚಿನ್ನಪ್ಪ, ವಿ.ವೆಂಕಟರವಣಪ್ಪ ಬಿನ್ ಗುಡ್ಲಪ್ಪಗಾರಿ ವೆಂಕಟರಾಮನ್ನ, ವೆಂಕಟರಮಣಪ್ಪ ಬಿನ್ ವೆಂಕಟ್ರಾಮನ್ನ ನಾಗರಾಜ್ ಬಿನ್ ವೆಂಕಟ್ರಾಮನ್ನ, ಬಿ.ವಿ.ಆದಿನಾರಾಯಣಪ್ಪ ಬಿನ್ ವೆಂಕಟ್ರಾಮನ್ನ	72	5-09	-	5-09
45.	ವೆಂಕಟಪ್ಪ ಬಿನ್ ಮುನಿಶಾಮಿ, ವೆಂಕಟೇಶಪ್ಪ ಬಿನ್ ಮುನಿಶಾಮಿ, ಮುನಿಯಮ್ಮ ಕೋಂ ಕೆಂಚಪ್ಪ	73	2-37	-	2-37
46.	ವೈ.ಆರ್.ಸದಾಶಿವರೆಡ್ಡಿ ಬಿನ್ ಲೇಟ್ ವೈ.ಆರ್.ರಾಮರೆಡ್ಡಿ	74	12-13	-	12-13
47.	ಕೆ.ನಾರಾಯಣಸ್ವಾಮಿ ಬಿನ್ ಲೇಟ್ ಕುವ್ವಣ್ಣ	75/1	3-00	-	3-00
48.	ಎನ್.ಸುಮಿತ್ರ ಕೋಂ ಬಿ.ಈಶ್ವರ್ ರೆಡ್ಡಿ	75/2	3-04	0-04	3-00
49.	ಮುನಿಯಪ್ಪ ಬಿನ್ ಗುರ್ರುಪ್ಪ, ಚಿಕ್ಕಮುನಿಶಾಮಿ ಬಿನ್ ಗುರ್ರುಪ್ಪ, ಮುನಿಶಾಮಿ ಬಿನ್ ಗುರ್ರುಪ್ಪ, ಗಂಗುಲಪ್ಪ ಬಿನ್ ಗುರಪ್ಪ, ರಾಮಾಂಜಿ ಬಿನ್ ಮುನಿವೆಂಕಟಪ್ಪ	75/3	4-20	-	4-20
50.	ವಿ.ವೆಂಕಟೇಶರೆಡ್ಡಿ ಬಿನ್ ವೆಂಕಟಸ್ವಾಮಿ	76/1	7-00	0-10	6-30
51.	ಸರ್ಕಾರಿ ಬಂಜರು	76/2	1-26	1-00	0-26
52.	ಸರ್ಕಾರಿಬಂಜರು, ಟಿ.ಆರ್.ವೆಂಕಟರವಣ ಬಿನ್ ರಾಮನ್ನ, ಜಯಮ್ಮ ಬಿನ್ ಕೋನಪ್ಪ, ಲಕ್ಷ್ಮೀದೇವಮ್ಮ ಬಿನ್ ಕೋನಪ್ಪ, ಬಿ.ವಿ.ಆದಿನಾರಾಯಣಪ್ಪ ಬಿನ್ ವೆಂಕಟ್ರಾಮನ್ನ, ಮುನಿವೆಂಕಟಪ್ಪ ಬಿನ್ ವೆಂಕಟ್ರಾಮನ್ನ, ನಾರಾಯಣಪ್ಪ ಬಿನ್ ವೆಂಕಟ್ರಾಮನ್ನ, ನಾಗರಾಜ ಬಿನ್ ವೆಂಕಟ್ರಾಮನ್ನ, ವಿ.ವೆಂಕಟರವಣಪ್ಪ ಬಿನ್ ವೆಂಕಟ್ರಾಮನ್ನ (ಮೇಲಿನ ಜಂಟಿ)	77	28-01	0-16	27-25
53.	ಮಂಜುನಾಥ.ಎಲ್ ಬಿನ್ ಲಕ್ಷ್ಮಯ್ಯ, ನಟರಾಜ.ಎಲ್ ಬಿನ್ ಲಕ್ಷ್ಮಯ್ಯ	78/1	4-00	-	4-00
54.	ನಟರಾಜ.ಎಲ್ ಬಿನ್ ಲಕ್ಷ್ಮಯ್ಯ	78/2	4-00	-	4-00
55.	ನಟರಾಜ.ಎಲ್ ಬಿನ್ ಲಕ್ಷ್ಮಯ್ಯ	78/3	3-08	0-10	2-38
56.	ಸಿ.ನಾರಾಯಣಸ್ವಾಮಿ ಬಿನ್ ಚನ್ನರಾಯರೆಡ್ಡಿ	79/1	4-03	0-05	3-38
57.	ಎಂ.ಕೋದಂಡರಾಮಯ್ಯ ಬಿನ್ ಮುನಿಶಾಮಿ	79/2	4-03	0-05	3-38
58.	ಸರ್ಕಾರಿ ಬಂಜರು	79/3	3-27	0-03	3-24
59.	ಗೋಮಾಳ, ಸರ್ಕಾರ, ಮುನಿವೆಂಟಕಮ್ಮ, ಹನುಮಪ್ಪ ಬಿನ್ ಬುಡ್ಡಪ್ಪ, ಗಂಗಾಧರಪ್ಪ ಬಿನ್ ಬುಡ್ಡಪ್ಪ, ಆರ್.ಜಯಂತಿ ಕೋಂ ಕೆ.ಟಿ.ಶ್ರೀನಿವಾಸ್ ರಾವ್, ಪಿ.ಆರ್.ವಿಜಯ ಬಿನ್ ಚಂದ್ರಮ್ಮ	80	51-16	38-07	13-09
60.	ಮುನಿಯಮ್ಮ ಕೋಂ ಲೇಟ್ ಪಾತಕೊಟ ರಂಗಾರೆಡ್ಡಿ	81/1	4-07	-	4-07
61.	ಪಿ.ಸೊಣ್ಣಪ್ಪರೆಡ್ಡಿ ಬಿನ್ ಲೇಟ್ ವೆಂಕಟಶಾಮಿ, ಪಿ.ವಿ.ಕೃಷ್ಣಾರೆಡ್ಡಿ ಬಿನ್ ಲೇಟ್ ವೆಂಕಟಸ್ವಾಮಿ	81/2	4-07	-	4-07
62.	ಕೆ.ಎಂ.ವೆಂಕಟಶಾಮಿ ಬಿನ್ ಕೊಳತೂರು ಮುನಿವೆಂಕಟಪ್ಪ, ಕೆ.ಎಂ.ರಾಮಪ್ಪ ಬಿನ್ ಕೊಳತೂರು ಮುನಿವೆಂಕಟಪ್ಪ	82	2-04	-	2-04
63.	ಸರ್ಕಾರಿ ಬಂಜುರ, ಎಂ.ಮುನಿವೆಂಕಟಮ್ಮ ಬಿನ್ ಸಿ.ಮುನಿಶಾಮಿಗೌಡ	95	8-35	-	8-35
64.	ಟಿ.ಯಳಚಪ್ಪ ಬಿನ್ ತಿಮ್ಮಯ್ಯ	96	2-37	-	2-37
65.	ಸರ್ಕಾರಿ ಗೋಮಾಳ	97	62-21	62-21	-
66.	ಸರ್ಕಾರಿ ಬಂಜರು	98	9-29	0-12	9-17
67.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	99	4-23	-	4-23
68.	ಸರ್ಕಾರಿ ಬಂಜರು, ಎಸ್.ಸುಭಾನ್ ಬಿನ್ ಸತ್ತಾರ್ ಸಾಬ್, ನೇ.ಬರಕತ್ತುಲ್ಲಾ ಬಿನ್ ಅಬ್ದುಲ್ ಖಾಲಕ್ ಖಾನ್, ನೀ.ರಹಮತ್ತುಲ್ಲಾ ಬಿನ್ ಅಬ್ದುಲ್ ಖಾಲಕ್ ಖಾನ್, ನೀ.ಹಿರಾಯಿತ್ತುಲ್ಲಾ ಬಿನ್ ಅಬ್ದುಲ್ ಖಾಲಕ್ ಖಾನ್	100	16-19	0-17	16-02
69.	ಸರ್ಕಾರಿ ಬಂಜರು, ವೆಂಕಟಲಕ್ಷ್ಮಮ್ಮ ಕೋಂ ಶಂಕರಪ್ಪ, ಲಕ್ಷ್ಮೀನಾರಾಯಣ ಬಿನ್ ವೆಂಕಟೇಶಪ್ಪ	101	19-18	-	19-18
70.	ಸರ್ಕಾರಿ ಬಂಜರು	102	9-23	-	9-23
71.	ಸರ್ಕಾರಿ ಬಂಜರು	103	9-15	1-15	8-00
72.	ಸರ್ಕಾರಿ ಬಂಜರು	104	10-00	-	10-00
73.	ಸರ್ಕಾರಿ ಬಂಜರು	105	11-22	0-27	10-35
74.	ಸರ್ಕಾರಿ ಬಂಜರು, ಸೈಯದ್ ರಿಯಾಜ್ ಅಹ್ಮದ್ ಬಿನ್ ಸೈಯದ್ ಅಬ್ದುಲ್ ಬಾಷಿತ್, ಬರಕತ್ತಲ್ಲಿ ಬಿನ್ ಅಬ್ದುಲ್ ಖಾಲಕ್ ಖಾನ್, ರಹಮತ್ತುಲ್ಲಾ ಬಿನ್ ಅಬ್ದುಲ್ ಖಾಲಕ್ ಖಾನ್, ಹಿದಾಯತ್ತುಲ್ಲಾ ಬಿನ್ ಅಬ್ದುಲ್ ಖಾಲಕ್ ಖಾನ್	106	16-28	0-09	16-19
75.	ಸರ್ಕಾರಿ ಬಂಜರು, ಅಬ್ದುಲ್ ವಾಜೀದ್ ಬಿನ್ ಹಾಜಿ ಅಬ್ದುಲ್ ಖಾದರ್, ಸಿರಾಜ್ ಅಹ್ಮದ್ ಬಿನ್ ಹಾಜಿ ಅಬ್ದುಲ್ ಖಾದರ್, ನಾರಾಯಣಸಿಂಗ್ ಬಿನ್ ಲೇಟ್ ಜಯರಾಮಸಿಂಗ್, ಅಮೃತಸಿಂಗ್ ಬಿನ್ ರಾಮಸಿಂಗ್, ಚಂದ್ರಾಸಿಂಗ್ ಬಿನ್ ಜಯರಾಮಸಿಂಗ್, ಲಕ್ಷ್ಮೀಬಾಯಿಸಿಂಗ್ ಕೋಂ ಲೇಟ್ ದಶರಥಸಿಂಗ್, ಮಂಜುನಾಥಸಿಂಗ್ ಬಿನ್ ರಾಮಸಿಂಗ್, ಅನುಸೂಯಬಾಯಿ ಕೋಂ ನಾರಾಯಣಸಿಂಗ್, ರಮಾಬಾಯಿ ಬಿನ್ ಲೇಟ್ ಬಾಬಾಜೀಸಿಂಗ್ (ಮೇಲಿನ ಜಂಟಿ)	107	18-35	0-08	18-27
76.	ಷರೀಫ್	108/1	5-20	-	5-20
77.	ಫಯಾಜ್ ಅಹ್ಮದ್ ಬಿನ್ ಹಾಜಿ ಅಬ್ದುಲ್ ಖಾದರ್	108/2	0-30	-	0-30
78.	ಫಯಾಜ್ ಅಹ್ಮದ್ ಬಿನ್ ಹಾಜಿ ಅಬ್ದುಲ್ ಖಾದರ್	108/3	0-30	-	0-30
79.	ಸರ್ಕಾರಿ ಬಂಜರು	109/1	1-24	0-18	1-06
80.	ದೊಡ್ಡಮರೇಗೌಡ ಬಿನ್ ಲೇಟ್ ವೆಂಕಟಶಾಮಿಗೌಡ	109/2	2-00	-	2-00
81.	ದೊಡ್ಡಮರೇಗೌಡ ಬಿನ್ ಲೇಟ್ ವೆಂಕಟಶಾಮಿಗೌಡ	109/3	4-30	0-21	4-09
82.	ದೊಡ್ಡಮರೇಗೌಡ ಬಿನ್ ಲೇಟ್ ವೆಂಕಟಶಾಮಿಗೌಡ	110/1	2-38	0-04	2-34
83.	ದೊಡ್ಡಮರೇಗೌಡ ಬಿನ್ ಲೇಟ್ ವೆಂಕಟಶಾಮಿಗೌಡ	110/2	3-13	0-05	3-08
84.	ದೊಡ್ಡಮರೇಗೌಡ ಬಿನ್ ಲೇಟ್ ವೆಂಕಟಶಾಮಿಗೌಡ	110/3	4-27	0-06	4-21
85.	ಗೋಪಾಲಗೌಡ ಎನ್.ಬಿ ಬಿನ್ ಬ್ಯಾಟಪ್ಪ ಎನ್.ಜಿ	111/1	1-24¾	0-01¾	1-23
86.	ಬ್ಯಾಟಪ್ಪ ಎನ್.ಜಿ ಬಿನ್ ಲೇಟ್ ಗೋಪಾಲಪ್ಪ	111/2	1-23	-	1-23
87.	ಮಂಜುನಾಥ ಸಿಂಗ್ ಬಿನ್ ಶೇಷುಸಿಂಗ್	111/3	1-26¼	0-04¾	1-21½
88.	ಭವಾನಿ ಸಿಂಗ್ ಬಿನ್ ಶೇಷುಸಿಂಗ್	111/4	1-23½	0-01¾	1-21¾
89.	ಲಕ್ಷ್ಮಣಸಿಂಗ್ ಬಿನ್ ಶೇಷುಸಿಂಗ್	111/5	1-23½	0-01¾	1-21¾
90.	ಹುಸೇನ್ ಷರೀಫ್ ಬಿನ್ ಖಾದರ್ ಮೊಹದೀನ್, ಅಬ್ದುಲ್ ವಾಜೀದ್ ಬಿನ್ ಹಾಜಿ ಅಬ್ದುಲ್ ಖಾದರ್, ನಸರೀನ್ ಪಾತಿಮಾ ಕೋಂ ಸಿರಾಜ್ ಅಹ್ಮದ್, ಸುಬ್ಬಮ್ಮ ಬಿನ್ ಚಿಕ್ಕಮುನಿಯಪ್ಪ ಉ॥ ಬೋಡೆಪ್ಪ ಲೇಟ್	112/1	4-25	0-12	4-13
91.	ವೈ.ಆರ್.ಸದಾಶಿವರೆಡ್ಡಿ ಬಿನ್ ಲೇಟ್ ವೈ.ಆರ್.ರಾಮರೆಡ್ಡಿ	112/2	5-07	-	5-07
92.	ಹುಸೇನ್ ಷರೀಫ್ ಬಿನ್ ಖಾದರ್ ಮೊಹದೀನ್	113/1	2-19½	0-04	2-15½
93.	ನಾರಾಯಣಪ್ಪ ಬಿನ್ ನಂಜುಂಡಪ್ಪ	113/2	2-13	-	2-13
94.	ಮಹಮದ್ ರಹಮತ್ತುಲ್ಲಾ ಬಿನ್ ಅಬ್ದುಲ್ ಜಬ್ಬಾರ್ ಉ॥ ಷಬಾಸ್ ಸಾಬಿ	113/3	2-19½	0-04	2-15½
95.	ಸೈಯದ್ ಅಶ್ರಫ್ ಬಿನ್ ಸೈಯದ್ ಅಬ್ದುಲ್ ಸಲಾಂ ಸಾಬಿ, ಸೈಯದ್ ಮುಷ್ತಾಕ್ ಬಿನ್ ಸೈಯದ್ ಅಬ್ದುಲ್ ಸಲಾಂ ಸಾಬಿ(ಮೇಲಿನ ಜಂಟಿ)	114/1	1-00	-	1-00
96.	ಎನ್.ನಾರಾಯಣಪ್ಪ ಬಿನ್ ನಂಜುಂಡಪ್ಪ	114/2	8-26	-	8-26
97.	ಸೈಯದ್ ಅಶ್ರಫ್ ಬಿನ್ ಸೈಯದ್ ಅಬ್ದುಲ್ ಸಲಾಂ ಸಾಬಿ, ಸೈಯದ್ ಮುಷ್ತಾಕ್ ಬಿನ್ ಸೈಯದ್ ಅಬ್ದುಲ್ ಸಲಾಂ ಸಾಬಿ (ಮೇಲಿನ ಜಂಟಿ)	115/1	2-08	-	2-08
98.	ಎನ್.ನಾರಾಯಣಪ್ಪ ಬಿನ್ ನಂಜುಂಡಪ್ಪ	115/2	2-06½	0-01½	2-05
99.	ಸಾಜೀದಾ ಬೇಗಂ ಕೋಂ ಅಬ್ದುಲ್ ರವುಫ್	115/3	3-32	0-02	3-30
100.	ಸೈಯದ್ ಅಶ್ರಫ್ ಬಿನ್ ಸೈಯದ್ ಅಬ್ದುಲ್ ಸಲಾಂ ಸಾಬಿ, ಸೈಯದ್ ಮುಷ್ತಾಕ್ ಬಿನ್ ಸೈಯದ್ ಅಬ್ದುಲ್ ಸಲಾಂ ಸಾಬಿ (ಮೇಲಿನ ಜಂಟಿ)	115/4	0-12	-	0-12
101.	ಬಿ.ವಿ.ವೆಂಕಟರೆಡ್ಡಿ ಬಿನ್ ದೊಡ್ಡವೆಂಕಟರಾಮನ್ನ	115/5	3-19½	0-01½	3-18
102.	ಸೈಯದ್ ಬಲ್ಕ್ ಜ್ ಬಾನು ಬಿನ್ ಜಿ.ಸೈಯದ್ ಅಬ್ದುಲ್ ಲತೀಫ್	115/6	0-14	-	0-14
103.	ಯಾಸ್ಮೀನ್ ತಾಜ್ ಬಿನ್ ಜೆ.ಸೈಯದ್ ಅಬ್ದುಲ್ ಲತೀಫ್	115/7	0-13	-	0-13
104.	ಕರೀಮುನ್ನೀಸ್ಸಾ ಬಿನ್ ಜೆ.ಸೈಯದ್ ಅಬ್ದುಲ್ ಲತೀಫ್	115/8	0-13	-	0-13
105.	ವಿನೋದ್.ಎನ್ ಬಿನ್ ಎನ್.ನಾರಾಯಣಪ್ಪ, ಜೀವನ್.ವಿ ಮತ್ತು ರಚಿತ.ವಿ ರವರುಗಳ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಖಾಸಾ ತಂದೆಯಾದ ವಿನೋದ್.ಎನ್ ಬಿನ್ ಎನ್.ನಾರಾಯಣಪ್ಪ	116	6-29	0-15	6-14
106.	ಲಕ್ಷ್ಮೀದೇವಮ್ಮ ಬಿನ್ ರಾಮಪ್ಪ, ಜಿ.ವೆಂಕಟೇಶಪ್ಪ ಬಿನ್ ಗುರಪ್ಪ, ಜಿ.ವೆಂಕಟೇಶಪ್ಪ ಬಿನ್ ಗುರಪ್ಪ	117/1	2-16	-	2-16
107.	ಲಕ್ಷ್ಮೀದೇವಮ್ಮ ಬಿನ್ ರಾಮಪ್ಪ, ಜಿ.ವೆಂಕಟೇಶಪ್ಪ ಬಿನ್ ಗುರಪ್ಪ	117/2	1-03	-	1-03
108.	ವಿನೋದ್.ಎನ್ ಬಿನ್ ಎನ್.ನಾರಾಯಣಪ್ಪ, ಜೀವನ್.ವಿ ಮತ್ತು ರಚಿತ್.ವಿ ರವರುಗಳ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಖಾಸಾ ತಂದೆ ಯಾದ ವಿನೋದ್.ಎನ್ ಬಿನ್ ಎನ್.ನಾರಾಯಣಪ್ಪ	117/3	0-04	-	0-04
109.	ಎನ್.ರಾಮೇಶ್ ಗೌಡ ಬಿನ್ ಜಿ.ನಾರಾಯಣಸ್ವಾಮಿ	117/4	0-10	-	0-10
110.	ಎನ್.ರಮೇಶ್ ಗೌಡ ಬಿನ್ ಜಿ.ನಾರಾಯಣಸ್ವಾಮಿ	117/5	2-15	-	2-15
111.	ವಸಂತ ಕುಮಾರಿ ಕೆ.ಆರ್ ಕೋಂ ದಯಾನಂದ ಬಿ.ವಿ	118/1	2-16	0-03	2-13
112.	ರಂಗೇಶ್.ಎಂ ಬಿನ್ ಮುನಿರಾಮಪ್ಪ, ಶ್ರೀರಾಮಪ್ಪ ಬಿನ್ ಮುನಿರಾಮಪ್ಪ (ಮೇಲಿನ ಜಂಟಿ)	118/2	1-36	0-01	1-35
113.	ಹಸೀನ್ ತಾಜ್ ಕೋಂ ಅಬ್ದುಲ್‌ಸಮದ್	118/3	1-12	0-01	1-11
114.	ರಂಗೇಶ್.ಎಂ ಬಿನ್ ಮುನಿರಾಮಪ್ಪ, ಶ್ರೀರಾಮಪ್ಪ ಬಿನ್ ಮುನಿರಾಮಪ್ಪ (ಮೇಲಿನ ಜಂಟಿ)	118/4	0-26	0-01	0-25
115.	ಹಸೀನ್ ತಾಜ್ ಕೋಂ ಅಬ್ದುಲ್ ಸಮದ್	118/5	1-31	0-04	1-27
116.	ನವೀದನ್ನಿಸಾ ಕೋಂ ನದೀಂ ಪಾಷ.ಎ	118/6	0-20	-	0-20
117.	ಶಬಾನಕೌಸರ್ ಕೋಂ ಸೈಯದ್ ಮನ್ಸೂರ್ ಅಲಿ	118/7	0-26	-	0-26
118.	ಗಂಗಯ್ಯ ಬಿನ್ ವೆಂಕಟರಾಮಯ್ಯ	122/1 ರ ಪೈಕಿ	1-01½	-	1-01½
119.	ಪೆನ್ಷನ್ ಗೌಸ್ ಸಾಬಿ ನವೀದ್ ಬಿನ್ ಬಕ್ಸೂಸಾಬಿ	122/2 ರ ಪೈಕಿ	1-22	-	1-22
120.	ವಿ.ನಾರಾಯಣಸ್ವಾಮಿ ಬಿನ್ ವೆಂಕಟನ್ನ ಉ॥ ವೆಂಕಟಪ್ಪ	122/3 ರ ಪೈಕಿ	0-05½	-	0-05½
121.	ಸೈಯದ್ ಪಾಷ ಬಿನ್ ಇಂತಿಯಾಜ್ ಪಾಷ	122/4 ರ ಪೈಕಿ	0-35¾	-	0-35¾
122.	ಆರ್.ಶ್ರೀನಿವಾಸ್ ಬಿನ್ ರಾಮಯ್ಯ	124	11-10	0-05	11-05
123.	ಆರ್.ಶ್ರೀನಿವಾಸ್ ಬಿನ್ ರಾಮಯ್ಯ	125	4-32	0-10	4-22
124.	ಸರ್ಕಾರಿ ಖಾರಾಬು, ಸುಶೀಲಮ್ಮ ಕೋಂ ಸಾಂಬಾಶಿವ, ಎನ್.ವೆಂಕಟಪ್ಪ	126	5-24	3-24	2-00
125.	ವಿನೋದ್.ಎನ್ ಬಿನ್ ಎನ್.ನಾರಾಯಣಪ್ಪ, ಜೀವನ್.ವಿ ಮತ್ತು ರಚಿತ.ವಿ ರವರುಗಳ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಖಾಸಾ ತಂದೆಯಾದ ವಿನೋದ್.ಎನ್ ಬಿನ್ ಎನ್.ನಾರಾಯಣಪ್ಪ	127	6-20	-	6-20
126.	ತೋಹಿದ್ ಪಾಷಾ ಬಿನ್ ಅಬ್ದುಲ್ ಸತ್ತಾರ್	128	4-25	-	4-25
127.	ಅಬ್ದುಲ್ ಕಲೀಲ್ ಬಿನ್ ಬುಡನ್ ಸಾಬಿ, ಸರ್ಕಾರಿ ಬಂಜರು, ಸುನಂದಮ್ಮ ಬಿನ್ ರಾಮಯ್ಯ	129	12-13	1-15	10-38
128.	ಮೊಹಮ್ಮದ್ ಜುನ್ಸೈದ್ ಬಿನ್ ಜಮೀಲ್ ಅಹ್ಮದ್	130/1	1-10	0-10	1-00
129.	ಅಬ್ದುಲ್ ವಾಜೀದ್ ಬಿನ್ ಹಾಜಿ ಅಬ್ದುಲ್ ಖಾದರ್	130/2	2-30	0-10	2-20
130.	ಲಕ್ಷ್ಮದೇವಮ್ಮ ಕೋಂ ಎನ್.ಜಿ.ಬ್ಯಾಟಪ್ಪ	130/3	0-15	0-01	0-14
131.	ತೋಹೀದ್ ಪಾಷ ಬಿನ್ ಅಬ್ದುಲ್ ಸತ್ತಾರ್	130/4	2-30	0-10	2-20
132.	ಮೊಹಮ್ಮದ್ ಜನ್ಸೈದ್ ಬಿನ್ ಜಮೀಲ್ ಅಹ್ಮದ್	130/5	1-02½	0-02½	1-00
133.	ತೋಹಿದ್ ಪಾಷಾ ಬಿನ್ ಅಬ್ದುಲ್‌ಸತ್ತಾರ್, ಅಬ್ದುಲ್ ಖಾಜಾ ಬಿನ್ ಅಬ್ದುಲ್‌ಸತ್ತಾರ್ (ಮೇಲಿನ ಜಂಟಿ)	130/6	2-32½	0-06½	2-26
134.	ಎಸ್.ಹನುಮಂತಯ್ಯ ಬಿನ್ ಯರಪ್ಪ, ತೋಟಿ ಮುನೆಪ್ಪ	131/1	0-30	-	0-30
135.	ವೈ.ಸುಬದ್ರಮ್ಮ ಕೋಂ ಮುನಿರಂಗಯ್ಯ	131/2	1-15	-	1-15
136.	ಲಕ್ಷ್ಮೀದೇವಮ್ಮ ಕೋಂ ಎನ್.ಜಿ.ಬ್ಯಾಟಪ್ಪ	131/3	3-29	-	3-29
137.	ವಿ.ಶ್ರೀನಿವಾಸಪ್ಪ ಬಿನ್ ವೆಂಟಕರಾಮಪ್ಪ, ಅನಂತಪದ್ಮನಾಬಾಚಾರ್ಯ ಬಿನ್ ಭಾಷ್ಯಾಚಾರ್ಯ, ಲಕ್ಷ್ಮೀದೇವಮ್ಮ ಕೋಂ ಲೇಟ್ ವೆಂಕಟಾಚಲಪತಿಚಾರ್ಯ, ನಾರಾಯಣಚಾರ್ಯ ಬಿನ್ ಲೇಟ್ ಭಾಷ್ಯಾಚಾರ್ಯ, ಕೃಷ್ಣಮೂರ್ತಿ ಬಿನ್ ಲೇಟ್ ಭಾಷ್ಯಾಚಾರ್ಯ	132	7-15	0-10	7-05

138.	ಪೂಜಾರಿ ನಾರಾಯಣಪ್ಪ, ಸೊಣ್ಣಪ್ಪ, ಕೆ.ವಿ.ಕಾಳಪ್ಪ	133/1	5-30	1-11	4-19
139.	ಆರ್.ಹರೀಶ್ ಕುಮಾರ್	133/2	3-09	0-29	2-20
140.	ಕೆ.ವಿ.ಕಾಳಪ್ಪ ಬಿನ್ ಕೆ.ವೆಂಕಟೇಶ ಗೌಡ	134/1	1-03¼	0-06½	0-36¾
141.	ಸರ್ಕಾರಕ್ಕೆ	134/2	1-37	0-03½	1-33½
142.	ಆರ್.ಹರೀಶ್ ಕುಮಾರ್ ಬಿನ್ ಲೇಟ್ ರಾಮಕೃಷ್ಣೇಗೌಡ	134/3	1-06¾	0-10	0-36¾
143.	ಸರ್ಕಾರಕ್ಕೆ	135/1	1-00	0-02	0-38
144.	ಮೀರ್ ಮೊಹಮ್ಮದ್ ಸಾಬಿ	135/2	0-24	-	0-24
145.	ದಿವ್ಯ ಟಿ.ಎನ್ ಕೋಂ ಹೆಚ್.ಕೆ.ಸಂದೀಪ್	136/1	0-31½	-	0-31½
146.	ಸಂದೀಪ್ ಹೆಚ್.ಕೆ ಬಿನ್ ಹೆಚ್.ವಿ.ಕೃಷ್ಣಮೂರ್ತಿ	136/2	0-15¾	-	0-15¾
147.	ಎಸ್.ವರಲಕ್ಷ್ಮಿ ಕೋಂ ಹೆಚ್.ವಿ.ಕೃಷ್ಣ ಮೂರ್ತಿ	136/3	0-15¾	-	0-15¾
148.	ಫಯಾಜ್ ಖಾನ್ ವು.ಬಾಬು ಬಿನ್ ಖಾಸಿಂಖಾನ್	137	1-32	-	1-32
149.	ವೆಂಕಟಲಕ್ಷ್ಮಮ್ಮ ಕೋಂ ಹೆಚ್.ಶಂಕರಪ್ಪ, ಮೀನಾಕ್ಷಮ್ಮ ಕೋಂ ಎಸ್.ಎಂ.ವೆಂಕಟರಾಮಯ್ಯ, ಮೀನಾಕ್ಷಮ್ಮ ಕೋಂ ಎಸ್.ಎಂ.ವೆಂಕಟರಾಮಯ್ಯ	138	2-08	-	2-08
150.	ಮೀನಾಕ್ಷಮ್ಮ ಕೋಂ ಎಸ್.ಎಂ.ವೆಂಕಟರಾಮಯ್ಯ	139	1-01	-	1-01
151.	ನಾರಾಯಣಮ್ಮ ಬಿನ್ ವೆಂಕಟೇಶಪ್ಪ	140/1	1-03	-	1-03
152.	ನಾರಾಯಣಮ್ಮ ಕೋಂ ವಂಕಟೇಶಪ್ಪ	140/2	1-20	-	1-20
153.	ತಿಪ್ಪನ್ನ ಬಿನ್ ಬೀರಪ್ಪ	141/1	2-06	0-01	2-05
154.	ಎಂ.ಚೌಡರೆಡ್ಡಿ ಬಿನ್ ಮುನೀರಪ್ಪ	141/2	0-39	0-01	0-38
155.	ತಪ್ಪನ್ನ ಬಿನ್ ಬೀರಪ್ಪ	141/3	1-02	0-01	1-01
156.	ಬಿ.ವಿ.ವೀಣಾ ಕೋಂ ಬಿ.ಎಸ್.ವೆಂಕಟರತ್ನಯ್ಯಶೆಟ್ಟಿ	141/4	0-03	-	0-03
157.	ಬಿ.ಆಂಜಪ್ಪ ಬಿನ್ ಬೈಯಪ್ಪ	142/1	1-02	0-02	1-00
158.	ಜಿ.ಕೆ.ಜಗದೀಶ್ ಬಿನ್ ಜಿ.ವಿ.ಕೃಷ್ಣಯ್ಯಶೆಟ್ಟಿ, ಜಿ.ಕೆ.ಅಶ್ವಥನಾರಾಯಣ ಬಿನ್ ಜಿ.ವಿ.ಕೃಷ್ಣಯ್ಯಶೆಟ್ಟಿ (ಮೇಲಿನ ಜಂಟಿ)	142/2	1-01	0-01	1-00
159.	ಶಬೀರ್.ವೈ ಷರೀಫ್ ಬಿನ್ ಅತಾವುಲ್ಲಾ ಷರೀಫ್	142/3	1-01	0-02	0-39
160.	ವೆಂಕಟಲಕ್ಷ್ಮಮ್ಮ ಕೋಂ ಮುನಿಶಾಮಿ.ಎಂ	143/1	1-15	-	1-15
161.	ವೈ.ಕೃಷ್ಣಪ್ಪ ಬಿನ್ ಮುನಿಯಪ್ಪ ಉ॥ ಯರಪ್ಪ	143/2	1-15	-	1-15
162.	ಕೆ.ಆರ್.ನಾರಾಯಣಸ್ವಾಮಿ ಬಿನ್ ರಾಮಪ್ಪ	144/1	1-19	-	1-19
163.	ವೆಂಕಟಪ್ಪ ಬಿನ್ ನಾರಾಯಣಪ್ಪ	144/2	0-29	-	0-29
164.	ಸುರೇಶ್ ಕೆ.ವಿ ಬಿನ್ ವೆಂಕಟಪ್ಪ	144/3	0-29	-	0-29
165.	ರಾಮಪ್ಪ ಬಿನ್ ವೆಂಕಟಶಾಮಪ್ಪ	145/1	0-37½	-	0-37½
166.	ಸೀನಪ್ಪ ಬಿನ್ ವೆಂಕಟಶಾಮಪ್ಪ	145/2	0-37½	-	0-37½
167.	ಆರ್.ಮುನಿರೆಡ್ಡಿ ಬಿನ್ ರಂಗಾರೆಡ್ಡಿ	145/3	0-30	-	0-30
168.	ಎಸ್.ಬಿ.ದೇವರಾಜ್ ಬಿನ್ ಎಸ್.ಡಿ.ಬೈಚೇಗೌಡ	146/1	1-10½	-	1-10½
169.	ಎಸ್.ಎಂ.ನಾರಾಯಣಸ್ವಾಮಿ ಬಿನ್ ಮುನಿಯಪ್ಪ	146/2	1-10½	-	1-10½
170.	ಆರ್.ನಾರಾಯಣಸ್ವಾಮಿ ಬಿನ್ ರಂಗಾರೆಡ್ಡಿ	147/1	1-10	-	1-10
171.	ಹಲೀಮ ಸಾದಿಯ ಖಾನುಂ. ಆರ್.ಎಸ್ ಕೋಂ ಅಮಜದ್ ಖಾನ್.ಹೆಚ್	147/2	1-10	-	1-10
172.	ಆರ್.ನಾರಾಯಣಸ್ವಾಮಿ ಬಿನ್ ರಂಗಾರೆಡ್ಡಿ	148/1	0-28½	-	0-28½
173.	ಹಲೀಮ ಸಾದಿಯ ಖಾನುಂ. ಆರ್.ಎಸ್ ಕೋಂ ಅಮಜದ್ ಖಾನ್.ಹೆಚ್	148/2	0-28½	-	0-28½
174.	ಕೆ.ಎಂ.ಸುಬ್ರಮಣಿ ಬಿನ್ ಮುನಿವೆಂಕಟಪ್ಪ	149/1	4-00	-	4-00
175.	ಕೆ.ಎಂ.ಸುಬ್ರಮಣಿ ಬಿನ್ ಮುನಿವೆಂಕಟಪ್ಪ	149/2	4-01	-	4-01
176.	ಗವಪ್ಪ ಬಿನ್ ಲೇಟ್ ಮುನಿವೆಂಕಟಪ್ಪ	150/1	1-14	0-01	1-13
177.	ಬಿ.ವಿ.ಶ್ರೀರಾಮೇಗೌಡ ಬಿನ್ ಲೇಟ್ ಬಿ.ವೆಂಕಟೇಶಪ್ಪ	150/2	1-08	-	1-08
178.	ಪಿ.ಮುರಳಿಕೃಷ್ಣ ಬಿನ್ ಜಿ.ಪಾಪಯ್ಯಶೆಟ್ಟಿ	150/3	0-22	-	0-22
179.	ಪಿ.ರತ್ನಯ್ಯಶೆಟ್ಟಿ ಬಿನ್ ಜಿ.ಪಾಪಯ್ಯಶೆಟ್ಟಿ	150/4	1-20	-	1-20
180.	ಸುರೇಶ್ ಕೆ.ವಿ ಬಿನ್ ವೆಂಕಟಪ್ಪ	151/1	1-09	-	1-09
181.	ಸುರೇಶ್ ಕೆ.ವಿ ಬಿನ್ ವೆಂಕಟಪ್ಪ	151/2	1-15	-	1-15
182.	ಸುರೇಶ್ ಕೆ.ವಿ ಬಿನ್ ವೆಂಕಟಪ್ಪ	152	1-19	0-02	1-17
183.	ವೆಂಕಟ್ರವಣಪ್ಪ ಬಿನ್ ಹನುಮಂತಪ್ಪ, ಶಂಕರಪ್ಪ ಬಿನ್ ಹನುಮಂತಪ್ಪ, ನಾರಾಯಣಸ್ವಾಮಿ ಬಿನ್ ಹನುಮಂತಪ್ಪ, ಚಲಪತಿ ಬಿನ್ ಹನುಮಂತಪ್ಪ, ಹೆಚ್.ಚೆನ್ನಕೃಷ್ಣ ಬಿನ್ ಹನುಮಂತಪ್ಪ, (ಮೇಲಿನ ಜಂಟಿ)	153/1ಎ	1-16	-	1-16
184.	ವೆಂಕಟ್ರವಣಪ್ಪ ಬಿನ್ ಹನುಮಂತಪ್ಪ, ಶಂಕರಪ್ಪ ಬಿನ್ ಹನುಮಂತಪ್ಪ, ನಾರಾಯಣಸ್ವಾಮಿ ಬಿನ್ ಹನುಮಂತಪ್ಪ, ಚಲಪತಿ ಬಿನ್ ಹನುಮಂತಪ್ಪ, ಹೆಚ್.ಚೆನ್ನಕೃಷ್ಣ ಬಿನ್ ಹನುಮಂತಪ್ಪ, (ಮೇಲಿನ ಜಂಟಿ)	153/1ಬಿ	0-33	-	0-33
185.	ರಾಮಕೃಷ್ಣಪ್ಪ, ವಿ.ನಾರಾಯಣಸ್ವಾಮಿ ಬಿನ್ ಲೇಟ್ ಬಿ.ವೆಂಕಟೇಶಪ್ಪ	153/2	2-08	0-01	2-07
186.	ಕೆ.ಸೊಣ್ಣಪ್ಪ ಬಿನ್ ಕಾಳಪ್ಪ	154/1	2-07	0-02	2-05
187.	ಎಸ್.ನಾರಾಯಣಸ್ವಾಮಿ ಬಿನ್ ಸುಬ್ಬರಾಯಪ್ಪ	154/2	0-01	-	0-01
188.	ಶ್ಯಾಮಣ್ಣ ಬಿನ್ ಬೈಯಪ್ಪ	154/3	1-11	0-01	1-10
189.	ಆಯೀಷಾಫರವೀನ್ ಕೋಂ ಬರಕತ್ತುಲ್ಲಾಖಾನ್, ಜಬೀನಾ ಕೋಂ ರಹಮತ್ತುಲ್ಲಾ ಖಾನ್ (ಮೇಲಿನ ಜಂಟಿ)	154/4	1-07	0-01	1-06
190.	ಪಿ.ಶ್ರೀನಿವಾಸಯ್ಯ ಶೆಟ್ಟಿ ಬಿನ್ ಜಿ.ಪಾಪಯ್ಯ ಶೆಟ್ಟಿ	154/5	0-24	-	0-24
191.	ಶಿವಪ್ರಸಾದ್ ಬಿನ್ ದೇವಿಪ್ರಸಾದ್	155/1	0-06	-	0-06
192.	ಎನ್. ಕನ್ಯಾವತಿ ಬಿನ್ ನರಸಿಂಹಯ್ಯ	155/2 ರ ಪೈಕಿ	2-01	-	2-01
193.	ಎನ್. ಕನ್ಯಾವತಿ ಬಿನ್ ನರಸಿಂಹಯ್ಯ	155/3 ರ ಪೈಕಿ	1-37	-	1-37
194.	ಎನ್. ಕನ್ಯಾವತಿ ಬಿನ್ ನರಸಿಂಹಯ್ಯ , ವೆಂಕಟರಾಮಪ್ಪ ಬಿನ್ ಲೇಟ್ ಮುನಿವೆಂಕಟಪ್ಪ ಉ॥ ಚಿಕ್ಕಣ್ಣ	157	1-34	0-09	1-25
195.	ಮುನಿವೆಂಕಟಸ್ವಾಮಿ ಬಿನ್ ಲೇಟ್ ಮುನಿವೆಂಕಟಪ್ಪ ಉ॥ ಚಿಕ್ಕಣ್ಣ	158	0-22	-	0-22
196.	ಬಿ.ವೆಂಕಟರಾಮಪ್ಪ ಬಿನ್ ಬೀರಪ್ಪ, ಬಿ.ನಾರಾಯಣಪ್ಪ ಬಿನ್ ಬೀರಪ್ಪ, ತೊಟ್ಲೆಮ್ಮ ಕೋಂ ಲೇಟ್ ಮುನಿವೆಂಕಟಪ್ಪ ಉ॥॥ ಚಿಕ್ಕಣ್ಣ, ವೆಂಕಟರಾಮಪ್ಪ ಬಿನ್ ಲೇಟ್ ಮುನಿವೆಂಕಟಪ್ಪ ಉ॥ ಚಿಕ್ಕಣ್ಣ, ಮುನಿವೆಂಕಟಸ್ವಾಮಿ ಬಿನ್ ಲೇಟ್ ಮುನಿವೆಂಕಟಪ್ಪ ಉ॥ ಚಿಕ್ಕಣ್ಣ, ನಾಗರತ್ನಮ್ಮ ಕೋಂ ವೆಂಕಟಶಾಮಿ ಗೌಡ	159ರ ಪೈಕಿ	3-28	0-05	3-23
197.	ವಿ.ವೆಂಕಟಾಚಲಪತಿ ಬಿನ್ ವೆಂಕಟೇಶಪ್ಪ	160/1	0-06	-	0-06
198.	ಮುನಿರತ್ನಮ್ಮ ಕೋಂ ನಾರಾಯಣಸ್ವಾಮಿ	160/2	0-02	-	0-02
199.	ನಾರಾಯಣಸಿಂಗ್ ಬಿನ್ ಲೇಟ್ ಜಯರಾಮಸಿಂಗ್, ಚಂದ್ರಾಸಿಂಗ್ ಬಿನ್ ಜಯರಾಮಸಿಂಗ್, ಲಕ್ಷ್ಮೀಬಾಯಿ ಕೋಂ ಲೇಟ್ ದಶರಥಸಿಂಗ್, ಅಮೃತ್ ಸಿಂಗ್ ಬಿನ್ ರಾಮಸಿಂಗ್, ಮಂಜುನಾಥ ಬಿನ್ ರಾಮಸಿಂಗ್, ಈಶ್ವರ್ ಸಿಂಗ್ ಬಿನ್ ಲೇಟ್ ನಾರಾಯಣಸಿಂಗ್	161	2-10	-	2-10
200.	ಆಯೀಷಾಫರವೀನ್ ಕೋಂ ಬರಕತ್ತುಲ್ಲಾಖಾನ್, ಜಬೀನಾ ಕೋಂ ರಹಮತ್ತುಲ್ಲಾ ಖಾನ್ (ಮೇಲಿನ ಜಂಟಿ)	162/1	1-11	-	1-11
201.	ಕೆ.ಎಂ.ಗೋವಿಂದಪ್ಪ ಬಿನ್ ಬಡಕೂರು ಈರಪ್ಪ	162/2	1-00	-	1-00
202.	ಕೆ.ಎಂ.ಗೋವಿಂದಪ್ಪ ಬಿನ್ ಬಡಕೂರು ಮುನಿವೆಂಕಟಪ್ಪ	162/3	1-05	-	1-05
203.	ಕೆ.ಎಂ.ಸುಬ್ರಮಣಿ ಬಿನ್ ಮುನಿವೆಂಕಟಪ್ಪ	163	2-16	-	2-16
204.	ಕೆ.ಎಂ.ಮುನಿನಾರಾಯಣಪ್ಪ ಬಿನ್ ಮುನಿಶಾಮಪ್ಪ	164/1	4-01	-	4-01
205.	ಆರ್.ಮಂಜುನಾಥ ಬಿನ್ ಬಿ.ರಾಮಪ್ಪ	164/2	3-13	-	3-13
206.	ಎಸ್.ಎಂ.ನಾರಾಯಣಸ್ವಾಮಿ ಬಿನ್ ಮುನೆಪ್ಪ, ಸಾದಪ್ಪ ಬಿನ್ ಹನುಮಂತಪ್ಪ, ದೊಡ್ಡಮುನಿಯಪ್ಪ ಬಿನ್ ಹನುಮಂತಪ್ಪ, ಬಿ.ಯಲ್ಲಪ್ಪ ಬಿನ್ ಲೇಟ್ ಬೆಳ್ಳಪ್ಪ, ರತ್ನಮ್ಮ ಕೋಂ ಎಂ.ನಾರಾಯಣಮೂರ್ತಿ, ರತ್ನಮ್ಮ ಕೋಂ ಎಂ.ನಾರಾಯಣಮೂರ್ತಿ, ನಾರಾಯಣಸಿಂಗ್ ಬಿನ್ ಲೇಟ್ ಜಯರಾಮಸಿಂಗ್, ಚಂದ್ರಾಸಿಂಗ್ ಬಿನ್ ಜಯರಾಮಸಿಂಗ್, ಲಕ್ಷ್ಮೀಬಾಯಿ ಕೋಂ ಲೇಟ್ ದಶರಥಸಿಂಗ್, ಅಮೃತ್ ಸಿಂಗ್ ಬಿನ್ ರಾಮಸಿಂಗ್, ಮಂಜುನಾಥಸಿಂಗ್ ಬಿನ್ ರಾಮಸಿಂಗ್, ಸೀತಮ್ಮ ಕೋಂ ಎಂ.ಎಸ್. ಮುನಿವೀರಪ್ಪ, ಸೀತಮ್ಮ ಕೋಂ ಎಂ.ಎಸ್.ಮುನಿವೀರಪ್ಪ, ಎಸ್.ಎಂ.ನಾರಾಯಣಸ್ವಾಮಿ ಬಿನ್ ಮುನೆಪ್ಪ (ಮೇಲಿನ ಜಂಟಿ)	165/1 165/2 165/3 165/4 165/5	2-09½ 0-10½ 0-11½ 0-11½ 0-22	- - - - -	2-09½ 0-10½ 0-11½ 0-11½ 0-22
207.	ತೋಟಿ ಇನಾಂತಿ	166	4-00	-	4-00
208.	ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ, ಕೃಷ್ಣಪ್ಪ ಬಿನ್ ಚಿಕ್ಕಹನುಮಪ್ಪ, ನಾರಾಯಣಸ್ವಾಮಿ ಬಿನ್ ಲೇಟ್ ಹನುಮಪ್ಪ, ಸೀನಪ್ಪ ಬಿನ್ ಲೇಟ್ ಚಿಕ್ಕ ಹನುಮಪ್ಪ, ವೆಂಕಟೇಶಪ್ಪ ಬಿನ್ ಲೇಟ್ ಚಿಕ್ಕಹನುಮಪ್ಪ	167/1	0-17	-	0-17
209.	ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ಕೃಷ್ಣಪ್ಪ ಬಿನ್ ಚಿಕ್ಕಹನುಮಪ್ಪ, ನಾರಾಯಣಸ್ವಾಮಿ ಬಿನ್ ಲೇಟ್ ಹನುಮಪ್ಪ, ಸೀನಪ್ಪ ಬಿನ್ ಲೇಟ್ ಚಿಕ್ಕಹನುಮಪ್ಪ, ವೆಂಕಟೇಶಪ್ಪ ಬಿನ್ ಲೇಟ್ ಚಿಕ್ಕಹನುಮಪ್ಪ	167/2	0-23	-	0-23
210.	ವಿ.ಹನುಮೇಗೌಡ ಬಿನ್ ಹೆಚ್.ವೆಂಕಟಸ್ವಾಮಿ	168/1	4-24	0-08	4-16
211.	ವಿ.ಹನುಮೇಗೌಡ ಬಿನ್ ಹೆಚ್.ವೆಂಕಟಸ್ವಾಮಿ (ಭೂ.ಪ)	168/2	1-00	-	1-00
212.	ಸೈದಾಮತ್ ಸಾಬಿ	169/1	1-00	-	1-00
213.	ತೋಟಿ ಇನಾಂತಿ	170 ರ ಪೈಕಿ	7-14	-	7-14
214.	ಪ್ರಮೀಳಮ್ಮ ಬಿನ್ ಜಿ.ರಾಮಯ್ಯಶೆಟ್ಟಿ	171/1 ರ ಪೈಕಿ	0-35½	-	0-35½
215.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	178	2-31	0-05	2-26
216.	Dr.Santhosh koshy S/o C.Koshy Charuvil	179	1-16	-	1-16
217.	M/S Little Flower Hospital Private Limited by Dr.Santhosh koshy S/o C.Koshy	180	7-24	0-06	7-18
218.	M/S Little Flower Hospital Private Limited by Dr.Santhosh koshy S/o C.Koshy	181	12-30	-	12-30
219.	M/S Little Flower Hospital Private Limited by Dr.Santhosh koshy S/o C.Koshy	182	12-10	-	12-10
220.	M/S Little Flower Hospital Private Limited by Dr.Santhosh koshy S/o C.Koshy	183	0-27	-	0-27
221.	ಮುನೆಪ್ಪ ಬಿನ್ ಹೆಚ್.ರಾಮಪ್ಪ, ಮುನೆಪ್ಪ ಬಿನ್ ಕೆಂಚಪ್ಪ	184/1	0-38	-	0-38
222.	ವೈ.ಚಿಕ್ಕಮುನಿಯಪ್ಪ ಬಿನ್ ಯರಪ್ಪ, ಎಸ್.ಹನುಮಂತಯ್ಯ ಬಿನ್ ಯರಪ್ಪ, ವೈ.ವೆಂಕಟೇಶಪ್ಪ ಬಿನ್ ಯರಪ್ಪ, ವೈ.ಚಿಕ್ಕವೆಂಕಟೇಶಪ್ಪ ಬಿನ್ ಯರಪ್ಪ, ವೈ.ಮುನಿಸ್ವಾಮಿ ಬಿನ್ ಯರಪ್ಪ, ವೈ.ಕೃಷ್ಣಪ್ಪ ಬಿನ್ ಯ್ಯರಪ್ಪ, ವೈ.ಮುನಿಯಪ್ಪ ಬಿನ್ ಯರಪ್ಪ	184/2	1-06	-	1-06
223.	ಎನ್.ಶಂಕರಪ್ಪ ಬಿನ್ ವೆಂಕಟರಾಯಪ್ಪ	185/1	0-03	-	0-03
224.	ಎನ್.ಶಂಕರಪ್ಪ ಬಿನ್ ಭಜಂತ್ರಿ ವೆಂಕಟರಾಯಪ್ಪ	185/2	0-03	-	0-03
225.	ಬಿ.ಆಂಜನಪ್ಪ ಬಿನ್ ಬೈಯಪ್ಪ, ಕೃಷ್ಣಪ್ಪ ಅರಿಕೆರೆ	185/3	0-13	-	0-13
226.	ಲಕ್ಷ್ಮೀಬಾಯಿ ಬಿನ್ ಲೇಟ್ ನಾರಾಯಣಸಿಂಗ್	185/4	0-03½	-	0-03½
227.	ಎನ್.ಶಂಕರಪ್ಪ ಬಿನ್ ಲೇಟ್ ವೆಂಕಟ್ರಾಮಪ್ಪ	185/5	0-03¼	-	0-03¼
228.	ಎನ್.ಶಂಕರಪ್ಪ ಬಿನ್ ಲೇಟ್ ವೆಂಕಟ್ರಾಮಪ್ಪ	185/6	0-03¼	-	0-03¼
229.	ಕೃಷ್ಣಪ್ಪ ಬಿನ್ ಚಿಕ್ಕಹನುಮಪ್ಪ, ಮುನಿಯಪ್ಪ ಬಿನ್ ಹೆಚ್.ರಾಮಪ್ಪ, ಲಕ್ಷ್ಮಮ್ಮ ಕೋಂ ಲೇಟ್ ವೆಂಕಟೇಶಪ್ಪ, ಅಂಜಪ್ಪ ಬಿನ್ ಲೇಟ್ ದೊಡ್ಡಹನುಮಪ್ಪ, ನಾರಾಯಣಸ್ವಾಮಿ ಬಿನ್ ಚಿಕ್ಕಹನುಮಪ್ಪ, ಕೃಷ್ಣಪ್ಪ ಬಿನ್ ಚಿಕ್ಕಹನುಮಪ್ಪ, ಸೀನಪ್ಪ ಬಿನ್ ಚಿಕ್ಕಹನುಮಪ್ಪ, ವೆಂಕಟೇಶಪ್ಪ ಬಿನ್ ಚಿಕ್ಕಹನುಮಪ್ಪ (ಮೇಲಿನ ಜಂಟಿ)	186/1	0-05	-	0-05
230.	ಎನ್.ಶಂಕರಪ್ಪ ಬಿನ್ ವೆಂಕಟ್ರಾಮಪ್ಪ	186/2	0-08	-	0-08
231.	ಸಿ.ರವಿಕುಮಾರ್ ಬಿನ್ ಹೆಚ್.ಚನ್ನಕೇಶವಪ್ಪ	187/1	0-07	-	0-07
232.	ಎನ್.ಶಂಕರಪ್ಪ ಬಿನ್ ಲೇಟ್ ವೆಂಕಟರಾಮಪ್ಪ	187/2	0-07	-	0-07
233.	ಎನ್.ಶಂಕರಪ್ಪ ಬಿನ್ ವೆಂಕಟ್ರಾಮಪ್ಪ	188/1	0-03½	-	0-03½
234.	ಸಿ.ರವಿಕುಮಾರ್ ಬಿನ್ ಹೆಚ್.ಚನ್ನಕೇಶವಪ್ಪ	188/2	0-03½	-	0-03½
235.	ಎನ್.ಶಂಕರಪ್ಪ ಬಿನ್ ವೆಂಕಟ್ರಾಮಪ್ಪ	188/3	0-03½	-	0-03½
236.	ಎನ್.ಶಂಕರಪ್ಪ ಬಿನ್ ವೆಂಕಟ್ರಾಮಪ್ಪ	188/4	0-04½	-	0-04½
237.	ನಾರಾಯಣಪ್ಪ ಬಿನ್ ಪೂಜಾರಿ ಮುನೆಪ್ಪ, ಪೂಜಾರಿ ಮುನೆಪ್ಪ ಬಿನ್ ಅಪ್ಪಯ್ಯ (ಮೇಲಿನ ಜಂಟಿ)	189/1	0-06	-	0-06
238.	ಮುನಿಶಾಮಿ ಬಿನ್ ತಮ್ಮಣ್ಣ, ಎನ್.ಶಂಕರಪ್ಪ ಬಿನ್ ವೆಂಕಟ್ರಾಮಪ್ಪ	189/2	0-03	-	0-03
239.	ಎನ್.ಶಂಕರಪ್ಪ ಬಿನ್ ವೆಂಕಟ್ರಾಮಪ್ಪ	189/3	0-01	-	0-01
240.	ಸೈದ್ ಅಹ್ಮದ್, ಎನ್.ಶಂಕರಪ್ಪ ಬಿನ್ ವೆಂಕಟ್ರಾಮಪ್ಪ	189/4	0-09½	-	0-09½
241.	ಸೊಣ್ಣಪ್ಪ	189/5	0-00½	-	0-00½
242.	ಮುನಿಯಮ್ಮ ಕೋಂ ಲೇಟ್ ಪಾತಕೋಟ ರಂಗಾರೆಡ್ಡಿ, ಮುನಿಯಮ್ಮ ಕೋಂ ಲೇಟ್ ಪಾತಕೋಟ ರಂಗಾರೆಡ್ಡಿ	192	4-08	-	4-08
243.	ವಿ.ರವಿಕುಮಾರ್ ಬಿನ್ ಲೇಟ್ ವೆಂಕಟಪ್ಪ, ಗಂಗಾದರಪ್ಪ ಬಿನ್ ಲೇಟ್ ಬುಡ್ಡಪ್ಪ, ಹನುಮಪ್ಪ ಬಿನ್ ಲೇಟ್ ಬುಡ್ಡಪ್ಪ	193/1	1-38	-	1-38
244.	ಚಿಕ್ಕಪ್ಪೋಜಿ ಬಿನ್ ಮುನಿಯಪ್ಪ, ವೆಂಕಟಮ್ಮ ಕೋಂ ಗಂಗಾಧರಪ್ಪ	193/2	2-02	-	2-02
245.	ಚಿಕ್ಕಪ್ಪೋಜಿ ಬಿನ್ ಮುನಿಯಪ್ಪ	193/3	2-01	-	2-01
246.	ವಿ.ರವಿಕುಮಾರ್ ಬಿನ್ ಲೇಟ್ ವೆಂಕಟಪ್ಪ, ಗಂಗಾಧರಪ್ಪ ಬಿನ್ ಲೇಟ್ ಬುಡ್ಡಪ್ಪ, ಹನುಮಪ್ಪ ಬಿನ್ ಲೇಟ್ ಬುಡ್ಡಪ್ಪ	194	3-02	-	3-02
247.	ಮುನಿವೆಂಕಟಪ್ಪ ಬಿನ್ ಮುನೆಪ್ಪ, ಎಂ.ನಂಜಾರೆಡ್ಡಿ ಬಿನ್ ಮುನಿವೆಂಕಟಪ್ಪ	195/1	7-33	-	7-33
248.	ನಾರಾಯಣರೆಡ್ಡಿ, ರಾಮನ್ನ, ಕೆ.ಟಿ.ಮುನಿವೆಂಕಟರೆಡ್ಡಿ ಬಿನ್ ತಿಪ್ಪರೆಡ್ಡಿ, ಎಂ.ಗೋಪಾಲರೆಡ್ಡಿ ಬಿನ್ ಮುನಿವೆಂಕಟಪ್ಪ, ಎಂ.ಲಕ್ಷ್ಮಣರೆಡ್ಡಿ ಬಿನ್ ಮುನಿವೆಂಕಟಪ್ಪ, ಸರ್ಕಾರಿ	195/2	3-11	-	3-11
249.	ವಿ.ಆರ್.ಭಾಸ್ಕರ್ ಬಿನ್ ಲೇಟ್ ರಾಮಚಂದ್ರಪ್ಪ	196	9-04	0-13	8-31
250.	ಸೈದ್ ಸಿಬಗತ್ತುಲ್ಲಾ ಬಿನ್ ಎಸ್.ಕೆ.ಸೈದ್ ಅಹ್ಮದ್, ಕೆ.ಶ್ರೀನಿವಾಸ ಬಿನ್ ಕುವಪ್ಪ	197	7-33	0-10	7-23
251.	ಜಿ.ಶಬೀರ್ ಪಾಷಾ ಬಿನ್ ಎನ್.ಅಬ್ದುಲ್ ಗಫಾರ್ ಸಾಬ್	198/1	4-15	-	4-15
252.	ತಿಮ್ಮಯ್ಯ ಬಿನ್ ಲೇಟ್ ಮುನಿಯಪ್ಪ, ಶಾಂತಮ್ಮ ಕೋಂ ತಿಮ್ಮಯ್ಯ	198/2	4-15	-	4-15
253.	ಮೀನಾಕ್ಷಮ್ಮ ಕೋಂ ಎಸ್.ಎಂ.ವೆಂಕಟರಾಮಯ್ಯ	199/1	3-12	0-06	3-06
254.	ಸೈಯದ್ ಸುಜಾವುದ್ದೀನ್ ಬಿನ್ ಲೇಟ್ ಮೊಹದ್ದೀನ್, ಸೈಯದ್ ಷಬ್ಬೀರ್ ಬಿನ್ ಲೇಟ್ ಮೊಹದ್ದೀನ್, ಸೈಯದ್ ಅಮೀರುದ್ದೀನ್ ಬಿನ್ ಲೇಟ್ ಮೊಹದ್ದೀನ್	199/2	3-06½	0-06½	3-00
255.	ಸರ್ಕಾರಿ	199/3	0-02	-	0-02
256.	ಲಕ್ಷ್ಮೀದೇವಮ್ಮ ಕೋಂ ಎನ್.ಜಿ.ಬ್ಯಾಟಪ್ಪ	199/4	2-34½	0-02½	2-32
257.	ವೆಂಕಟ್ರಾಮನ್ನ ಬಿನ್ ಬೀರಪ್ಪ	200	0-07	-	0-07
258.	ಕುರುಬರಹಳ್ಳಿ ಗ್ರಾಮನತ್ತ	201	0-31	-	0-31
259.	ಬಿ.ವಿ.ವೆಂಕಟೇಶ್ ಬಿನ್ ವೆಂಕಟರಾಮಯ್ಯ, ವಿ.ಕವಿತ ಬಿನ್ ಬಿ.ವಿ.ವೆಂಕಟೇಶ್ (ಮೇಲಿನ ಜಂಟಿ)	202	6-11	0-02	6-09
260.	ಲಕ್ಷ್ಮಯ್ಯ ಬಿನ್ ಈರಪ್ಪ	203/1	1-00	-	1-00
261.	ಎಸ್.ನಾರಾಯಣಪ್ರಸಾದ್ ಬಿನ್ ಶ್ರೀರಾಂಪ್ರಸಾದ್	203/2	0-37	0-04	0-33
262.	ವಿ.ನಾರಾಯಣಸ್ವಾಮಿ ಬಿನ್ ಲೇಟ್ ಬಿ.ವೆಂಕಟೇಶಪ್ಪ	203/3	3-18	0-10	3-08
263.	ಲಕ್ಷ್ಮಯ್ಯ ಬಿನ್ ಆಂಜಪ್ಪ, ವೆಂಕಟಪ್ಪ ಬಿನ್ ವೆಂಕಟಪ್ಪ, (ಮೇಲಿನ ಜಂಟಿ) ಬಿ.ವೆಂಕಟೇಶ್, ಗವಪ್ಪ ಬಿನ್ ಲೇಟ್ ಮುನಿವೆಂಕಟಪ್ಪ	203/4	5-06	0-12	4-34
264.	ಎಂ.ಎಸ್.ಹರಿನಾಥ್ ಬಿನ್ ಲೇಟ್ ಎಂ.ವಿ. ಸತ್ಯನಾರಾಯಣಶೆಟ್ಟಿ	203/5	3-19	0-01	3-18
265.	ಆರ್.ರಾಧಾ ಬಾಯಿ ಕೋಂ ಲೇಟ್ ಗಿರೀಶ್ ವಿ.ಪೊಪ್ಲಿಯಾ, ಬಾಲಾಜಿ ಪ್ರಸಾದ್ ಬಿನ್ ಲೇಟ್ ಶೋಭಾ ರಾಂಪ್ರಸಾದ್	203/6	0-16½	-	0-16½
266.	ಅರ್. ಕೃಷ್ಣ ಪ್ರಸಾದ್ ಬಿನ್ ಲೇಟ್ ರಾಮಚಂದ್ರಪ್ರಸಾದ್	203/7	0-01	-	0-01
267.	ಅರ್. ಕೃಷ್ಣ ಪ್ರಸಾದ್ ಬಿನ್ ಲೇಟ್ ರಾಮಚಂದ್ರಪ್ರಸಾದ್	203/8	0-15½	-	0-15½
268.	ಗವಪ್ಪ ಬಿನ್ ಲೇಟ್ ಮುನಿವೆಂಕಟಪ್ಪ, ಗವಪ್ಪ ಬಿನ್ ಲೇಟ್ ಮುನಿವೆಂಕಟಪ್ಪ	204/1	4-11	0-05	4-06
269.	ಎಸ್.ವಿ.ಪರಿಮಳ ಕೋಂ ಪ್ರಮೀಣ್ ಕುಮಾರ್ ಎನ್.ಪಿ	204/2	2-17¾	0-05¾	2-12
270.	ಬಿ.ವಿ.ವೀಣಾ ಕೋಂ ಬಿ.ಎಸ್. ವೆಂಕಟರತ್ನಯ್ಯಶೆಟ್ಟಿ	204/3	4-05¾	0-05¾	4-00
271.	ವಿ.ನಾರಾಯಣಸ್ವಾಮಿ ಬಿನ್ ಲೇಟ್ ಬಿ.ವೆಂಕಟೇಶಪ್ಪ	204/4	1-10½	0-00½	1-10
272.	ಇ.ಗೋಪಾಲ ಬಿನ್ ಈರಪ್ಪ	205	2-16	0-06	2-10
273.	ವೈ.ಚಿಕ್ಕಮುನಿಯಪ್ಪ ಬಿನ್ ಯರಪ್ಪ, ಎಸ್.ಹನುಮಂತಯ್ಯ ಬಿನ್ ಯರಪ್ಪ, ವೈ.ವೆಂಕಟೇಶಪ್ಪ ಬಿನ್ ಯರಪ್ಪ, ವೈ.ಚಿಕ್ಕವೆಂಕಟೇಶಪ್ಪ ಬಿನ್ ಯರಪ್ಪ, ವೈ.ಮುನಿಸ್ವಾಮಿ ಬಿನ್ ಯರಪ್ಪ, ವೈ.ಕೃಷ್ಣಪ್ಪ ಬಿನ್ ಯರಪ್ಪ	206/1	2-18	-	2-18
274.	ಸೋಮಸುಂದರಗೌಡ ಬಿನ್ ಮುನಿವೆಂಕಟ್ರಾಮಪ್ಪ, ಮೀನಾಕ್ಷಮ್ಮ ಕೋಂ ಎಸ್.ಎಂ.ವೆಂಕಟರಾಮಯ್ಯ	206/2	1-32	-	1-32
275.	ಮೀನಾಕ್ಷಮ್ಮ ಕೋಂ ಎಸ್.ಎಂ.ವೆಂಕಟರಾಮಯ್ಯ	206/3	0-30	-	0-30
276.	ಫಯಾಜ್ ಖಾನ್ ಉರೂಫ್ ಬಾಬು ಖಾಸಿಂ ಖಾನ್	207	2-24	-	2-24
277.	ಸೋಮಸುಂದರಗೌಡ ಬಿನ್ ಮುನಿವೆಂಕಟ್ರಾಮಪ್ಪ, ವಿ.ಕೃಷ್ಣ ಬಿನ್ ಲೇಟ್ ವೆಂಕಟರಾಮಯ್ಯ, ವೆಂಕಟರತ್ನಮ್ಮ ಕೋಂ ಲೇಟ್ ನಾರಾಯಣಸ್ವಾಮಿ	208/1	1-32	-	1-32
278.	ಷೇಕ್ ದಾವೂಫ್ ಸಾಬಿ	208/2	0-19	-	0-19
279.	ಲಕ್ಷ್ಮೀದೇವಮ್ಮ ಕೋಂ ಎನ್.ಜಿ.ಬ್ಯಾಟಪ್ಪ	209	2-18	0-05	2-13
280.	ವೆಂಕಟರವಣಪ್ಪ ಬಿನ್ ಮುನಿಶಾಮಿ	210/1	0-04¼	-	0-04¼
281.	ಎಂ.ರಮೇಶ್ ಕುಮಾರ್ ಬಿನ್ ಮುನಿಶಾಮಪ್ಪ	210/2	1-04	-	1-04
282.	ಮುನೆಪ್ಪ ಬಿನ್ ವೆಂಕಟಪ್ಪ	210/3	0-04	-	0-04
283.	ಮುನೆಪ್ಪ ಬಿನ್ ವೆಂಕಟಪ್ಪ	210/4	0-08¼	-	0-08¼
284.	ವಿ.ಕೃಷ್ಣ ಬಿನ್ ಲೇಟ್ ವೆಂಕಟರಾಮಯ್ಯ	210/5	0-11	-	0-11
285.	ವಿ.ಕೃಷ್ಣ ಬಿನ್ ಲೇಟ್ ವೆಂಕಟರಾಮಯ್ಯ	210/6	0-05	-	0-05
286.	ವಿ.ಕೃಷ್ಣ ಬಿನ್ ಲೇಟ್ ವೆಂಕಟರಾಮಯ್ಯ	210/7	0-00½	-	0-00½
287.	ಎಸ್.ಉಮಾ ಕೋಂ ಚೌಡಪ್ಪ	211/1	2-00	-	2-00
288.	ಸಿ.ವಿ.ಶಶಿಕಲ ಕೋಂ ಕೆ.ವಿ.ಸುರೇಶ್	211/2	2-29½	0-06½	2-23
289.	ಸುರೇಶ್.ಎ ಬಿನ್ ಆಂಜಿನಪ್ಪ, ಅನಿಲ್ ಕುಮಾರ್.ಎಂ ಬಿನ್ ಮುನಿವೆಂಕಟರಾಮಯ್ಯ (ಮೇಲಿನ ಜಂಟಿ)	211/3	2-12½	0-06½	2-06
290.	ಎಸ್.ಉಮಾ ಕೋಂ ಚೌಡಪ್ಪ	212	0-14	-	0-14
291.	ಎಸ್.ಉಮಾ ಕೋಂ ಚೌಡಪ್ಪ	213	0-17	-	0-17
292.	ಸರ್ಕಾರಿ ಬಂಜರು	214	0-28	-	0-28
293.	ಎಸ್.ಉಮಾ ಕೋಂ ಚೌಡಪ್ಪ	215	0-15	-	0-15
294.	ಸರ್ಕಾರಿ ಕುಂಟೆ	216	0-39	0-39	-
295.	ಎಸ್.ಉಮಾ ಕೋಂ ಚೌಡಪ್ಪ	217	2-36	-	2-36
296.	ಲಕ್ಷ್ಮಣಸಿಂಗ್ ಬಿನ್ ಶೇಷುಸಿಂಗ್	218/1	1-04	0-07	0-37
297.	ಎಸ್.ರಾಜೇಂದ್ರಸಿಂಗ್ ಬಿನ್ ಎನ್.ನಾರಾಯಣಸಿಂಗ್	218/2	1-10½	0-14	0-36½
298.	ಮಂಜುನಾಥ ಸಿಂಗ್ ಬಿನ್ ಶೇಷುಸಿಂಗ್	218/3	1-10½	0-14	0-36½
299.	ಸಾದಪ್ಪ ಬಿನ್ ಹನುಮಂತಪ್ಪ, ದೊಡ್ಡಮುನಿಯಪ್ಪ ಬಿನ್ ಹನುಮಂತಪ್ಪ, ಬಿ.ನಾಗರಾಜ ಬಿನ್ ಲೇಟ್ ಬೆಳ್ಳಪ್ಪ	219/1	1-10	-	1-10
300.	ಪಾಪನ್ನ, ಕೆ.ಎಂ.ನಾರಾಯಣಪ್ಪ ಬಿನ್ ಮುನಿಯಪ್ಪ, ರಾಮಚಂದ್ರಪ್ಪ ಬಿನ್ ಮುನಿಯಪ್ಪ, ಮುನಿರತ್ನಮ್ಮ ಎಂ ಕೋಂ ಲೇಟ್ ವಿ.ಸಂತೋಷಕುಮಾರ್, ವಿ.ರವಿಕುಮಾರ್ ಬಿನ್ ಲೇಟ್ ವೆಂಕಟಮುನಿಯಪ್ಪ, ವಿ.ಹರೀಶ್ ಬಿನ್ ಲೇಟ್ ವೆಂಕಟಮುನಿಯಪ್ಪ, ವಿ.ಗೋವಿಂದಪ್ಪ ಬಿನ್ ಲೇಟ್ ವೆಂಕಟಮುನಿಯಪ್ಪ	219/2	6-10	0-12	5-38
301.	ದ್ಯಾವಮ್ಮ ಕೋಂ ಗೋಪಾಲಪ್ಪ	219/3	1-08	-	1-08
302.	ಮುನಿರತ್ನಮ್ಮ ಎಂ ಕೋಂ ಲೇಟ್ ಸಂತೋಷ ಕುಮಾರ್ , ವಿ.ರವಿಕುಮಾರ್ ಬಿನ್ ಲೇಟ್ ವೆಂಕಟಮುನಿಯಪ್ಪ , ವಿ.ಹರೀಶ್ ಬಿನ್ ಲೇಟ್ ವೆಂಕಟಮುನಿಯಪ್ಪ, ವಿ.ಗೋವಿಂದಪ್ಪ ಬಿನ್ ಲೇಟ್ ವೆಂಕಟಮುನಿಯಪ್ಪ (ಮೇಲಿನ ಜಂಟಿ)	219/4	1-08	-	1-08
303.	ಸೈಯದ್ ರಿಜ್ವಾನ್ ಬಿನ್ ಲೇಟ್ ಸೈಯದ್ ಅಮಾನುಲ್ಲಾ, ಈರಪ್ಪ ಬಿನ್ ವೆಂಕಟಪ್ಪ, ದೊಡ್ಡನಾರೆಪ್ಪ ಬಿನ್ ವೆಂಕಟಪ್ಪ, ವೆಂಕಟರವಣಪ್ಪ ಬಿನ್ ವೆಂಕಟಪ್ಪ	219/5	2-16	-	2-16

‘ಜನಜೀವನದ ಸೂಕ್ಷ್ಮಗಳನ್ನು ಸೆರೆ ಹಿಡಿಯುತ್ತಿರುವ ಸ್ತ್ರೀ ಬರಹಗಾರರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದೊಂದು ದಶಕದಿಂದ ಅತ್ಯಂತ ಸಂಕೀರ್ಣವಾಗಿ ಜನಜೀವನದ ಹಲವು ಸೂಕ್ಷ್ಮಗಳನ್ನು ಸೆರೆ ಹಿಡಿಯುತ್ತಿರುವವರು ಸ್ತ್ರೀ ಬರಹಗಾರರು’ ಎಂದು ವಿಮರ್ಶಕ ಬಸವರಾಜ ಕಲ್ಗುಡಿ ಅಭಿಮತ ವ್ಯಕ್ತಪಡಿಸಿದರು.

ಬಹುರೂಪಿ ಸಂಸ್ಥೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರ ‘ಬರೆಯದ ಕತೆಗಳು’ ಹಾಗೂ ಪತ್ರಕರ್ತೆ ಭಾರತಿ ಹೆಗಡೆ ಅವರ ‘ಉಪ್ಪಾಗೆ ಹರಳು’ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

‘ಹಿಂದಿನ ಸ್ತ್ರೀ ಬರಹಗಾರರಿಗೂ ಈಗಿನ ಬರಹಗಾರರಿಗೂ ವ್ಯತ್ಯಾಸವಿದೆ. ಹಿಂದೆ ಕ್ರಾಂತಿಕಾರಿ ಕಥನ ಮಾದರಿಯನ್ನು ಅನುಸರಿಸಲಾಗುತ್ತಿತ್ತು. ಕಾಲ ಬದಲಾದಂತೆ ಆ ಬರಹದ ಮಿತಿಗಳನ್ನು ತಿಳಿದ ಲೇಖಕಿಯರು, ಜನಜೀವನದ ಹಲವು ಸೂಕ್ಷ್ಮಗಳನ್ನು ಅಕ್ಷರ ರೂಪಕ್ಕೆ ತರುತ್ತಿದ್ದಾರೆ. ಬಂಗಾಳಿ ಲೇಖಕಿ ಮಹಾಶ್ವೇತಾ ದೇವಿ ಅವರ ಆಯಾಮಗಳು ಕನ್ನಡ ಬರಹಗಾರ್ತಿಯರಲ್ಲಿ ಬರುವ ಕಾಲ ದೂರವಿಲ್ಲ’ ಎಂದರು.

‘ಬರೆಯದ ಕತೆಗಳು’ ಕೃತಿಯ ಬಗ್ಗೆ ಮಾತನಾಡಿದ ಲೇಖಕಿ ಡಾ. ವಸುಂಧರ ಭೂಪತಿ, ‘ಕನ್ನಡಕ್ಕೆ ಈ ರೀತಿಯ ಬರಹ ಹೊಸದು. ಲೇಖಕರು ಸುದ್ದಿ, ಸಂದರ್ಶನಕ್ಕೆ ಹೋದಾಗ ಸ್ಥಳದಲ್ಲಿ ನಡೆದ ಘಟನೆಗಳನ್ನು ವಿವರಿಸಿದ್ದಾರೆ. ಕಿರಿದಾದ ಕತೆಗಳಲ್ಲಿ ಹಿರಿದಾದ ಅರ್ಥಗಳಿವೆ. ನೀತಿ ಕೂಡ ಹೊಂದಿದ್ದು, ಸರಳವಾಗಿ ನಿರೂಪಿಸಲಾಗಿದೆ’ ಎಂದು ಹೇಳಿದ ಅವರು, ಪುಸ್ತಕದಲ್ಲಿ ಬರುವ ಕೆಲ ಘಟನೆಗಳನ್ನು ಸ್ಮರಿಸಿಕೊಂಡರು.

‘ಉಪ್ಪಾಗೆ ಹರಳು’ ಕೃತಿಯ ಬಗ್ಗೆ ಮಾತನಾಡಿದ ಲೇಖಕಿ ಎಚ್.ಎನ್. ಆರತಿ, ‘ನಮ್ಮ ಪರಂಪರೆ ನಮ್ಮ ವ್ಯಕ್ತಿತ್ವದಲ್ಲಿ ಬೇರು ರೂಪದಲ್ಲಿ ಬೆಳೆದಿರುತ್ತದೆ. ಅದನ್ನು ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಹೆಣ್ಣಿನ ಸ್ವಾಭಿಮಾನವನ್ನು ಹಣಿಯಲು ಸಮಾಜ ಸದಾ ಕಾಯುತ್ತಾ ಇರುವುದನ್ನು ಕೃತಿಯ ಉದ್ದಕ್ಕೂ ಕಾಣಬಹುದು. ದಟ್ಟ ಕಾಡಿನ ಬಗ್ಗೆ ವಿವರಿಸಿದ್ದು, ಜಾಗತಿಕ ಮಟ್ಟಕ್ಕೆ ತಲುಪುವ ಶಕ್ತಿ ಹೊಂದಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಎಲ್.ಎನ್. ಮುಕುಂದರಾಜು ಅಭಿಪ್ರಾಯ

‘ಕನ್ನಡದಲ್ಲಿ ವಿಮರ್ಶಕರ ಸಂಖ್ಯೆ ಹೆಚ್ಚಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರ ಸಂಖ್ಯೆ ಕಡಿಮೆ ಆಗಿದ್ದು, ಅವರ ಸಂಖ್ಯೆ ಹೆಚ್ಚಾಗಬೇಕು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜು ಅಭಿಪ್ರಾಯಪಟ್ಟರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿ ಶನಿವಾರ ಜಂಟಿಯಾಗಿ ಆಯೋಜಿಸಿದ್ದ ಸಮಕಾಲೀನ ವಿಮರ್ಶೆಯ ಸ್ವರೂಪ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

‘ವಿಮರ್ಶೆ ಕಷ್ಟದ ಕೆಲಸ. ಒಂದು ಪದ್ಯ ಬರೆಯುವುದು ಸುಲಭ. ಆದರೆ, ಗದ್ಯ ಬರೆಯುವುದು ಕಷ್ಟ. ಬಾಯಿಗೆ ಬಂದಂತೆ ಗೀಚುತ್ತಾನೆ ಎಂದು ಕೆಲವರು ಲೇವಡಿ ಮಾಡುತ್ತಾರೆ. ಆದರೆ, ಲೇಖಕ ಏನನ್ನು ಬರೆಯಬೇಕು ಎಂಬುದನ್ನು ಕಾಲ ನಿರ್ಣಯಿಸುತ್ತದೆ. ಎಲ್ಲಾ ಕಾಲದ ಲೇಖಕರು ಕಾಲ ಧರ್ಮವನ್ನು ಅನುಸರಿಸಿಯೇ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವುದು’ ಎಂದು ತಿಳಿಸಿದರು. ವಿಮರ್ಶಾ ಪ್ರಜ್ಞೆ ಮೈಗೂಡಿಸಿಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಬುಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಹಾಗೂ ದೀಪಾ ಅವರನ್ನು ಪ್ರಧಾನಿ ಅಭಿನಂದಿಸಲಿಲ್ಲ. ಪ್ರಧಾನಿ ಅವರನ್ನು ವಿಮರ್ಶೆ ಮಾಡುವವರು ಯಾರು? ಹಿಂದೆ ಅಡಿಗರು, ‘ನೆಹರು ನಿವೃತ್ತರಾಗುವುದಿಲ್ಲ’ ಎಂಬ ಪದ್ಯದ ಮೂಲಕ ವಿಮರ್ಶೆ ಮಾಡಿದ್ದರು ಎಂದರು.

ವಿಚಾರಸಂಕಿರಣವನ್ನು ಸಾಹಿತಿ ಹಂಪ ನಾಗರಾಜಯ್ಯ ಸಸಿಗೆ ನೀರೆರೆದು ಉದ್ಘಾಟಿಸಿದರು. ಗೀತಾ, ಎಂ.ಎಸ್.ಆಶಾದೇವಿ, ಎಲ್.ಎನ್.ಮುಕುಂದರಾಜ್, ವೂಡೇ ಪಿ. ಕೃಷ್ಣ ಹಾಜರಿದ್ದರು ಪ್ರಜಾವಾಣಿ ಚಿತ್ರ

ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಸಾಹಿತಿ ಹಂಪ ನಾಗರಾಜಯ್ಯ, ಕನ್ನಡ ಸಾಹಿತ್ಯಕ್ಕೆ ಎರಡು ಸಾವಿರ ವರ್ಷಗಳ ಪರಂಪರೆ ಇದೆ. ಅನೇಕ ಬದಲಾವಣೆಗಳನ್ನು ಮಾಡಿಕೊಂಡು ಬಂದಿದೆ.

ಕನ್ನಡ ಸಾಹಿತ್ಯದ 21ನೇ ಶತಮಾನದ ಕಾಲಘಟ್ಟದಲ್ಲಿ ಯುವಜನರ ಬರವಣಿಗೆ ಅದ್ಭುತವಾಗಿದೆ. ಹೊಸಕಾಲದ ಲೇಖಕರ ಬರಹಗಳನ್ನು ಓದಲು ಸಂತೋಷವಾಗುತ್ತದೆ. ಪ್ರಗತಿಪರವಾದ, ಮೌಲಿಕವಾದ ಮತ್ತು ಅರ್ಥಗರ್ಭಿತವಾದ ಕೃತಿಗಳು ಬರುತ್ತಿವೆ ಎಂದರು.

ಬುಕರ್ ಪ್ರಶಸ್ತಿ ವಿಜೇತ ಬಾನು ಮುಷ್ತಾಕ್ ಅವರಿಗೆ ಅಭಿನಂದನೆಗಳ ಮಹಾಪೂರವೇ ಬಂದಿದೆ. ಆದರೆ ಈ ವಿಚಾರದಲ್ಲಿ ದೇಶದ ಪ್ರಧಾನಿ ಮೌನ ವಹಿಸಿದ್ದು ಏಕೆ ಎಂಬುದು ಗೊತ್ತಿಲ್ಲ? ಎಂದು ಬೇಸರ ವ್ಯಕ್ತಪಡಿಸಿದರು.

ವಿಮರ್ಶಕಿ ಎಂ.ಎಸ್.ಆಶಾದೇವಿ ಮಾತನಾಡಿ, ‘ವರಕವಿ, ಗಾರುಡಿಗ ಎಂದು ಕರೆಯುವ ದ.ರಾ.ಬೇಂದ್ರೆ ಅವರ ವಿಮರ್ಶೆ ಇಲ್ಲಿಯ ತನಕ ಗಂಭೀರ ಅಧ್ಯಯನಕ್ಕೆ ಒಳಗಾಗಿಯೇ ಇಲ್ಲ. ದೇಶದ ಶ್ರೇಷ್ಠ ವಿಮರ್ಶಕರಲ್ಲಿ ಬೇಂದ್ರೆ ಒಬ್ಬರು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ’ ಎಂದರು.

ನಂತರ ನಡೆದ ಗೋಷ್ಠಿಯಲ್ಲಿ ಪ್ರಾಧ್ಯಾಪಕರಾದ ತಾರಿಣಿ ಶುಭದಾಯಿನಿ, ಎ.ರಘುರಾಮ್, ಧನಂಜಯ ಕುಂಬ್ಳೆ ಅವರು ವಿಚಾರ ಮಂಡಿಸಿದರು.

ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ, ಕನ್ನಡ ವಿಭಾಗದ ಮುಖ್ಯಸ್ಥೆ ಡಿ.ಸಿ.ಗೀತಾ ಹಾಜರಿದ್ದರು.

‘ಬರಹಗಾರರಿಂದ ಸಾಹಿತ್ಯ ಶಕ್ತಿ ವೃದ್ಧಿ’

ಬೆಂಗಳೂರು: ಬೇರೆ ಬೇರೆ ವಲಯ, ವರ್ಗ, ಸಮುದಾಯದವರು ಬರೆಯುವ ಮೂಲಕ ಕನ್ನಡ ಸಾಹಿತ್ಯದ ಶಕ್ತಿ ಹೆಚ್ಚಿಸಿ, ಸಾಹಿತ್ಯಕ್ಕೆ ಮಹತ್ವ ತಂದುಕೊಟ್ಟಿದ್ದಾರೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅಭಿಪ್ರಾಯಪಟ್ಟರು.

ನಗರದಲ್ಲಿ ಬುಧವಾರ ಹೂವಿನಹಡಗಲಿಯ ಏಳುಕೋಟಿ ಪ್ರಕಾಶನ ಹಮ್ಮಿಕೊಂಡಿದ್ದ ಗೌಡ್ರ ಶಿವಕುಮಾರಗೌಡ ಅವರ ‘ನಾ ಕಂಡ ಸಮಾಜ ಮತ್ತು ಸಮಸ್ಯೆಗಳು’ ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರು ಮಾತನಾಡಿದರು. ಕಥೆಗಾರ ವಸುಧೇಂದ್ರ, ಲೇಖಕ ಗೌಡ್ರ ಶಿವಕುಮಾರಗೌಡ, ಪ್ರಕಾಶಕ ಲಕ್ಷ್ಮಣ್ ಈಟಿ, ಸಂಸದೀಯ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ನಿರ್ದೇಶಕ ಕ.ನಾ. ವಿಜಯಕುಮಾರ್ ಹಾಗೂ ಕಾರ್ಮಿಕ ಇಲಾಖೆಯ ಹಿರಿಯ ನಿರೀಕ್ಷಕ ಮಂಜುನಾಥ್ ಉಪಸ್ಥಿತರಿದ್ದರು.

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. ವೈ/ಇ.29/2025-26/10
ದಿನಾಂಕ : 17-05-2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮಸರಹಳ್ಳಿಯಲ್ಲಿ ಪ್ಲಾಟ್‌ಫಾರಂ ವಿಸ್ತರಣಾ ಕಾಮಗಾರಿಗಳಿಗೆ ಓಹೆಚ್‌ಇ ಮಾರ್ಪಾಡುಗಳು.	ರೂ. 76,63,015.77

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09-06-2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್, ಮೈಸೂರು
ಪಿಯುಬಿ/134/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway - SWR SWRRLY SWRRLY

‘ತಮನ್ನಾ ಸಿನಿಮಾ ನೋಡುವುದಿಲ್ಲವೇ?’

ಶಿವಮೊಗ್ಗ: ‘ನಟಿ ತಮನ್ನಾ, ಮೈಸೂರು ಸ್ಯಾಂಡಲ್ ಸೋಪ್‌ನ ರಾಯಭಾರಿ ಆಗಿರುವುದನ್ನು ವಿರೋಧಿಸುವವರು ಅವರ ಸಿನಿಮಾ ನೋಡುವುದನ್ನು ಬಿಡುವರೇ’ ಎಂದು ಸಚಿವ ಮಧು ಬಂಗಾರಪ್ಪ ಪ್ರಶ್ನಿಸಿದ್ದಾರೆ.

ನಿಗಮದವರು ಮಾರುಕಟ್ಟೆ ವಿಸ್ತರಿಸಲು, ಇನ್ನಷ್ಟು ಮಂದಿಗೆ ಉತ್ಪನ್ನ ತಲುಪಿಸಲು ನಟಿಯನ್ನು ರಾಯಭಾರಿ ಮಾಡಿರಬಹುದು’ ಎಂದರು.

‘ನಾನೇ ಪುಕ್ಸಟ್ಟೆ ರಾಯಭಾರಿ’

ಕನ್ನಡದ ಸೋಪು ಬಳಸಲು ವಾಟಾಳ್ ನಾಗರಾಜ್ ಸಲಹೆ

ಪ್ರಜಾವಾಣಿ ವಾರ್ತೆ

ರಾಮನಗರ: ‘ಮೈಸೂರು ಸ್ಯಾಂಡಲ್ ಸೋಪ್‌ಗೆ ನಾನೇ ಪುಕ್ಸಟ್ಟೆ ರಾಯಭಾರಿ. ಎಲ್ಲರೂ ಕನ್ನಡದ ಇದೇ ಸೋಪು ಬಳಸಿ’ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ನಾಯಕ ವಾಟಾಳ್ ನಾಗರಾಜ್ ಹೇಳಿದರು.

ರಾಜ್ಯ ಸರ್ಕಾರದ ವಿರುದ್ಧ ನಗರದಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ರಾಯಭಾರಿಯಾಗಿ ಹೊರ ರಾಜ್ಯದ ನಟಿ ತಮನ್ನಾ ಭಾಟಿಯಾ ಅವರನ್ನು ₹6.20 ಕೋಟಿ ಸಂಭಾವನೆಗೆ ಕೆಎಸ್‌ಡಿಎಲ್ ನೇಮಕ ಮಾಡಿಕೊಂಡಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ರಾಯಭಾರಿ ನೇಮಿಸುವ ಬದಲು ಸ್ವತಃ ಮುಖ್ಯಮಂತ್ರಿ, ಡಿಸಿಎಂ, ಸಚಿವರು, ಶಾಸಕರು, ಸಂಸದರು ಸೇರಿದಂತೆ ಅಧಿಕಾರಿಗಳೆಲ್ಲರೂ ಇದೇ ಸೋಪಿನಿಂದ ಸ್ನಾನ ಮಾಡಿ ಫಮ್ ಎನ್ನಬೇಕು ಎಂದು ವ್ಯಂಗ್ಯವಾಡಿದರು.

‘ವಿಶ್ವವಿಖ್ಯಾತ ಮೈಸೂರು ಸ್ಯಾಂಡಲ್ ಸೋಪು ಎಂಬ ಹೆಸರೇ ರಾಯಭಾರಿ ಇದ್ದಂತೆ. ಅದರದೇ ಬ್ರಾಂಡ್ ವ್ಯಾಲ್ಯೂ ಇದೆ. ಅದಕ್ಕೆ ನಟಿ ತಮನ್ನಾ ಸೇರಿದಂತೆ ಯಾವುದೇ ರಾಯಭಾರಿ ಬೇಡ. ನಟಿಗೆ ಅಷ್ಟೊಂದು ದೊಡ್ಡ ಮೊತ್ತದ ಹಣ ಕೊಟ್ಟು ರಾಯಭಾರಿಯಾಗಿ ನೇಮಕ ಮಾಡಿಕೊಳ್ಳುವುದರ ಹಿಂದೆ ದೊಡ್ಡ ರಾಜಕಾರಣವಿದೆ’ ಎಂದು ಆರೋಪ ಮಾಡಿದರು. ಮೈಸೂರು ಲ್ಯಾಂಪ್, ಎನ್‌ಜಿಎಫ್ ಸೇರಿದಂತೆ ಎಲ್ಲಾ ಸಾರ್ವಜನಿಕ ಉದ್ಯಮಗಳನ್ನೂ ಮುಚ್ಚಲಾಗಿದೆ. ಲಾಭದಾಯಕವಾಗಿ ಉಳಿದಿರುವುದು ಮೈಸೂರು ಸ್ಯಾಂಡಲ್ ಸೋಪ್ ಒಂದೇ. ಪ್ರಚಾರಕ್ಕಾಗಿ ಕೋಟಿ ಗಟ್ಟಲೆ ಹಣ ಕೊಟ್ಟರೆ ಇದನ್ನೂ ಮುಚ್ಚಬೇಕಾಗುತ್ತದೆ ಎಂದರು.

‘ನಾಣ್ಯಗಳು ಪ್ರಭುತ್ವದ ಸಂಕೇತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಣ್ಯಗಳು ಕೇವಲ ಆರ್ಥಿಕತೆಯ ಸಂಕೇತವಾಗಿರುವುದಿಲ್ಲ. ಅವು ಪ್ರಭುತ್ವದ ಸಂಕೇತವೂ ಆಗಿವೆ. ಆರ್ಥಿಕ ವ್ಯವಸ್ಥೆ, ಧಾರ್ಮಿಕ ನಿಲುವು, ಪ್ರಭುತ್ವದ ಶಕ್ತಿ ಎಲ್ಲವನ್ನೂ ನಾಣ್ಯಗಳು ಪ್ರತಿಬಿಂಬಿಸುತ್ತವೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ್ ಶೆಟ್ಟಿ ತಿಳಿಸಿದರು.

ನಗರದಲ್ಲಿ ದಿ ಮಿಥಿಕ್ ಸೊಸೈಟಿ ಮತ್ತು ಚೆನ್ನೈಯ ಸೌತ್ ಇಂಡಿಯನ್ ನ್ಯೂಮಿಸ್ ಮ್ಯಾಟಿಕ್ಸ್ ಸೊಸೈಟಿ ಜಂಟಿಯಾಗಿ ಶನಿವಾರ ಆಯೋಜಿಸಿದ್ದ 33ನೇ ಸೌತ್ ಇಂಡಿಯನ್ ನ್ಯೂಮಿಸ್‌ಮ್ಯಾಟಿಕ್ಸ್ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಣ್ಯಶಾಸ್ತ್ರದ ಅಧ್ಯಯನ ಇತ್ತೀಚಿನ ವರ್ಷಗಳಲ್ಲಿ ವೈಜ್ಞಾನಿಕ ತಳಹದಿಯ ಮೇಲೆ ನಡೆಯುತ್ತಿದೆ. ನಾಣ್ಯಗಳು ಆ ಕಾಲದ ಸಾಂಪ್ರದಾಯಿಕ ಪರಂಪರೆ, ಸಾಮಾಜಿಕ ವ್ಯವಸ್ಥೆ, ತಂತ್ರಜ್ಞಾನ ಮತ್ತು ಆಡಳಿತ ವ್ಯವಸ್ಥೆ ಮುಂತಾದ ಅನೇಕ ವಿಷಯಗಳ ಕುರಿತು ಬೆಳಕನ್ನು ಚೆಲ್ಲುತ್ತವೆ ಎಂದು ವಿವರಿಸಿದರು.

ಸೌತ್ ಇಂಡಿಯನ್ ನ್ಯೂ ಮಿಸ್ ಮ್ಯಾಟಿಕ್ಸ್ ಸೊಸೈಟಿ ಅಧ್ಯಕ್ಷ ಡಾ. ಡಿ. ರಾಜಾರೆಡ್ಡಿ ಮಾತನಾಡಿ, ‘ಪ್ರಪಂಚಕ್ಕೆ ನಾಣ್ಯಶಾಸ್ತ್ರ ಕೊಡುಗೆ ನೀಡಿದ ಮೊದಲ ಮೂರು ರಾಷ್ಟ್ರಗಳಲ್ಲಿ ಪ್ರಾಚೀನ ಭಾರತ ಒಂದಾಗಿದೆ. ನಾಣ್ಯಗಳ ವೈಜ್ಞಾನಿಕ ಅಧ್ಯಯನದಿಂದ ನಮ್ಮ ಪ್ರಾಚೀನ ಪರಂಪರೆಯಿಂದ ಹಿಡಿದು ಇಂದಿನವರೆಗಿನ ಇತಿಹಾಸದ ಅಧ್ಯಯನವನ್ನು ವೈಜ್ಞಾನಿಕ ರೀತಿಯಲ್ಲಿ ಮಾಡುವುದು ಸಾಧ್ಯವಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

33ನೇ ವಾರ್ಷಿಕ ದಕ್ಷಿಣ ಭಾರತೀಯ ನಾಣ್ಯಶಾಸ್ತ್ರೀಯ ರಾಷ್ಟ್ರೀಯ ಸಮ್ಮೇಳನದಲ್ಲಿ ದಿ ಮಿಥಿಕ್ ಸೊಸೈಟಿ ಅಧ್ಯಕ್ಷ ವಿ. ನಾಗರಾಜ್, ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಜಯಕರ್ ಶೆಟ್ಟಿ, ದಕ್ಷಿಣ ಭಾರತೀಯ ನಾಣ್ಯಶಾಸ್ತ್ರ ಸೊಸೈಟಿ ಅಧ್ಯಕ್ಷ ಡಿ. ರಾಜ ರೆಡ್ಡಿ, ಪುರಾತತ್ವ ಇಲಾಖೆ ಮಾಜಿ ನಿರ್ದೇಶಕ ಆರ್. ಗೋಪಾಲ್ ಮತ್ತು ದಕ್ಷಿಣ ಭಾರತೀಯ ನಾಣ್ಯಶಾಸ್ತ್ರ ಸೊಸೈಟಿ ಕಾರ್ಯದರ್ಶಿ ಟಿ.ಸತ್ಯಮೂರ್ತಿ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ದಿ. ಮಿಥಿಕ್ ಸೊಸೈಟಿ ಅಧ್ಯಕ್ಷ ವಿ. ನಾಗರಾಜ್ ಮಾತನಾಡಿ, ‘ಐತಿಹಾಸಿಕ ಅಧ್ಯಯನವನ್ನು ವೈಜ್ಞಾನಿಕ ರೀತಿಯಲ್ಲಿ ಕೈಗೊಳ್ಳುವುದು ಅವಶ್ಯಕ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇತಿಹಾಸದ ನಿಜ ಸ್ವರೂಪವನ್ನು ತಿಳಿಸುವುದು ಸಂಶೋಧಕರ ಜವಾಬ್ದಾರಿ’ ಎಂದರು.

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಶಾಸನವಿಜ್ಞಾನ ವಿಭಾಗದ ನಿರ್ದೇಶಕ ಟಿ.ಎಸ್. ರವಿಶಂಕರ್, ರಾಜ್ಯ ಪುರಾತತ್ವ, ವಸ್ತುಸಂಗ್ರಹಾಲಯ ಮತ್ತು ಸಾಂಸ್ಕೃತಿಕ ಇಲಾಖೆಯ ಮಾಜಿ ನಿರ್ದೇಶಕ ಆರ್. ಗೋಪಾಲ್, ಸೌತ್ ಇಂಡಿಯನ್ ನ್ಯೂಮಿಸ್‌ಮ್ಯಾಟಿಕ್ಸ್ ಸೊಸೈಟಿ ಕಾರ್ಯದರ್ಶಿ ಟಿ. ಸತ್ಯಮೂರ್ತಿ, ಸಂಸ್ಥೆಯ ಸಂಶೋಧನ ಪತ್ರಿಕೆಯ ಸಂಪಾದಕ ಪಿ.ವಿ. ರಾಧಾಕೃಷ್ಣನ್, ಖಜಾಂಚಿ ಕಲಾವತಿ, ದಿ ಮಿಥಿಕ್ ಸೊಸೈಟಿಯ ಸಂಶೋಧನಾ ಕೇಂದ್ರದ ನಿರ್ದೇಶಕ ಶ್ರೀನಿವಾಸ ವಿ. ಪಾಡಿಗಾರ್, ಸಂಯೋಜಕ ಪಿ. ಜಯಸಿಂಹ ಉಪಸ್ಥಿತರಿದ್ದರು.

ಸೌತ್ ಇಂಡಿಯನ್ ನ್ಯೂಮಿಸ್ ಮ್ಯಾಟಿಕ್ಸ್ ಸೊಸೈಟಿಯ ಸಂಶೋಧನಾ ಪತ್ರಿಕೆಗಳನ್ನೊಳಗೊಂಡ 32ನೇ ಸಂಪುಟ ಬಿಡುಗಡೆ ಮಾಡಲಾಯಿತು.

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100 ದೂರವಾಣಿ : 080 41362000 ಫ್ಯಾಕ್ಸ್: 080 41362010
ಇ-ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಮಾರ್ಚ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಅವಧಿಯ ಪರಿಶೋಧಿತವಾದ ಆರ್ಥಿಕ ಫಲಿತಾಂಶ

ಟಿಮ್‌ಕೆನ್ ಇಂಡಿಯಾ ನಿಯಮಿತದ ('ದಿ ಕಂಪನಿ') 23ನೇ ಮೇ, 2025 ರಂದು ನಡೆದ ತನ್ನ ಸಭೆಯಲ್ಲಿ ಮಾರ್ಚ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಅವಧಿಯ ಪರಿಶೋಧಿತವಾದ ಆರ್ಥಿಕ ಫಲಿತಾಂಶವನ್ನು ನಿರ್ದೇಶಕರ ಮಂಡಳಿಯು ಅನುಮೋದಿಸಿದ್ದು ಇದನ್ನು ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ದಾಖಲಿಸಿದೆ. ಆರ್ಥಿಕ ಫಲಿತಾಂಶವು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ, BSE: https://www.bseindia.com/xml-data/corpfiling/AttachLive/efdeb3b7-5d79-4309-8e33-29acc6d53dfb.pdf ಮತ್ತು NSE: https://nsearchives.nseindia.com/corporate/TIMKEN_23052025201328_Letter.pdf ಮತ್ತು https://www.timken. com/wp-content/uploads/2025/05/Audited-Financial-Results-31-March-2025.pdf. ಕಂಪನಿಯ ವೆಬ್‌ಸೈಟ್‌ನಲ್ಲಿ ಸಹ ಲಭ್ಯವಿದೆ. ಫಲಿತಾಂಶವನ್ನು ಕೆಳಕಂಡ ಕ್ವಿಕ್ ರೆಸ್ಪಾನ್ಸ್ (ಕ್ಯೂಆರ್) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರಕ್ರಿಯಿಸಬಹುದು.

QR Code

24 ಮೇ, 2025
ಮಂಡಳಿಯ ಆದೇಶದಂತೆ
ಸಹಿ/-
ಸಂಜಯ್ ಕೌಲ್
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
DIN: 05159352

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ
संस्कृति मंत्रालय भारत सरकार
सत्यमेव जयते
(ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ನೇತೃತ್ವದ ಅಡಿಯಲ್ಲಿ)

ಸಾಂಸ್ಕೃತಿಕ ಪ್ರತಿಭಾ ಶೋಧ ಶಿಷ್ಯವೇತನ ಯೋಜನೆ – 2025-26

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ ಇವರು, ವಿವಿಧ ಸಾಂಸ್ಕೃತಿಕ ಕ್ಷೇತ್ರಗಳಾದ ಸಾಂಪ್ರದಾಯಿಕ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಶಿಲ್ಪಕಲೆ, ಕರಕುಶಲತೆ ಮತ್ತು ಸಾಹಿತ್ಯ ಕಲೆಗಳು, ಅಳಿವಿನಂಚಿಗೆ ತಲುಪಿರುವ ಅಪರೂಪದ ಕಲಾ ಪ್ರಾಕಾರಗಳಿಗೆ ವಿಶೇಷ ಆದ್ಯತೆ ನೀಡುವ ಮೂಲಕ, **ಅಂಗೀಕೃತ ಶಾಲೆಗಳಲ್ಲಿ ಓದುತ್ತಿರುವ ಅಥವಾ ಸಾಂಪ್ರದಾಯಿಕ ಪ್ರದರ್ಶನಾ ಕಲೆಗಳಲ್ಲಿ ಅಭ್ಯಾಸನಿರತ ಕುಟುಂಬಗಳಲ್ಲಿನ, 10 ರಿಂದ 14 ವರ್ಷ ವಯೋಮಿತಿ (ಅರ್ಹತೆಯ ಕೊನೆಯ ದಿನಾಂಕದ ಮೇರೆಗೆ)** ಒಳಗಿರುವ, ಆಯ್ಕೆಗೊಂಡ ಅತ್ಯುತ್ತಮ ಪ್ರತಿಭಾವಂತ ಮಕ್ಕಳಿಗೆ ವಿಶೇಷ ತರಬೇತಿ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ, ಸಾಂಸ್ಕೃತಿಕ ಪ್ರತಿಭಾ ಶೋಧ ಶಿಷ್ಯವೇತನ ಯೋಜನೆ ಎಂಬ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ್ದಾರೆ. ಈ ಯೋಜನೆಯ ಅಡಿಯಲ್ಲಿ ಒಂದು ಬಾರಿಗೆ ಎರಡು ವರ್ಷಗಳ ಶಿಷ್ಯವೇತನ ನೀಡಲಾಗುತ್ತದೆ, ಹೀಗೆ ಶಿಷ್ಯವೇತನ ಪಡೆಯುವರ ನಿರಂತರ ತೃಪ್ತಿದಾಯಕ ಪ್ರಗತಿ ನಿರ್ವಹಣೆ ನಿಬಂಧನೆಯ ಮೇರೆಗೆ, ಸದರಿ ಶಿಷ್ಯವೇತನವನ್ನು ಪ್ರತಿ ಎರಡು ವರ್ಷಗಳ ನಂತರ, ಮೊದಲ ವಿಶ್ವವಿದ್ಯಾಲಯ ಪದವಿ ಹಂತದ ಶಿಕ್ಷಣ ಪೂರ್ಣಗೊಳ್ಳುವವರೆಗೆ ಅಥವಾ 20 ವರ್ಷ ಪ್ರಾಯ ತುಂಬುವವರೆಗೆ, ಇದರಲ್ಲಿ ಯಾವುದು ಮೊದಲೊ, ಆ ಅವಧಿಯವರೆಗೆ ನವೀಕರಿಸಲಾಗುತ್ತದೆ.

ಕೆಳಕಂಡ ವಿವರಗಳ ಪ್ರಕಾರ, ಪ್ರತಿ ವರ್ಷ 650 ವಿದ್ಯಾರ್ಥಿವೇತನಗಳನ್ನು ನೀಡಲಾಗುತ್ತದೆ:

ಸಾಮಾನ್ಯ ಪ್ರವರ್ಗಗಳು ಮತ್ತು ಇತರರಿಗೆ 375 ಶಿಷ್ಯವೇತನಗಳು	ಸಾಂಪ್ರದಾಯಿಕ ಕಲಾವಿದ ಕುಟುಂಬಗಳಿಗೆ 125 ಶಿಷ್ಯವೇತನಗಳು
ಬುಡಕಟ್ಟು ಸಂಸ್ಕೃತಿ/ಪರಿಶಿಷ್ಟ ಪಂಗಡಗಳಿಗೆ 100 ಶಿಷ್ಯವೇತನಗಳು	ವಿಕಲಚೇತನರಿಗೆ (ದಿವ್ಯಾಂಗಜನ) 20 ಶಿಷ್ಯವೇತನಗಳು
ಸೃಜನಶೀಲ ಬರವಣಿಗೆ/ಸಾಹಿತ್ಯ ಕಲೆಗಳಿಗೆ 30 ಶಿಷ್ಯವೇತನಗಳು	

ಈ ಶಿಷ್ಯವೇತನದ ವಾರ್ಷಿಕ ಮೌಲ್ಯ ರೂ. 3600/- (ರೂಪಾಯಿ ಮೂರು ಸಾವಿರದ ಆರು ನೂರು) ಆಗಿರುತ್ತದೆ ಮತ್ತು ಪ್ರತಿ ವರ್ಷ ವಿಶೇಷ ತರಬೇತಿಗಾಗಿ ಪಾವತಿಸುವ ರೂ. 9000/- (ರೂಪಾಯಿ ಒಂಬತ್ತು ಸಾವಿರ) ಮೊತ್ತವನ್ನು ಹಿಂಪಡೆಯಬಹುದು. ದಿನಾಂಕ 01.07.2011 ರಿಂದ 30.06.2025 (ಎರಡೂ ದಿನಗಳು ಸೇರಿರುತ್ತವೆ) ರೊಳಗೆ ಜನಿಸಿರುವ ಮಕ್ಕಳು, 2025-26ನೇ ಸಾಲಿನ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಮತ್ತು ಇನ್ನಿತರ ವಿವರಗಳನ್ನು ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರದ ವೆಬ್‌ಸೈಟ್‌ನಿಂದ (www.ccrtindia.gov.in) ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಕೆಳಕಂಡ ಯಾವುದೇ ವಿಳಾಸದಿಂದ ಖುದ್ದಾಗಿಯಾಗಲಿ ಅಥವಾ ಅಂಚೆ ಮೂಲಕವಾಗಲಿ ಉಚಿತವಾಗಿ ಪಡೆದುಕೊಳ್ಳಬಹುದು:

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ, 15 ಎ, ಸೆಕ್ಟರ್-7, ದ್ವಾರಕಾ, ನವದೆಹಲಿ-110075 ಫೋನ್ ನಂ. 011-25088638 ಇಮೇಲ್: ddsch.ccrt@nic.in ವೆಬ್‌ಸೈಟ್: www.ccrtindia.gov.in	ಸಿಸಿಆರ್‌ಟಿ ಪ್ರಾದೇಶಿಕ ಕೇಂದ್ರ, 1-118/ಸಿಸಿಆರ್‌ಟಿ, ಸರ್ವೆ ನಂ. 64, ಗೂಗಲ್ ಕಚೇರಿ ಹತ್ತಿರ, ಹೈದರಾಬಾದ್-500084 ಫೋನ್ ನಂ. (040) 23117050 ಮತ್ತು 23111910 ಇಮೇಲ್: rchyd.ccrt@nic.in
ಸಿಸಿಆರ್‌ಟಿ ಪ್ರಾದೇಶಿಕ ಕೇಂದ್ರ, ಹವಾಲಾ ಖುರ್ದ್, ಬಡಗಾಂವ್, ಉದಯಪುರ, ರಾಜಸ್ಥಾನ್-313001 ಫೋನ್ ನಂ. (0294) 2430764, 2430771 ಇಮೇಲ್: rcud.ccrt@nic.in	ಸಿಸಿಆರ್‌ಟಿ ಪ್ರಾದೇಶಿಕ ಕೇಂದ್ರ, 58, ಜುರಿಪಾರ್, ಪಂಜಾಬರಿ ರಸ್ತೆ, ಗುವಾಹಟಿ, ಅಸ್ಸಾಂ-781037 ಫೋನ್ ನಂ. 0361-2330152 ಇಮೇಲ್: rcgwt.ccrt@nic.in
ಸಿಸಿಆರ್‌ಟಿ ಪ್ರಾದೇಶಿಕ ಕೇಂದ್ರ, ಹಳೆಯ ಕಲೆಕ್ಟೊರೇಟ್ ಕಟ್ಟಡ, ಜಿಲ್ಲಾ ನ್ಯಾಯಾಲಯದ ಸಮೀಪ, ದಾಮೋಹ್, ಮಧ್ಯಪ್ರದೇಶ-470661 ಫೋನ್ ನಂ. 07812299187 ಇಮೇಲ್: rcdamoh-ccrt@nic.in	

ಸಂಪೂರ್ಣ ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಸಂಬಂಧಿತ ದಾಖಲಾತಿಗಳ ಸಮೇತ, ಕಡ್ಡಾಯವಾಗಿ ಸೋಮವಾರ, 30ನೇ ಜೂನ್, 2025 ರೊಳಗೆ ಸಿಸಿಆರ್‌ಟಿ, ನವದೆಹಲಿ-110075 ವಿಳಾಸಕ್ಕೆ ತಲುಪುವಂತೆ ರವಾನಿಸತಕ್ಕದ್ದು. ಯಾವುದೇ ಅಂಚೆ ವಿಳಂಬಕ್ಕೆ ಸಿಸಿಆರ್‌ಟಿ ಹೊಣೆಯಾಗಿರುವುದಿಲ್ಲ ಮತ್ತು ಕೊನೆಯ ದಿನಾಂಕದ ಬಳಿಕ ಸಂದಾಯವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
CBC 09127/12/0001/2526

ಅರುಣ್ ಪುರಿ ವಿರುದ್ಧದ ಪ್ರಕರಣಕ್ಕೆ ತಡೆ

ನವದೆಹಲಿ (ಪಿಟಿಐ): ‘ಇಂಡಿಯಾ ಟುಡೆ’ ಮಾಧ್ಯಮ ಸಮೂಹದ ಮುಖ್ಯಸ್ಥ ಅರುಣ್ ಪುರಿ ಅವರ ವಿರುದ್ಧದ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಕಳೆದ ವರ್ಷ ಪ್ರಸಾರವಾದ ಚರ್ಚೆಯೊಂದಕ್ಕೆ ಸಂಬಂಧಿಸಿದ ಮಾನನಷ್ಟ ಪ್ರಕರಣ ಇದಾಗಿದೆ.

ಅರುಣ್ ಪುರಿ ಅವರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಅವರ ವಾದ ಆಲಿಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ಈ ತಡೆಯಾಜ್ಞೆ ನೀಡಿದೆ.

ಮಾನನಷ್ಟ ಮೊಕದ್ದಮೆ ಪ್ರಕ್ರಿಯೆಯು ಪಟ್ನಾದ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ನಡೆಯುತ್ತಿತ್ತು. ತಡೆಯಾಜ್ಞೆಯನ್ನು ಮೇ 19ರಂದು ನೀಡಲಾಗಿದೆ.

ಮಾನನಷ್ಟ ಮೊಕದ್ದಮೆಯ ವಿಚಾರಣೆಗೆ ಹಾಜರಾಗುವಂತೆ ಅರುಣ್ ಪುರಿ ಅವರಿಗೆ ಸಮನ್ಸ್ ಜಾರಿಗೊಳಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅವರು ಪಟ್ನಾ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ ಅವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ನಂತರ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

304.	ಲಕ್ಷ್ಮಮ್ಮ ಕೋಂ ಮುನಿವೆಂಕಟಸ್ವಾಮಿ	220	4-17	0-12	4-05
305.	ವೈ.ಕೃಷ್ಣಪ್ಪ ಬಿನ್ ಮುನೆಪ್ಪ ಉ॥ ಯರ್ರಪ್ಪ	221/1	0-33	0-03	0-30
306.	ಆರ್.ಮಂಜುನಾಥ್ ಬಿನ್ ಬಿ.ರಾಮಪ್ಪ	221/2	3-09	0-04	3-05
307.	ಎಂ.ಕೃಷ್ಣಪ್ಪ ಬಿನ್ ವೆಂಕಟಮ್ಮ	221/3	0-30	-	0-30
308.	ತೋಟಿ ಇನಾಂತಿ	222	4-13	0-02	4-11
309.	ನಾರಾಯಣಸ್ವಾಮಿ ಬಿನ್ ವೆಂಕಟಶಾಮಿ, ಲಕ್ಷ್ಮಮ್ಮ ಕೋಂ ಲೇಟ್ ವೆಂಕಟೇಶಪ್ಪ, ಲಕ್ಷ್ಮಮ್ಮ ಕೋಂ ವೆಂಕಟರವಣಪ್ಪ	223	2-20	-	2-20
310.	ಕೆ.ವಿ.ಶ್ರೀರಾಮರೆಡ್ಡಿ ಬಿನ್ ಲೇಟ್ ಆರ್.ವೆಂಕಟರೆಡ್ಡಿ	224	7-17	-	7-17
311.	ಎಂ.ರವೀಂದ್ರಬಾಬು ಬಿನ್ ಆರ್.ಮುನಿಸ್ವಾಮಿ	225	2-32	-	2-32
312.	ಸೈದ್ ಮುತ್ತುಜಾ ಸಾಬಿ, ಆರ್.ನಾರಾಯಣಸ್ವಾಮಿ ಬಿನ್ ರಂಗಾರೆಡ್ಡಿ	226	1-20	-	1-20
313.	ಆರ್.ನಾರಾಯಣಸ್ವಾಮಿ ಬಿನ್ ರಂಗಾರೆಡ್ಡಿ, ಎಸ್.ಎಂ.ಉಮಾದೇವಿ ಕೋಂ ಆರ್.ಶ್ರೀರಾಮರೆಡ್ಡಿ	227/1	6-22	0-17	6-05
314.	ಟಿ.ಸಿ.ಶ್ರೀರಾಮರೆಡ್ಡಿ ಬಿನ್ ಚೌಡಪ್ಪ	227/2	2-06	0-06	2-00
315.	ಚಂದ್ರಕಲ ಟಿ.ವಿ ಕೋಂ ಜಯರಾಮರೆಡ್ಡಿ	227/3	2-04	0-04	2-00
316.	ಎಂ.ಅಶ್ವತ್ತಮ್ಮ ಬಿನ್ ಮುನಿಶಾಮಿ	228/1	2-00	0-10	1-30
317.	ಹೆಚ್.ಕೋದಂಡಪ್ಪ ಬಿನ್ ನೀರಗಂಟಿ ಹನುಮಪ್ಪ	228/2	2-00	0-10	1-30
318.	ಎಂ.ಅಶ್ವತ್ತಮ್ಮ ಬಿನ್ ಮುನಿಶಾಮಿ	228/3	2-00	-	2-00
319.	ಎಂ.ರವೀಂದ್ರಬಾಬು ಬಿನ್ ಆರ್.ಮುನಿಸ್ವಾಮಿ	228/4	2-00	0-10	1-30
320.	ಸರ್ಕಾರಿ ಬಂಜರು	228/5	2-35	0-10	2-25
321.	ಮುನಿರೆಡ್ಡಿ ಬಿನ್ ಲೇಟ್ ರಂಗಾರೆಡ್ಡಿ	229	4-39	-	4-39
322.	ಆರ್.ಮುನಿರೆಡ್ಡಿ ಬಿನ್ ರಂಗಾರೆಡ್ಡಿ, ಎಂ.ಆಶ್ವತ್ತಮ್ಮ ಬಿನ್ ಮುನಿಶಾಮಿ, ಸರ್ಕಾರಿ	230/1	5-14	0-19	4-35
		230/2	5-12	0-22	4-30
		230/3	1-17	0-04	1-13
323.	ಸರ್ಕಾರಿ ಗೋಮಾಳ, ಸೈಯದ್ ಅಮಾನುಲ್ಲಾ ಬಿನ್ ಅಬ್ದುಲ್ ಸುಬಾನ್ ಸಾಬಿ, ಚಿನ್ನಪ್ಪ ಬಿನ್ ಮುನಿವೆಂಕಟಪ್ಪ, ರಾಮಪ್ಪ ಬಿನ್ ಮುನಿವೆಂಕಟಪ್ಪ, ಸಿ.ವೆಂಕಟೇಶಪ್ಪ ಬಿನ್ ಚಿಕ್ಕವೆಂಕಟಪ್ಪ, ಸಿ.ವೆಂಕಟೇಶಪ್ಪ ಬಿನ್ ಚಿಕ್ಕವೆಂಕಟಪ್ಪ, ಅಬ್ದುಲ್ ವಾಜೀದ್ ಬಿನ್ ಹಾಜಿ ಅಬ್ದುಲ್ ಖಾದರ್, ಸಿ.ವೆಂಕಟೇಶಪ್ಪ ಬಿನ್ ಚಿಕ್ಕವೆಂಕಟಪ್ಪ, ಶ್ರೀರಾಮಪ್ಪ ಬಿನ್ ಚೌಡಪ್ಪ, ಲಕ್ಷ್ಮಯ್ಯ ಬಿನ್ ಚೌಡಪ್ಪ, ರತ್ನಮ್ಮ ಕೋಂ ಲೇಟ್ ನಾಗಪ್ಪ,ಜಿ.ಪುಟ್ಟರಾಜ ಬಿನ್ ಗಂಗನ್ನ ಉ॥ ಗಂಗಪ್ಪ, ಸರ್ಕಾರ, ಸರ್ಕಾರ, ಈರಮ್ಮ ಕೋಂ ಕೆ.ರಾಮಪ್ಪ, ವಿ.ವೆಂಕಟೇಶರೆಡ್ಡಿ ಬಿನ್ ವೆಂಕಟಸ್ವಾಮಿ, ಆಂಜಪ್ಪ ಬಿನ್ ಶಿ..ರಾಮಪ್ಪ, ಲಕ್ಷ್ಮಮ್ಮ ಕೋಂ ಲೇಟ್ ನಾರಾಯಣಸ್ವಾಮಿ, ಎಂ.ವಾಸುದೇವ ಹೊಳ್ಳ ಬಿನ್ ಶಂಕರ ನಾರಾಯಣ ಹೊಳ್ಳ, ಎಂ.ವಾಸುದೇವ ಹೊಳ್ಳ ಬಿನ್ ಶಂಕರನಾರಾಯಣ ಹೊಳ್ಳ, ವೈ.ಕೃಷ್ಣಪ್ಪ ಮೂರ್ತಿ ಬಿನ್ ಕೆ.ಯಳಪ್ಪ	231	128-03	93-03	35-00
324	ಷಾಕಿರಾಭೀ ಕೋಂ ಲೇಟ್ ಮಹಮದ್ ಅಬ್ದುಲ್ಲಾ, ಎಂ.ಲಕ್ಷ್ಮಣರೆಡ್ಡಿ, ವೆಂಕಟರಾಮಯ್ಯ, ಸರ್ಕಾರಿ, ಎಂ.ಗೋಪಾಲರೆಡ್ಡಿ ಬಿನ್ ಮುನಿವೆಂಕಟಪ್ಪ, ಎಂ.ಲಕ್ಷ್ಮಣರೆಡ್ಡಿ ಬಿನ್ ಮುನಿವೆಂಕಟಪ್ಪ, ನಾನಮ್ಮ ಕೋಂ ತಿರುಮಳಪ್ಪ, ನಾರಾಯಣಸ್ವಾಮಿ ಬಿನ್ ಕಿ.ವೆಂಕಟಶಾಮಿ, ವೆಂಕಟಲಕ್ಷ್ಮಮ್ಮ ಕೋಂ ಎನ್.ಜಿ.ತಿಮ್ಮಪ್ಪ, ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ಲೇಟ್ ಲಕ್ಷ್ಮಮ್ಮ ಕೋಂ ಲೇಟ್ ವೆಂಕಟರವಣಪ್ಪ, ಅರಣ್ಯ	232	40–00	1–00	39–00
325	ಲಕ್ಷ್ಮೀದೇವಮ್ಮ ಕೋಂ ಬ್ಯಾಟಪ್ಪ ಎನ್.ಜಿ	235/1	1-18	-	1-18
326.	ವಿ.ಕವಿತ ಕೋಂ ಎನ್.ವಿ.ಗೋಪಾಲಗೌಡ	235/2	0-36	0-01	0-35
327.	ಸೊಣ್ಣಪ್ಪ ಬಿನ್ ಕಾಳಪ್ಪ, ಮೀನಾಕ್ಷಮ್ಮ ಕೋಂ ಎಸ್.ಎಂ.ವೆಂಕಟರಾಮಯ್ಯ	236/1	3-12½	-	3-12½
328.	ರತ್ನಮ್ಮ ಕೋಂ ಮಂಜುನಾಥ	236/2	1-04½	-	1-04½
329.	ಸೊಣ್ಣಪ್ಪ ಬಿನ್ ಚಿಕ್ಕಮುನೆಪ್ಪ	461/1	0-02½	-	0-02½
330.	ಸಾಮಣ್ಣ ಬಿನ್ ಮುನೆಪ್ಪ	461/2	0-01½	-	0-01½
331.	ವೈ.ಮುನಿಯಪ್ಪ ಬಿನ್ ಯರಪ್ಪ, ವೈ.ಚಿಕ್ಕಮುನಿಯಪ್ಪ ಬಿನ್ ಯರಪ್ಪ, ಎಸ್.ಹನುಮಂತಯ್ಯ ಬಿನ್ ಯರಪ್ಪ, ವೈ.ವೆಂಕಟೇಶಪ್ಪ ಬಿನ್ ಯರಪ್ಪ, ಚಿಕ್ಕವೆಂಕಟೇಶಪ್ಪ ಬಿನ್ ಯರಪ್ಪ, ಮುನಿಸ್ವಾಮಿ ಬಿನ್ ಯರಪ್ಪ, ವೈ.ಕೃಷ್ಣಪ್ಪ ಬಿನ್ ಯರಪ್ಪ	463/1	0-31	-	0-31
332.	ವೈ.ಕೃಷ್ಣಮೂರ್ತಿ ಬಿನ್ ಕೆ.ಯಳಪ್ಪ	463/2	0-07	-	0-07
333.	ಕೆ.ಮುನಿಯಪ್ಪ ಬಿನ್ ಕೆಂಚಪ್ಪ, ಕೆ.ಶ್ಯಾಮಣ್ಣ ಬಿನ್ ಕೆಂಚಪ್ಪ, ವೈ.ಕೃಷ್ಣಮೂರ್ತಿ ಬಿನ್ ಕೆ.ಯಳಪ್ಪ	463/3	0-05	-	0-05
334.	ಹನುಮಪ್ಪ ಬಿನ್ ಮುನಿಶಾಮಪ್ಪ ಉ॥ ಪಿಳ್ಳಪ್ಪ	463/4	0-06	-	0-06
335.	ವೈ.ಕೃಷ್ಣಮೂರ್ತಿ ಬಿನ್ ಕೆ.ಯಳಪ್ಪ	463/5	0-06	-	0-06
336.	ಮುನಿಯಪ್ಪ ಬಿನ್ ಲೇಟ್ ಹೆಚ್.ರಾಮಪ್ಪ	463/6	1-23	-	1-23
337.	M/s Little Flower Hospital Private Limited by Dr.Santhosh koshy S/o C.Koshy	463/7	1-22	-	1-22
338.	ಬಿ.ಮುನೇಗೌಡ ಬಿನ್ ಬೀರೇಗೌಡ	464/1	2-03	-	2-03
339.	ಚೌಡಮ್ಮ ಕೋಂ ನಾರಾಯಣಸ್ವಾಮಿ	464/2	2-03	-	2-03
340.	ಬಿ.ರಾಮಚಂದ್ರಪ್ಪ ಬಿನ್ ಲೇಟ್ ಬಲರಾಮಯ್ಯಶೆಟ್ಟಿ	470	5-01	0-03	4-38
341.	ಬಿ.ರಾಮಚಂದ್ರಪ್ಪ ಬಿನ್ ಲೇಟ್ ಬಲರಾಮಯ್ಯಶೆಟ್ಟಿ	471	6-05	0-02	6-03
342.	ಎಂ.ಚೌಡೇಗೌಡ ಬಿನ್ ಸಿ.ಮುನಿಶಾಮಿಗೌಡ	472	5-10	0-05	5-05
343.	ಷಾಕೀರಾಬೀ ಕೋಂ ಮಹಮದ್ ಅಬ್ದುಲ್ಲಾ	482	4-00	-	4-00
344.	ಆರ್.ಮೋಹನ್ ಬಿನ್ ಲೇಟ್ ರಾಮರಾವ್	483/1	3-27	0-11	3-16
345.	ಜಿ.ಎಸ್.ಆಂಜನೇಯ ಬಿನ್ ಸುಬ್ಬಯ್ಯಶೆಟ್ಟಿ	483/2	4-13	0-13	4-00
346.	ಮಂಜುಳಾ ಬಿನ್ ಲಕ್ಷ್ಮಣರೆಡ್ಡಿ	485	4-20	1-00	3-20
347.	ಗೋಪಾಲರೆಡ್ಡಿ ಬಿನ್ ಮುನಿವೆಂಕಟಪ್ಪ	486	3-20	-	3-20
348.	ನಾನಮ್ಮ ಕೋಂ ಹೆಚ್.ಮುನಿವೆಂಕಟಪ್ಪ	487	5-00	0-10	4-30
349.	ಮಹ್ಮದ್ ರಿಯಾಜ್ ಅಹ್ಮದ್ ಬಿನ್ ಹಾಜಿ ಅಬ್ದುಲ್ ಖಾದರ್	489/1	3-10	-	3-10
350.	ಜಮೀಲ್ ಅಹ್ಮದ್ ಬಿನ್ ಅಬ್ದುಲ್ ಖಾಧರ್	489/2	0-30	-	0-30
351.	ವಿ.ಶ್ರೀನಿವಾಸ ಬಿನ್ ಸಿ.ವೆಂಕಟೇಶಪ್ಪ	490	10-00	-	10-00
352.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	491	2-18	-	2-18
353.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	493	4-00	-	4-00
354.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	494	1-00	-	1-00
355.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	495	1-00	-	1-00
356.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	496	1-00	-	1-00
357.	ಕೆ.ವಿ.ಮಂಜುನಾಥ ಬಿನ್ ಲೇಟ್ ವೆಂಕಟರವಣಪ್ಪ	497	3-00	-	3-00
358.	ವಿ.ನಾಗರಾಜ್ ಬಿನ್ ವೆಂಕಟಾಚಲಪತಿ	498/1	1-39	-	1-39
359.	ವಿ.ಸುಜಾತ ಕೋಂ ಎಂ.ಗೋಪಾಲಕೃಷ್ಣ	498/2	1-01	-	1-01
360.	ವಿ.ಸುಜಾತ ಕೋಂ ಎಂ.ಗೋಪಾಲಕೃಷ್ಣ	499	3-00	-	3-00
361.	ನಳಿನಾರಾವತ್ ದೇವ್ ಬಿನ್ ನಾರಾಯಣೀಪೋಷ	500/1	2-00	-	2-00
362.	ಕೆ.ರಾಮಚಂದ್ರ ಬಿನ್ ಲೇಟ್ ಎಂ.ಕೃಷ್ಣಪ್ಪ	500/2	1-00	-	1-00
363.	ಕೆ.ರಾಮಚಂದ್ರ ಬಿನ್ ಲೇಟ್ ಎಂ.ಕೃಷ್ಣಪ್ಪ	501	2-00	-	2-00
364.	ಕಂಪ್ಯೂಟರ್ ಪಹಣಿ ಲಭ್ಯವಿರುವುದಿಲ್ಲ	502	4-00	-	4-00
365.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	503	3-00	0-03	2-37
366.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	504	3-00	0-03	2-37
367.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	505	3-00	0-03	2-37
368.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	506	2-22	0-02	2-20
369.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	507	2-08	-	2-08
370.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	508	2-26	-	2-26
371.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	509	3-00	-	3-00
372.	ಕಂಪ್ಯೂಟರ್ ನಲ್ಲಿ ಪಹಣಿ ಲಭ್ಯವಿರುವುದಿಲ್ಲ	510	3-34	3-34	-
		ಒಟ್ಟು	1273-24¾	229-17	1044-07¾

ಸಹಿ/-ವಿಶೇಷ ಭೂಸ್ವಾಧೀನಾಧಿಕಾರಿ-1, ಕೆ.ಐ.ಎ.ಡಿ.ಬಿ., ಅರಮನೆ ರಸ್ತೆ, ಬೆಂಗಳೂರು.
ವಾಸಾಸಂಇ/ಉನಿ-ಸಿ.ಪಿ/825/ಕೆಎಸ್‌ಎಂಸಿಎ/2025-26

ಅತ್ಯಾಚಾರ ಪ್ರಕರಣ ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುತೆರೆ ಸಹ ಕಲಾವಿದೆ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಬಂಧಿತರಾಗಿರುವ ನಟ ಮಡೆನೂರು ಮನು ಅವರನ್ನು ಪೊಲೀಸರು ಘಟನಾ ಸ್ಥಳಕ್ಕೆ ಕರೆದೊಯ್ದು ಸ್ಥಳ ಮಹಜರು ನಡೆಸಿದರು.

ಈ ಹಿಂದೆ ಸಂತ್ರಸ್ತೆ ವಾಸವಿದ್ದ ಬನಶಂಕರಿ ಮೂರನೇ ಹಂತದ ಕಾಮಾಕ್ಯ ಜಂಕ್ಷನ್ ಬಳಿಯ ನಿವಾಸ, ಪ್ರಸ್ತುತ ವಾಸವಿರುವ ನಾಗರಬಾವಿ ನಿವಾಸ ಮತ್ತು ಕಾರ್ಯಕ್ರಮವೊಂದಕ್ಕೆ ಹೋದಾಗ ಲೈಂಗಿಕ ದೌರ್ಜನ್ಯ ಎಸಗಿದ್ದರು ಎನ್ನಲಾದ ಶಿವಮೊಗ್ಗದ ಶಿಕಾರಿಪುರದ ಹೋಟೆಲ್‌ಗೆ ಕರೆದೊಯ್ದು ಸ್ಥಳ ಮಹಜರು ನಡೆಸಲಾಗಿದೆ. ಆರೋಪಿಯಿಂದ ಹಲವು ಮಾಹಿತಿಯನ್ನು ಕಲೆ ಹಾಕಲಾಗಿದೆ ಎಂದು ಪೊಲೀಸರು ಹೇಳಿದರು.

ಮತ್ತೊಂದೆಡೆ ಸಂತ್ರಸ್ತೆಯನ್ನು ಪ್ರತ್ಯೇಕವಾಗಿ ಘಟನಾ ಸ್ಥಳಕ್ಕೆ ಕರೆದೊಯ್ದು ಸ್ಥಳ ಮಹಜರು ನಡೆಸಲಾಗಿದೆ ಎಂದು ಗೊತ್ತಾಗಿದೆ.

ಮಡೆನೂರು ಮನು ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಜಾಲತಾಣದಲ್ಲಿ ಹರಿದಾಡಿದೆ. ಅದಲ್ಲಿ ಕನ್ನಡದ ನಟರನ್ನು ಅವಮಾನಿಸಲಾಗಿದೆ ಎಂಬ ಆರೋಪ ಇದೆ. ಇದನ್ನು ಸಂತ್ರಸ್ತೆಯ ಇನ್‌ಸ್ಟಾಗ್ರಾಂನಿಂದ ಪೋಸ್ಟ್ ಮಾಡಲಾಗಿದೆ.

ಭೂ ವ್ಯಾಜ್ಯ, ದ್ವೇಷ, ಹಣಕಾಸು, ಪ್ರೀತಿ ವಿಚಾರಕ್ಕೆ ಕೃತ್ಯ

ನಾಲ್ಕು ತಿಂಗಳಲ್ಲಿ 65 ಕೊಲೆ

• ಕೆ.ಎಸ್.ಸುನಿಲ್

ವರ್ಷ	ಕೊಲೆ	ಪತ್ತೆ	ಕೊಲೆ ಯತ್ನ	ಆರೋಪಿ ಬಂಧನ
2023	206	202	537	526
2024	176	172	450	417



ಬೆಂಗಳೂರು: ಭೂ ವ್ಯಾಜ್ಯ, ದ್ವೇಷ, ಹಣಕಾಸು, ಪ್ರೀತಿ, ಹಠಾತ್ ಜಗಳದ ವಿಚಾರಕ್ಕೆ ಸಂಬಂಧಿಸಿದಂತೆ ನಗರದಲ್ಲಿ ನಾಲ್ಕು ತಿಂಗಳಲ್ಲಿ 65 ಕೊಲೆ ಪ್ರಕರಣಗಳು ನಡೆದಿವೆ.

2023ಕ್ಕೆ ಹೋಲಿಸಿದರೆ 2024ರಲ್ಲಿ ಕೊಲೆ ಪ್ರಕರಣಗಳ ಶೇಕಡ 16ರಷ್ಟು ಕಡಿಮೆಯಾಗಿದೆ. 2023ರಲ್ಲಿ ಕೊಲೆ ಯತ್ನಕ್ಕೆ ಸಂಬಂಧಿಸಿದಂತೆ ದಾಖಲಾದ 537 ಪ್ರಕರಣಗಳ ಪೈಕಿ, 526 ಪ್ರಕರಣಗಳಲ್ಲಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಕಳ್ಳತನ, ಹಲ್ಲೆ, ದರೋಡೆ ಪ್ರಕರಣಗಳ ಜತೆಗೆ ಹಣಕಾಸು ಹಾಗೂ ಪ್ರೀತಿ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆಗಳಲ್ಲಿ ಕೊಲೆ ಪ್ರಕರಣಗಳು ವರದಿಯಾಗುತ್ತಿವೆ.

'ಭೂ ವ್ಯಾಜ್ಯ, ಹಣಕಾಸು ಹಾಗೂ ಪ್ರೀತಿಯ ವಿಚಾರಕ್ಕೆ ನಡೆಯುವ ಜಗಳಗಳು ಕೊಲೆಯಲ್ಲಿ ಅಂತ್ಯಗೊಳುತ್ತಿವೆ. ಇಂತಹ ಪ್ರಕರಣಗಳನ್ನು ತಡೆಗಟ್ಟುವುದು ಕಷ್ಟಸಾಧ್ಯವಾಗಿದೆ. ಅಲ್ಲದೆ, ದ್ವೇಷದ ಕಾರಣಕ್ಕೆ ವ್ಯಕ್ತಿಯ ವಿರುದ್ಧ ಸಂಚು ರೂಪಿಸಿ ಕೊಲೆ ಮಾಡಿರುವ ಘಟನೆಗಳೂ ನಡೆದಿವೆ. ಪ್ರೀತಿಯ ವಿಚಾರ, ಮಹಿಳೆಯೊಬ್ಬರೊಂದಿಗೆ ಸಲುಗೆ, ಮಹಿಳೆ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿರುವ ಪ್ರಕರಣಗಳೂ ದಾಖಲಾಗಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

> ವಿವಿಧ ಕಾರಣಗಳಿಗೆ ಕೊಲೆ ಹಾಗೂ ಕೊಲೆ ಯತ್ನ ಪ್ರಕರಣಗಳು ವರದಿಯಾಗಿವೆ. ಹಲವು ಪ್ರಕರಣಗಳಲ್ಲಿ ಆರೋಪಿಗಳ ಬಂಧನವಾಗಿದೆ. ಪೊಲೀಸ್ ಗಸ್ತು ಹೆಚ್ಚಳ ಸೇರಿ ಹಲವು ಕ್ರಮಗಳ ಮೂಲಕ ಅಪರಾಧ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ
>
> **ಬಿ.ದಯಾನಂದ,** ನಗರ ಪೊಲೀಸ್ ಕಮಿಷನರ್

'ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಜಾಮೀನಿನ ಮೇಲೆ ಹೊರ ಬಂದು ನ್ಯಾಯಾಲಯಕ್ಕೆ ವಿಚಾರಣೆಗೆ ಗೈರಾಗುವ ಆರೋಪಿಗಳನ್ನು ಬಂಧಿಸಲಾಗುತ್ತಿದೆ. ಇವರು ಸಹ ಅಪರಾಧ ಕೃತ್ಯಗಳಲ್ಲಿ ಮತ್ತೆ ಭಾಗಿಯಾಗಿರುವುದು ತನಿಖೆ ವೇಳೆ ಗೊತ್ತಾಗಿದೆ' ಎಂದರು.

'ಪೊಲೀಸ್ ಸಿಬ್ಬಂದಿ, ಹೊಯ್ಸಳ ವಾಹನ ಗಸ್ತು ಹೆಚ್ಚಳ, ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳ ಅಳವಡಿಕೆ, ಹಳೆಯ ಪ್ರಕರಣದ ಆರೋಪಿಗಳ ಬಂಧನ, ರೌಡಿಗಳ ಮೇಲೆ ನಿಗಾ ಹಾಗೂ ಸಾರ್ವಜನಿಕರಿಗೆ ನಿರಂತರ ಜಾಗೃತಿ ಮೂಡಿಸುವ ಮೂಲಕ ಅಪರಾಧ ಚಟುವಟಿಕೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ವಿವರಿಸಿದರು.

ನಗರದಲ್ಲಿ ದಾಖಲಾಗಿರುವ ಕೊಲೆ ಪ್ರಕರಣಗಳ ಪೈಕಿ ಕೆಲವು ನಾಗರಿಕರನ್ನು ಬೆಚ್ಚಿಬೀಳಿಸಿವೆ. ಮಗಳ ಜತೆ ಸಲುಗೆಯಿಂದ ಇರಬೇಡ ಎಂದು ಬುದ್ಧಿ ಹೇಳಿದ ಯುವತಿಯ ತಂದೆ ಸೈಯದ್ ಅಸ್ಲಮ್ (60) ಅವರನ್ನು ಕೆಲಸಗಾರನೇ ಮಾರಕಾಸ್ತ್ರದಿಂದ ಹೊಡೆದು ಕೊಲೆ ಮಾಡಿದ್ದ. ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಆರೋಪಿ ಸೂರ್ಯ ಪ್ರಕಾಶ್‌ನನ್ನು ಕುಮಾರಸ್ವಾಮಿ ಲೇಔಟ್ ಪೊಲೀಸರು ಬಂಧಿಸಿದ್ದರು.

ಸೈಯದ್ ಅಸ್ಲಮ್ ಅವರು ತನ್ನ ಸಹೋದರನ ಟಿಂಬರ್ ಅಂಗಡಿಯ ಮೇಲ್ವಿಚಾರಣೆ ಮಾಡುತ್ತಿದ್ದರು. ಅದೇ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಆರೋಪಿ, ಸೈಯದ್ ಮಗಳೊಂದಿಗೆ ಸಲುಗೆಯಿಂದ ಇರುತ್ತಿದ್ದ. 'ಮಗಳ ತಂಟೆಗೆ ಬರಬೇಡ' ಎಂದು ಆರೋಪಿಗೆ ಎಚ್ಚರಿಸಿದ್ದರು. ಪಾನಮತ್ತನಾಗಿ ಅಂಗಡಿ ಬಳಿ ಬಂದಿದ್ದ ಆರೋಪಿ, ಅಂಗಡಿಯಲ್ಲಿದ್ದ ಮಾರಕಾಸ್ತ್ರದಿಂದ ಹೊಡೆದು ಕೊಲೆ ಮಾಡಿದ್ದ.

ಮತ್ತೊಂದು ಪ್ರಕರಣದಲ್ಲಿ ಮದ್ಯ ಸೇವನೆಗೆ ಹಣ ನೀಡಲು ನಿರಾಕರಿಸಿದ 82 ವರ್ಷದ ತಾಯಿಯನ್ನು ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದು ಮಗ ಸಾಯಿಸಿದ್ದ. ಕೊಲೆ ನಡೆದ ಕೆಲವೇ ಗಂಟೆಗಳಲ್ಲಿ ಆರೋಪಿ ಮಗನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದರು.

ಸೈಬರ್ ವಂಚಕರಿಗೆ ಮಾಹಿತಿ ಮಾರಾಟ

71 ಪಿಒಎಸ್‌ಗಳ ವಿರುದ್ಧ ಸಿಸಿಬಿ ಠಾಣೆಯಲ್ಲಿ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದಾದಾರರ ಮಾಹಿತಿ ಕದ್ದು ಸೈಬರ್ ವಂಚಕರಿಗೆ ನೀಡಿದ್ದ ಆರೋಪದ ಮೇರೆಗೆ ನಗರದ 71 ಪಾಯಿಂಟ್ ಆಫ್ ಸೇಲ್‌ಗಳ (ಪಿಒಎಸ್) ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜಯನಗರದಲ್ಲಿ ಇರುವ ದೂರ ಸಂಪರ್ಕ ಇಲಾಖೆಯ ನಿರ್ದೇಶಕ ಮಧುದಾಸ್ ಅವರು ನೀಡಿದ ದೂರು ಆಧರಿಸಿ, ಪಿಒಎಸ್‌ಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಮಧುಸೂದನ್ ಅವರು ದೂರು ನೀಡಿದ್ದರು. ಈ ದೂರನ್ನು ದಯಾನಂದ ಅವರು ಸಿಸಿಬಿಗೆ ವರ್ಗಾವಣೆ ಮಾಡಿದ್ದರು. ಸಿಸಿಬಿ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದಾಗ, ದೂರ ಸಂಪರ್ಕ ಇಲಾಖೆಯ ಮಾರಾಟ ಪರವಾನಗಿಯ ನಿಬಂಧನೆಗಳ ಮೇಲೆ ಪರವಾನಗಿ ಪಡೆದುಕೊಂಡಿರುವ ಪೂರೈಕೆದಾರರ ಪೈಕಿ, 71 ಪಿಒಎಸ್‌ಗಳು ನಿಬಂಧನೆಗಳನ್ನು ಉಲ್ಲಂಘಿಸಿ ಚಂದಾದಾರರ ಮಾಹಿತಿಗಳನ್ನು ಕಳವು ಮಾಡಿ ಸೈಬರ್ ವಂಚಕರಿಗೆ ವಿತರಿಸುವ ಮೂಲಕ ಅಪರಾಧ ಎಸಗಿರುವುದು ಗೊತ್ತಾಗಿತ್ತು. ನಗರದ ವಿವಿಧೆಡೆಯ ಡೀಲರ್‌ಗಳು ಕೃತ್ಯ ಎಸಗಿರುವುದು ಗೊತ್ತಾದ ಮೇಲೆ ಎಫ್‌ಐಆರ್ ದಾಖಲಿಸಲಾಗಿತ್ತು. ಹೆಚ್ಚುವರಿ ಪೊಲೀಸ್ ಕಮಿಷನರ್ (ಅಪರಾಧ) ಅವರು ಸಿಸಿಬಿ ಇನ್‌ಸ್ಪೆಕ್ಟರ್ ಆರ್. ಸಂತೋಷ್ ರಾಮ್ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ದೂರಸಂಪರ್ಕ ಇಲಾಖೆಯ ಪರವಾನಗಿ ನಿಬಂಧನೆಗಳ ಪ್ರಕಾರ ಪರವಾನಗಿದಾರರು (ಟೆಲಿಕಾಂ ಸೇವಾ ಪೂರೈಕೆದಾರರು) ಫ್ರಾಂಚೈಸಿಯನ್ನು ನೇಮಿಸಬಹುದಾಗಿದೆ. ಇದರ ಅಡಿ ಏಜೆಂಟರ್– ವಿತರಕರು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಪಾಯಿಂಟ್ ಆಫ್ ಸೇಲ್ (ಪಿಒಎಸ್) ಸೇವೆ ಒದಗಿಸಲು ಅನುಮತಿ ನೀಡಲಾಗಿರುತ್ತದೆ. ಹೀಗೆ 289 ಮಾರಾಟ ಪಾಯಿಂಟ್ ಗುರುತಿಸಲಾಗಿತ್ತು. ಅದರ ಪೈಕಿ 71 ಪಾಯಿಂಟ್ ಆಫ್ ಸೇಲ್‌ನ ಪ್ರತಿನಿಧಿಗಳು ಹಾಗೂ ಸಿಬ್ಬಂದಿ ಸೈಬರ್ ವಂಚನೆಯಲ್ಲಿ ಭಾಗಿಯಾದವರಿಗೆ ಸಿಮ್‌ಗಳನ್ನು ಮಾರಾಟ ಮಾಡಿರುವ ಹಾಗೂ ಚಂದಾದಾರರ ಮಾಹಿತಿ ಕಳವು ಮಾಡಿರುವ ಅನುಮಾನವಿದೆ. ತನಿಖೆ ನಡೆಯುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಎಲೆಕ್ಟ್ರಿಕ್ ಸ್ಟೌ, ನಗದು, ಮೊಬೈಲ್ ಪತ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಪೊಲೀಸರು ದಿಢೀರ್ ದಾಳಿ ನಡೆಸಿ, ಪರಿಶೀಲಿಸಿದರು.

'ದಾಳಿಯ ವೇಳೆ ವಿವಿಧ ಬ್ಯಾರಕ್‌ಗಳನ್ನು ಪರಿಶೀಲನೆ ನಡೆಸಲಾಯಿತು. ಒಂದು ಮೊಬೈಲ್, ಎಲೆಕ್ಟ್ರಿಕ್ ಸ್ಟೌ, ಮೊಬೈಲ್ ಚಾರ್ಜರ್ ಹಾಗೂ ₹16 ಸಾವಿರ ನಗದು ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಎಸಿಪಿ, ಐವರು ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ದಾಳಿ ಮಾಡಿ ತಪಾಸಣೆ ನಡೆಸಲಾಯಿತು' ಎಂದು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ತಿಳಿಸಿದರು.

ಪರಪ್ಪನ ಅಗ್ರಹಾರದ ಜೈಲಿನಲ್ಲಿ ಕಳೆದ ತಿಂಗಳು ಕೈದಿಗಳ ಮಧ್ಯೆ ಮಾರಾಮಾರಿ ನಡೆದಿತ್ತು. ಕೈದಿಯೊಬ್ಬನ ಕೈ ಮುರಿದಿತ್ತು. ಇನ್ನೊಂದು ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ವಿಚಾರಣಾಧೀನ ಕೈದಿಯಾಗಿ ಜೈಲಿನಲ್ಲಿರುವ ಮಹಿಳೆ, ಕೊಠಡಿ ಬದಲಾವಣೆಗೆ ತೆರಳಿದ್ದ ವೀಕ್ಷಕಿಯ ಕೈಕಚ್ಚಿದ್ದರು. ಜೈಲಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಜೈಲಿನ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಯಿತು' ಎಂದು ಮೂಲಗಳು ತಿಳಿಸಿವೆ.

ಗ್ರಾಹಕನ ಮೇಲೆ ಡೆಲಿವರಿ ಯುವಕನಿಂದ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಳಾಸ ತಪ್ಪಾಗಿದ್ದಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆಯಲ್ಲಿ ಗ್ರಾಹಕನ ಮೇಲೆ ಡೆಲಿವರಿ ಯುವಕನೊಬ್ಬ ಹಲ್ಲೆ ನಡೆಸಿದ್ದು, ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡೆಲಿವರಿ ಯುವಕ ವಿಷ್ಣುವರ್ಧನ್ ವಿರುದ್ಧ ಗ್ರಾಹಕ ಶಶಾಂಕ್ ಅವರು ದೂರು ನೀಡಿದ್ದಾರೆ. ಹಲ್ಲೆಯಿಂದ ಕಣ್ಣಿಗೆ ಗಾಯವಾಗಿದೆ ಎಂದು ಶಶಾಂಕ್ ಆರೋಪಿಸಿದ್ದಾರೆ.

ಮೇ 21ರಂದು ಆ್ಯಪ್‌ವೊಂದರಲ್ಲಿ ಶಶಾಂಕ್ ಅವರ ಪತ್ನಿ ಆರ್ಡರ್ ಮಾಡಿದ್ದರು. ಡೆಲಿವರಿ ಬಾಯ್ ಬಂದಾಗ ಶಶಾಂಕ್ ಅವರ ನಾದಿನಿ ಸಾಮಗ್ರಿ ತೆಗೆದುಕೊಳ್ಳಲು ಮನೆಯಿಂದ ಹೊರಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ವಿಳಾಸ ತಪ್ಪು ನೀಡಿದ್ದೀರಿ ಎಂದು ಡೆಲಿವರಿ ಯುವಕ ಪ್ರಶ್ನೆ ಮಾಡಿದ್ದ. ಇದೇ ವಿಚಾರಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆಯುತ್ತಿತ್ತು. ಗಲಾಟೆ ನಡೆಯುತ್ತಿರುವುದನ್ನು ಗಮನಿಸಿದ ಶಶಾಂಕ್ ಅವರು ಹೊರಗಡೆ ಬಂದು ಪ್ರಶ್ನೆ ಮಾಡಿದ್ದರು. ಆಗ ಗಲಾಟೆ ವಿಕೋಪಕ್ಕೆ ತಿರುಗಿ ಹಲ್ಲೆ ನಡೆಸಲಾಗಿದೆ. ಹಲ್ಲೆ ನಡೆಸಿದ ದೃಶ್ಯಗಳು ಅದೇ ಮನೆಯಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸದ್ಯ ಈ ಘಟನೆ ಕುರಿತು ಶಶಾಂಕ್ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ಹಲ್ಲೆ ನಡೆಸುತ್ತಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ

ನಾಡ ಪಿಸ್ತೂಲ್ ಮಾರಾಟ: ರೌಡಿ ಶೀಟರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ರಾಜ್ಯದಿಂದ ನಾಡ ಪಿಸ್ತೂಲ್ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಸಮೀರ್ ಬಂಧಿತ ರೌಡಿಶೀಟರ್.

'ಸಮೀರ್ ಕೆ.ಜಿ.ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಶೀಟರ್ ಆಗಿದ್ದು, ದೆಹಲಿಯಲ್ಲಿ ಕಡಿಮೆ ಬೆಲೆಗೆ ನಾಡ ಪಿಸ್ತೂಲ್ ಖರೀದಿಸಿ ನಗರಕ್ಕೆ ತರುತ್ತಿದ್ದ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಯಿತು. ದೆಹಲಿಯಲ್ಲಿ ಕಡಿಮೆ ಬೆಲೆಗೆ ನಾಡ ಪಿಸ್ತೂಲ್ ಖರೀದಿಸಿ, ನಗರಕ್ಕೆ ತರುತ್ತಿದ್ದ. ಇಲ್ಲಿನ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ. ಆರೋಪಿಯಿಂದ ಎರಡು ನಾಡ ಪಿಸ್ತೂಲ್ ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕೊಡಿಗೇಹಳ್ಳಿ ಮೇಲ್ಸೇತುವೆ ರಸ್ತೆಯಲ್ಲಿ ಸರಣಿ ಅಪಘಾತ

ಲಾರಿ ಚಾಲಕ ಸಾವು, ಇಬ್ಬರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆಯಲ್ಲಿ ಶುಕ್ರವಾರ ತಡರಾತ್ರಿ ಸರಣಿ ಅಪಘಾತ ಸಂಭವಿಸಿದ್ದು, ಘಟನೆಯಲ್ಲಿ ಲಾರಿ ಚಾಲಕ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ.

ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮೇಲ್ಸೇತುವೆಯಲ್ಲಿ ಘಟನೆ ನಡೆದಿದೆ. ಕಸ ತುಂಬಿದ್ದ ಲಾರಿಯ ಮೇಲೆ ಕಲ್ಲು ಸಾಗಿಸುತ್ತಿದ್ದ ಟ್ರಕ್ ಪಲ್ಟಿಯಾಗಿದೆ. ಲಾರಿ ಚಾಲಕ, ಬಿಹಾರದ ಫಯಾಜ್ ಅಹಮ್ಮದ್ (25) ಮೃತಪಟ್ಟಿದ್ದಾರೆ. ಇದೇ ವೇಳೆ ಹಿಂದಿನಿಂದ ಬರುತ್ತಿದ್ದ ಕಾರು ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಮೂರು ವಾಹನಗಳು ಜಖಂಗೊಂಡಿವೆ.

ಗಾಯಗೊಂಡಿರುವ ಟ್ರಕ್ ಚಾಲಕ ಹಾಗೂ ಕ್ಲೀನರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿಮಾನ ನಿಲ್ದಾಣದಿಂದ ನಗರಕ್ಕೆ ಬರುವ ಮಾರ್ಗದಲ್ಲಿ ಬಿಬಿಎಂಪಿ ಕಸ ಸಂಗ್ರಹಿಸುವ ಲಾರಿ ಕೆಟ್ಟು ನಿಂತಿತ್ತು. ಈ ವೇಳೆ ಕಸದ ಲಾರಿಗೆ ಕಲ್ಲು ಸಾಗಿಸುತ್ತಿದ್ದ 10 ಚಕ್ರದ ಲಾರಿ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಆಗ ಲಾರಿ ಕೆಳಗೆ ಸಿಲುಕಿ ಫಯಾಜ್ ಮೃತಪಟ್ಟರು.

ಹೆಬ್ಬಾಳ ಮೇಲ್ಸೇತುವೆಯಲ್ಲಿ ಸರಣಿ ಅಪಘಾತ

ಘಟನಾ ಸ್ಥಳಕ್ಕೆ ಆಗಮಿಸಿದ ಹೆಬ್ಬಾಳ ಸಂಚಾರ ಪೊಲೀಸರು, ವಾಹನಗಳನ್ನು ತೆರವುಗೊಳಿಸಿದರು. ಚಾಲಕನ ಮೃತ ದೇಹವನ್ನು ಅಂಬೇಡ್ಕರ್ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪೊಲೀಸರು ಕ್ರೇನ್ ಬಳಸಿ ರಸ್ತೆ ಮೇಲೆ ಬಿದ್ದಿದ್ದ ಕಲ್ಲುಗಳು ಹಾಗೂ ವಾಹನಗಳನ್ನು ತೆರವು ಮಾಡಿಸಿದರು. ತಾತ್ಕಾಲಿಕವಾಗಿ ಸರ್ವಿಸ್ ರಸ್ತೆಯಲ್ಲಿ ಪರ್ಯಾಯ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬೆಳಗಿನ ಜಾವ 5.30ರ ಬಳಿಕ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಮೃತನ ಸ್ನೇಹಿತ ಶಹಬಾಜ್ ಮಾತನಾಡಿ, 'ಮೇಲ್ಸೇತುವೆಯಲ್ಲಿ ಕಸ ಸಾಗುವಾಗ ವಾಹನ ಕೆಟ್ಟು ನಿಂತಿತ್ತು. ಹಿಂದಿನಿಂದ ಬಂದ ಟ್ರಕ್ ಡಿಕ್ಕಿ ಹೊಡೆಯಿತು. ಫಯಾಜ್ ಮೂರು ವರ್ಷದಿಂದ ಲಾರಿ ಓಡಿಸುತ್ತಿದ್ದರು' ಎಂದು ತಿಳಿಸಿದರು.

ಕಾರು ಚಾಲಕ ಸುನಿಲ್ ಮಾತನಾಡಿ, 'ಕಸದ ಲಾರಿ ರಸ್ತೆಯ ಬಲಬದಿ ನಿಂತಿತ್ತು. ಕಲ್ಲು ಸಾಗಿಸುತ್ತಿದ್ದ ಟ್ರಕ್ ಚಾಲಕನಿಗೆ ಲಾರಿ ನಿಂತಿರುವುದು ಕಾಣಿಸಲಿಲ್ಲ. ಹತ್ತಿರ ಬಂದು ಬ್ರೇಕ್ ಹಾಕಿದ್ದು, ವಾಹನ ನಿಯಂತ್ರಣಕ್ಕೆ ಸಿಗದೆ ಡಿಕ್ಕಿ ಹೊಡೆದಿದೆ. ಆಗ ನಾನು ಹಿಂದಿನಿಂದ ಕಾರಿನಲ್ಲಿ ಬರುತ್ತಿದ್ದೆ. ಅಪಘಾತದ ರಭಸಕ್ಕೆ ಲಾರಿಯ ಕಲ್ಲುಗಳು ರಸ್ತೆಗೆ ಬಿದ್ದವು. ಕಾರು ನಿಯಂತ್ರಣ ತಪ್ಪಿ, ಮೇಲ್ಸೇತುವೆ ತಡೆಗೋಡೆ ಮೇಲೆ ಹತ್ತಿತ್ತು. ಬಳಿಕ ಕಾರಿನಲ್ಲಿದ್ದವರನ್ನು ಕೆಳಗೆ ಇಳಿಸಲಾಯಿತು' ಎಂದು ಹೇಳಿದರು.

ಬಂದೋಬಸ್ತ್ ಕರ್ತವ್ಯ: ಆಹಾರ ಭತ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂದೋಬಸ್ತ್ ಕರ್ತವ್ಯಗಳಿಗೆ ನಿಯೋಜಿಸುವ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ ಪಾವತಿಸುತ್ತಿರುವ ಆಹಾರ ಭತ್ಯೆಯನ್ನು ₹ 200ರಿಂದ ₹ 300ಕ್ಕೆ ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಹಬ್ಬದ ದಿನಗಳು, ವಿಶೇಷ ಹಾಗೂ ಚುನಾವಣಾ ಸಂದರ್ಭದಲ್ಲಿ ಬಂದೋಬಸ್ತ್‌ಗೆಂದು ಬೇರೆ ಬೇರೆ ಕಡೆಯ ಪೊಲೀಸ್ ಸಿಬ್ಬಂದಿಯನ್ನು ಕರ್ತವ್ಯಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಈ ರೀತಿ ಕರ್ತವ್ಯಕ್ಕೆ ನಿಯೋಜಿಸಿದವರಿಗೆ ಆಹಾರದ ಭತ್ಯೆ ನೀಡಲಾಗುತ್ತಿದೆ.

ಈ ಹಿಂದೆ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದ ಪೊಲೀಸ್ ಸಿಬ್ಬಂದಿಗೆ ನೀಡಲಾಗಿದ್ದ ಆಹಾರದಲ್ಲಿ ಜಿರಳೆ ಮತ್ತು ಹುಳುಗಳು ಪತ್ತೆಯಾಗಿದ್ದವು. ಇದರಿಂದ ಸಿಬ್ಬಂದಿ ತೀವ್ರ ಬೇಸರ ಹೊರಹಾಕಿದ್ದರು.

'ಸರ್ಕಾರ ಈಗ ಆಹಾರದ ಭತ್ಯೆಯನ್ನು ಹೆಚ್ಚಿಸಿದೆ. ಇನ್ನಾದರೂ ಗುಣಮಟ್ಟದ ಆಹಾರವನ್ನು ಪೂರೈಸಬೇಕು' ಎಂದು ಪೊಲೀಸ್ ಸಿಬ್ಬಂದಿ ಆಗ್ರಹಿಸಿದ್ದಾರೆ.

ಬೀದಿ ನಾಯಿ ಹಿಂಡು ದಾಳಿ: ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ತಿಪಟೂರು: ತಾಲ್ಲೂಕಿನ ಅಯ್ಯನಬಾವಿ ಭೋವಿ ಕಾಲೊನಿಯಲ್ಲಿ ಬಾಲಕಿಯೊಬ್ಬಳ ಮೇಲೆ ಬೀದಿ ನಾಯಿಗಳ ಹಿಂಡು ದಾಳಿ ನಡೆಸಿದ್ದು, ಬಾಲಕಿ ನವ್ಯಾ (6) ಮೃತಪಟ್ಟಿದ್ದಾಳೆ.

ಶನಿವಾರ ಸಂಜೆ 4ಗಂಟೆ ಸಮಯದಲ್ಲಿ ಬಾಲಕಿ ಬೀದಿಯಲ್ಲಿ ಆಟವಾಡುವಾಗ ಏಕಾಏಕಿ ದಾಳಿ ನಡೆಸಿದ ಐದು ನಾಯಿಗಳ ಹಿಂಡು, ತಲೆ ಹಾಗೂ ಹೊಟ್ಟೆ ಭಾಗವನ್ನು ಕಚ್ಚಿ ತೀವ್ರವಾಗಿ ಗಾಯಗೊಳಿಸಿವೆ. ತಲೆ ಚರ್ಮ ಸಂಪೂರ್ಣವಾಗಿ ಕಿತ್ತು ಬಂದಿದೆ. ಹೊಟ್ಟೆ ಭಾಗ ಕಿತ್ತು ಕರುಳು ಆಚೆ ಬಂದಿದೆ. ಕೈ, ಕಾಲು ತೊಡೆ ಭಾಗದಲ್ಲೂ ತೀವ್ರ ಗಾಯಗಳಾಗಿವೆ.

ನವ್ಯಾ

ರಕ್ತದ ಮಡುವಿನಲ್ಲಿದ್ದ ಬಾಲಕಿಯನ್ನು ಕಂಡ ಸಾರ್ವಜನಿಕರು ನಾಯಿಗಳನ್ನು ಓಡಿಸಿ ಹಾಸನ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾಳೆ.

ಯಾದಗಿರಿ ಕಾಂಗ್ರೆಸ್ ಕಚೇರಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಯಾದಗಿರಿ: ನಗರದ ಕನಕ ವೃತ್ತದ ಸಮೀಪದ ಜಿಲ್ಲಾ ಕಾಂಗ್ರೆಸ್ ಕಚೇರಿ ಕಟ್ಟಡದ ಬಾಗಿಲು ಮತ್ತು ಕಿಟಕಿಗೆ ಇಬ್ಬರು ಆರೋಪಿಗಳು ಪೆಟ್ರೋಲ್ ಸುರಿದು ಶನಿವಾರ ಬೆಳಗಿನ ಜಾವ ಬೆಂಕಿ ಹಚ್ಚಿದ್ದು, ಹವಾನಿಯಂತ್ರಣ ಉಪಕರಣ, ಸೋಫಾ ಮತ್ತು ಕುರ್ಚಿಗಳು ಸುಟ್ಟು ಹೋಗಿವೆ.

ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷರಾಗಿ ಮಂಜುಳಾ ಗೂಳಿ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಅವರ ಸ್ಥಾನಕ್ಕೆ ಬೇರೊಬ್ಬರ ನೇಮಿಸಿದ್ದರಿಂದ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಬೆಂಕಿ ಹಚ್ಚಲಾಗಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಶಂಕರ ಗೂಳಿ ಎಂಬುವವನ್ನು ವಶಕ್ಕೆ ಪಡೆಯಲಾಗಿದೆ. ಮತ್ತೊಬ್ಬರಿಗಾಗಿ ಹುಡುಕಾಟ ನಡೆಸಲಾಗಿದೆ. ಕಾಂಗ್ರೆಸ್ ಕಚೇರಿ ಎದುರಿಗಿನ ಅಂಗಡಿಯ ಅಲ್ಲಿದ್ದ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ಮಾಡಿದಾಗ ಶನಿವಾರ ಬೆಳಗಿನ ಜಾವ 1.30ರ ಸುಮಾರಿಗೆ ಇಬ್ಬರು ಬಿಳಿ ಬಣ್ಣದ ಬೈಕ್ ಮೇಲೆ ಕಚೇರಿಗೆ ಬಂದು ಕಿಟಕಿ ಮೂಲಕ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದು ಕಂಡು ಬಂದ ಹಿನ್ನಲೆಯಲ್ಲಿ ಜಾಲ ಬೀಸಿ ಬಂಧಿಸಲಾಗಿದೆ.

ಯಾದಗಿರಿ ಜಿಲ್ಲಾ ಕಾಂಗ್ರೆಸ್ ಕಚೇರಿಯ ಸೋಫಾ, ಕುರ್ಚಿ ಸುಟ್ಟಿದೆ

ಪ್ರಾಣ ಹಾನಿ ಸಂಭವಿಸಿಲ್ಲ. ಕಟ್ಟಡದ ಆವರಣದ ಟೇಬಲ್ ಮೇಲೆ 20 ಲೀಟರ್ ಕ್ಯಾನ್ ಇದ್ದು, ಇದು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಸಿಬ್ಬಂದಿ ಶನಿವಾರ ಕಚೇರಿ ತೆರೆದಾಗ ಕೃತ್ಯ ಗೊತ್ತಾಗಿದೆ. ಪಕ್ಷದ ಪದಾಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಘಟನೆಗೆ ಕಾರಣ ತಿಳಿದು ಬಂದಿಲ್ಲ. ₹4 ಲಕ್ಷದಿಂದ ₹5 ಲಕ್ಷ ಮೌಲ್ಯದ ಸಾಮಗ್ರಿ ಸುಟ್ಟಿವೆ. ಕಿಡಿಗೇಡಿಗಳನ್ನು ಪತ್ತೆ ಹಚ್ಚಬೇಕು ಎಂದು ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಬಸರೆಡ್ಡಿ ಅನಪುರ ನಗರ ಠಾಣೆಗೆ ದೂರು ನೀಡಿದ್ದರು.

ಕಾರು ನಿಲ್ಲಿಸದೆ ತೆರಳಿದ ಲಕ್ಷ್ಮಿ ಹೆಬ್ಬಾಳಕರ

ಬಿಜೆಪಿ ಬಾಗಿನ ನಿರಾಕರಿಸಿದ ಸಚಿವೆ ಲಕ್ಷ್ಮಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಬೆಳಗಾವಿ ಅಧಿವೇಶನದಲ್ಲಿ ಸಿ.ಟಿ ರವಿ ಜೊತೆ ನಡೆದ ಜಟಾಪಟಿ ನಂತರ ಶನಿವಾರ ಮೊದಲ ಬಾರಿ ನಗರಕ್ಕೆ ಭೇಟಿ ನೀಡಿದ್ದ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತೆಯರು ಬಾಗಿನ ನೀಡಲು ಮುಂದಾದರು.

ಈ ವಿಷಯ ತಿಳಿದ ಸಚಿವೆ ಕಾರು ನಿಲ್ಲಿಸದೆ ತೆರಳಿ ಬಾಗಿನ ನಿರಾಕರಿಸಿದರು. ಗ್ಯಾರಂಟಿ ಸಮಾವೇಶ ಮತ್ತು ಲಿಂಗಾಯತ ಸಮಾಜ ಆಯೋಜಿಸಿದ್ದ ರೇಣುಕಾಚಾರ್ಯ ಜಯಂತಿಯಲ್ಲಿ ಭಾಗವಹಿಸಲು ಶನಿವಾರ ನಗರಕ್ಕೆ ಲಕ್ಷ್ಮಿ ಹೆಬ್ಬಾಳಕರ ಭೇಟಿ ನೀಡಿದ್ದರು.

ಬಿಜೆಪಿ ಕಾರ್ಯಕರ್ತೆಯರು ಅರಿಸಿನ-ಕುಂಕುಮ, ಹೂ, ಕಾಯಿ, ಎಲೆ, ಅಕ್ಕಿ-ಬೆಲ್ಲ, ಬಾಳೆಹಣ್ಣು, ಲಕ್ಷ್ಮಿ ವಿಗ್ರಹ ಹಿಡಿದು ಪ್ರವಾಸಿ ಮಂದಿರದ ಗೇಟ್ ಬಳಿ ಮೂರು ತಾಸಿಗೂ ಹೆಚ್ಚು ಕಾದಿದ್ದರು. ಅದೇ ಮಾರ್ಗದಲ್ಲಿ ಸಾಗಿದ ಸಚಿವೆ ಕಾರಿನಿಂದ ಇಳಿಯದೆ ಹೋದರು.

ಅಸಮಾಧಾನಗೊಂಡ ಕಾರ್ಯಕರ್ತೆಯರು 'ನಮ್ಮೂರಿಗೆ ಬಂದ ಹೆಣ್ಣು ಮಗಳಿಗೆ ಹಿಂದೂ ಸಂಪ್ರದಾಯದಂತೆ ಅರಿಸಿನ-ಕುಂಕುಮ ನೀಡಲು ಹೋಗಿದ್ದೆವು. ಬಾಗಿನ ಬಿಟ್ಟು ಹೋಗಿದ್ದಾರೆ. ಇದು ಅವರಿಗೆ ಶೋಭೆ ತರುವುದಿಲ್ಲ' ಎಂದರು.

ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಬಾಗಿನ ನೀಡಲು ಕಾದು ನಿಂತ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಂತೆ ಕುಂಕುಮ ಕಂಡರೆ ಇವರಿಗೂ ಭಯ ಇರಬಹುದು. ಅವರ ಮನೆಗೆ ಹೆಣ್ಣು ಮಕ್ಕಳು ಹೋದರೆ ಅವರಿಗೆ ಅರಿಶಿನ- ಕುಂಕುಮ ಕೊಡುವುದಿಲ್ಲ ಎನ್ನಿಸುತ್ತದೆ' ಎಂದು ನಗರಸಭೆ ಸದಸ್ಯೆ ಕವಿತಾ ಶೇಖರ್ ಹೇಳಿದರು.

ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು. ಬೋಳರಾಮೇಶ್ವರ ದೇಗುಲದಿಂದ ಎಐಟಿ ವೃತ್ತದವರೆಗೆ ಬೈಕ್ ಜಾಥಾ ನಡೆಸಿದರು.

> ಸದನದಲ್ಲಿ ಮರ್ಯಾದೆ ಕಳೆದು, ಮಾಡಬಾರದ ಅವಮಾನ ಮಾಡಿದ್ದಾರೆ. ಈಗ ಸೋಗಿನ ಬಾಗಿನದ ಅವಶ್ಯಕತೆ ನನಗೆ ಇಲ್ಲ
>
> **ಲಕ್ಷ್ಮಿ ಹೆಬ್ಬಾಳಕರ**
> ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ಈ ವೇಳೆ ಮಾತನಾಡಿದ ಸಚಿವೆ, 'ಬೆಳಗಾವಿ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಖಂಡನೀಯ. ಇದು ಅಕ್ಷಮ್ಯ ತಪ್ಪು. ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಸಂತ್ರಸ್ತೆಯ ಕುಟುಂಬದ ಜೊತೆ ನಿರಂತರ ಸಂಪರ್ಕದಲ್ಲಿದ್ದೇನೆ' ಎಂದರು.

ಬ್ಯಾಂಕ್‌ಗೆ ₹ 2.74 ಕೋಟಿ ಸಾಲ ಮರುಪಾವತಿಸದೆ ವಂಚನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಟೆಕ್ಸ್‌ಟೈಲ್ ಯಂತ್ರೋಪಕರಣ ಖರೀದಿಸುವುದಾಗಿ ಬ್ಯಾಂಕ್‌ನಿಂದ ₹ 3.50 ಕೋಟಿ ಸಾಲ ಪಡೆದು ಅದನ್ನು ಸ್ವಂತಕ್ಕೆ ಬಳಸಿಕೊಂಡು ₹ 2.74 ಕೋಟಿ ಸಾಲವನ್ನು ಮರುಪಾವತಿಸದೆ ವಂಚಿಸಿದ ಆರೋಪದಡಿ ಯಂತ್ರೋಪಕರಣಗಳ ಪೂರೈಕೆ ಕಂಪನಿ ಸೇರಿ ನಾಲ್ವರ ವಿರುದ್ಧ ನಗರದ ಸೈಬರ್, ಆರ್ಥಿಕ ಮತ್ತು ಮಾದಕವಸ್ತು ತಡೆ (ಸೆನ್) ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆನರಾ ಬ್ಯಾಂಕ್ ಪ್ರಾದೇಶಿಕ ಶಾಖೆಯ ಸಹಾಯಕ ಜನರಲ್ ಮ್ಯಾನೇಜರ್ ನೀಡಿದ ದೂರಿನ ಅನ್ವಯ ಧನಲಕ್ಷ್ಮಿ ಟೆಕ್ಸ್‌ಟೈಲ್ ಮಾಲೀಕರಾದ ಚಂದ್ರಕಲಾ ನಾಗರಾಜ, ಬಸವರಾಜ ಮರತೂರ, ವಿಶಾಖಪಟ್ಟಣದ ಯಂತ್ರಪೂರೈಕೆಯ ವಿಲ್ ಬ್ಯೂರ್ ಮಷಿನ್ ಕಂಪನಿ ಮತ್ತು ಬಾಲಾಜಿ ಗಾರ್ಮೆಂಟ್ಸ್‌ನ ವಿಜಯಕುಮಾರಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಸಾಲ ಪಡೆದು 18 ತಿಂಗಳು ಕಳೆದರೂ ಮಾಲೀಕರು ಸಾಲದ ಕಂತು ಪಾವತಿಸಿರಲಿಲ್ಲ. ಬ್ಯಾಂಕ್ ಸಿಬ್ಬಂದಿ ಟೆಕ್ಸ್‌ಟೈಲ್‌ನ ಸ್ಥಳಕ್ಕೆ ತೆರಳಿದ್ದಾಗ ಯಂತ್ರೋಪಕರಗಳನ್ನು ಖರೀದಿಸದೆ ಅನ್ಯ ಕಾರ್ಯಕ್ಕೆ ಸಾಲದ ₹ 3.50 ಕೋಟಿ ಬಳಸಿದ್ದು ಗೊತ್ತಾಗಿದೆ. ಕೆಲವು ಕಂತುಗಳನ್ನು ಮರುಪಾವತಿಸಿದ ಆರೋಪಿಗಳು, ಆ ಬಳಿಕ ₹ 2.74 ಕೋಟಿಯನ್ನು ಬ್ಯಾಂಕ್‌ಗೆ ಕಟ್ಟದೆ ವಂಚಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಾರಧಿ: ಅಧ್ಯಕ್ಷತೆ: ರಾಧಾಕೃಷ್ಣರಾಜು, ಅತಿಥಿಗಳು: ಗೋಪಿನಾಥ್, ನರಸಿಂಹ ರಾಜು, ಕೆ.ಎಸ್. ರಾಜಗೋಪಾಲ ನಾಯ್ಡು, ತಾರಾ ಅನುರಾಧಾ, ಆರ್. ರವಿಚಂದರ್, ಆಯೋಜನೆ: ಫೆಡರೇಶನ್ ಆಫ್ ತೆಲುಗು ಅಸೋಸಿಯೇಷನ್ಸ್ ಆಫ್ ಮಹಾರಾಷ್ಟ್ರ, ತೆಲುಗು ವಿಜ್ಞಾನ ಸಮಿತಿ, ಸ್ಥಳ: ಕೃಷ್ಣದೇವರಾಯ ಕಲಾಮಂದಿರ, ವೈಯಾಲಿ ಕಾವಲ್, ಬೆಳಿಗ್ಗೆ 10

ಚುಟುಕು ವಾಚನ ಸ್ಪರ್ಧೆ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಮಹೇಶ ಜೋಶಿ, ಅತಿಥಿಗಳು: ಷಡಕ್ಷರಿ, ವೈ.ಎನ್. ಗುಂಡೂರಾವ್, ಲಕ್ಷ್ಮಿಪತಯ್ಯ, ಎಸ್.ಆರ್. ವಿಜಯ ಸಮರ್ಥ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು, ಸ್ಥಳ: ಕುವೆಂಪು ಸಭಾಂಗಣ, ಮೂರನೇ ಮಹಡಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

ಬಸವರಾಜ ಯಲಿಗಾರ ಅವರು ಇಂಗ್ಲಿಷ್‌ಗೆ ಅನುವಾದಿಸಿರುವ 'ಮೈ ಮೀ ಇಸ್ ದೀ (ನನ್ನೊಳಗಿನ ನಾನು ನೀನೇ)' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಜಂಬುನಾಥ ಮಳಿಮಠ, ಪುಸ್ತಕ ಬಿಡುಗಡೆ: ಬಿ.ಎಸ್. ಪಾಟೀಲ, ಅಧ್ಯಕ್ಷತೆ: ಶಂಕರ ಬಿದರಿ, ಉದ್ಘಾಟನೆ: ಟಿ.ಎಸ್. ನಾಗಾಭರಣ, ಅಲೋಕ ಕುಮಾರ್, ಸಂದೀಪ ಪಾಟೀಲ, ಪದ್ಮಿನಿ ನಾಗರಾಜು, ಸಂಜೀವ ಎನ್. ಪಾಟೀಲ, ಬಿ. ನಾಗನಗೌಡ, ವೀರೇಶ ಹಿರೇಮಠ, ಪುಸ್ತಕ ಪರಿಚಯ: ರಾಜಶೇಖರ ಮಠಪತಿ, ಆಯೋಜನೆ: ಅಮ್ಮ ಪ್ರಕಾಶನ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಶ್ರೇಯಾ ಎಸ್. ಶ್ರೀನಾಥ, ಅತಿಥಿಗಳು: ಪದ್ಮಜಾ ವೆಂಕಟೇಶ್ ಸುರೇಶ್, ಪದ್ಮಾ ಗುರುದತ್, ಇಂದಿರಾ ಕದಂಬಿ, ಆಯೋಜನೆ: ಆತ್ಮಾಲಯ ಅಕಾಡೆಮಿ, ಸ್ಥಳ: ವಿವೇಕ್ ಸಭಾಂಗಣ, 31ನೇ ಅಡ್ಡರಸ್ತೆ, ನಾಲ್ಕನೇ 'ಟಿ' ಬ್ಲಾಕ್ ಪೂರ್ವ, ನಾಲ್ಕನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.15

ಸಾಹಿತ್ಯ, ರಂಗಭೂಮಿ, ಸಂಗೀತದ ಮಿಲನೋತ್ಸವ: ಭಾಗವಹಿಸುವವರು: ವಿವೇಕ್ ಶಾನಭಾಗ್, ಶರವಣ ಸರ್ವಿಸಸ್, ಸುಂದರ್, ಗೀತಾ ವಸಂತ, ಪ್ರವೀಣ್ ಡಿ. ರಾವ್, ಅರುಂಧತಿ ವಸಿಷ್ಠ, ಗುರುಮೂರ್ತಿ ವೈದ್ಯ, ಸುನೀಲ್ ಕುಮಾರ್ ಸಿಂಗ್, ಆಯೋಜನೆ: ತಾರಅರೇನಾ, ಸ್ಥಳ: ಸನಾತನ ಕಲಾಕ್ಷೇತ್ರ, ನಾಲ್ಕನೇ ಬಡಾವಣೆ, ಜಯನಗರ, ಬೆಳಿಗ್ಗೆ 10.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಶ್ರೀನಿಧಿ ನಾಗರಾಜ್, ಅತಿಥಿಗಳು: ಕಣ್ಣನ್ ಸ್ವಾಮಿ, ರೂಪಶ್ರೀ ಮಧುಸೂದನ್, ಕಿರಣ್ ಎಂ. ಗೌಡ್, ಸಾಧನಾಶ್ರೀ ಪಿ., ಆಯೋಜನೆ: ರಾಗಿಣಿ ಸಂಗೀತ ನೃತ್ಯಾಲಯ, ಸ್ಥಳ: ಸರ್ ಪುಟ್ಟಣ್ಣಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9.30


ಶ್ರೀನಿಧಿ ನಾಗರಾಜ್

ನಾ. ದಾಮೋದರ ಶೆಟ್ಟಿ ಅವರ 'ಕರಿಮಾಯಿ ಗುಡ್ಡ', ಜಯಪ್ರಕಾಶ ಮಾವಿನಕುಳಿ ಅವರ 'ಪ್ರಾಣಪಕ್ಷಿಯ ಅರಸುತ್ತಾ', ಎನ್.ಸಿ. ಮಹೇಶ್ ಅವರ 'ಅಗೆಲು', ಕೆ.ಎಂ. ವಿಜಯಲಕ್ಷ್ಮಿ ಅವರು ಸಂಪಾದಿಸಿರುವ 'ಪರ್ವತವಾಣಿ ಅವರ ಇಷ್ಟಾರ್ಥ ಮತ್ತು ಇತರ ನಾಟಕಗಳು', ಪರ್ವತವಾಣಿ ಅವರ ವಾರ್ಷಿಕೋತ್ಸವ ಮತ್ತು ಇತರ ನಾಟಕಗಳು' ಪುಸ್ತಕಗಳ ಬಿಡುಗಡೆ: ಜೋಗಿ, ಅತಿಥಿಗಳು: ಎಂ.ಎಸ್. ನರಸಿಂಹಮೂರ್ತಿ, ಸಂಧ್ಯಾರಾಣಿ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30ರಿಂದ

ರಾಜು ಗಾನೋತ್ಸವ: ಅತಿಥಿಗಳು: ಸುದರ್‌ರಾಜ್, ವೇಲು, ಬಿ.ಕೆ. ಶಿವರಾಮ್, ಅರುಣ್ ಸಾಗರ್, ಆಯೋಜನೆ: ನಾಕುತಂತಿ ಸಂಗೀತ ಗುಚ್ಛ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ರೇಣುಕಾಚಾರ್ಯರ ಮತ್ತು ಬಸವೇಶ್ವರರ ಜಯಂತಿ: ಸಾನ್ನಿಧ್ಯ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಬಿ.ಎಸ್. ಪರಮಶಿವಯ್ಯ, ಆಯೋಜನೆ: ಸೋಮೇಶ್ವರಸ್ವಾಮಿ ವೀರಶೈವ ಸಮಾಜ ಸೇವಾ ಸಂಘ, ಸ್ಥಳ: ಅರುಣಾಚಲೇಶ್ವರಸ್ವಾಮಿ ಪ್ರಾರ್ಥನಾ ಮಂದಿರ, ಅರಳೇಪೇಟೆ ಮುಖ್ಯರಸ್ತೆ, ಬೆಳಿಗ್ಗೆ 11ರಿಂದ

ತಾಳಮದ್ದಳೆ: ಮಧ್ಯಾಹ್ನ 2.30ರಿಂದ 'ಕರ್ಮಬಂಧ' ತಾಳಮದ್ದಳೆ ಪ್ರದರ್ಶನ, ಸಂಜೆ 6.30ರಿಂದ 'ಶಲ್ಯ ಸಾರಥ್ಯ', ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ

ಕನ್ನಡ ಗೀತೋತ್ಸವ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಆರ್.ಕೆ. ನಲ್ಲೂರು ಪ್ರಸಾದ್, ಪ್ರಶಸ್ತಿ ಪ್ರದಾನ: ಸಿ. ಜಯಲಕ್ಷ್ಮಿ, ಅತಿಥಿಗಳು: ಗೋವಿಂದಹಳ್ಳಿ ಕೃಷ್ಣೇಗೌಡ, ಮಂಜುನಾಥ ಮಧುಕವಿ, ರುದ್ರಪ್ಪ ಪಿ., ಅಚ್ಯುತ ಸಂಕೇತಿ, ಖಾದರ್ ಮಾ. ಅಲ್ಲಿಖಾನವರ್, ಪ್ರಶಸ್ತಿ ಸ್ವೀಕರಿಸುವವರು: ಚೆಲುವರಾಜು ಬಿ.ಎ., ಚಂದ್ರಶೇಖರಯ್ಯ, ಅನಿತಾ ಎಸ್., ರವಿಕುಮಾರ್, ಪದ್ಮಾವತಿ ಟಿ.ಎಂ., ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ' ಭಾವಗೀತೆಗಳ ನುಡಿ–ನಮನ, ಕರೋಕೆ ಗಾಯನ: ಪಿ.ಆರ್. ಶ್ರೀನಿವಾಸನ್, ಸಂಗೀತಾ ಸುಧೀಂದ್ರ, ಸಿರಿ ಚಂದ್ರಶೇಖರ್, ಆಯೋಜನೆ: ವಿಜಯಚಂದ್ರಿಕಾ ಸಂಗೀತ್ ಚಂದನ್, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಮಧ್ಯಾಹ್ನ 3.30

33ನೇ ವಾರ್ಷಿಕ ದಕ್ಷಿಣ ಭಾರತ ನಾಣ್ಯಶಾಸ್ತ್ರ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ: ಅತಿಥಿಗಳು: ಬಿಪಿನ್ ಚಂದ್ರ ನೇಗಿ, ಡಿ. ರಾಜ ರೆಡ್ಡಿ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 4

'ಕಲಾಯೋಗಿ ಪ್ರಶಸ್ತಿ' ಪ್ರದಾನ: ಅತಿಥಿಗಳು: ಮಾಲಾ ಶಶಿಕಾಂತ್, ಎಚ್.ಎಸ್. ವೇಣುಗೋಪಾಲ್, ಕೆ. ಮೋಹನ್ ದೇವ ಆಳ್ವ, ಶ್ರೀನಿವಾಸಮೂರ್ತಿ, ಪ್ರಶಸ್ತಿ ಸ್ವೀಕರಿಸುವವರು: ಮಿಥುನ್ ಶ್ಯಾಂ, ಗಾಯತ್ರಿ ಚಂದ್ರಶೇಖರ್, ಹೇಮಂತ್ ಕುಮಾರ್ ಬಿ.ಆರ್., ಪದ್ಮ ಹೇಮಂತ್, ರಘುನಂದನ್ ಆರ್. ಗೋಪಾಲ್ ವಿ., ಜಿ.ಎಸ್. ನಾಗರಾಜ್, ಆಯೋಜನೆ: ಕಲಾಯೋಗಿ ಪ್ರತಿಷ್ಠಾನ, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 4

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಹನಾ ಕೌಶಿಕ್, ಉಪಸ್ಥಿತಿ: ಪಾರ್ವತಿ ರವಿ ಘಂಟಸಾಲ, ಶುಭಾ ಧನಂಜಯ, ಆಯೋಜನೆ: ಸೂರ್ಯ ಕಲಾ ಪ್ರದರ್ಶನ ಶಾಲೆ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4.25

ಸಹನಾ ಕೌಶಿಕ್

ಗಾಯತ್ರಿ ನಿವೇದ ಆರ್. ಅವರ 'ದಿ ಮೂನ್‌ಫ್ಲವರ್ ಪ್ಯಾರಡಾಕ್ಸ್' ಪುಸ್ತಕ ಬಿಡುಗಡೆ: ಅತಿಥಿಗಳು: ಎಚ್.ಕೆ. ರಾಮರಾಜು, ಬಿ. ಶ್ರೀನಿವಾಸ ರೆಡ್ಡಿ, ಎಚ್.ಕೆ. ಗೋಪಾಲಕೃಷ್ಣ, ಸ್ಥಳ: ಐಡಬ್ಲ್ಯೂಡಬ್ಲ್ಯೂ ಬಿಲ್ಡಿಂಗ್, ಎರಡನೇ ಹಂತ, ಬಿಟಿಎಂ ಲೇಔಟ್, ಸಂಜೆ 5

'ಬೀಚಿ ರಸಾಯನ' ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ: ಎನ್.ಸಿ. ಮಹೇಶ್, ಆಯೋಜನೆ: ಡ್ರಾಮಾಟ್ರಿಕ್ಸ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಅಪ್ಪನ ಪ್ರೀತಿ, ದ್ರಾವಿಡ್ ಗರಡಿಯಲ್ಲಿ ಅರಳಿದ ಪ್ರತಿಭೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಏಳು ವರ್ಷಗಳ ಹಿಂದಿನ ಮಾತು. ನಗರದ ಹೊರವಲಯದಲ್ಲಿ ರುವ ಆಲೂರಿನ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದ ಮರವೊಂದರ ಕೆಳಗೆ ಮಧ್ಯವಯಸ್ಸಿನ ವ್ಯಕ್ತಿಯೊಬ್ಬರು ನಿಂತಿದ್ದರು. ಅವರ ಮುಖದಲ್ಲಿ ಬಳಲಿಕೆ ಎದ್ದು ಕಾಣುತ್ತಿತ್ತು. ಆದರೆ ಕಂಗಳಲ್ಲಿ ಅದೇನೋ ಹೆಮ್ಮೆ, ಸಂತಸದ ಮಿಂಚಿತ್ತು.

ಆ ವ್ಯಕ್ತಿ ಲಖ್ವಿಂದರ್ ಸಿಂಗ್ ಗಿಲ್. ಶನಿವಾರ ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕರಾಗಿ ಆಯ್ಕೆಯಾದ ಶುಭಮನ್ ಗಿಲ್ ಅವರ ತಂದೆಯೇ ಈ ಲಖ್ವಿಂದರ್ ಸಿಂಗ್ ಅವರು. ತಮ್ಮ ಮಗ ಮತ್ತು ಆತನ ಆಟವನ್ನು ಕಣ್ತುಂಬಿಕೊಳ್ಳಲು ಪಂಜಾಬ್ ರಾಜ್ಯದ ಫಾಜಿಲ್ಕಾ ಗ್ರಾಮದಿಂದ ಸಂಬಂಧಿಕರೊಂದಿಗೆ ಬೆಂಗಳೂರಿಗೆ ಬಂದಿದ್ದರು. ಆ ಹೊತ್ತಿಗಾಗಲೇ ಅವರು ತಮ್ಮ ಮಗನನ್ನು ಭೇಟಿಯಾಗದೇ ಆರೇಳು ತಿಂಗಳುಗಳೇ ಕಳೆದಿದ್ದವು!

ಏಕೆಂದರೆ; 2018ರಲ್ಲಿ ನ್ಯೂಜಿಲೆಂಡ್‌ನಲ್ಲಿ ನಡೆದಿದ್ದ 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಗೆದ್ದಿದ್ದ ಭಾರತ ತಂಡದ ಶ್ರೇಷ್ಠ ಆಟಗಾರ ಗೌರವ ಗಳಿಸಿದ್ದವರು ಶುಭಮನ್. ಆ ಟೂರ್ನಿ ಆರಂಭವಾಗುವ ಕೆಲವು ತಿಂಗಳುಗಳ ಮುನ್ನವೇ

ಪಂಜಾಬ್ ತಂಡದ ಆಟಗಾರ ಶುಭಮನ್ ಗಿಲ್ ಅವರ ತಂದೆ ಲಖ್ವಿಂದರ್ ಸಿಂಗ್ (ಎಡ). ರಾಹುಲ್ ದ್ರಾವಿಡ್

ಗಿಲ್ ಮನೆಯಿಂದ ಶಿಬಿರಕ್ಕೆ ಹೋಗಿದ್ದರು. ಅಲ್ಲಿಂದ ತಂಡವು ವಿಶ್ವಕಪ್ ಜಯಿಸಿದ ನಂತರ ಸೀದಾ ಬೆಂಗಳೂರಿಗೆ ಬಂದು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿದ್ದ ತಮ್ಮ ತವರು ರಾಜ್ಯ ಪಂಜಾಬ್ ತಂಡವನ್ನು ಸೇರಿಕೊಂಡಿದ್ದರು.

‘ನನ್ನ ಮಗನಿಗೆ ಕ್ರಿಕೆಟ್ ಒಂದಿದ್ದರೆ ಸಾಕು ಮತ್ತೇನೂ ಬೇಕಾಗಿಲ್ಲ. ಚಿಕ್ಕವನಿದ್ದಾಗಿನಿಂದಲೂ ಊಟ, ನಿದ್ದೆ ಬಿಟ್ಟು ಕ್ರಿಕೆಟ್‌ನಲ್ಲಿ ತೊಡಗಿಸಿಕೊಂಡಿದ್ದೇ ಹೆಚ್ಚು. ನಮ್ಮದು ರೈತಾಪಿ ಕುಟುಂಬ. 9ನೇ ವಯಸ್ಸಿನಿಂದಲೇ ಕ್ರಿಕೆಟ್ ಬ್ಯಾಟ್ ಒಂದೇ ಆತನ ಆಟಿಕೆ. ಆತನ ಕ್ರಿಕೆಟ್ ಪ್ರೀತಿಗೆ ನಾವೆಂದೂ ಅಡ್ಡಿಯಾಗಲಿಲ್ಲ. ಈಗಂತೂ ದೇಶಕ್ಕಾಗಿ ವಿಶ್ವಕಪ್ ಗೆದ್ದು ಬಂದಿರುವುದು ಶುಭಮನ್ ಸಾಧನೆ ಹೆಮ್ಮೆ ಮೂಡಿಸಿದೆ. ರಾಹುಲ್ ದ್ರಾವಿಡ್ ಸರ್ (ಆಗ ತಂಡದ ಮುಖ್ಯ ಕೋಚ್) ಅವರ ಮಾರ್ಗದರ್ಶನ ಅಮೂಲ್ಯವಾದದ್ದು. ಶಿಸ್ತು, ಸಂಯಮ ಮತ್ತು ಏಕಾಗ್ರತೆಯ ಸಾಧನೆಯನ್ನು ದ್ರಾವಿಡ್ ಅವರಿಂದಲೇ ಕಲಿಯಲು ಸಾಧ್ಯ. ಅದು ನನ್ನ ಪುತ್ರನನ್ನು ಭವಿಷ್ಯದಲ್ಲಿ ಬಹಳ ಎತ್ತರಕ್ಕೇರಿಸುವ ಭರವಸೆ ಇದೆ’ ಎಂದು ಅವತ್ತು ಲಖ್ವಿಂದರ್ ಹನಿಗಣ್ಣಾಗಿದ್ದರು.

ಆ ತಂದೆಯ ಹಾರೈಕೆಗಳು ಮತ್ತು ಕನ್ನಡಿಗ ಕ್ರಿಕೆಟ್ ದಿಗ್ಗಜ ದ್ರಾವಿಡ್ ಅವರ ಮಾರ್ಗದರ್ಶನ ಎರಡೂ ಈಗ ಫಲ ನೀಡಿವೆ. ಭಾರತ ಟೆಸ್ಟ್ ಕ್ರಿಕೆಟ್ ತಂಡಕ್ಕೆ 38ನೇ ನಾಯಕರಾಗಿ ಶುಭಮನ್ ಆಯ್ಕೆಯಾಗಿದ್ದಾರೆ. 25 ವರ್ಷ ವಯಸ್ಸಿನ, ಶಾಂತಚಿತ್ತದ ಈ ಯುವನಾಯಕನ ಮುಂದೆ ಕಠಿಣ ಹಾದಿ ಇದೆ. 93 ವರ್ಷಗಳ ಇತಿಹಾಸವಿರುವ ಭಾರತ ತಂಡದ ಮೊದಲ ನಾಯಕ ಕರ್ನಲ್ ಸಿ.ಕೆ. ನಾಯ್ಡು ಅವರಿಂದ ಆರಂಭವಾಗಿ ಇತ್ತೀಚೆಗೆ ನಿವೃತ್ತಿ ಘೋಷಿಸಿದ ರೋಹಿತ್ ಶರ್ಮಾವರೆಗೂ ದೊಡ್ಡ ಪರಂಪರೆಯನ್ನೇ ಬಿಟ್ಟು ಹೋಗಿದ್ದಾರೆ.

ನಾಯಕರಾಗಿ ತಂಡವನ್ನು ಗೆಲುವಿನತ್ತ ಮುನ್ನಡೆಸುವುದರ ಜೊತೆಜೊತೆಗೆ ಗಿಲ್ ಅವರು ತಮ್ಮ ಬ್ಯಾಟಿಂಗ್ ಲಯವನ್ನೂ ಕಾಪಾಡಿಕೊಳ್ಳುವ ದೊಡ್ಡ ಸವಾಲು ಇದೆ. ಈಗ ಅವರೊಂದಿಗೆ ಇಂಗ್ಲೆಂಡ್ ಪ್ರವಾಸಕ್ಕೆ ತೆರಳುತ್ತಿರುವ ತಂಡದಲ್ಲಿ ಬಹುತೇಕ ಯುವ ಆಟಗಾರರೇ ಹೆಚ್ಚು. ಕೆ.ಎಲ್. ರಾಹುಲ್, ರವೀಂದ್ರ ಜಡೇಜ ಮತ್ತು ಜಸ್‌ಪ್ರೀತ್ ಬೂಮ್ರಾ ಅವರು ಮಾತ್ರ ಗಿಲ್ ಅವರಿಗಿಂತ ವಯಸ್ಸು ಮತ್ತು ಅನುಭವದಲ್ಲಿ ಹಿರಿಯರು. ಅಷ್ಟೇ ಅಲ್ಲ. ಗಿಲ್ ಅವರು ಈಗ ಆರಂಭಿಕ ಬ್ಯಾಟರ್ ಆಗಿ ರೋಹಿತ್ ಅವರ ಸ್ಥಾನವನ್ನು ತುಂಬುವರೇ ಅಥವಾ ವಿರಾಟ್ ಅವರ ನಾಲ್ಕನೇ ಕ್ರಮಾಂಕದಲ್ಲಿ ಕಣಕ್ಕಿಳಿಯುವರೇ ಎಂಬ ಕುತೂಹಲ ಗರಿಗೆದರಿದೆ.

ಟಿ20 ಕ್ರಿಕೆಟ್ ಭರಾಟೆಯಲ್ಲಿಯೂ ಟೆಸ್ಟ್ ಪಂದ್ಯಗಳಿಗೆ ಜನಾಕರ್ಷಣೆ ತುಂಬಿದ ಹೆಗ್ಗಳಿಕೆ ಕೊಹ್ಲಿಗೆ ಸಲ್ಲುತ್ತದೆ. ‘ಮ್ಯಾನರಿಸಮ್’ನಲ್ಲಿ ವಿರಾಟ್ ಮತ್ತು ಶುಭಮನ್ ಸ್ವಭಾವ ಅಜಗಜಾಂತರ. ಆದರೆ ಕೌಶಲ ಮತ್ತು ಪ್ರತಿಭೆಯಲ್ಲಿ ಗಿಲ್ ಕೂಡ ಕಮ್ಮಿಯಲ್ಲ. ಆದರೆ ಎಷ್ಟು ದೂರದವರೆಗೆ ಅವರು ಓಡುವ ಕುದುರೆಯಾಗಿರುತ್ತಾರೆ ಎಂಬುದೇ ಇಲ್ಲಿ ಮುಖ್ಯ. ಏಕೆಂದರೆ; ಭಾರತ ತಂಡದ ನಾಯಕನ ಸ್ಥಾನವೆಂದರೆ ಅಗ್ನಿಕುಂಡವೂ ಹೌದು. ಕ್ರಿಕೆಟ್ ಆಟವನ್ನು ಆರಾಧಿಸುವ ದೇಶದಲ್ಲಿ ಕೋಟ್ಯಂತರ ಅಭಿಮಾನಿಗಳ ನಿರೀಕ್ಷೆಯ ಭಾರ ಹೊತ್ತು ಯಶಸ್ಸಿನತ್ತ ಹೆಜ್ಜೆ ಹಾಕುವುದು ಸುಲಭವಲ್ಲ.

ದೀಪಕ್, ಜೆನ್ನಿಫರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎ.ದೀಪಕ್ ಮತ್ತು ಮಣಿಪುರದ ಜೆನ್ನಿಫರ್ ಲುಯಿಖಮ್ ಅವರು ಎಐಟಿಎ ಟಿಎನ್‌ಆರ್ ಸ್ಮರಣಾರ್ಥ ಆಲ್ ಇಂಡಿಯಾ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಇಲ್ಲಿನ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿ ಕೋರ್ಟ್‌ನಲ್ಲಿ ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ಮೂರನೇ ಶ್ರೇಯಾಂಕದ ದೀಪಕ್ 6-4, 3-2ರಿಂದ ಆರನೇ ಶ್ರೇಯಾಂಕದ ರಿಷಿ ರೆಡ್ಡಿ ಅವರನ್ನು ಮಣಿಸಿದರು.

ಎರಡನೇ ಸೆಟ್ ಆಟದ ವೇಳೆ ಕರ್ನಾಟಕದ ಮತ್ತೊಬ್ಬ ರಿಷಿ ಗಾಯಾಳಾಗಿ ಪಂದ್ಯದಿಂದ ಹಿಂದೆ ಸರಿದರು. ದೀಪಕ್ ಪ್ರಶಸ್ತಿಯ ಜೊತೆ ₹12.5 ಸಾವಿರ ಬಹುಮಾನ

ಪ್ರಶಸ್ತಿಯೊಂದಿಗೆ ಜೆನ್ನಿಫರ್ ಲುಯಿಖಮ್ ಮತ್ತು ಎ.ದೀಪಕ್

ಮತ್ತು 20 ಎಐಟಿಎ ಪಾಯಿಂಟ್ಸ್ ತಮ್ಮದಾಗಿಸಿಕೊಂಡರು. ರಿಷಿ ₹8.5 ಸಾವಿರ ಮತ್ತು 15 ಎಐಟಿಎ ಅಂಕ ಗಳಿಸಿದರು. ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಜೆನ್ನಿಫರ್ 1-6, 6-2, 6-4 ಕರ್ನಾಟಕದ ಹರ್ಷಿಣಿ ರೆಡ್ಡಿ ಅವರನ್ನು ಸೋಲಿಸಿದರು. ಅವರು ಪ್ರಶಸ್ತಿಯೊಂದಿಗೆ ₹12.5 ಸಾವಿರ ಬಹುಮಾನ ಮತ್ತು 20 ಎಐಟಿಎ ಪಾಯಿಂಟ್ಸ್ ಪಡೆದರು. ಟೂರ್ನಿಯು ಒಟ್ಟು ₹2 ಲಕ್ಷ ಬಹುಮಾನ ಮೊತ್ತ ಒಳಗೊಂಡಿತ್ತು.

ಅಹಮದಾಬಾದ್‌ನಲ್ಲಿ ಶುಭಮನ್ ಪಡೆಗೆ ಚೆನ್ನೈ ಸೂಪರ್ ಕಿಂಗ್ಸ್ ಸವಾಲು ಇಂದು

ಅಗ್ರಸ್ಥಾನದ ಮೇಲೆ ಗುಜರಾತ್ ಕಣ್ಣು

ಅಹಮದಾಬಾದ್ (ಪಿಟಿಐ): ಗುಜರಾತ್ ಟೈಟನ್ಸ್ ತಂಡವು, ಐಪಿಎಲ್ ಪಾಯಿಂಟ್ ಪಟ್ಟಿಯ ತಳದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಭಾನುವಾರ ನಡೆಯುವ ಪಂದ್ಯದಲ್ಲಿ ಎದುರಿಸಲಿದ್ದು, ಮೊದಲ ಎರಡು ಸ್ಥಾನಗಳಲ್ಲಿ ಒಂದನ್ನು ಪಡೆಯುವ ಗುರಿಯಲ್ಲಿದೆ. ಇತ್ತಂಡಗಳಿಗೆ ಇದು ಕೊನೆಯ ಲೀಗ್ ಪಂದ್ಯ.

ಶುಕ್ರವಾರ ನಡೆದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು, ಸನ್‌ರೈಸರ್ಸ್ ಹೈದರಾಬಾದಿಗೆ ಸೋತ ಕಾರಣ ಟೈಟನ್ಸ್ ತಂಡಕ್ಕೆ ಮೊದಲ ಎರಡು ಸ್ಥಾನಗಳಲ್ಲಿ ಒಂದನ್ನು ಪಡೆಯುವ ಅವಕಾಶ ಜೀವಂತವಾಗಿ ಉಳಿದಿದೆ.

ಚೆನ್ನೈ ಮೇಲೆ ಗೆದ್ದರೆ ಟೈಟನ್ಸ್ ತಂಡ 20 ಪಾಯಿಂಟ್ಸ್ ಗಳಿಸಿದಂತೆ ಆಗಲಿದ್ದು ಮೊದಲ ಎರಡು ಸ್ಥಾನಗಳಲ್ಲಿ ಒಂದು ಖಚಿತವಾಗಲಿದೆ. ಇದರಿಂದ ಫೈನಲ್ ಅವಕಾಶಕ್ಕೆ ಹತ್ತಿರವಾಗುತ್ತದೆ.

ಚೆನ್ನೈ ಸೂಪರ್ ಕಿಂಗ್ಸ್‌ಗೆ ಈ ಪಂದ್ಯವು ಯುವ ಪಡೆಯನ್ನು ಕಟ್ಟುವ ಪ್ರಕ್ರಿಯೆಯಾಗಿ ಅಷ್ಟೇ ಉಳಿದಿದೆ. ಯುವ ಆಟಗಾರರಿಗೆ ಅವಕಾಶ, ಸಂಯೋಜನೆ ಪರೀಕ್ಷಿಸಲು ಈ ಪಂದ್ಯ ಬಳಸಬಹುದು.

ಭಾರತ ತಂಡದ ನಾಯಕರಾಗಿ ಆಯ್ಕೆಯಾಗಿರುವ ಶುಭಮನ್ ಗಿಲ್, ಸುದರ್ಶನ್ ಮತ್ತು ಜೋಸ್ ಬಟ್ಲರ್ ಅವರು ಟೈಟನ್ಸ್ ತಂಡದ ಬ್ಯಾಟಿಂಗ್ ಆಧಾರಸ್ತಂಭವಾಗಿದ್ದಾರೆ. ಆಕರ್ಷಕ ಆಟಗಾರ ಬಟ್ಲರ್ ಈ ಪಂದ್ಯದ ನಂತರ ತವರಿಗೆ ಮರಳಲಿದ್ದಾರೆ. ಹೀಗಾಗಿ ಶಾರೂಖ್ ಖಾನ್ ಮತ್ತು ಶೆರ್ಫೇನ್ ರುದರ್‌ಫೋರ್ಡ್ ಅವರ ಮೇಲೆ ಹೊಣೆ ಹೆಚ್ಚಲಿದೆ. ಇವರಿಬ್ಬರೂ ಲಖನೌ ವಿರುದ್ಧ ಗಮನ ಸೆಳೆಯುವ ಪ್ರದರ್ಶನ ನೀಡಿದ್ದರು. ತಂಡದ ವೇಗದ ಬೌಲಿಂಗ್‌ನಲ್ಲಿ ಶಿಸ್ತು ಮೂಡಬೇಕಾಗಿದೆ. ಸ್ಪಿನ್ನರ್ ರಶೀದ್ ಖಾನ್ ಧಾರಾಳಿಯಾಗಿದ್ದಾರೆ.

ಸಿಎಸ್‌ಕೆ ಬ್ಯಾಟಿಂಗ್, ಯುವ ಉತ್ಸಾಹಿಗಳಾದ ಆಯುಷ್ ಮ್ಹಾತ್ರೆ, ಉರ್ವಿಲ್ ಪಟೇಲ್ ಮತ್ತು ಡೆವಾಲ್ಡ್ ಬ್ರೆವಿಸ್ ಅವರನ್ನು ಅವಲಂಬಿಸಿದೆ.

ರಾಜಸ್ಥಾನ ರಾಯಲ್ಸ್‌ಗೆ ಈ ಹಿಂದಿನ ಪಂದ್ಯ ಸೋತ ನಂತರ ತಮ್ಮ ತಂಡ ತಳದಲ್ಲಿರಲು ಯೋಗ್ಯ ಎಂದು ಚೆನ್ನೈ ಹೆಡ್ ಕೋಚ್ ಸ್ಟೀಫನ್ ಫ್ಲೆಮಿಂಗ್ ಒಪ್ಪಿಕೊಂಡಿದ್ದಾರೆ.

ನಾಯಕ, 43 ವರ್ಷ ವಯಸ್ಸಿನ ಧೋನಿ ಅವರ ಐಪಿಎಲ್ ಭವಿಷ್ಯ ಇನ್ನೂ ನಿಗೂಢವಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್ ಸ್ಟಾರ್

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಜಿಟಿ	13	9	4	0	18	0.602
ಪಿಬಿಕೆಎಸ್	13	8	5	1	17	0.327
ಆರ್‌ಸಿಬಿ	13	8	4	1	17	0.255
ಎಂಐ	13	8	5	0	16	1.292
ಡಿಸಿ	14	7	6	1	15	0.011
ಎಲ್‌ಎಸ್‌ಜಿ	13	6	7	0	12	-0.337
ಕೆಕೆಆರ್	13	5	6	2	12	0.193
ಎಸ್‌ಆರ್‌ಎಚ್	13	5	7	1	11	-0.737
ಆರ್‌ಆರ್	14	4	10	0	8	-0.549
ಸಿಎಸ್‌ಕೆ	13	3	10	0	6	-1.030

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 638 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ (ಜಿಟಿ) 21 ವಿಕೆಟ್

ಸಾಯಿ ಸುದರ್ಶನ್

ಎಂ.ಎಸ್.ಧೋನಿ

ಕೆಕೆಆರ್–ಸನ್ ಮುಖಾಮುಖಿ ಇಂದು

ನವದೆಹಲಿ (ಪಿಟಿಐ): ಇವೆರಡು ತಂಡಗಳು 2024ರ ಫೈನಲ್‌ನಲ್ಲಿ ಆಡಿದ್ದವು. ಆದರೆ ಈ ಬಾರಿ ಪ್ಲೇಆಫ್ ರೇಸ್‌ನಿಂದ ಹೊರಬಿದ್ದಿರುವ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಸನ್‌ರೈಸರ್ಸ್ ತಂಡಗಳು ಭಾನುವಾರ ಇಲ್ಲಿ ಮುಖಾಮುಖಿಯಾಗಲಿವೆ. ಪಾಯಿಂಟ್ ಪಟ್ಟಿಯಲ್ಲಿ ತಮ್ಮ ಸ್ಥಾನ ಸುಧಾರಿಸಿಕೊಳ್ಳಲು ಇದು ಅವಕಾಶವಾಗಿದೆ.

ಕಳೆದ ಬಾರಿಯ ಫೈನಲ್ ಏಕಪಕ್ಷೀಯವಾಗಿದ್ದು, ಶ್ರೇಯಸ್ ಅಯ್ಯರ್ ಬಳಗ, ಪ್ಯಾಟ್ ಕಮಿನ್ಸ್ ನೇತೃತ್ವದ ತಂಡವನ್ನು ಸೋಲಿಸಿ ಚಾಂಪಿಯನ್ ಆಗಿತ್ತು. ಈ ಬಾರಿ ಗೆದ್ದ ತಂಡ ಆರನೇ ಸ್ಥಾನಕ್ಕೇರುವ ಅವಕಾಶ ಹೊಂದಿದೆ.

ಶುಕ್ರವಾರ ಪ್ರಬಲ ಆರ್‌ಸಿಬಿ ತಂಡಕ್ಕೆ 42 ರನ್‌ಗಳ ಸೋಲುಣಿಸಿರುವ ಕಮಿನ್ಸ್ ಪಡೆ, ಅಜಿಂಕ್ಯ ರಹಾನೆ ನೇತೃತ್ವದ ನೈಟ್ ರೈಡರ್ಸ್ ವಿರುದ್ಧ ಫೇವರಿಟ್ ಆಗಿ ಕಾಣುತ್ತಿದೆ. ಸಾಲದ್ದಕ್ಕೆ ಕೋಲ್ಕತ್ತದ ತಂಡ ಮೇ 7ರ ನಂತರ ಯಾವುದೇ ಪಂದ್ಯ ಆಡಿಲ್ಲ.

ಸನ್‌ರೈಸರ್ಸ್ ಬ್ಯಾಟರ್‌ಗಳಾದ ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಇಶಾನ್ ಕಿಶನ್, ಅನಿಕೇತ್ ವರ್ಮಾ ಲಯದಲ್ಲಿದ್ದು ಕೋಟ್ಲಾದ ಬ್ಯಾಟಿಂಗ್ ಪಿಚ್‌ನಲ್ಲಿ ರನ್ ಹರಿಸುವ ನಿರೀಕ್ಷೆಯಲ್ಲಿದ್ದಾರೆ.

ಕೋಲ್ಕತ್ತ ತಂಡಕ್ಕೆ ಬ್ಯಾಟರ್‌ಗಳು ಕೈಕೊಟ್ಟಿದ್ದಾರೆ. ಟಿ20ಯಲ್ಲಿ ಅಷ್ಟೇನೂ ಹೆಸರು ಮಾಡದ ಅಜಿಂಕ್ಯ ರಹಾನೆ ಅವರೇ 375 ರನ್‌ಗಳೊಡನೆ ತಂಡದ ಯಶಸ್ವಿ ಬ್ಯಾಟರ್ ಎನಿಸಿದ್ದಾರೆ. ಫಿನಿಷರ್‌ಗಳೆನಿಸಿದ್ದ ರಿಂಕು ಸಿಂಗ್, ಆ್ಯಂಡ್ರೆ ರಸೆಲ್ ವಿಫಲರಾಗಿದ್ದಾರೆ. 23.75 ಕೋಟಿ ಮೌಲ್ಯ ಪಡೆದಿದ್ದ ವೆಂಕಟೇಶ್ ಅಯ್ಯರ್ 11 ಪಂದ್ಯಗಳಿಂದ ಗಳಿಸಿದ್ದು 142 ರನ್ ಮಾತ್ರ. ಒಂದು ಅರ್ಧ ಶತಕ ಬಿಟ್ಟರೆ (60) ಬಿಟ್ಟರೆ ಉಳಿದಂತೆ ಸಪ್ಪೆಯಾಗಿದ್ದಾರೆ.

ಸುನೀಲ್ ನಾರಾಯಣ್ ಅವರೂ ನಿರೀಕ್ಷೆಗೆ ತಕ್ಕಂತೆ ಆಡಿಲ್ಲ. ಹೋದ ಸಲ ಪರಿಣಾಮಕಾರಿ ಎನಿಸಿದ್ದ ಸ್ಪಿನ್ನರ್ ವರುಣ್ ಚಕ್ರವರ್ತಿ ಈ ಸಲ ಸ್ಥಿರ ಪ್ರದರ್ಶನ ನೀಡಿಲ್ಲ.

ಪಂದ್ಯ ಆರಂಭ: ರಾತ್ರಿ 7.30

ಫ್ರೆಂಚ್ ಓಪನ್ ಟೂರ್ನಿ ಇಂದಿನಿಂದ

ಅರಿನಾ ಸಬಲೆಂಕಾ, ಲೊರೆಂರ್ಝೊ ಮುಸೆಟ್ಟಿ ಇಂದು ಕಣಕ್ಕೆ

ಪ್ಯಾರಿಸ್ (ರಾಯಿಟರ್ಸ್): ಪ್ರಶಸ್ತಿಗೆ ನೆಚ್ಚಿನ ಆಟಗಾರ್ತಿಯಾಗಿರುವ ಅಗ್ರ ಕ್ರಮಾಂಕದ ಅರಿನಾ ಸಬಲೆಂಕಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಭಾನುವಾರ ಕಮಿಲ್ಲಾ ರಾಖಿಮೋವಾ ಅವರನ್ನು ಎದುರಿಸಲಿದ್ದಾರೆ.

ಮೂರು ವಾರಗಳ ಹಿಂದೆ ಮ್ಯಾಡ್ರಿಡ್ ಓಪನ್ ಟೂರ್ನಿಯಲ್ಲಿ ಮೂರನೇ ಸಲ ಪ್ರಶಸ್ತಿ ಗೆದ್ದು ಇಲ್ಲಿಗೆ ಬಂದಿರುವ ಸಬಲೆಂಕಾ ಆವೆಮಣ್ಣಿನ ಅಂಕಣದಲ್ಲಿ ಪಾರಮ್ಯ ಮೆರೆಯಲು ಉತ್ಸುಕರಾಗಿದ್ದಾರೆ.

ಉತ್ತಮ ಲಯದಲ್ಲಿರುವ ಎಂಟನೇ ಶ್ರೇಯಾಂಕದ ಲೊರೆಂರ್ಝೊ ಮುಸೆಟ್ಟಿ (ಇಟಲಿ) ತಮ್ಮ ಅಭಿಯಾನವನ್ನು ಯಾನಿಕ್ ಹಾಫ್‌ಮನ್ ಎದುರು ಆಡುವ ಆರಂಭಿಸಲಿದ್ದಾರೆ. ಇತ್ತೀಚೆಗೆ ಆಡಿರುವ ಟೂರ್ನಿಗಳಲ್ಲಿ ಮುಸೆಟ್ಟಿ ಒಂದರಲ್ಲಿ ಫೈನಲ್ ತಲುಪಿದ್ದು, ಎರಡು ಟೂರ್ನಿಗಳಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದರು. ಕಳೆದ ತಿಂಗಳು ಮಾಂಟೆಕಾರ್ಲೊ ಮಾಸ್ಟರ್ಸ್ ಟೂರ್ನಿಯಲ್ಲಿ ಫೈನಲ್ ಆಡಿದ್ದು, ಫ್ರೆಂಚ್ ಓಪನ್ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರಿಗೆ ಮಣಿದಿದ್ದರು.

ಆದರೆ ಎರಡು ವರ್ಷಗಳ ಹಿಂದೆ ಮ್ಯಾಡ್ರಿಡ್ ಓಪನ್‌ನಲ್ಲಿ ಹಾಫ್‌ಮನ್, ಇಟಲಿಯ ಆಟಗಾರರನ್ನು ಮಣಿಸಿದ್ದರು.

ಫಿಲಿಪ್ ಶಾಟಿಯೆ ಕೋರ್ಟ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಆಟಗಾರ್ತಿ ಹಾಗೂ ಒಲಿಂಪಿಕ್ ಚಾಂಪಿಯನ್ ಝೆಂಗ್ ಕ್ವಿನ್ವೆನ್ (ಚೀನಾ) ಅವರು ರಷ್ಯಾದ ಅನಸ್ತೇಸಿಯಾ ಪಾವ್ಲಿಚೆಂಕೋವಾ ಅವರನ್ನು ಎದುರಿಸಲಿದ್ದಾರೆ. 2021ರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಪಾವ್ಲಿಚೆಂಕೋವಾ ಅವರು ಫೈನಲ್ ತಲುಪಿ ಅಚ್ಚರಿ ಮೂಡಿಸಿದ್ದರು. ಅವರು ಫೈನಲ್ ತಲುಪಿದ ಏಕೈಕ ಗ್ರ್ಯಾನ್‌ಸ್ಲಾಮ್ ಟೂರ್ನಿ ಇದಾಗಿತ್ತು.

ಬೆಲಾರಸ್‌ನ ಅರಿನಾ ಸಬಲೆಂಕಾ —ಎಎಫ್‌ಪಿ ಚಿತ್ರ

ಪ್ರಶಸ್ತಿ ಸೆಣಸಾಟದಲ್ಲಿ ಬಾರ್ಬರಾ ಕ್ರಾಚಿಕೋವಾ ಅವರಿಗೆ ಮಣಿದಿದ್ದರು.

ಹಸನ್ ಇತಿಹಾಸ: ಓಪನ್ ಯುಗ ಆರಂಭವಾದ ನಂತರ ಫ್ರೆಂಚ್ ಓಪನ್ ಮುಖ್ಯ ಸುತ್ತಿನಲ್ಲಿ ಆಡುವ ಅರ್ಹತೆ ಪಡೆದ ಲೆಬನಾನ್‌ನ ಮೊದಲ ಟೆನಿಸಿಗ ಎಂಬ ಹಿರಿಮೆಗೆ ಬೆಂಜಮಿನ್ ಹಸನ್ ಪಾತ್ರರಾಗಿದ್ದಾರೆ. 30 ವರ್ಷದ ಹಸನ್ ಅಂತಿಮ ಅರ್ಹತಾ ಸುತ್ತಿನಲ್ಲಿ ಜಪಾನ್‌ನ ಜೇಮ್ಸ್ ಟ್ರಾಟರ್ ಅವರನ್ನು 6–2, 7–5 (5)ರಿಂದ ಸೋಲಿಸಿದರು.

ಬೆಂಜಮಿನ್ ಜರ್ಮನಿ ಸಂಜಾತರಾಗಿದ್ದು, ವಿಶ್ವ ಕ್ರಮಾಂಕದಲ್ಲಿ ಸದ್ಯ 177ನೇ ಸ್ಥಾನದಲ್ಲಿದ್ದಾರೆ. ಜನವರಿಯಲ್ಲಿ ಹದಿ ಹಬೀರ್ ಅವರು ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಜಯಗಳಿಸಿ ಇತಿಹಾಸ ಸ್ಥಾಪಿಸಿದ್ದರು. ಪ್ರಸ್ತುತ 159ನೇ ಕ್ರಮಾಂಕ ಹೊಂದಿದ್ದಾರೆ.

ಇಂಗ್ಲೆಂಡ್ ಲಯನ್ಸ್ ತಂಡದಲ್ಲಿ ವೋಕ್ಸ್, ಫ್ಲಿಂಟಾಫ್

ಲಂಡನ್ (ಪಿಟಿಐ): ಇಂಗ್ಲೆಂಡ್ ತಂಡದ ಮಾಜಿ ಆಲ್‌ರೌಂಡರ್ ಆ್ಯಂಡ್ರೂ ಫ್ಲಿಂಟಾಫ್ ಅವರ ಪುತ್ರ ರಾಕಿ ಮತ್ತು ಫಿಟ್ನೆಸ್ ಮರಳಿ ಪಡೆದ ವೇಗದ ಬೌಲರ್ ಕ್ರಿಸ್ ವೋಕ್ಸ್ ಅವರು ಭಾರತ ‘ಎ’ ತಂಡದ ವಿರುದ್ಧ ನಾಲ್ಕು ದಿನಗಳ ಎರಡು ಪಂದ್ಯಗಳ ಸರಣಿ ಆಡಲಿರುವ ಇಂಗ್ಲೆಂಡ್ ಲಯನ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಮೊದಲ ಪಂದ್ಯ ಕ್ಯಾಂಟರ್‌ಬರಿಯಲ್ಲಿ ಮೇ 30ರಂದು ಆರಂಭವಾಗಲಿದೆ. ಎರಡನೇ ಪಂದ್ಯ ನಾರ್ತಾಂಪ್ಟನ್‌ನಲ್ಲಿ ಜೂನ್ 6 ರಿಂದ ನಡೆಯಲಿದೆ. ಈ ಪಂದ್ಯಗಳು, ಭಾರತ– ಇಂಗ್ಲೆಂಡ್ ಟೆಸ್ಟ್ ಸರಣಿಗೆ ಪೂರ್ವಭಾವಿಯಾಗಿ ನಡೆಯಲಿವೆ.

ಇಂಗ್ಲೆಂಡ್ ಪರ ಮೂರೂ ಮಾದರಿಗಳಲ್ಲಿ ಆಡಿರುವ ಲೆಗ್ ಸ್ಪಿನ್ನರ್ ರೆಹಾನ್ ಅಹ್ಮದ್ ಅವರ ಜೊತೆಗೆ ಸೋದರ, ಆಫ್ ಸ್ಪಿನ್ನರ್ ಫರ್ಹಾನ್ ಅವರೂ ಸ್ಥಾನ ಪಡೆದಿದ್ದಾರೆ.

ಭಾರತ ವಿರುದ್ಧ ಐದು ಟೆಸ್ಟ್‌ಗಳ ಸರಣಿ ಜೂನ್ 20ರಂದು ಆರಂಭವಾಗಲಿದ್ದು, ಅದಕ್ಕೆ ಮೊದಲು ಲಯಕ್ಕೆ ಮರಳಲು ಈ ಸರಣಿ ಅನುಭವಿ ಕ್ರಿಸ್ ವೋಕ್ಸ್ ಅವರಿಗೆ ನೆರವಾಗಲಿದೆ.

15 ಆಟಗಾರರ ತಂಡ: ಜೇಮ್ಸ್ ರಿವ್ (ನಾಯಕ), ಫರ್ಹಾನ್ ಅಹ್ಮದ್, ರೆಹಾನ್ ಅಹ್ಮದ್, ಸೋನಿ ಬೇಕರ್, ಜೋರ್ಡಾನ್ ಕಾಕ್ಸ್, ರಾಕಿ ಫ್ಲಿಂಟಾಫ್, ಎಮಿಲಿಯೊ ಗೆ, ಟಾಮ್ ಹೇನ್ಸ್, ಜಾರ್ಜ್ ಹಿಲ್, ಜೋಶ್ ಹಲ್, ಎಡಿ ಜಾಕ್, ಬೆನ್ ಮೆಕಿನ್ಲೆ, ಡಾನ್ ಮೌಸ್ಲಿ, ಅಜಿತ್ ಸಿಂಗ್ ಡೇಲ್, ಕ್ರಿಸ್ ವೋಕ್ಸ್.

ಕರ್ನಾಟಕ ಲಲಿತಕಲಾ ಅಕಾಡೆಮಿಯು ಬಸವನಗುಡಿಯ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಲಾ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್ ಮತ್ತು ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನ ನಿರ್ದೇಶಕಿ ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಕಲಾ ಇತಿಹಾಸಕಾರ ಕೆ.ವಿ.ಸುಬ್ರಹ್ಮಣ್ಯಂ ಅವರು ಕಲಾಕೃತಿಗಳನ್ನು ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ಛಲವಾದಿ ನಾರಾಯಣಸ್ವಾಮಿ ವಿರುದ್ಧ ಪ್ರತಿಭಟನೆ: ಮಾವಳ್ಳಿ ಶಂಕರ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ವಿರೋಧ ಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಅಸಾಂವಿಧಾನಿಕ ಪದ ಬಳಕೆ ಮಾಡಿರುವುದನ್ನು ಖಂಡಿಸಿ ರಾಜ್ಯದಾದ್ಯಂತೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಪ್ರಧಾನಿ ನರೇಂದ್ರ ಮೋದಿ ಅವರ ಭಜನಾ ಮಂಡಳಿಯ ಸದಸ್ಯರಾಗಿರುವ ಛಲವಾದಿ ನಾರಾಯಣಸ್ವಾಮಿ ಅವರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಇತರ ದಲಿತ ನಾಯಕರನ್ನು

ಮಾವಳ್ಳಿ ಶಂಕರ್

ಛಲವಾದಿ ನಾರಾಯಣಸ್ವಾಮಿ

ವಿನಾಕಾರಣ ನಿಂದಿಸುವ ಕೀಳುಮಟ್ಟದ ರಾಜಕಾರಣವನ್ನು ಬಿಟ್ಟು, ಮುತ್ಸದ್ದಿತನವನ್ನು ಮೈಗೂಡಿಸಿಕೊಳ್ಳಬೇಕು. ಬಿ.ಆರ್. ಅಂಬೇಡ್ಕರ್ ಅವರು ತೋರಿದ ಮಾರ್ಗದಲ್ಲಿ ಮುನ್ನಡೆಯಬೇಕು’ ಎಂದು ಹೇಳಿದರು.

‘ಛಲವಾದಿ ನಾರಾಯಣಸ್ವಾಮಿ ಅವರು ಜಾತಿವಾದವನ್ನು ಬೆಂಬಲಿಸುವವರ ಹಾಗೂ ಸಂವಿಧಾನ ವಿರೋಧಿಗಳ ಜೊತೆಯಲ್ಲಿ ನಿಂತಿದ್ದಾರೆ. ಮನುವಾದವೇ ಅವರ ಮೂಲ ಮಂತ್ರ, ವರ್ಣಾಶ್ರಮ ಧರ್ಮದ ಅಸಮಾನ ನೆಲೆಗಳೇ ಅವರ ಅಸ್ತ್ರಗಳಾಗಿವೆ. ಅಂತಹವರೊಂದಿಗೆ ಸೇರಿ ನೀವು ದಲಿತರಿಗೆ ನ್ಯಾಯ ಕೊಡಿಸುವುದಕ್ಕೆ ಆಗುತ್ತದೆಯೇ? ಅವರು ಹೇಳಿದ ಚಾಕರಿ ಮಾಡಲು ನಿಮ್ಮಂತವರು ಮನುವಾದಿಗಳಿಗೆ ಬೇಕು. ನಿಮ್ಮ ಕೈಯಿಂದಲೇ ದಲಿತರನ್ನು ಹೇಗೆ ಅವಮಾನಿಸಬೇಕು ಎಂದು ಅವರಿಗೆ ಚೆನ್ನಾಗಿ ಗೊತ್ತು. ಅದಕ್ಕಾಗಿಯೇ ಅವರು ನಿಮ್ಮಂತಹವರನ್ನು ಇಟ್ಟುಕೊಂಡಿದ್ದಾರೆ’ ಎಂದು ದೂರಿದರು.

‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಜಾರಿ ನಿರ್ದೇಶನಾಲಯವನ್ನು (ಇ.ಡಿ) ಗುರಾಣಿಯನ್ನಾಗಿ ಬಳಸಿಕೊಳ್ಳುತ್ತಿದೆ. ಇ.ಡಿ ಕೇಂದ್ರ ಸರ್ಕಾರದ ಬಾಲಂಗೋಚಿಯಂತೆ ಕಾರ್ಯನಿರ್ವಹಿಸುತ್ತಿದೆ. ಇತ್ತೀಚೆಗೆ, ಗೃಹ ಸಚಿವ ಜಿ. ಪರಮೇಶ್ವರ ಮಾಲೀಕತ್ವದ ಸಿದ್ಧಾರ್ಥ ಶಿಕ್ಷಣ ಸಮೂಹದ ಮೇಲೆ ಇ.ಡಿ. ದಾಳಿ ನಡೆಸಿರುವುದು ಖಂಡನೀಯ’ ಎಂದು ಹೇಳಿದರು.

ಬೆಂಗಳೂರು ರೇಸ್

ಶ್ಯಾಮ್‌ರಾಕ್ ಗೆಲ್ಲುವ ನಿರೀಕ್ಷೆ

ಎಚ್.ಎಚ್.ಜಯಚಾಮರಾಜ ಒಡೆಯರ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶ್ಯಾಮ್‌ರಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಮೂನ್‌ಲೈಟ್ ರೊಮಾನ್ಸ್ ಪ್ಲೇಟ್: 1400 ಮೀ. ಸೀ ಡೈಮಂಡ್ 1, ಸೇಕ್ರೆಡ್ ಕ್ರಿಯೇಟರ್ 8, ಥ್ರಿಲ್ ಆಫ್ ಬ್ರೆಝಿಲ್ 3
2. ಮಿನಿಸ್ಟೇರಿಯಲ್ ಪ್ಲೇಟ್: 1100 ಮೀ. ಕ್ಯೂಬೆಕ್ 4, ಜಾಯ್‌ಫುಲ್ ಸ್ಪಿರಿಟ್ 7, ಪಿಂಕಿ ಪಿಂಕಿ 2
3. ಬ್ಯೂಟಿಫುಲ್ ಬೇಬ್ ಪ್ಲೇಟ್: 1400 ಮೀ. ಕ್ಷಾಂತೆ 12, ಸ್ಟಾರ್ ಸ್ಟಡೆಡ್ 7, ಮೂನ್ ಸ್ಟಾರ್ 9
4. ಪೆನ್‌ಡ್ರಾಗನ್ ಪ್ಲೇಟ್-ಡಿ.2; 1200 ಮೀ. ಲೆಜೆಂಡರಿ ಇಂಪ್ಯಾಕ್ಟ್ 7, ಬೆಸಿಲಿಕ 1, ಡೇಸ್ ಡೇಟ್ 2
5. ವಿ.ಟಿ.ವೇಲು ಮೆಮೋರಿಯಲ್ ಟ್ರೋಫಿ; 1600 ಮೀ. ರಾಕ್ ಬ್ಯಾಂಕ್ 1, ಗೋಲ್ಡ್ ಎಂಪೈರ್ 12, ಆರ್ಮರಿ 2
6. ಹೆಚ್.ಹೆಚ್.ಜಯಚಾಮರಾಜ ಒಡೆಯರ್ ಕಪ್; 1400 ಮೀ. ಶ್ಯಾಮ್‌ರಾಕ್ 2, ಪ್ರಾಣ 6, ನಾಟಿ ಚಾರ್ಮರ್ 1
7. ರಾಮ್ ಕಿಪಾಲ್ ಪ್ಲೇಟ್; 1200 ಮೀ. ಸೋಲೊ ಪ್ರಿನ್ಸ್ 3, ಲೇಡಿ ಇನ್ವಿಕ್ಟಸ್ 2, ಆಕ್ಸಿಟಾಸಿನ್ 1
8. ಪೆನ್‌ಡ್ರಾಗನ್ ಪ್ಲೇಟ್-ಡಿ.1; 1200 ಮೀ. ಫೋರ್ಟಿಸ್ 4, ಥೆಸ್ಸಲಿಯನ್ 3, ನಾಟಿ ಅಫೇರ್ 2

ಉತ್ತಮ ಬೆಟ್; ಕ್ಷಾಂತೆ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7,8	3,4,5	6,7,8

ಜಿಬಿಎ: ಜನಾಭಿಪ್ರಾಯ

‘ಜಿಬಿಎ ರಚನೆಯ ನಂತರ ಮುಂದೇನಾಗಬೇಕು’– ಈ ಪ್ರಶ್ನೆಗೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

ಬಿಬಿಎಂಪಿಯನ್ನು ಜಿಬಿಎ ಎಂದು ನಾಮಕರಣ ಮಾಡಿದರೆ ನಗರದ ಮೂಲಸೌಕರ್ಯ ಅಭಿವೃದ್ಧಿ ಆಗುವುದಿಲ್ಲ. ಒಳಚರಂಡಿ ವ್ಯವಸ್ಥೆ, ಬೀದಿದೀಪಗಳು, ರಸ್ತೆ ಗುಂಡಿ, ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ನಗರದ ಎಲ್ಲ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಬೇಕು. ಅಂದಾಗ ಮಾತ್ರ ಜಿಬಿಎ ಯಶಸ್ವಿ ಆಗಲಿದೆ.

ಭಾಗ್ಯ ವೆಂಕಟೇಶ್, ಹೊಸಕೋಟೆ

ಬಿಬಿಎಂಪಿಯನ್ನು ಜಿಬಿಎಯಾಗಿ ಬದಲಾವಣೆ ಮಾಡಿರುವ ಸರ್ಕಾರದ ನಡೆ ಸ್ವಾಗತಾರ್ಹ. ಜಿಬಿಎ ಹೆಸರಿಗೆ ತಕ್ಕಂತೆ ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಕುಡಿಯುವ ನೀರಿನ ಸಮಸ್ಯೆ, ಒಳಚರಂಡಿ, ಕಸ ವಿಲೇವಾರಿ, ರಸ್ತೆ ಅಭಿವೃದ್ಧಿಗೆ ಮೊದಲ ಆದ್ಯತೆ ಸಿಗಬೇಕು. ನಗರದಲ್ಲಿನ ಕಾನೂನು ಸುವ್ಯವಸ್ಥೆ ಕಾಪಾಡಬೇಕು ಅಂದಾಗ ಮಾತ್ರ ಜಿಬಿಎ ಯಶಸ್ವಿ ಆಗಲಿದೆ.

ರಾಜೇಶ್ವರಿ ರಾಘವೇಂದ್ರ ರಾವ್, ವಿಜಯನಗರ

ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿಗೆ ಜಿಬಿಎ ಪ್ರಮುಖ ಆದ್ಯತೆ ನೀಡಬೇಕು. ಸಾರ್ವಜನಿಕರಿಗೆ ಸ್ಪಂದಿಸುವ ಆಡಳಿತ ವ್ಯವಸ್ಥೆ ಇರಬೇಕು. ಜಿಬಿಎಗೆ ಮೊದಲು ಚುನಾವಣೆ ನಡೆಸಬೇಕು. ಜನಪ್ರತಿನಿಧಿಗಳು ತಮ್ಮ ಕ್ಷೇತ್ರದ ಜನರ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಜಿಬಿಎ ಪಾರದರ್ಶಕ ಆಡಳಿತ ನೀಡಿದರೆ ಮಾತ್ರ ಯಶಸ್ವಿ ಆಗಲಿದೆ.

ಮಂಜುಳಾ, ಕೋರಮಂಗಲ

ಬಿಬಿಎಂಪಿ ಜಿಬಿಎಯಾಗಿ ಬದಲಾದ ಮಾತ್ರಕ್ಕೆ ನಗರದಲ್ಲಿನ ಕುಂದು ಕೊರತೆಗಳು, ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ನಗರದಲ್ಲಿನ ಕಸ ವಿಲೇವಾರಿ ಸಮಸ್ಯೆ, ಸಂಚಾರ ದಟ್ಟಣೆಯ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ನಗರದ ಪ್ರಮುಖ ಸ್ಥಳಗಳಲ್ಲಿ ಕಸದ ಬುಟ್ಟಿಗಳನ್ನು ಇಡಬೇಕು. ಸಾರ್ವಜನಿಕರು ಈ ಕಸದ ಬುಟ್ಟಿಯಲ್ಲಿ ಕಸ ಹಾಕುವಂತೆ ಜಾಗೃತಿ ಮೂಡಿಸಬೇಕು. ವಾಹನ ಸವಾರರು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮ ಕೈಗೊಳ್ಳಬೇಕು. ಬೆಂಗಳೂರಿನ ಸೌಂದರ್ಯೀಕರಣಕ್ಕೆ ಆದ್ಯತೆ ನೀಡಬೇಕು.

ಸಂತೋಷ್ ಕುಮಾರ್, ಟಿ. ದಾಸರಹಳ್ಳಿ

ಜಿಬಿಎ ಆಯ್ತು: ಮುಂದೇನಾಗಬೇಕು

‘ಗ್ರೇಟರ್ ಬೆಂಗಳೂರು ಪ್ರದೇಶ’ ಘೋಷಣೆಯಾಗಿದೆ. ಮುಂದೆ ಏನಾಗಬೇಕು? ಪ್ರತಿಕ್ರಿಯಿಸಿ. ಮಾಹಿತಿ ಸಂಕ್ಷಿಪ್ತವಾಗಿರಲಿ.ಜೊತೆಗೆ ವಿಳಾಸ, ಭಾವಚಿತ್ರವಿರಲಿ.

9606038256

48 ವಾರಗಳ ಅವಧಿಯ ಕಠಿಣ ತರಬೇತಿ ಕೋರ್ಸ್

ವಿಮಾನ ಪರೀಕ್ಷಾ ಕೋರ್ಸ್: ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಾಯುಪಡೆಯ ಪರೀಕ್ಷಾ ಪೈಲಟ್ ಶಾಲೆಯ 47ನೇ ವಿಮಾನ ಪರೀಕ್ಷಾ ಕೋರ್ಸ್ ಪೂರ್ಣಗೊಳಿಸಿದ ಅಧಿಕಾರಿಗಳಿಗೆ ಪದವಿ ಪ್ರದಾನ, ಅತ್ಯುತ್ತಮ ಸಾಧನೆ ಮಾಡಿದವರಿಗೆ ಟ್ರೋಫಿ ಪ್ರದಾನ ಮಾಡಲಾಯಿತು.

ಬೆಂಗಳೂರಿನ ಏರ್‌ಕ್ರಾಫ್ಟ್ ಮತ್ತು ಸಿಸ್ಟಮ್ಸ್ ಟೆಸ್ಟಿಂಗ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ (ಎಎಸ್‌ಟಿಇ) ‘ಸುರಂಜನ್ ದಾಸ್ ಡಿನ್ನರ್’ ಕಾರ್ಯಕ್ರಮದ ಮೂಲಕ ಕೋರ್ಸ್ ಮುಕ್ತಾಯಗೊಂಡಿತು.

ವಾಯುಪಡೆಯ ಮುಖ್ಯಸ್ಥ, ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಮಾತನಾಡಿ, ‘ವೃತ್ತಿಪರ ಸಾಮರ್ಥ್ಯ, ಸಮಗ್ರತೆ ಮತ್ತು ಸಮರ್ಪಣಾ ಭಾವದಿಂದ ಕೆಲಸ ಮಾಡಲು ಪರೀಕ್ಷಾ ಹಾರಾಟ ಪ್ರಮುಖ ಪಾತ್ರ ವಹಿಸುತ್ತದೆ. ಈಗ ಪದವಿ ಪಡೆದವರು ಸಶಕ್ತ, ಸಕ್ಷಮ ಮತ್ತು ಆತ್ಮನಿರ್ಭರ ಭಾರತವನ್ನು ರೂಪಿಸುವಲ್ಲಿ ಅಗತ್ಯವಾದ ನಿಖರತೆ ಮತ್ತು ಶ್ರೇಷ್ಠತೆಯ ಮೂಲ ಮೌಲ್ಯಗಳನ್ನು ಎತ್ತಿಹಿಡಿಯಬೇಕು’ ಎಂದು ಸಲಹೆ ನೀಡಿದರು.

ವಿಮಾನ ಪರೀಕ್ಷಾ ಕೋರ್ಸ್ 48 ವಾರಗಳ ಅವಧಿಯ ಕಠಿಣ ತರಬೇತಿಯಾಗಿದೆ. ಅತ್ಯಾಧುನಿಕ ವೈಮಾನಿಕ ವೇದಿಕೆಗಳು ಮತ್ತು ವ್ಯವಸ್ಥೆಗಳಿಗಾಗಿ ರಾಷ್ಟ್ರದ ಹಾರಾಟ ಪರೀಕ್ಷಾ ಸಾಮರ್ಥ್ಯ ನಿರ್ಮಿಸುವ ಒಂದು ಮೂಲಾಧಾರವಾಗಿದೆ ಎಂದರು.

ಭಾರತೀಯ ವಾಯುಪಡೆಯ ಪರೀಕ್ಷಾ ಪೈಲಟ್ ಶಾಲೆಯ 47ನೇ ವಿಮಾನ ಪರೀಕ್ಷಾ ಕೋರ್ಸ್ ಪೂರ್ಣಗೊಳಿಸಿದ ಅಧಿಕಾರಿಗಳ ಜತೆಗೆ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್

ಸರ್ವತೋಮುಖ ಸಾಧನೆಗಾಗಿ ‘ಸುರಂಜನ್ ದಾಸ್ ಟ್ರೋಫಿ’ಯನ್ನು ಸ್ಕ್ವಾಡ್ರನ್ ಲೀಡರ್ ಎಸ್. ಭಾರದ್ವಾಜ್ ಅವರಿಗೆ ಪ್ರದಾನ ಮಾಡಲಾಯಿತು. ಹಾರಾಟ ಮೌಲ್ಯಮಾಪನದಲ್ಲಿ ಅತ್ಯುತ್ತಮ ವಿದ್ಯಾರ್ಥಿ ಪರೀಕ್ಷಾ ಪೈಲಟ್‌ಗಾಗಿ ಇರುವ ‘ಚೀಫ್ ಆಫ್ ದಿ ಏರ್ ಸ್ಟಾಫ್ ಟ್ರೋಫಿ’ಯನ್ನು ಸ್ಕ್ವಾಡ್ರನ್ ಲೀಡರ್ ಅಜಯ್ ತ್ರಿಪಾಠಿ ಅವರಿಗೆ ನೀಡಲಾಯಿತು.

ಅತ್ಯುತ್ತಮ ಸರ್ವತೋಮುಖ ವಿದ್ಯಾರ್ಥಿ ಹಾರಾಟ ಪರೀಕ್ಷಾ ಎಂಜಿನಿಯರ್‌ಗಾಗಿ ಸ್ಕ್ವಾಡ್ರನ್ ಲೀಡರ್ ಸುಬ್ರಜ್ಯೋತಿ ಪಾಲ್ ಅವರಿಗೆ ‘ಮಹಾರಾಜ ಹನುಮಂತ್ ಸಿಂಗ್ ಸ್ವೋರ್ಡ್’, ಹಾರಾಟ ಮೌಲ್ಯಮಾಪನದಲ್ಲಿ ಅತ್ಯುತ್ತಮ ವಿದ್ಯಾರ್ಥಿ ಪರೀಕ್ಷಾ ಎಂಜಿನಿಯರ್‌ಗಾಗಿ ವಿಂಗ್ ಕಮಾಂಡರ್ ಅಶ್ವಿನಿ ಸಿಂಗ್ ಅವರಿಗೆ ‘ಡನ್‌ಲಪ್ ಟ್ರೋಫಿ’ ನೀಡಲಾಯಿತು.

ಭೂ ವಿಷಯಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ ಮೇಜರ್ ಕೌಸ್ತುಭ್ ಕುಂಟೆ ಅವರಿಗೆ ‘ಕಪಿಲ್ ಭಾರ್ಗವ ಟ್ರೋಫಿ’ ಹಸ್ತಾಂತರಿಸಲಾಯಿತು.

ಶಾಸಕರು, ಪೊಲೀಸ್, ಬಿಬಿಎಂಪಿ ಅಧಿಕಾರಿಗಳೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ

ಸೆ.15ರೊಳಗೆ ಬಿಬಿಎಂಪಿ ವಿಭಜನೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಿಭಜನೆ ಪ್ರಕ್ರಿಯೆ ಸೆಪ್ಟೆಂಬರ್ 15ರೊಳಗೆ ಪೂರ್ಣಗೊಳಿಸಿ, 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ರಚಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ನಗರ ಪಾಲಿಕೆಗಳ ರಚನೆ ಬಗ್ಗೆ ವಿರೋಧ ಪಕ್ಷದ ನಾಯಕರು ಸೇರಿದಂತೆ ಇನ್ನೂ ಮೂರ್ನಾಲ್ಕು ಶಾಸಕರ ಜತೆ ಚರ್ಚೆ ಮಾಡಿ, ಎಲ್ಲರ ಸಲಹೆ ಪಡೆದು, ಸಚಿವ ಸಂಪುಟದಲ್ಲಿ ಅಂತಿಮ ತೀರ್ಮಾನ ಮಾಡಲಾಗುತ್ತದೆ' ಎಂದು ಹೇಳಿದರು.

'ಗ್ರೇಟರ್ ಬೆಂಗಳೂರು'ಗೆ ಸಂಬಂಧಿಸಿದಂತೆ ನಗರ ಶಾಸಕರು ಹಾಗೂ ಬಿಬಿಎಂಪಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಮೇ 15ರಿಂದ ಬಿಬಿಎಂಪಿ ವ್ಯಾಪ್ತಿಯನ್ನು ಗ್ರೇಟರ್ ಬೆಂಗಳೂರು ಪ್ರದೇಶವಾಗಿ ಅಧಿಸೂಚನೆ ಹೊರಡಿಸಲಾಗಿದೆ. ಅಂದೇ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024' ಜಾರಿಯಾಗಿದ್ದು, ಅದರ ನಂತರದ 120 ದಿನಗಳಲ್ಲಿ ಹೊಸ ನಗರಪಾಲಿಕೆಗಳನ್ನು ರಚನೆ ಮಾಡಲೇಬೇಕು. ಹೀಗಾಗಿ ಎಷ್ಟು ಪಾಲಿಕೆ ಮಾಡಬೇಕು ಎಂದು ಬೆಂಗಳೂರಿನ ಎಲ್ಲಾ ಶಾಸಕರ ಬಳಿ ಸಲಹೆಗಳನ್ನು ಕೇಳಿದ್ದೇನೆ. ನಂತರ ಮುಂದೆ ಎಲ್ಲೆಲ್ಲಿ ವಿಸ್ತರಣೆ ಮಾಡಬೇಕು ಎಂದು ತೀರ್ಮಾನ ಮಾಡುತ್ತೇವೆ' ಎಂದರು.

'ಮಳೆ ಪೀಡಿತ ಪ್ರದೇಶಗಳ ವ್ಯಾಪ್ತಿಯ ಶಾಸಕರ ಜತೆ ಚರ್ಚೆ ಮಾಡಿ, ತುರ್ತು ಕೆಲಸ ಕೈಗೊಳ್ಳಲು ಸ್ಥಳೀಯ ಅಧಿಕಾರಿಗಳಿಗೆ ಅಧಿಕಾರ ನೀಡಿದ್ದೇವೆ. ಇದಕ್ಕೆ ಅಗತ್ಯವಿರುವ ಹಣವನ್ನು ಸರ್ಕಾರದಿಂದ ನೀಡುತ್ತೇವೆ. ಟ್ಯಾಂಕರ್ ನೀರಿನ ವಿಚಾರವಾಗಿ ದೂರು ಬಂದಿರುವ ಪ್ರದೇಶಗಳಲ್ಲಿ ಆಯಾ ಋತುವಿಗೆ ತಕ್ಕಂತೆ ಅಗತ್ಯ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿದೆ' ಎಂದು ತಿಳಿಸಿದರು.

'ನಗರದ ಪಾದಚಾರಿ ಮಾರ್ಗದಲ್ಲಿರುವ ಎಲ್ಲ ಅಂಗಡಿಗಳನ್ನೂ ತೆರವು ಮಾಡಲಾಗುತ್ತದೆ. 27,665 ಬೀದಿ ಬದಿ ವ್ಯಾಪಾರಿಗಳು ನೋಂದಣಿ ಮಾಡಿಕೊಂಡಿದ್ದು, ಅವರಿಗೆ ತಳ್ಳುವಗಾಡಿ ನೀಡಲಾಗುತ್ತದೆ. 3,755 ವ್ಯಾಪಾರಿಗಳು ವಾಹನಗಳನ್ನು ಕೇಳಿದ್ದಾರೆ. ಪಾದಚಾರಿ ಮಾರ್ಗದ ವ್ಯಾಪಾರಿಗಳನ್ನು ತೆರವುಗೊಳಿಸುವಾಗ ಶಾಸಕರು ಒತ್ತಡ ತರಬಾರದು. ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ. ನಾವು ಒಂದೇ ಬಾರಿಗೆ ಇದನ್ನು ತೆರವುಗೊಳಿಸಲು ಆಗದಿದ್ದರೂ, ಹಂತ ಹಂತವಾಗಿ ಇದನ್ನು ಸರಿಪಡಿಸಲಾಗುವುದು ಎಂದು ಶಾಸಕರಿಗೂ ತಿಳಿಸಲಾಗಿದೆ' ಎಂದರು.

'ನಗರದ 25 ಲಕ್ಷ ಆಸ್ತಿಗಳ ಇ-ಖಾತಾ ಕರಡು ಸಿದ್ಧವಾಗಿದ್ದು, 5 ಲಕ್ಷ ಆಸ್ತಿಗಳ ಅಂತಿಮ ಇ-ಖಾತಾ ಡಿಜಿಟಲೀಕರಣ ಪೂರ್ಣಗೊಂಡಿದೆ. ತೆರಿಗೆ ಹಾಗೂ ಆಸ್ತಿ ದಾಖಲಾತಿಯಲ್ಲಿ ಪಾರದರ್ಶಕತೆ ತರಲಾಗುತ್ತಿದೆ. ಇದಕ್ಕಾಗಿ ನ್ಯಾಷನಲ್ ಇ-ಗವರ್ನೆನ್ಸ್ ಪ್ರಶಸ್ತಿ ಸಿಕ್ಕಿದೆ' ಎಂದು ಮಾಹಿತಿ ನೀಡಿದರು.

ಬಿಬಿಎಂಪಿ ವಿಭಜನೆ ಬಗ್ಗೆ ಬಿಜೆಪಿ ನಾಯಕರು ಅಪಸ್ವರ ಎತ್ತಿದ್ದಾರೆ ಎಂಬ ಸುದ್ದಿಗಾರರ ಪ್ರಶ್ನೆಗೆ, 'ಅವರು ನಿಮ್ಮ ಮುಂದೆ ಏನು ಹೇಳುತ್ತಾರೋ ಗೊತ್ತಿಲ್ಲ. ಆದರೆ ನನ್ನ ಬಳಿ ಅವರು ಏನು ಹೇಳುತ್ತಾರೆ ಎಂಬುದು ನನಗೆ ಮಾತ್ರ ಗೊತ್ತಿದೆ' ಎಂದು ಡಿ.ಕೆ. ಶಿವಕುಮಾರ್ ಉತ್ತರಿಸಿದರು.

ಕೆಂಪೇಗೌಡ ಬಡಾವಣೆಯಲ್ಲಿ 'ಆಕಾಶ ಗೋಪುರ'

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 'ಆಕಾಶ ಗೋಪುರ' (ಸ್ಕೈಡೆಕ್) ನಿರ್ಮಿಸಲಾಗುವುದು ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಆಕಾಶ ಗೋಪುರ'ವನ್ನು ಹೆಮ್ಮಿಗೆಪುರದಲ್ಲಿ ನಿರ್ಮಿಸಲು ತೀರ್ಮಾನಿಸಲಾಗಿತ್ತು. ವಿಮಾನ ನಿಲ್ದಾಣದಿಂದ 20 ಕಿ.ಮೀ ದೂರ ಇರಬೇಕು ಎಂಬ ಕಾರಣದಿಂದ ಅಲ್ಲಿ ಸಮಸ್ಯೆ ಎದುರಾಗಿದೆ. ಹೀಗಾಗಿ ಇದನ್ನು ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿರುವ ಬಿಡಿಎ ಜಾಗದಲ್ಲಿ ನಿರ್ಮಾಣ ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.


'ಆಕಾಶ ಗೋಪುರ'ದ ಮಾದರಿ

ರಸ್ತೆಗಳಲ್ಲಿ ಹಳೆ ವಾಹನಗಳನ್ನು ನಿಲ್ಲಿಸಿ ಹೋಗುತ್ತಿರುವ ಬಗ್ಗೆ ದೂರು ಬಂದಿದ್ದು, ಕಂದಾಯ ಇಲಾಖೆಯಿಂದ 100 ಎಕರೆ ಜಾಗ ಒದಗಿಸಿ, ಆ ಎಲ್ಲಾ ವಾಹನಗಳನ್ನು ಅಲ್ಲಿಗೆ ಸ್ಥಳಾಂತರಿಸಲು ಸಂಚಾರ ಪೊಲೀಸರಿಗೆ ಸೂಚಿಸಲಾಗಿದೆ. ಪಾಲಿಕೆ ಕಾನೂನಿನ ಪ್ರಕಾರ, 21 ದಿನ ರಸ್ತೆಯಲ್ಲಿ ನಿಲ್ಲಿಸಿರುವ ವಾಹನ ತೆಗೆಯದಿದ್ದರೆ ಅದನ್ನು 'ಅನಾಥ ವಾಹನ' ಎಂದು ಪರಿಗಣಿಸಿ ಹರಾಜು ಹಾಕಲು ಅವಕಾಶವಿದೆ. ಇನ್ನು ಪೊಲೀಸರು ನಿಗದಿ ಮಾಡುವ ನೋ ಪಾರ್ಕಿಂಗ್ ಪ್ರದೇಶಗಳಲ್ಲಿ ವಾಹನ ನಿಲುಗಡೆಗೆ ಅವಕಾಶ ಇರುವುದಿಲ್ಲ ಎಂದರು.

ಮೆಟ್ರೊ ಕಾಮಗಾರಿ ನಡೆಯುತ್ತಿರುವ ಕಡೆಗಳಲ್ಲಿ ಸರ್ವೀಸ್ ರಸ್ತೆಗಳನ್ನು ಮುಖ್ಯರಸ್ತೆ ಜತೆ ವಿಲೀನ ಮಾಡಿ ಸುಗಮವಾಗಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ಸುಮಾರು 50 ಕಿ.ಮೀ ಪ್ರಮುಖ ರಸ್ತೆಗಳಲ್ಲಿ ಈ ಕ್ರಮ ಕೈಗೊಳ್ಳಲಾಗುವು ಎಂದು ತಿಳಿಸಿದರು.

ಡಿ.ಕೆ.ಶಿವಕುಮಾರ್ ಹೇಳಿದ್ದೇನು?

- ನಗರದಲ್ಲಿ ಪಾದಚಾರಿ ಮಾರ್ಗ, ಬೀದಿಬದಿ ಅಂಗಡಿಗಳ ತೆರವು, ವ್ಯಾಪಾರಿಗಳಿಗೆ ವಾಹನ ಸೌಲಭ್ಯ
- ಕಾನೂನು ಬಾಹಿರವಾಗಿ ಹಾಕಿರುವ ಆಪ್ಟಿಕಲ್ ಕೇಬಲ್ ಕತ್ತರಿಸಬೇಕು
- ಶಾಸಕರು ರಸ್ತೆ ವಿಸ್ತರಣೆಗೆ ಶಿಫಾರಸು ಮಾಡಿದರೆ ಟಿಡಿಆರ್ ನೀಡಲು ಸಿದ್ಧ
- ಮಳೆಯ ನೀರು ನುಗ್ಗಿರುವ ಮನೆಗಳವರಿಗೆ ₹10 ಸಾವಿರ ಪರಿಹಾರ
- ರಾಜಕಾಲುವೆ ಬಫರ್ ವಲಯದಲ್ಲಿ 300 ಕಿ.ಮೀ ರಸ್ತೆ ನಿರ್ಮಿಸಲು ಶಾಸಕರು ಸಲಹೆ ನೀಡಬಹುದು
- ರಸ್ತೆಗಳಲ್ಲಿ ಪಾರ್ಕಿಂಗ್ ಇಲ್ಲದ ಪ್ರದೇಶಗಳಲ್ಲಿ ವಾಹನಗಳನ್ನು ನಿಲ್ಲಿಸುವಂತಿಲ್ಲ

'ಅವಳಿ ಭೂಗತ ಸುರಂಗ ರಸ್ತೆ'ಯ ಮಾದರಿ

ಸುರಂಗ ರಸ್ತೆಗೆ ಶೀಘ್ರ ಟೆಂಡರ್

ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಎರಡು ಹಂತದ ಸುರಂಗ ರಸ್ತೆಗಳಿಗೆ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಮೊದಲ ಹಂತದ 'ಅವಳಿ ಭೂಗತ ಸುರಂಗ ರಸ್ತೆ' ನಿರ್ಮಾಣಕ್ಕೆ ಶೀಘ್ರವೇ ಟೆಂಡರ್ ಕರೆಯಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುರಂಗ ರಸ್ತೆಯ ಪ್ರವೇಶ ಹಾಗೂ ನಿರ್ಗಮನದ ಭಾಗದಲ್ಲಿ ಸಂಚಾರ ದಟ್ಟಣೆ ಆಗಬಾರದು ಎಂಬ ಉದ್ದೇಶದಿಂದ ಈ ಯೋಜನೆಗೆ ಟೆಂಡರ್ ಕರೆಯುವ ಮುನ್ನ ಸರ್ಕಾರದ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಅಧಿಕಾರಿಗಳು, ಪೊಲೀಸ್ ಇಲಾಖೆಯ ಡಿಜಿಪಿ, ಐಜಿಪಿ ಮತ್ತು ಸಂಚಾರ ಪೊಲೀಸ್ ಅಧಿಕಾರಿಗಳ ಜತೆ ಶನಿವಾರ ಸಭೆ ನಡೆಸಿದ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು. ಸುರಂಗ ರಸ್ತೆಗೆ ವಿಧಾನಸೌಧದ ಒಂದು ಕಿ.ಮೀ ಸುತ್ತಮುತ್ತ ಎಲ್ಲೂ ನಿರ್ಗಮನಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಇಲ್ಲಿ ಸಂಚಾರ ದಟ್ಟಣೆಯಾದರೆ ಎಲ್ಲಾಕಡೆ ಆಗುತ್ತದೆ. ಹೀಗಾಗಿ ಇದನ್ನು ಪರಿಶೀಲಿಸಲು ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.

ಬೆಂಗಳೂರಿನಲ್ಲಿ 114 ಕಿ.ಮೀ ಎಲಿವೇಟೆಡ್ ಕಾರಿಡಾರ್ ನಿರ್ಮಾಣವಾಗಲಿದ್ದು, ಅದಕ್ಕೂ ಸಂಚಾರ ಪೊಲೀಸ್ ಅಧಿಕಾರಿಗಳಿಂದ ಸಲಹೆ ಪಡೆಯಲಾಗಿದೆ ಎಂದು ತಿಳಿಸಿದರು.

ಕಸ ವಿಲೇವಾರಿಗೆ ಶೀಘ್ರ ಟೆಂಡರ್: ನಗರದ ಕಸ ವಿಲೇವಾರಿಗೆ ದೊಡ್ಡ ವಿಧಾನಸಭೆ ಕ್ಷೇತ್ರಗಳಲ್ಲಿ ತಲಾ ಎರಡು, ಇತರೆ ಕ್ಷೇತ್ರಕ್ಕೆ ಒಂದೊಂದರಂತೆ ಒಟ್ಟು 33 ಪ್ಯಾಕೇಜ್‌ಗಳನ್ನು ಕರೆಯಲು ತೀರ್ಮಾನಿಸಿದ್ದೇವೆ. ಸುಮಾರು ₹4000 ಕೋಟಿ ಮೊತ್ತದ ಈ ಯೋಜನೆಗೆ ಏಳು ವರ್ಷಗಳ ಅವಧಿಗೆ ಟೆಂಡರ್ ಕರೆಯಲಾಗುತ್ತಿದೆ ಎಂದು ಹೇಳಿದರು.

'ಸ್ವಚ್ಛ ಬೆಂಗಳೂರು' ಕಾರ್ಯಕ್ರಮದ ಮೂಲಕ ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಕಟ್ಟಡ ತ್ಯಾಜ್ಯ ಹಾಗೂ ಇತರೆ ಕಸವನ್ನು ಒಮ್ಮೆಲೇ ಸ್ವಚ್ಛ ಮಾಡಲು ತೀರ್ಮಾನಿಸಲಾಗಿದೆ. ನಾಗರಿಕರು ಕೂಡ ಈ ಕಾರ್ಯಕ್ರಮದಲ್ಲಿ ಕೈಜೋಡಿಸಿ, ಎಲ್ಲೆಲ್ಲಿ ಕಸ ಇದೆ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಆ್ಯಪ್ ಅಥವಾ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದರೆ, ಅಲ್ಲಿರುವ ಕಸವನ್ನು ತೆಗೆಯಲಾಗುವುದು. ಇದಕ್ಕಾಗಿ ಅಧಿಕಾರಿಗಳು, ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ ಎಂದರು. ಸಮಗ್ರ ಘನತ್ಯಾಜ್ಯ ನಿರ್ವಹಣೆಗೆ 15 ದಿನದಲ್ಲಿ ಟೆಂಡರ್ ಕರೆಯಲಾಗುತ್ತದೆ ಎಂದು ತಿಳಿಸಿದರು.

'ಕಾವೇರಿ ಆರತಿ ವೇದಿಕೆ ನಿರ್ಮಾಣಕ್ಕೆ ಶೀಘ್ರ ಟೆಂಡರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ಆರತಿ ಕಾರ್ಯಕ್ರಮಕ್ಕಾಗಿ ವೇದಿಕೆ ನಿರ್ಮಿಸಲು ಶೀಘ್ರವೇ ಟೆಂಡರ್ ಕರೆಯಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾವೇರಿ ಆರತಿ ನಮ್ಮ ರಾಜ್ಯದ ಸಂಸ್ಕೃತಿ, ಪರಂಪರೆಯ ಪ್ರತೀಕವಾಗಲಿದೆ. ಕೊಡಗು, ಮಲೆನಾಡು, ಕರಾವಳಿ, ಬೆಂಗಳೂರು ಭಾಗದ ಮಠಗಳನ್ನು ಒಳಗೊಂಡು ಈ ಕಾರ್ಯಕ್ರಮದ ವಿಧಾನ ರೂಪಿಸಲಾಗುವುದು' ಎಂದರು.

'ವಾರಾಂತ್ಯದ ಮೂರು ದಿನಗಳ ಕಾಲ ಈ ಕಾರ್ಯಕ್ರಮ ನಡೆಯಬೇಕು ಎಂದು ನಾನು ಆಲೋಚಿಸುತ್ತಿದ್ದೇನೆ. ಪೂಜಾ ಕಾರ್ಯದ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಗುವುದು. ಇದಕ್ಕಾಗಿ ಕಾವೇರಿ ನಿಗಮದಲ್ಲಿ ₹92 ಕೋಟಿ ಹಣ ಮೀಸಲಿಡಲಾಗಿದೆ' ಎಂದು ಮಾಹಿತಿ ನೀಡಿದರು.

'ನಿಗಮದ ಜತೆಗೆ ಇಂಧನ ಇಲಾಖೆ, ಲೋಕೋಪಯೋಗಿ, ಪ್ರವಾಸೋದ್ಯಮ, ಧಾರ್ಮಿಕ ದತ್ತಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕಾರ್ಯಕ್ರಮಕ್ಕೆ ಕೈಜೋಡಿಸಲಿವೆ. ಕಾರ್ಯಕ್ರಮದ ವೀಕ್ಷಣೆಗಾಗಿ 10 ಸಾವಿರ ಆಸನಗಳು ಇರುವ ಗ್ಯಾಲರಿಯ ಮಾದರಿಯನ್ನು ವಿನ್ಯಾಸ ಮಾಡಲಾಗಿದೆ. ಕಾರ್ಯಕ್ರಮಕ್ಕೆಂದೇ ವಿಶೇಷ ಗೀತೆ ರಚನೆಗೆ ಆಹ್ವಾನ ನೀಡಲಾಗಿದೆ' ಎಂದು ತಿಳಿಸಿದರು.

'ಇದು ದಕ್ಷಿಣ ಭಾರತದ ಕಾರ್ಯಕ್ರಮವಾಗಲಿದೆ. ಕಾವೇರಿ ನದಿ ಹರಿಯುವ ಕರ್ನಾಟಕ, ತಮಿಳುನಾಡು, ಕೇರಳ, ಪುದುಚೇರಿ ರಾಜ್ಯಗಳು ಇದರಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು. ಈ ಎಲ್ಲಾ ವಿಚಾರಗಳ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದೆ. ಎಲ್ಲ ನೀಲನಕ್ಷೆಗಳು ಸಿದ್ಧವಾಗಿವೆ. ಇವು ಪೂರ್ಣಗೊಂಡ ನಂತರ ಸಾರ್ವಜನಿಕರಿಗೆ ಮಾಹಿತಿ ನೀಡಲಾಗುವುದು' ಎಂದರು.

ಸಿಎಪಿಎಫ್ 'ಸಿಬ್ಬಂದಿ ಶ್ರೇಣಿ ಪರಿಶೀಲನೆ'ಗೆ ಕೋರ್ಟ್ ಆದೇಶ

ನವದೆಹಲಿ (ಪಿಟಿಐ): 2021ರಲ್ಲೇ ನಡೆಯಬೇಕಿದ್ದ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) 'ಸಿಬ್ಬಂದಿ ಶ್ರೇಣಿ ಪರಿಶೀಲನಾ' ಕಾರ್ಯವನ್ನು ಆರು ತಿಂಗಳಲ್ಲಿ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಇದರ ಅನ್ವಯ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಾದ ಐಟಿಬಿಪಿ, ಬಿಎಸ್‌ಎಫ್, ಸಿಆರ್‌ಪಿಎಫ್, ಸಿಐಎಸ್‌ಎಫ್ ಮತ್ತು ಎಸ್‌ಎಸ್‌ಬಿಯ 'ಸಿಬ್ಬಂದಿ ಶ್ರೇಣಿ ಪರಿಶೀಲನಾ' ಕಾರ್ಯ ನಡೆಯಬೇಕಿದೆ.

ಸಿಬ್ಬಂದಿ ಶ್ರೇಣಿ ಪರಿಶೀಲನೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವಾಲಯವು ಕ್ರಮ ಕೈಗೊಂಡ ವರದಿ ನೀಡಿದ ಮೂರು ತಿಂಗಳಲ್ಲಿ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಸೂಕ್ತ ನಿರ್ಧಾರ ಕೈಗೊಳ್ಳಬೇಕಿದೆ, ಈಗ ಜಾರಿಯಲ್ಲಿರುವ ಸೇವಾ ನಿಯಮಗಳು ಮತ್ತು ನೇಮಕಾತಿ ನಿಯಮಗಳ ಬಗ್ಗೆ ಅವಲೋಕನ ನಡೆಸಬೇಕಿದೆ.

ದೇಶದ ಗಡಿಗಳಲ್ಲಿ ಭದ್ರತೆಯನ್ನು ಕಾಪಾಡುವಲ್ಲಿ ಹಾಗೂ ಆಂತರಿಕ ಭದ್ರತೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸಿಎಪಿಎಫ್‌ನ ಹೊಣೆಯು ಮಹತ್ವದ್ದು ಎಂದು ನ್ಯಾಯಾಲಯ ಹೇಳಿದೆ.

ಸಿಎಪಿಎಫ್ ಸಿಬ್ಬಂದಿಯು ಬಹಳ ಸವಾಲಿನ ಪರಿಸ್ಥಿತಿಗಳಲ್ಲಿ ತಮ್ಮ ಕರ್ತವ್ಯ ನಿರ್ವಹಿಸುತ್ತಾರೆ. ಆದರೆ, ಉನ್ನತ ಶ್ರೇಣಿಗಳಿಗೆ ಅಧಿಕಾರಿಗಳನ್ನು ಬೇರೆ ಕಡೆಗಳಿಂದ ನೇರವಾಗಿ ನೇಮಕ ಮಾಡಿಕೊಳ್ಳುವುದರ ಪರಿಣಾಮವಾಗಿ ತಮಗೆ ಸಕಾಲದಲ್ಲಿ ಬಡ್ತಿ ಸಿಗುತ್ತಿಲ್ಲ ಎಂಬ ಆಕ್ಷೇಪ ಸಿಎಪಿಎಫ್ ಸಿಬ್ಬಂದಿಯದ್ದಾಗಿದೆ ಎಂದು ಅದು ಹೇಳಿದೆ.

ಓದುವ ಹೊತ್ತಿಗೆ... ಕೆಂಗೇರಿಯಲ್ಲಿರುವ ಬೆಂಗಳೂರು ದಕ್ಷಿಣ ವಲಯದ 'ಮಾರಾಟ ಪಠ್ಯ ಪುಸ್ತಕ ಗೋದಾಮು'ನಲ್ಲಿ 2025-26ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾಥಮಿಕ ಶಾಲಾ ಮಕ್ಕಳ ಪಠ್ಯ ಪುಸ್ತಕಗಳನ್ನು ಹಂಚುವ ಕಾರ್ಯದಲ್ಲಿ ಸಿಬ್ಬಂದಿ ತೊಡಗಿದ್ದರು ಚಿತ್ರ: ರಂಜು ಪಿ.

ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ಹೆಚ್ಚುತ್ತಿರುವ ಅಪಘಾತಗಳು

● ಪ್ರಸನ್ನ ಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಎಂಟನೇ ಮೈಲಿಯಿಂದ ಚಿಕ್ಕಬಾಣಾವರದ ಕಡೆಗೆ ತೆರಳುವ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ವಾಹನಗಳ ವೇಗ ತಗ್ಗಿಸುವ ಉಬ್ಬುಗಳಿಲ್ಲ. ಇದರಿಂದ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ.

ಹೆಸರಘಟ್ಟ ಮುಖ್ಯರಸ್ತೆ ಯಲ್ಲಿ ಸದಾ ವಾಹನ ದಟ್ಟಣೆ ಇರುತ್ತದೆ. ಕೆಲವು ವಾಹನಗಳು ವೇಗವಾಗಿ ಸಾಗುತ್ತಿದ್ದು, ಸಾಕಷ್ಟು ಬಾರಿ ಅಪಘಾತಗಳು ಸಂಭವಿಸಿವೆ.

ವೇಗವಾಗಿ ಸಾಗುವ ವಾಹನಗಳು ರಸ್ತೆ ವಿಭಜಕವಿಲ್ಲದ ಕಡೆ ದಿಢೀರನೆ ತಿರುವು ತೆಗೆದುಕೊಳ್ಳುವ ಕಾರಣ, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.

'ಡೆಫೊಡಿಲ್ಸ್ ಅಪಾರ್ಟ್‌ಮೆಂಟ್ ಹತ್ತಿರ ರಸ್ತೆ ವಿಭಜಕ ತೆರೆದಿರುವುದರಿಂದ ವೇಗವಾಗಿ ಬರುವ ವಾಹನಗಳು ಪ್ರತಿನಿತ್ಯ ರಸ್ತೆ ತಿರುವಿನಲ್ಲಿ ಅಪಘಾತಗಳು ಸಂಭವಿಸುತ್ತವೆ. ವಾರಕ್ಕೆ ಕನಿಷ್ಠ ಮೂರು ಅಪಘಾತಗಳು ಇಲ್ಲಿ ಸಂಭವಿಸುತ್ತಿವೆ. ಅಪಘಾತಗಳ ಸಿ.ಸಿ.ಟಿ.ವಿ ವಿಡಿಯೋ, ಫೋಟೋಸ್ ಕೂಡ ಇದೆ' ಎಂದು ಡೆಫೊಡಿಲ್ಸ್ ಅಪಾರ್ಟ್‌ಮೆಂಟ್ ನಿವಾಸಿ ಸಂದೀಪ್ ಸಿಂಗ್ ಹೇಳಿದರು.

'ವಾಹನಗಳ ವೇಗಕ್ಕೆ ಕಡಿವಾಣ ಹಾಕಲು ರಸ್ತೆಯ ಎರಡು ಕಡೆ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ಹಾಕಬೇಕು. ಈ ವಿಚಾರವಾಗಿ ಬೆಂಗಳೂರು ಉತ್ತರ ಸಂಚಾರ ಡಿಸಿಪಿ ಅವರಿಗೂ ಮನವಿ ಮಾಡಿದ್ದೇವೆ. ಯಾವುದೇ ಕ್ರಮ ಕೈಗೊಂಡಿಲ್ಲ. ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದರೂ ನಿರ್ಲಕ್ಷ ವಹಿಸಿದ್ದಾರೆ. ಅಗತ್ಯವಿರುವ ಕಡೆ ಕಡ್ಡಾಯವಾಗಿ ರಸ್ತೆ ಉಬ್ಬುಗಳನ್ನು ಹಾಕಬೇಕು' ಎಂದು ಸಂದೀಪ್ ಸಿಂಗ್ ದೂರಿದರು.

ಸಾರ್ವಜನಿಕರ ಸಮಸ್ಯೆಗೆ ಪ್ರತಿಕ್ರಿಯಿಸಿದ ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಕೇಶವಮೂರ್ತಿ ಎನ್.ಎನ್., 'ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ಚರಂಡಿ ಮತ್ತು ರಸ್ತೆ ಕಾಮಗಾರಿ ನಡೆಯುತ್ತಿದೆ. ರಸ್ತೆ ವಿಭಜಕದ ತಿರುವಿನಲ್ಲಿ ವಿದ್ಯುತ್ ಇಲ್ಲದ ಕಾರಣ ಕತ್ತಲು ಇದೆ. ಡೆಫೊಡಿಲ್ಸ್ ಅಪಾರ್ಟ್‌ಮೆಂಟ್, ನರ್ಚರ್ ಸ್ಕೂಲ್, ಬೋನ್‌ಮಿಲ್, ಸಪ್ತಗಿರಿ ಜಂಕ್ಷನ್ ಮುಂಭಾಗದಲ್ಲಿ ಉಬ್ಬುಗಳನ್ನು ಹಾಕಲು ಸಂಚಾರ ವಿಭಾಗದ ಆಯುಕ್ತರ ಗಮನಕ್ಕೆ ತರಲಾಗಿದೆ' ಎಂದರು.

'ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇವೆ' ಎಂದು ದಾಸರಹಳ್ಳಿ ವಲಯ ಜಂಟಿ ಆಯುಕ್ತ ಪ್ರೀತಂ ನಸಲಾಪುರೆ ತಿಳಿಸಿದರು.

ಹೆಸರಘಟ್ಟ ಮುಖ್ಯ ರಸ್ತೆಯ ಡೆಫೋಡೀಲ್ಸ್ ಅಪಾರ್ಟ್‌ಮೆಂಟ್ ಮುಂಭಾಗ ರಸ್ತೆ (ಬಲಚಿತ್ರ) ಅಪಾರ್ಟ್ಮೆಂಟ್ ಮುಂಭಾಗದ ರಸ್ತೆ ವಿಭಜಕದ ಹತ್ತಿರ ಸಂಭವಿಸಿದ್ದ ಅಪಘಾತ

ಒಂದೇ ಕುಟುಂಬದ ಮೂವರು ಆತ್ಮಹತ್ಯೆ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ಪಟ್ಟಣದ ವಡ್ಡರಗುಡಿಯಲ್ಲಿರುವ ಹೆಬ್ಬಾಳ ಜಲಾಶಯಕ್ಕೆ ಹಾರಿ ಒಂದೇ ಕುಟುಂಬದ ಮೂವರು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಾಲ್ಲೂಕಿನ ಬೂದನೂರು ಗ್ರಾಮದ ಮಹದೇವಸ್ವಾಮಿ (55), ಅವರ ಪತ್ನಿ ಮಂಜುಳಾ (42), ಪುತ್ರಿ ಹರ್ಷಿತಾ ಮೃತಪಟ್ಟವರು. 'ನಮ್ಮ ಮಗಳು ಯುವಕನೊಬ್ಬನನ್ನು ಪ್ರೀತಿಸಿ, ಓಡಿಹೋಗಿರುವುದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದೇವೆ' ಎಂದು ಡೆತ್‌ನೋಟ್ ಬರೆದಿದ್ದಾರೆ.

ಗ್ರಾಮಸ್ಥರು ದಡದಲ್ಲಿ ಬೈಕ್ ಮತ್ತು ಚಪ್ಪಲಿಗಳನ್ನು ಗಮನಿಸಿ, ಪರಿಶೀಲಿಸಿದಾಗ ಬೈಕ್‌ನಲ್ಲಿ ಡೆತ್ ನೋಟ್ ಪತ್ತೆಯಾಗಿದೆ. ನಂತರ ಅವರು ಪೊಲೀಸರಿಗೆ ಮತ್ತು ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದರು.

ಮಹದೇವಸ್ವಾಮಿ

ಮಂಜುಳಾ

ಹರ್ಷಿತಾ

'ಮಹದೇವಸ್ವಾಮಿ ಅವರ ತಮ್ಮನ ಹೆಂಡತಿ ಈಚೆಗೆ ಪ್ರಿಯಕರನೊಂದಿಗೆ ನಾಪತ್ತೆಯಾಗಿದ್ದರು. ಬಳಿಕ ಅವರ ಹಿರಿಯ ಮಗಳೂ ತನ್ನ ಪ್ರಿಯಕರನೊಂದಿಗೆ ಹೊರಟುಹೋಗಿದ್ದರು. ಅದರಿಂದ ಕುಟುಂಬ ನೊಂದಿತ್ತು' ಎಂದು ಸ್ಥಳೀಯರು ತಿಳಿಸಿದರು. ಸ್ಥಳಕ್ಕೆ ಬರುವಲ್ಲಿ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ವಿಳಂಬ ಮಾಡಿದ್ದಾರೆಂದು ಸ್ಥಳೀಯರು ಆಕ್ರೋಶ ಹೊರಹಾಕಿದರು. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅವೈಜ್ಞಾನಿಕ ಹೆದ್ದಾರಿಗೆ ಟೋಲ್'

ಪ್ರಜಾವಾಣಿ ವಾರ್ತೆ

ಹಾರೋಹಳ್ಳಿ: ಬೆಂಗಳೂರಿನಿಂದ ದಿಂಡಿಗಲ್‌ವರೆಗೆ ನಿರ್ಮಿಸಿರುವ ರಸ್ತೆ ಸಂಪೂರ್ಣ ಅವೈಜ್ಞಾನಿಕ ಮತ್ತು ಕಳಪೆ ಗುಣಮಟ್ಟದಿಂದ ಕೂಡಿದೆ. ಸುರಕ್ಷತೆಯೇ ಇಲ್ಲದ ರಸ್ತೆ ಟೋಲ್ ಏಕೆ ಕಟ್ಟಬೇಕು ಎಂದು ರೈತ ಸಂಘದ ಪದಾಧಿಕಾರಿಗಳು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಮನಹಳ್ಳಿಯಲ್ಲಿ ಟೋಲ್ ನಿರ್ಮಿಸಿ ಹೆದ್ದಾರಿ ಪ್ರಾಧಿಕಾರ ಜನರ ಬಳಿ ಸುಲಿಗೆ ನಡೆಸುತ್ತಿದೆ. ಕನಕಪುರ, ಹಾರೋಹಳ್ಳಿ ಭಾಗದವರಿಗೆ ಟೋಲ್ ವಿನಾಯಿತಿ ನೀಡಬೇಕು. ರಾಷ್ಟ್ರೀಯ ಹೆದ್ದಾರಿಗೆ ಹಾರೋಹಳ್ಳಿ, ಕನಕಪುರ ಭಾಗದ ರೈತರು ಜಮೀನು ಬಿಟ್ಟು ಕೊಟ್ಟಿದ್ದಾರೆ ಎಂದರು. ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಬೆಂಗಳೂರು ದಿಂಡಿಗಲ್ ರಸ್ತೆಯನ್ನು ತರಾತುರಿಯಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಿದ್ದಾರೆ. ಇಲ್ಲಿ ಹೆದ್ದಾರಿಯ ಲಕ್ಷಣಗಳೇ ಇಲ್ಲವಾಗಿದೆ. ಸರ್ವಿಸ್ ರಸ್ತೆ ನಿರ್ಮಿಸದೆಯೇ ಟೋಲ್ ನಿರ್ಮಿಸಿದ್ದಾರೆ. ಇದು ಯಾವ ನ್ಯಾಯ? ಜಿಲ್ಲಾಧಿಕಾರಿ ಕೂಡಲೇ ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ಟೋಲ್‌ನಲ್ಲಿ ಕನಕಪುರ, ಹಾರೋಹಳ್ಳಿ ರೈತರಿಗೆ ವಿನಾಯಿತಿ ನೀಡಬೇಕು ಎಂದು ಒತ್ತಾಯಿಸಿದರು.

ನಿತ್ಯ ನಾವು ಬೆಳೆದ ಬೆಳೆಗಳನ್ನು ಬೆಂಗಳೂರಿಗೆ ಸಾಗಿಸಬೇಕಿದೆ. ಹೀಗಿರುವಾಗ ಟೋಲ್ ಕಟ್ಟಿ ನಾವು ಉಳಿಸುವುದಾದರೂ ಏನು? ಹಾರೋಹಳ್ಳಿ, ಕನಕಪುರದ ರೈತರು ರೈತರಲ್ಲವೇ? ಕೂಡಲೇ ಜಿಲ್ಲಾಧಿಕಾರಿ ಸಭೆ ನಡೆಸಿ ಸರ್ವೀಸ್ ರಸ್ತೆ ನಿರ್ಮಿಸುವವರೆಗೂ ಟೋಲ್ ಮುಚ್ಚಿಸಬೇಕು ಎಂದು ಆಗ್ರಹಿಸಿದರು.

ರೈತ ಸಂಘದ ಮುಖಂಡ ಹರೀಶ್ ಮಾತನಾಡಿ, ದಿನನಿತ್ಯ ಬೆಳೆದ ಬೆಳೆಗಳನ್ನು ಬೆಂಗಳೂರಿಗೆ ಸಾಗಿಸುತ್ತೇವೆ. ಆದರೆ ₹170 ಪಾವತಿಸಬೇಕು ಹೀಗಾದರೆ ರೈತರು ಏನು ಮಾಡುವುದು. ಇಷ್ಟೆಲ್ಲ ಬೆಳವಣಿಗೆ ನಡೆಯುತ್ತಿದ್ದರೂ ರಾಮನಗರ ಕ್ಷೇತ್ರದ ಶಾಸಕರು ತುಟಿ ಬಿಚ್ಚುತ್ತಿಲ್ಲ ಎಂದರು.

ಸಚಿವ ಬೈರತಿಗೆ ಮಾತೃ ವಿಯೋಗ

ಬೆಂಗಳೂರು: ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರ ತಾಯಿ ಸುಶೀಲಮ್ಮ (85) ಅವರು ಶನಿವಾರ ನಿಧನರಾದರು.


ಸುಶೀಲಮ್ಮ

ಅವರಿಗೆ ಪುತ್ರಿ ಬಿ.ಎಸ್.ರಮಾದೇವಿಯೂ ಇದ್ದಾರೆ. ಬೈರತಿಯಲ್ಲಿರುವ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಚಿವ ಸುರೇಶ್ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮದರ್ಶನಕ್ಕೆ ಇಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಚಿವರಾದ ದಿನೇಶ್ ಗುಂಡೂರಾವ್, ರಹೀಂ ಖಾನ್, ಶಾಸಕರಾದ ಎಸ್. ಆರ್. ವಿಶ್ವನಾಥ್, ರಿಜ್ವಾನ್ ಅರ್ಷದ್, ಬೈರತಿ ಬಸವರಾಜ್ ಸೇರಿದಂತೆ ಅನೇಕರು ಸುಶೀಲಮ್ಮ ಅವರಿಗೆ ಅಂತಿಮ ನಮನ ಸಲ್ಲಿಸಿದರು.

PARAS

ಬುಕರ್ ಬಾನು... ಕನ್ನಡದ ದೀಪ

‘ಬರವಣಿಗೆ ಒಂದು ರಾಜಕೀಯ ಕ್ರಿಯೆ’

ದೇವು ಪತ್ತಾರ

- **ಮೇಡಂ, ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪಡೆದದ್ದಕ್ಕೆ ಅಭಿನಂದನೆಗಳು. ಪ್ರಶಸ್ತಿ ಘೋಷಿಸಿದಾಗ ಏನನ್ನಿಸಿತು? ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?**

ಬಾನು ಮುಷ್ತಾಕ್: ಸಮಾಧಾನ- ಖುಷಿ, ನೆಮ್ಮದಿ. ಭಯಂಕರ ಟೆನ್ಶನ್ ಇತ್ತು. ಒಂದರೆಕ್ಷಣ ನಂಬಲಿಕ್ಕೇ ಆಗಲಿಲ್ಲ. ಇಲ್ಲಿಂದ ಲಂಡನ್‌ಗೆ ಹೋಗುವಾಗ ಪ್ರಶಸ್ತಿ ಬರಬಹುದು ಎಂಬ ನಿರೀಕ್ಷೆ ಇರಲಿಲ್ಲ. ಅಂತಿಮ ಪಟ್ಟಿಯ ಆರು ಪುಸ್ತಕಗಳ ಪೈಕಿ ಒಂದು ಆಗಿದ್ದೇ ಹೆಚ್ಚು ಅನ್ನಿಸಿತ್ತು. ಅದನ್ನು ಕೂಡ ಕನಸು ಮನಸಿನಲ್ಲಿ ನೆನೆಸಿರಲಿಲ್ಲ. ಸಾಕಷ್ಟು ನಿರಾಳವಾಗಿಯೇ ಹೋಗಿದ್ದೆ. ಪ್ರಕಟಿಸುವ ಕೊನೆಯ ಗಳಿಗೆಯಲ್ಲಿ ಹೆಚ್ಚು ಟೆನ್ಶನ್- ಆತಂಕ ಉಂಟಾಯಿತು. ಸುತ್ತಲಿನ ವಾತಾವರಣ ಹೆಚ್ಚು ಒತ್ತಡ ಉಂಟು ಮಾಡಿತು. ಸ್ಪರ್ಧೆಯಲ್ಲಿ ಇರುವ ಬೇರೆ ಕೃತಿಗಳ ಬಗೆಗೂ ಒಳ್ಳೆಯ ಅಭಿಪ್ರಾಯ ಇತ್ತು. ಆದರೆ ಅವುಗಳ ಬಗ್ಗೆ ನನಗೆ ಗೊತ್ತಿರಲಿಲ್ಲ. ಸ್ಪರ್ಧೆಯಲ್ಲಿದ್ದ ಉಳಿದ ಕೃತಿಗಳ ಗುಣಮಟ್ಟದ ಬಗ್ಗೆ ಹೆಚ್ಚು ಮಾಹಿತಿ ಇರಲಿಲ್ಲ. ಕನ್ನಡದ ಕತೆಗಳನ್ನು ಇಂಗ್ಲಿಷಿನ ನಿರ್ಣಾಯಕರು ಹೇಗೆ ಪರಿಗಣಿಸುತ್ತಾರೆ, ಅವರ ಆಸಕ್ತಿ ಯಾವ ರೀತಿ ಇರುತ್ತದೆ ಎಂಬ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಉಳಿದವು ಕಾದಂಬರಿಗಳು ಮತ್ತು ಉತ್ತಮ ಸಾಹಿತ್ಯ ಕೃತಿಗಳು ಎಂಬ ಅಭಿಪ್ರಾಯ ಕೇಳಿದ್ದರಿಂದ ಇಲ್ಲಿಯವರೆಗೆ ಬಂದದ್ದೇ ದೊಡ್ಡದು ಎಂದು ಭಾವಿಸಿದ್ದೆ. ಪ್ರಶಸ್ತಿ ಘೋಷಿಸಿದಾಗ ಖುಷಿಯಿಂದ ಕಣ್ಣಾಲಿಗಳು ತುಂಬಿ ಬಂದವು. ಅನಿರೀಕ್ಷಿತ ಸಂಭ್ರಮ ಮನ ತುಂಬಿ ಬಂತು.



- **ಕನ್ನಡದ ಕೃತಿಯೊಂದಕ್ಕೆ ದೊರೆತ ಅಪೂರ್ವ ಮನ್ನಣೆ ಇದು. ಇದು ಕನ್ನಡ ಭಾಷೆ- ಸಾಹಿತ್ಯಕ್ಕೆ ಎಷ್ಟು, ಹೇಗೆ ಸ್ಫೂರ್ತಿ ನೀಡಬಲ್ಲದು?**

ಈ ಪ್ರಶಸ್ತಿಯು ಜಗತ್ತು ಕನ್ನಡದ ಕಡೆಗೆ ತಿರುಗಿ ನೋಡುವ ಹಾಗೆ ಮಾಡಿದೆ. ಇದು ತಂದು ಕೊಡುವ ಅಪಾರ ಹಣ ಮತ್ತು ಖ್ಯಾತಿ ಊಹಿಸಲೂ ಸಾಧ್ಯವಿಲ್ಲ. ಜಗತ್ತಿನ ಎಷ್ಟೋ ಕಡೆಗಳಲ್ಲಿ ಕನ್ನಡದ ಬಗ್ಗೆ ಗೊತ್ತಿಲ್ಲ. ಇದರಿಂದಾಗಿ ಭಾಷೆ- ಸಾಹಿತ್ಯದ ಕುರಿತು ಗೊತ್ತಾಯಿತು. ಕನ್ನಡದ ಲೇಖಕರು ಕಂಡು ಕೇಳರಿಯದ ಮೊತ್ತ ಹಾಗೂ ಜನಪ್ರಿಯತೆಯ ಪ್ರಶಸ್ತಿ ಇದು. ಕನ್ನಡ ಸಾಹಿತ್ಯದಲ್ಲಿ ಅಪಾರ ಸತ್ವ ಇದೆ. ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಕನ್ನಡದ ಕಡೆಗೆ, ಇಲ್ಲಿನ ಸಾಹಿತ್ಯ ಕೃತಿಗಳ ಕಡೆಗೆ ಗಮನ ಸೆಳೆಯಲು ಕಾರಣವಾಗುತ್ತದೆ. ಕನ್ನಡದ ಕೃತಿಗಳ ಅನುವಾದದ ಸಾಧ್ಯತೆಗಳು ಹೆಚ್ಚಾಗಲಿವೆ. ಕನ್ನಡದಲ್ಲಿ ಇರುವ ಮಹತ್ವದ ಕೃತಿಗಳ ಕಡೆಗೂ ಜಗತ್ತು ಗಮನ ಹರಿಸಲಿದೆ. ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಕನ್ನಡದ ವಿಸ್ತರಣೆ-ಪ್ರಚಾರ ನಡೆದು ಸ್ವರೂಪ ಬದಲಾಗಬಹುದು. ಮುಂಬರುವ ದಿನಗಳಲ್ಲಿ, ಅನುವಾದವಾಗದೇ ಇರುವ ಕನ್ನಡದ ಸತ್ವಯುತ ಕೃತಿಗಳಿಗೆ ಮನ್ನಣೆಯ ದಾರಿ ತೆರೆಯಲಿದೆ. ಜಾಗತಿಕ ಮಟ್ಟದಲ್ಲಿ ಕನ್ನಡದ ಹಾದಿ ತೆರೆಯಲು ಇದು ಸಕಾಲ.

- **ಅಂತರರಾಷ್ಟ್ರೀಯ ಮನ್ನಣೆಯಲ್ಲಿ ಅನುವಾದದ ಮಹತ್ವ ಎಷ್ಟು?**

ಅನುವಾದದ ಮಹತ್ವ ತುಂಬಾ ಇದೆ. ಒಂದು ಸಾಹಿತ್ಯ ಕೃತಿ ಅದು ರಚನೆಯಾದ ಭಾಷೆಯಲ್ಲದೆ ಬೇರೆ ಕಡೆಗಳಲ್ಲಿ ಪರಿಚಯ-ಪ್ರಚಾರ ಆಗಲು ಅನುವಾದಗಳು ಅತ್ಯಗತ್ಯ. ಅವೇ ನಿಜವಾದ ಕೊಂಡಿ. ಎರಡೂ ಭಾಷೆಯಲ್ಲಿ ಪ್ರಭುತ್ವ ಇರುವವರು ಮಾಡುವ ಉತ್ತಮ ಅನುವಾದಗಳು ಸಹಜವಾಗಿಯೇ ಗಮನ ಸೆಳೆಯುತ್ತವೆ. ಸಾಹಿತ್ಯ ಕೃತಿಗಳು ಬೇರೆ ಭಾಷೆಗಳಿಗಿಂತ ಇಂಗ್ಲಿಷಿಗೆ ಅನುವಾದವಾಗುವುದು ತುಂಬಾ ಅಗತ್ಯ. ಇದರಿಂದಾಗಿ ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಅನುವಾದ ಆಗುವುದು ಸಾಧ್ಯವಾಗುತ್ತದೆ.

- **ಬದಲಾದ ಕಾಲ- ಸಂದರ್ಭದಲ್ಲಿ ಬರೆಯುವುದು ಹೆಚ್ಚು ಆತಂಕ- ಒತ್ತಡ ಹೇರುತ್ತಿದೆಯೇ?**

ಬರವಣಿಗೆ ಒಂದು ರಾಜಕೀಯ ಕ್ರಿಯೆ. ಸಹಜವಾಗಿಯೇ ಅದು ಪ್ರತಿಕ್ರಿಯೆಗೆ ಕಾರಣವಾಗುತ್ತದೆ. ಅಧಿಕಾರದ ಕೇಂದ್ರಗಳು ಪ್ರತಿರೋಧ ಒಡ್ಡುವುದು ಕೂಡ ನಿರೀಕ್ಷಿತ. ಹಾಗಂತ ಬರವಣಿಗೆಯ ಬಂಡಾಯವನ್ನು ನಿಲ್ಲಿಸಲು ಸಾಧ್ಯವಿಲ್ಲ. ಬರೆಯುವುದೇ ಬಂಡಾಯ.

- **ಬರವಣಿಗೆ ಆರಂಭಿಸಿದ ದಿನಗಳಿಗೂ ಈಗ ಬರೆಯುವುದರಲ್ಲಿ ಏನು ಬದಲಾವಣೆ ಆಗಿದೆ?**

ಸಮಕಾಲೀನ ಯುವ ಲೇಖಕರು ಹೊಸ ಬಗೆಯ ವಸ್ತು ಮತ್ತು ತಂತ್ರ ಬಳಸಿ ಬರೆಯುತ್ತಿದ್ದಾರೆ. ನನ್ನ ಬರವಣಿಗೆಯ ವಸ್ತು ಮತ್ತು ಸ್ವರೂಪದಲ್ಲಿಯೂ ಬಹಳಷ್ಟು ಬದಲಾವಣೆ ಆಗಿದೆ. ಹಿಂದೆ ಪಿತೃ ಪ್ರಧಾನ ವ್ಯವಸ್ಥೆಯ ವಿರುದ್ಧ ಬರೆಯುತ್ತಿದ್ದೆ. ಬಾಬರಿ ಮಸೀದಿಯ ಘಟನೆಯ ನಂತರದ ದಿನಗಳಲ್ಲಿ ಸಮಾಜದಲ್ಲಿ ಉಂಟಾದ ಸ್ಥಿತ್ಯಂತರ, ಕೋಮುವಾದ, ಸಾರ್ವಜನಿಕ ಹಿಂಸೆಗಳು ಬರವಣಿಗೆಯ ಮೇಲೆ ಪ್ರಭಾವ ಬೀರಿದವು. ಸಹಬಾಳ್ವೆ, ನೆಮ್ಮದಿ ಬಹಳ ಮುಖ್ಯ ಅನ್ನಿಸಿದವು. ಬರವಣಿಗೆಯ ಸ್ವರೂಪ ಬದಲಾಯಿತು. ಸಮಾಜವು ಬದಲಾದ ಹಾಗೆ ಬರವಣಿಗೆಯ ವಸ್ತು- ಸ್ವರೂಪವು ಬದಲಾಗುತ್ತದೆ. ನಾನು ಮಾತ್ರ ಆಯಾ ಕಾಲಕ್ಕೆ ಮತ್ತು ಆಗಾಗ ಅನ್ನಿಸಿದ ಹಾಗೆ ಬರೆಯುತ್ತ ಬಂದವಳು.

- **ಪತ್ರಕರ್ತೆ, ವಕೀಲೆ ಮತ್ತು ಸಾಮಾಜಿಕ ಕಾರ್ಯಕರ್ತೆ ಆಗಿರುವ ನಿಮಗೆ ಈ ಚಟುವಟಿಕೆಗಳು ಬರವಣಿಗೆಗೆ ಅಡ್ಡಿಯನ್ನುಂಟು ಮಾಡಲಿಲ್ಲವೇ?**

ಇಲ್ಲ. ಈ ಚಟುವಟಿಕೆಗಳು ನನ್ನ ಬರವಣಿಗೆಯನ್ನು ಶ್ರೀಮಂತಗೊಳಿಸಿದವು. ವಿಭಿನ್ನ ಅನುಭವಲೋಕ ತೆರೆದುಕೊಳ್ಳಲು ಕಾರಣವಾದವು. ವ್ಯಕ್ತಿಗಳ ಜೊತೆಗೆ ಒಡನಾಡಿದ ಅನುಭವ ಮತ್ತು ಸಂಘಟನೆಗಳಲ್ಲಿ ಮಾಡಿದ ಕೆಲಸ ನನ್ನ ಬರವಣಿಗೆಗೆ ತುಂಬಾ ನೆರವಾಯಿತು. ಬರವಣಿಗೆಗೆ ಬದುಕು ಬಹಳ ಮುಖ್ಯ. ನನ್ನದು ಕೇವಲ ಸಾಹಿತ್ಯ ಕೇಂದ್ರಿತ ಆಲೋಚನ ಕ್ರಮ ಅಲ್ಲ. ಬದುಕು ಸುಧಾರಿಸುವುದಕ್ಕಾಗಿ ಹೋರಾಟ ನಡೆಸುವುದು, ಘನತೆಯ ಬದುಕನ್ನು ನಮ್ಮದಾಗಿಸಿಕೊಳ್ಳುವುದು ಬಹಳ ಮುಖ್ಯ. ಅದಕ್ಕಾಗಿ ಬರವಣಿಗೆಯೂ ನೆರವಾಗಬೇಕು ಎಂಬ ನಂಬುಗೆ ನನ್ನದು.

8ನೇ ಪುಟಕ್ಕೆ...

ಲೇಖಕಿ ಬಾನು ಮುಷ್ತಾಕ್ ಅವರು ರಚಿಸಿ, ದೀಪಾ ಭಾಸ್ತಿ ಅವರು ಅನುವಾದಿಸಿದ ಹನ್ನೆರಡು ಕತೆಗಳ ಅನುವಾದಿತ ಕೃತಿ ‘ಹಾರ್ಟ್ ಲ್ಯಾಂಪ್’ 2025ರ ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿಗೆ ಭಾಜನವಾಗಿದೆ. ಇಂತಹ ಅನನ್ಯ ಗೌರವಕ್ಕೆ ಪಾತ್ರರಾದ ಲೇಖಕಿ ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪಾ ಅವರೊಂದಿಗೆ ನಡೆಸಿದ ಮಾತುಕತೆಗಳ ಆಯ್ದ ಭಾಗ ಇಲ್ಲಿದೆ...

‘ಅನುವಾದವೂ ಸ್ವತಂತ್ರ ಪಠ್ಯ’

ಪ್ರೀತಿ ನಾಗರಾಜ್

- **ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿಯ ಹೆಮ್ಮೆಯನ್ನು ಕನ್ನಡಕ್ಕೆ ತಂದಿರಿ. ಕೊಡಗಿನ ಗೌರಮ್ಮ, ಶಿವರಾಮ ಕಾರಂತರ ಕತೆಗಳನ್ನು ಅನುವಾದಿಸಿದ್ದೀರಿ. ಇಂಗ್ಲಿಷ್ ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿದ್ದ ನೀವು ಕನ್ನಡ ಕೃತಿಗಳ ಅನುವಾದ ಪ್ರಪಂಚಕ್ಕೆ ಬಂದಿರಿ. ಇದಕ್ಕೆ ಇಂಬು ಕೊಡುವಂಥ ಸಂದರ್ಭವನ್ನು ವಿವರಿಸುತ್ತೀರಾ?**

ದೀಪಾ ಭಾಸ್ತಿ: ನಾನು ಹುಟ್ಟಿ ಬೆಳೆದ ಊರು ಮಡಿಕೇರಿ. ನಾನು ಪತ್ರಿಕೋದ್ಯಮದ ಮುಖ್ಯವಾಹಿನಿಯನ್ನು ಬಿಟ್ಟು 15 ವರ್ಷಗಳೇ ಕಳೆದವು. ನಾನು ಮತ್ತು ನನ್ನ ಪತಿ ಮಡಿಕೇರಿಗೆ ಮರಳಬೇಕು ಎಂದು ಬಹಳ ವರ್ಷಗಳಿಂದ ಆಲೋಚಿಸುತ್ತಿದ್ದೆವು. ಕೋವಿಡ್ ಸಮಯದಲ್ಲಿ ಊರಿಗೆ ಮರಳಿಬಿಟ್ಟೆವು. ಸಾವಕಾಶದ, ಧಾವಂತವಿಲ್ಲದ ಬದುಕು ನಡೆಸುತ್ತಾ ಸಣ್ಣ ಮಟ್ಟದ ಕೃಷಿಯಲ್ಲಿ ತೊಡಗಿಸಿಕೊಂಡು ಬದುಕಬೇಕು ಎನ್ನುವುದು ನಮ್ಮ ಗುರಿಯಾಗಿತ್ತು. ದೊಡ್ಡ ನಗರಗಳ ಬದುಕು ನಮ್ಮಿಬ್ಬರಿಗೂ ಎಷ್ಟೆಷ್ಟೂ ಇಷ್ಟ ಇರಲಿಲ್ಲ. ನನ್ನ ಫ್ರೀಲ್ಯಾನ್ಸ್ ಕೆಲಸ ಹಾಗೂ ಉಳಿದ ಸಾಹಿತ್ಯ ಅನುವಾದಕ್ಕೆ ಸಂಬಂಧಪಟ್ಟ ಕೆಲಸವನ್ನೂ ಕಡಿಮೆ ಮಾಡಿಕೊಳ್ಳಬೇಕು ಎನ್ನುವುದು ನನ್ನ ಆಲೋಚನೆ ಆಗಿತ್ತು. ಆದರೆ, 2020ರ ನಡುವಲ್ಲಿ ನಾವು ಮಡಿಕೇರಿಗೆ ಹೋದ ಮೇಲೆ ನಡೆದದ್ದು ತದ್ವಿರುದ್ಧವಾದುದೇ. ಅನುವಾದ ಕೆಲಸದಲ್ಲಿ ಇನ್ನೂ ಹೆಚ್ಚು ತೊಡಗಿಸಿಕೊಂಡು ಬಿಡುವಂತೆ ಆಗಿ ಕೆಲಸ ಹೆಚ್ಚಾಯಿತೇ ಹೊರತು ಕಡಿಮೆ ಆಗಲಿಲ್ಲ.

ಬೆಂಗಳೂರಿನಂತಹ ದೊಡ್ಡ ನಗರದಲ್ಲಿ ಕನ್ನಡ ಬಳಕೆ ಆಗುವುದೇ ಕಡಿಮೆ ಆಗುತ್ತಿದೆ. ಪತ್ರಿಕೋದ್ಯಮದಲ್ಲಿ ಕೆಲಸ ಮಾಡುವಾಗ ಕೆಲವೊಮ್ಮೆ ತಾಯ್ನುಡಿಯ ಜೊತೆ ನನ್ನ ಸಂಬಂಧ ಬಲವಾಗಿಲ್ಲ ಎನ್ನುವ ಭಾವನೆ ನನ್ನೊಳಗೆ ಬೆಳೆಯುತ್ತಲೇ ಇತ್ತು. ಹೀಗಿರುವಾಗ 2012ರಲ್ಲಿ, ಬರಹಗಾರರಾದ ಕೊಡಗಿನ ಗೌರಮ್ಮ ಅವರ ಜನ್ಮಶತಮಾನೋತ್ಸವ ಆಚರಿಸಲಾಯಿತು. ಆ ಸಂದರ್ಭದಲ್ಲಿ ‘ಹಿಂದೂ’ ಪತ್ರಿಕೆಯಲ್ಲಿ ಅವರ ಬಗ್ಗೆ ಪ್ರಕಟವಾಗಿದ್ದ ಒಂದು ಲೇಖನ ನನ್ನ ಕಣ್ಣಿಗೆ ಬಿತ್ತು. ಅವರ ಬಗ್ಗೆ ಹೆಚ್ಚು ತಿಳಿಯಬೇಕು ಎಂಬ ಆಸಕ್ತಿ ಹುಟ್ಟಿತು. ಗೌರಮ್ಮನವರ ಕೃತಿಗಳ ಬಗ್ಗೆ ಕನ್ನಡದಲ್ಲೂ ಹೆಚ್ಚು ವಿಚಾರಮಂಥನ ನಡೆದದ್ದು ನನ್ನ ಗಮನಕ್ಕೆ ಬಂದಿರಲಿಲ್ಲ. ಆ ದಿನಗಳಲ್ಲಿ ಕೊಡಗಿನ ಗೌರಮ್ಮನವರ ಕೃತಿ/ಕತೆ ಅನುವಾದ ಮಾಡಬೇಕು ಎಂದು ಬಲವಾಗಿ ಅನ್ನಿಸಿತು. ಆದರೆ, ಅನುವಾದ ಕೆಲಸದ ಬಗ್ಗೆಯಾಗಲೀ, ಅದೊಂದು ಕಲೆ, ಅದನ್ನು ಅಭ್ಯಾಸ ಮಾಡುವುದು, ಕಾರ್ಯಗತಗೊಳಿಸುವುದು ಹೇಗೆ ಎಂದಾಗಲೀ ನನಗೆ ಎಷ್ಟೂ ತಿಳಿದಿರಲಿಲ್ಲ. ಅದೊಂದು ಅಪರಿಚಿತ ಜಗತ್ತಾಗಿತ್ತು. ಆಗಾಗ ಅದರಲ್ಲಿ ತೊಡಗಿಸಿಕೊಳ್ಳುತ್ತಾ, ಮತ್ತೆ ಅದರ ಕಡೆ ಗಮನವನ್ನೇ ಹರಿಸದೆ ಬೇರೇನೋ ಮಾಡುತ್ತಾ ಮರೆತುಬಿಡುತ್ತಾ ಇದ್ದೆ. ಕೊನೆಗೊಮ್ಮೆ ಅನುವಾದ ಕಾರ್ಯ ಮುಗಿದು 2023ರ ಜನವರಿಯಲ್ಲಿ ಕೊಡಗಿನ ಗೌರಮ್ಮನವರ ಕತೆಗಳ ಅನುವಾದದ ಮೊದಲ ಪುಸ್ತಕ ‘ಫೇಟ್ಸ್ ಗೇಮ್ ಆ್ಯಂಡ್ ಅದರ್ ಸ್ಟೋರೀಸ್’ ಯೋಡಾ ಪ್ರೆಸ್‌ನಿಂದ ಪ್ರಕಟವಾಯಿತು. ಅನುವಾದ ಮಾಡುತ್ತಾ ಹೋದ ಹಾಗೆಲ್ಲಾ ನಾನು ಕನ್ನಡಕ್ಕೆ ಹತ್ತಿರವಾಗುತ್ತಾ ಇದ್ದೇನೆ ಅನ್ನುವ ಭಾವನೆ ನನ್ನೊಳಗೆ ದಟ್ಟವಾಗುತ್ತಾ ಹೋಯಿತು. ಯಾಕೆಂದರೆ ನಾನು ಓದಿದ್ದು ಇಂಗ್ಲಿಷ್ ಮಾಧ್ಯಮದಲ್ಲಿ, ಮತ್ತೆ ಕೆಲಸ ಮಾಡಿದ್ದೂ ಇಂಗ್ಲಿಷ್ ಭಾಷೆ ಪ್ರಧಾನವಾಗಿದ್ದ ಕಡೆಗಳಲ್ಲಿ. ಹಾಗಾಗಿ, ಅದು ನನಗೆ ಹೊಸ ಜಗತ್ತಿನ ಪರಿಚಯ ಮಾಡಿಕೊಟ್ಟಿತು. ಅಲ್ಲಿಂದ ನಾನು ಕನ್ನಡವನ್ನು ಹೆಚ್ಚು ಅರ್ಥೈಸಿಕೊಳ್ಳಲು ಗಂಭೀರ ಪ್ರಯತ್ನಗಳನ್ನು ಆರಂಭಿಸಿದೆ.



ಅನುವಾದದ ಮೇಲೆ ಕೆಲಸ ಮಾಡುತ್ತಾ ಹೋದಂತೆ ಕನ್ನಡ ಭಾಷೆಗೆ ಹತ್ತಿರವಾಗುತ್ತಾ ಇರುವ ಭಾವನೆ ಇನ್ನೂ ಬೆಳೆದು ಗಟ್ಟಿಯಾಗುತ್ತಾ ಹೋಯಿತು. ಹೀಗಾಗಿ, ಆ ಕೆಲಸದ ಮೇಲೆ ಆಸಕ್ತಿ ಇನ್ನೂ ಹೆಚ್ಚುತ್ತಲೇ ಹೋಯಿತು. ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಮಾಡಿದರೂ ಅದು ಕನ್ನಡಕ್ಕೆ ಹತ್ತಿರವಾಗುವ ಮಾರ್ಗವೇ ಅಲ್ಲವೇ? ಹಾಗೆಯೇ ಆಸಕ್ತಿ ಇನ್ನೂ ಬೇರು ಬಿಟ್ಟು ಭದ್ರವಾಯಿತು.

- **ಬಾನು ಅವರ ಕತೆಗಳು ಅವರ ಪೀಳಿಗೆಯವರಿಗಿಂತ ಭಿನ್ನವಾಗಿರುವ ನಿಮ್ಮ ಒಳಗೆ ಪ್ರತಿಧ್ವನಿಸಿದ್ದು ಹೇಗೆ? ಹೀಗೆ ಪೀಳಿಗೆಗಳ ನಡುವಿನ ಅಂತರವನ್ನು, ಕತೆಗಳ ಧ್ವನಿ ಹಾಗೂ ಧಾಟಿಯನ್ನು ಹೇಗೆ ಜೀರ್ಣಿಸಿಕೊಂಡು ಅನುವಾದದ ಮೂಲಕ ಮರುರೂಪಿಸಿದಿರಿ?**

ನನ್ನ ಮಟ್ಟಿಗೆ ಬಾನು ಅವರ ಜೀವನಾನುನುಭವ, ಜೊತೆಗೆ ಅವರ ಸಾಹಿತ್ಯ ಬಹಳ ಭಿನ್ನವಾಗಿ ನಿಲ್ಲುತ್ತವೆ. ನಾವಿಬ್ಬರೂ ಬೇರೆಯೇ ಪೀಳಿಗೆಯವರು ಆಗಿದ್ದರೂ ಅವರು ತಮ್ಮ ಕತೆಗಳ ಮೂಲಕ ಮುಟ್ಟಬಯಸುವ ಎಲ್ಲಾ ವಿಷಯಗಳು, ಕಳಕಳಿಗಳು ನಮ್ಮ ಸಮಯಕ್ಕೂ ಅಬಾಧಿತವಾಗಿಯೇ ಮುಂದುವರಿದಿವೆ ಅಲ್ಲವೇ? ಮಹಿಳೆಯರ ಮೇಲಾಗುವ ದೌರ್ಜನ್ಯ, ಪುರುಷಕೇಂದ್ರಿತ ಹಾಗೂ ಪುರುಷಪ್ರಧಾನ ಸಮಾಜದ ದಬ್ಬಾಳಿಕೆಗಳು, ಜಾತಿ ಧರ್ಮದ ತಿಕ್ಕಾಟಗಳು, ಅದರಡಿ ನಲುಗಿ ಹೋಗುವ ಹೆಣ್ಣುಮಕ್ಕಳು, ಅವರ ಅಸ್ಮಿತೆ, ಹಾಗೂ ಜೀವನ, ಅವರು ಬದುಕಿ ಬಾಳುವ ಬಗೆ ಹಾಗೂ ಆಯ್ದುಕೊಳ್ಳುವ ಮಾರ್ಗಗಳು, ಇಂದಿಗೂ ಪ್ರಸ್ತುತವಾಗಿವೆ. ಇನ್ನು ಮುಂದೆಯೂ ಹೀಗೇ ಮುಂದುವರಿಯುವ ಲಕ್ಷಣಗಳೇ ಹೆಚ್ಚಾಗಿವೆ. ಹಾಗಾಗಿ, ಬಾನು ಅವರ ಕಥೆಗಳಲ್ಲಿ ನಾನು ಕಂಡ ಜಗತ್ತು ತೀರಾ ಅಪರಿಚಿತವಾಗಿ ಏನೂ ಇರಲಿಲ್ಲ. ಅವರ ಕೃತಿಗಳು ನನಗೆ ಭಾಷೆ ಮತ್ತು ಆ ಸಾಮಾಜಿಕ ನೆಲೆಗಟ್ಟಿಗೆ ಇನ್ನೂ ಹೆಚ್ಚಿನ ಸಾಮೀಪ್ಯ ಒದಗಿಸಿದವು.

8ನೇ ಪುಟಕ್ಕೆ...

ಎದೆಯ ಹಣತೆ

ಬಾನು ಅವರ ಕತೆಯ ಓದು

ಅರೆ ತೆರೆದಿದ್ದ ಬಾಗಿಲನ್ನು ಸ್ವಲ್ಪ ಸರಿಸಿ, ಮೆಹರುನ್ ಒಳಗೆ ಕಾಲಿಟ್ಟಳೋ ಇಲ್ಲವೋ ಹಜಾರದಲ್ಲಿದ್ದ ದೀವಾನ್ ಕಾಟ್‌ನ ಮೇಲೆ ಅಡ್ಡಾಗಿದ್ದ ಅವಳ ತಂದೆ, ಅವರೊಡನೆ ಯಾವುದೋ ವಿಷಯವನ್ನು ಮೆಲುದನಿಯಲ್ಲಿ ಮಾತನಾಡುತ್ತಿದ್ದ ದೊಡ್ಡಣ್ಣ ಇಬ್ಬರೂ ಗಪ್ಪೆಂದು ಬಾಯಿಮುಚ್ಚಿ ಅವಳನ್ನೇ ನೋಡಲಾರಂಭಿಸಿದರು. ಒಳಗಿನಿಂದ ಓಡಿಬಂದ ಎರಡನೆ ಅಣ್ಣ ಅಮಾನ್‌ನ ಮಗಳು ರಾಬಿಯ ‘ಮೆಹರುನ್ ಪುಪ್ಪು (ಅತ್ತೆ) ಬಂದರು’ ಎಂಬ ಕೂಗು ಹಾಕಿದ್ದೇ ತಡ ತನ್ನ ಕೋಣೆಯಲ್ಲಿದ್ದ ಅಮಾನ್ ಶೇವ್ ಮಾಡಲು ಸಾಬೂನಿನ ನೊರೆ ಹಚ್ಚಿದ್ದ ಗಲ್ಲದೊಡನೆ ಕೈಯಲ್ಲಿ ಬ್ರಷ್ ಹಿಡಿದಿದ್ದಂತೆಯೇ ಹಜಾರಕ್ಕೆ ಬಂದು ನಂಬಲಾರದವನಂತೆ ನೋಡತೊಡಗಿದ. ತಮ್ಮ ಕೋಣೆಯಲ್ಲಿ ಮಕ್ಕಳಿಗೆ ರಾಗವಾಗಿ ಕುರ್ ಆನ್ ಹೇಳಿಕೊಡುತ್ತಿದ್ದ ಅವಳ ದೊಡ್ಡ ಅತ್ತಿಗೆ ತಲೆಯ ಮೇಲಿನ ಸೆರಗು ಜಾರುತ್ತಿರುವುದರ ಪರಿವೆಯೂ ಇಲ್ಲದೆ ಹಜಾರಕ್ಕೆ ಬಂದು ನಿಂತು ದಿಟ್ಟಿಸತೊಡಗಿದಳು. ಕೃಶವಾದ ಕೈಗಳ ಅವಳ ತಾಯಿ ತಸ್‌ಬೀಹ್ (ಜಪಮಾಲೆ) ಹಿಡಿದಿದ್ದಂತೆಯೆ ಬಂದು ‘ನಿಜವೇ...ಇದು ನಿಜವೇ?’ ಎನ್ನುವಂತೆ ದೃಷ್ಟಿಹಾಯಿಸಿ ಗರ ಬಡಿದವಳಂತೆ ನಿಂತಳು. ತವದ ಮೇಲಿನ ಚಪಾತಿ ಸುಟ್ಟು ಕರಕಲಾಗುತ್ತಿರುವ ಪರಿವೆಯೂ ಇಲ್ಲದೆ ಹಜಾರದ ಬಾಗಿಲಿನ ಹಿಂಬದಿಯಿಂದ ಅವಳ ತಂಗಿಯರಿಬ್ಬರು ರೇಹಾನ ಮತ್ತು ಸಬೀಹ ಇಣುಕುತ್ತಿದ್ದರು. ಸದ್ಯ ತಮ್ಮ ಅಲ್ತಾಫ್ ಮನೆಯಲ್ಲಿರಲಿಲ್ಲ. ಒಟ್ಟಿನಲ್ಲಿ ಆ ಕ್ಷಣದಲ್ಲಿ...ಇಡೀ ಮನೆಯೇ ಸ್ತಬ್ಧವಾಗಿ ಬಿಟ್ಟಿತು. ಅಚೇತನವಾದ ಆ ಮನೆ ಅವಳಿಗೆ ಅಪರಿಚಿತವೆನಿಸತೊಡಗಿತು. ಒಂಬತ್ತು ತಿಂಗಳು ಹೊಟ್ಟೆಯಲ್ಲಿಟ್ಟುಕೊಂಡು ಸಾಕಿದ ತಾಯಿ, ‘ಬಂದೆಯಾ... ಬಾ ಮಗಳೇ’ ಅನ್ನಲಿಲ್ಲ. ತನ್ನ ಹರವಾದ ಎದೆಯ ಮೇಲೆ ಕುಣಿದು ಕುಪ್ಪಳಿಸುತ್ತಿದ್ದ ಬಾಲೆಯಿಂದ ಮುದಗೊಳ್ಳುತ್ತಿದ್ದ ತಂದೆ ಕಿರುನಗೆಯ ಆಹ್ವಾನವನ್ನು ಬೀರಲಿಲ್ಲ. ಯಾವಾಗಲೂ ಮೈದಡವಿ ‘ನನ್ನ ಪರಿ’ (ಗಂಧರ್ವ ಕನ್ಯ) ಎಂದು ಬೀಗುತ್ತಿದ್ದ ದೊಡ್ಡಣ್ಣನಾಗಲೀ, ಅವಳನ್ನು ಕಾಲೇಜಿಗೆ ಕಳಿಸಲೇಬೇಕೆಂದು ಹಟ ಹಿಡಿದಿದ್ದ ಅಮಾನ್ ಆಗಲೀ ಅವಳನ್ನು ಸ್ವಾಗತಿಸಲಿಲ್ಲ. ಅವರ ಹೆಂಡತಿಯರಿಬ್ಬರೂ ಬೇರೆ ಗ್ರಹದ ವಿಲಕ್ಷಣ ಜೀವಿಯನ್ನು ನೋಡುವಂತೆ ಅವಳನ್ನು ನಿಟ್ಟಿಸುತ್ತಿದ್ದರು.

ಮೆಹರ್‌ಳ ಹೃದಯ ಕುಸಿಯಿತು. ಕಂಕುಳಲ್ಲಿದ್ದ ಒಂಬತ್ತು ತಿಂಗಳ ಮುದ್ದಾದ ಹೆಣ್ಣು ಕೂಸು ಕಿಟ್ಟನೆ ಕಿರುಚಿದಾಗಲೇ ಎಲ್ಲರೂ ಎಚ್ಚರಗೊಂಡದ್ದು. ದೊಡ್ಡಣ್ಣ ದೊಡ್ಡಗಂಟಲಿನಲ್ಲಿಯೇ ಕೇಳಿದ. ‘ಇನಾಯತ್ ಎಲ್ಲಿ?’

ಅವಳು ತಲೆ ತಗ್ಗಿಸಿ ಅಪರಾಧಿಯಂತೆ ನುಡಿದಳು...

(ಬಾನು ಮುಷ್ತಾಕ್ ಅವರ ‘ಹಸೀನಾ ಮತ್ತು ಇತರ ಕಥೆಗಳು’ ಕೃತಿಯನ್ನು ಅಭಿರುಚಿ ಪ್ರಕಾಶನ, ‘ಹಾರ್ಟ್ ಲ್ಯಾಂಪ್’ ಕೃತಿಯನ್ನು ಪೆಂಗ್ವಿನ್ ಸಂಸ್ಥೆ ಪ್ರಕಟಿಸಿವೆ)

ಪೂರ್ಣ ಕಥೆಗಾಗಿ ಈ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ

ಬರಹ-ಬದುಕಿನ ನಡುವಿನ ಗೆರೆ ಅಳಿಸಿಹೋದಾಗ

ಪ್ರತಿಭಾ ನಂದಕುಮಾರ್

ಬುಕರ್ ಪ್ರಶಸ್ತಿಯನ್ನು ಗಳಿಸಿ ಕನ್ನಡದ ಕೀರ್ತಿಯನ್ನು ವಿಶ್ವಮಟ್ಟದಲ್ಲಿ ಹರಡಿರುವ, ಬರಹಗಾರ್ತಿ ಮತ್ತು ಹೋರಾಟಗಾರ್ತಿ ಬಾನು ಮುಷ್ತಾಕ್ ಅವರ ಕೃತಿಗಳ ಬಗ್ಗೆ ವಿಶ್ಲೇಷಣೆ ಮಾಡುವಾಗ, ಅವುಗಳನ್ನು ಉಳಿದವರ ಕತೆಗಳಂತೆ ಕೇವಲ ಕಾಲ್ಪನಿಕ ಎಂದು ನೋಡುವುದು ಸಾಲದು. ಕತೆಗಳೆಲ್ಲವೂ ಆತ್ಮಕತೆಗಳೇ ಎನ್ನುವ ಸರಳೀಕೃತ ಧೋರಣೆಯನ್ನು ಒಪ್ಪಿಕೊಳ್ಳಲಾಗದಿದ್ದರೂ, ಕತೆಗಾರ್ತಿಯೊಬ್ಬರು ವೈಯಕ್ತಿಕ ಬದುಕಿನಲ್ಲಿ ಹೋರಾಟಗಾರ್ತಿಯೂ, ವಕೀಲೆಯೂ, ಸಮಾಜ ಸುಧಾರಕಿಯೂ, ರಾಜಕಾರಣಿಯೂ ಜೊತೆಗೆ ಮತ್ತೂ ಏನೇನೋ ಆದಾಗ ಆಕೆಯ ಬದುಕು ಮತ್ತು ಬರಹಗಳ ನಡುವಿನ ಗೆರೆ ಅಳಿಸಿಹೋಗುತ್ತದೆ. ಅದರಲ್ಲೂ ಅಲ್ಪಸಂಖ್ಯಾತ ಮುಸಲ್ಮಾನ ಸಮುದಾಯದ ಹೆಣ್ಣಾಗಿದ್ದು, ವೈಯಕ್ತಿಕ ಬದುಕಿನ ಹೋರಾಟಗಳು ಮತ್ತು ಹಲವಾರು ನೆಲೆಗಳಲ್ಲಿ ಮಹಿಳೆಯನ್ನು ದಮನಗೊಳಿಸುವ ಸಾರ್ವತ್ರಿಕ ಸಮಸ್ಯೆಗಳು ಬೇರೆಬೇರೆಯಲ್ಲದೇ ತಳುಕು ಹಾಕಿಕೊಂಡಾಗ ಅವುಗಳ ನಡುವಿನ ಭೇದ ಗುರುತಿಸುವುದು ಇನ್ನೂ ಕಷ್ಟ. ಹಾಗಿರುವಾಗ, ಬಾನು ಮುಷ್ತಾಕ್ ಅವರ ಕತೆಗಳನ್ನು ನಿರ್ಲಿಪ್ತವಾಗಿ ಸಾಹಿತ್ಯ ವಿಮರ್ಶೆಯ ಮೂಸೆಗೆ ಒಳಪಡಿಸುವುದು ಮತ್ತು ಅದನ್ನು ಸಾಹಿತ್ಯವಾಗಿ ಮಾತ್ರ ನೋಡುವುದು ಸ್ವಲ್ಪ ಕಷ್ಟ. ಮಹಿಳೆಯರ ಬರಹ ಕುರಿತು ಇದ್ದ/ಇರುವ ಪೂರ್ವಗ್ರಹಗಳ ಹಿನ್ನೆಲೆಯಲ್ಲಿ ನೋಡಿದರೆ, ಅಂದರೆ ಮಹಿಳೆಯರು ಬರೆದಿದ್ದೆಲ್ಲ ಅವರ ಸ್ವಂತ ಅನುಭವ ಎನ್ನುವಂತೆ ‘ತೀರ್ಮಾನಿಸಿಬಿಡುತ್ತಿದ್ದ’ ಕಾಲವೊಂದಿತ್ತು ಎಂದು ತಿಳಿಯುತ್ತದೆ. ಅನುಪಮಾ ನಿರಂಜನ ಅವರು ಹೇಳಿದ ಒಂದು ನಿದರ್ಶನ ನೆನಪಾಗುತ್ತಿದೆ. ಅವರು ಅಬಾರ್ಷನ್ ಬಗ್ಗೆ ಒಂದು ಕತೆ ಬರೆದಾಗ ಜನ ಅವರನ್ನು ‘ಈಗ ಹುಷಾರಾಗಿದ್ದೀರಾ?’ ಎಂದು ಕೇಳುತ್ತಿದ್ದರಂತೆ! ಅಂತಹ ಘಟ್ಟವನ್ನು ಮೀರಿ ಈಗ ಬಹಳ ಮುಂದೆ ಬಂದಿದ್ದೇವೆ.

ಹಾಗಾಗಿ, ಬಾನು ಅವರು ತಮ್ಮ ಕತೆಗಳಲ್ಲಿ, ವೈಯಕ್ತಿಕವೇ ಸಾರ್ವತ್ರಿಕ ಎನ್ನುವ ಹೇಳಿಕೆಯನ್ನು ಪದೇ ಪದೇ ಸಾಬೀತು ಮಾಡುತ್ತಾ, ಪ್ರಬಲ ಭಾವನೆಗಳು ಮತ್ತು ಚಿಂತನೆಗಳನ್ನು ವ್ಯಂಗ್ಯದಲ್ಲಿ ಅದ್ದಿ ಉಣಬಡಿಸುತ್ತಾ, ಬದುಕಿನಲ್ಲಿ ಎಲ್ಲಾ ರೀತಿಯ ಅಡೆತಡೆಗಳು, ಶೋಷಣೆಗಳನ್ನು ಸ್ವತಃ ಗೆದ್ದು ಬಂದದ್ದೂ ಅಲ್ಲದೇ, ಮುಸಲ್ಮಾನ ಜಗತ್ತಿನ ಸ್ಟಿರಿಯೊಟೈಪ್‌ಗಳನ್ನು ಸತತವಾಗಿ ನಾಶಮಾಡುತ್ತಾ ಬಂದಿದ್ದಾರೆ. ‘ಹೆಜ್ಜೆ ಮೂಡಿದ ಹಾದಿ’, ‘ಬೆಂಕಿ ಮಳೆ’, ‘ಎದೆಯ ಹಣತೆ’, ‘ಸಫೀರಾ’ ಮತ್ತು ‘ಬಡವರ ಮಗಳು ಹೆಣ್ಣಲ್ಲ’ ಎನ್ನುವ ಐದು ಕಥಾ ಸಂಕಲನಗಳು, ‘ಕುಬ್ರಾ’ ಎನ್ನುವ ಕಾದಂಬರಿ, ‘ಇಬ್ಬನಿಯ ಕಾವು’ ಎನ್ನುವ ಲೇಖನ ಸಂಕಲನ, ‘ಒದ್ದೆ ಕಣ್ಣಿನ ಬಾಗಿನ’ ಎನ್ನುವ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಒಟ್ಟು 1990ರಿಂದ 2023ರವರೆಗೆ ರಚಿಸಿದ ಕತೆಗಳಲ್ಲಿ ಹನ್ನೆರಡನ್ನು ಆರಿಸಿಕೊಂಡು ಅನುವಾದಕಿ ದೀಪಾ ಭಾಸ್ತಿಯವರು ಇಂಗ್ಲಿಷಿಗೆ ಅನುವಾದ ಮಾಡಿ, ಅದಕ್ಕೆ ‘ಹಾರ್ಟ್ ಲ್ಯಾಂಪ್’ ಎನ್ನುವ ಹೆಸರಿಟ್ಟಿದ್ದಾರೆ. ಈಗ ಅದು ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪಡೆದಿದೆ. ಲಿಂಗ ಅಸಾಮಾನತೆ ಮತ್ತು ಪುರುಷಪ್ರಧಾನ ಸಮುದಾಯದ ಕ್ರೌರ್ಯವನ್ನು ಧರ್ಮದ ಮುಸುಕಿನಲ್ಲಿ ಸತತವಾಗಿ ಪ್ರತಿಪಾದಿಸುತ್ತಾ ಬಂದಿರುವ ಸಮುದಾಯವನ್ನು ಕತೆಗಳ ಮೂಲಕ ಸುಧಾರಿಸಲು ಸಾಧ್ಯವೇ ಎಂದು ಪ್ರಶ್ನಿಸಿದರೆ ‘ಸಾಧ್ಯ’ ಎನ್ನುವ ಉತ್ತರದ ರೀತಿಯಲ್ಲಿದೆ ಬಾನು ಅವರಿಗೆ ದೊರೆತ ಅಂತರರಾಷ್ಟ್ರೀಯ ಪ್ರಶಸ್ತಿ. ಕುತೂಹಲಕಾರಿ ಸಂಗತಿ ಎಂದರೆ ಇಡೀ ಜಗತ್ತು ಮತ್ತು ದೇಶ, ರಾಜ್ಯ ಈ ಸಾಧನೆಯನ್ನು ಕೊಂಡಾಡುತ್ತಿರುವಾಗ ಬಾನು ಅವರ ಪ್ರಗತಿಪರ ವಿಚಾರಗಳನ್ನು ಸಹಿಸದೇ ಕಿರುಕುಳ ಕೊಟ್ಟಿದ್ದ (ಭೂತ ಪ್ರತ್ಯಯ ಗಮನಿಸಿ. ಬಾನು ಅದನ್ನೆಲ್ಲ ದಾಟಿ ಬಂದಿದ್ದಾರೆ) ಸಮುದಾಯ ಇದಕ್ಕೆ ಹೇಗೆ ಪ್ರತಿಕ್ರಿಯಿಸುತ್ತಿದೆ ಎನ್ನುವುದು. ಪ್ರಶಂಸಿಸಿದರೆ ತಾವು ತಪ್ಪಿದ್ದೆವು ಎಂದು ಒಪ್ಪಿಕೊಳ್ಳುವ, ಇಲ್ಲದಿದ್ದರೆ ಸಮುದಾಯದ ಹೆಣ್ಣುಮಗಳ ಕೀರ್ತಿಯನ್ನು ಮಾನ್ಯ ಮಾಡದಿರುವ ಸಂದಿಗ್ಧಕ್ಕೆ ಅವರು ಸಿಲುಕಿದ್ದಾರೆ! ಇರಲಿ, ಅದು ಬೇರೆ ವಿಚಾರ.

ಬಾನು ಅವರ ‘ಎದೆಯ ಹಣತೆ’ ಕತೆ ಪ್ರಕಟವಾದಾಗ ಅದು ಓದುಗರನ್ನು ಬಡಿದೆಬ್ಬಿಸಿತ್ತು. ಅದರ ಕ್ರೌರ್ಯ ಅವರ ಅಂತಃಕರಣವನ್ನು ಅಲ್ಲಾಡಿಸಿತ್ತು. ನಂತರ ಒಂದು ಸಂದರ್ಶನದಲ್ಲಿ ಬಾನು ಅವರು ಅದು ತಮ್ಮದೇ ಬದುಕಿನ ಘಟನೆ ಎಂದು ಹೇಳಿದಾಗ ಕತೆಗೆ ಮತ್ತೊಂದು ಆಯಾಮ ದೊರಕಿತು. ಅವರ ಹಲವಾರು ಕತೆಗಳು ಸತ್ಯ ಘಟನೆಗಳ ನಿರೂಪಣೆಯೇನೋ ಎನ್ನುವ ಸಂಶಯ ಹುಟ್ಟಿಸಿದವು. ಪ್ರಸ್ತುತ ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಈ ಆಯಾಮವೇ ಮುನ್ನೆಲೆಗೆ ಬಂದಿದೆ. ಒಂದರ್ಥದಲ್ಲಿ ಅದು ಸಮರ್ಥನೀಯ ಕೂಡಾ.

ಬಾನು ಅವರ ಕತೆಗಳನ್ನು ಓದುವುದೂ, ಸಂದರ್ಶನಗಳಲ್ಲಿ ಅವರು ತಮ್ಮ ಬದುಕಿನ ಕತೆಗಳನ್ನು ನಿರ್ಭಾವುಕವಾಗಿ ನಿರೂಪಿಸುವುದೂ ಮೈ ನವಿರೇಳಿಸುವ ಅನುಭವ ಕೊಡುತ್ತವೆ.

7ನೇ ಪುಟಕ್ಕೆ...

ತೊಡೆದೇವು ಎನುವ 'ಕಂಬನಿ ಕಜ್ಜಾಯ'

ಜಯಪ್ರಕಾಶ ತಲವಾಟ

'ಗರಿ ಗರಿ ತೊಡೆದೇವು ಪುಡಿ ಪುಡಿ ಮಾಡಿ ಮೇಲೊಂದಿಷ್ಟು ಹಾಲು ಅಥವಾ ತುಪ್ಪ ಸುರಿದುಕೊಂಡು ತಿನ್ನುವ ಗಮ್ಮತ್ತೇ ಬೇರೆ' ಎಂದು ಬಾಯಲ್ಲಿ ನೀರೂರಿಸುತ್ತಾ ಬೈಕಿನ ವೇಗ ಹೆಚ್ಚಿಸಿ ತಲುಪಿದ್ದು ಸೊರಬ ತಾಲ್ಲೂಕಿನ ಕೆರೆಕೊಪ್ಪದ ನಾರಾಯಣಸ್ವಾಮಿಯವರ ಮನೆ. ಈ ಮನೆಯ ಹಿರಿಯ ಜೀವ ಸರೋಜಮ್ಮ ಮತ್ತು ಸೊಸೆ ಮಾಲತಿ ತೊಡೆದೇವು ತಯಾರಿಕೆಯಲ್ಲಿ ಸಿದ್ಧಹಸ್ತರು.

ಮಲೆನಾಡು ಹಾಗೂ ಉತ್ತರ ಕನ್ನಡ ಜಿಲ್ಲೆಯ ತೊಡೆದೇವು ಎಂಬ ವಿಶಿಷ್ಟ ಸಿಹಿ ತಿನಿಸಿನ ಖ್ಯಾತಿ ಜಗದಗಲಕ್ಕೂ ಪಸರಿಸಿದ್ದು, ಬೇಡಿಕೆಯೂ ಹೆಚ್ಚಿದೆ. ಶಿವಮೊಗ್ಗ, ಉತ್ತರ ಕನ್ನಡ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಿದ್ಧವಾಗುವ ಈ ಸಿಹಿಗೆ 'ಮಂಡಿಗೆ' ಎಂಬ ಇನ್ನೊಂದು ಹೆಸರೂ ಇದಕ್ಕಿದೆ.

> ಮಲೆನಾಡು ಭಾಗದ ಸಿಹಿತಿಂಡಿ ತೊಡೆದೇವು ತಯಾರಿಕೆ ಇಂದು ಹತ್ತಾರು ಹಳ್ಳಿಗಳಲ್ಲಿ ಗೃಹೋದ್ಯಮವಾಗಿ ಬೆಳೆದಿದೆ. ಕಬ್ಬಿನ ಹಾಲಿನಿಂದ ಮಾಡುವ ಈ ವಿಶಿಷ್ಟ ತಿನಿಸು ದೇಶ ವಿದೇಶಗಳಿಗೂ ತಲುಪುತ್ತಿದೆ...

ಕಾರ್ತಿಕ ಮಾಸದ ತುಳಸಿ ವಿವಾಹ ಮುಗಿಯುತ್ತಿದ್ದಂತೆ ಮಲೆನಾಡು ಭಾಗದಲ್ಲಿ ಆಲೆಮನೆಯ ಘಮಲು ಮೂಗಿಗೆ ಅಡರುತ್ತಿತ್ತು. ತಂಪಾದ ಕಬ್ಬಿನ ಹಾಲು ಗಟಗಟನೆ ಕುಡಿಯುವ ಮಜಾ, ಬಾಳೆ ಎಲೆ ಮೇಲೆ ನೊರೆ ನೊರೆ ಬೆಲ್ಲ ತಿನ್ನುವುದು ಕೂಡ ಅದ್ಭುತ ಅನುಭವ-ಸುಂದರ ನೆನಪು. ಇಷ್ಟಕ್ಕೆ ಸೀಮಿತವಾಗಿರದ ಆಲೆಮನೆ, ಹಲವು ರುಚಿಕರ ತಿನಿಸುಗಳಿಗೂ ಸೀಸನ್ ಆಗಿದ್ದ ಕಾಲವದು. ಅಂತ ತಿನಿಸುಗಳಲ್ಲಿ ತೊಡೆದೇವು ಪ್ರಮುಖವಾದದ್ದು. ಈ ಭಾಗದಲ್ಲಿ ಬಹುತೇಕರು ಕಬ್ಬು ಬೆಳೆಯುತ್ತಿದ್ದರು. ಆಗ ಕಬ್ಬಿನ ಹಾಲು ಬಳಸಿ ಮಾಡುತ್ತಿದ್ದ ತಿನಿಸು, ಇಂದು ಎಲ್ಲಾ ಕಾಲದಲ್ಲೂ ಲಭ್ಯ. ಇದು ಬಹುಬೇಗ ಕೆಡುವುದು ಇಲ್ಲ. ಬೇಕಾಗುವ ಸಾಮಾಗ್ರಿಗಳು ಮನೆಯಲ್ಲಿಯೇ ಇರುವಂತದ್ದು. ಆರೋಗ್ಯಕ್ಕೂ ಅಪಾಯ ಉಂಟುಮಾಡುವುದಿಲ್ಲ. ಮಕ್ಕಳಿಂದ ವೃದ್ಧರವರೆಗೂ ಇಷ್ಟವಾಗುವ ತಿನಿಸು. ತೊಡೆದೇವು ತಯಾರಿಕೆ ಈಗ ಗೃಹೋದ್ಯಮದ ರೂಪ ಪಡೆದಿದೆ. ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಯ ನೂರಾರು ಹಳ್ಳಿಗಳ ಮಹಿಳೆಯರು ತಮ್ಮದೇ ಸಣ್ಣ ತಂಡ ಮಾಡಿಕೊಂಡು ತೊಡೆದೇವು ತಯಾರಿಕೆಯಲ್ಲಿ ತೊಡಗಿದ್ದಾರೆ. ಒಟ್ಟು ಕುಟುಂಬದ ಮನೆಗಳಲ್ಲಿ ನೆಂಟರಿಷ್ಟರು ಬಂದಾಗ ಮಾಡುತ್ತಿದ್ದ ತೊಡೆದೇವು ಇಂದು ಉಪನಯನ, ಮದುವೆ, ಗೃಹಪ್ರವೇಶ ಮತ್ತಿತರ ಶುಭ ಸಮಾರಂಭಗಳಲ್ಲಿ ಊಟದ ಬಾಳೆಯನ್ನು ಅಲಂಕರಿಸುತ್ತಿದೆ. ಆಲಮನೆ ಸೀಸನ್ ಮುಗಿದ ಬಳಿಕ ಕಬ್ಬಿನ ಹಾಲಿನ ಬದಲಾಗಿ ಅದರಿಂದ ತಯಾರಾದ ಡಬ್ಬಿ ಬೆಲ್ಲವನ್ನು ಉಪಯೋಗಿಸಿ ತೊಡದೇವು ಮಾಡುತ್ತಾರೆ.

'ತೊಡೆದೇವು ಅಷ್ಟು ಸುಲಭಕ್ಕೆ ದಕ್ಕುವ ತಿನಿಸಲ್ಲ. ಸಾಕಷ್ಟು ಶ್ರಮದಾಯಕ, ತಾಳ್ಮೆಯು ಅತ್ಯಗತ್ಯ. ತೊಡೆದೇವಿಗೆ ಶತಮಾನದ ಇತಿಹಾಸವೇ ಇದೆ. ನಾನು 20-25 ವರ್ಷಗಳ ಹಿಂದೆ ಸಣ್ಣ ಪ್ರಮಾಣದಲ್ಲಿ 30-40 ತೊಡೆದೇವು ಮಾಡಿ ಮಾರಾಟ ಮಾಡಿದ್ದೆ. ಜೀವನೋಪಾಯಕ್ಕೆ ಮುಂದೆ ಇದು ಅನುಕೂಲವಾಗುತ್ತದೆ ಎಂದು ಊರಿನ ಕೆಲವು ಮಹಿಳೆಯರಿಗೆ ತರಬೇತಿ ಕೊಟ್ಟೆ. ಮುಂದೆ ಇದು ಗೃಹೋದ್ಯಮವಾಗಿ ಮಾರ್ಪಟ್ಟಿತು. ಇಂದು ನನ್ನ ಮಗ, ಸೊಸೆ ಈ ಕೆಲಸವನ್ನು ಮುಂದುವರಿಸಿಕೊಂಡು ಬಂದಿದ್ದಾರೆ' ಹೆಮ್ಮೆಯಿಂದ ಹೇಳಿಕೊಂಡರು ಕೆರೆಕೊಪ್ಪದ ಸರೋಜಮ್ಮ. ಕೆರೆಕೊಪ್ಪದ ತೊಡೆದೇವು ಶಿವಮೊಗ್ಗ ಜಿಲ್ಲೆಯಲ್ಲಿ ಬಹು ಜನಪ್ರಿಯ.

ದೋಸೆಯಂಥದ್ದೇ ತಿನಿಸು

ತೊಡೆದೇವು ಮಾಡಲು ದಪ್ಪಕ್ಕಿ (ಪದ್ಮರೇಖ,ಮುಳ್ಳರೆ ಅಕ್ಕಿ) ಒಳ್ಳೆಯದು. ಒಂದು ಕೆಜಿ ಅಕ್ಕಿಯನ್ನು 5-6 ಗಂಟೆ ಕಾಲ ನೀರಿನಲ್ಲಿ ನೆನೆಸಿಡಬೇಕು. 45 ನಿಮಿಷಗಳ ಕಾಲ ಬೀಸಿ ಹುಡಿ ಅಕ್ಕಿ ಹಿಟ್ಟನ್ನು ಸೇರಿಸಿ ಸ್ವಲ್ಪ ಹೊತ್ತು ಹಾಗೆಯೇ ಇಡಬೇಕು. ನಂತರ 3.5 ಕೆಜಿ ಬೆಲ್ಲ (ಡಬ್ಬಿ ಬೆಲ್ಲ) ಸೇರಿಸಿ ಚಿಟಿಕೆ ಉಪ್ಪು, ಅರಿಶಿಣ ಸೇರಿಸಬೇಕು. ಏಲಕ್ಕಿ ಬಾದಾಮಿ ಇವುಗಳನ್ನೂ ಸೇರಿಸಬಹುದು. ಪುನಃ 15 ನಿಮಿಷ ರುಬ್ಬಬೇಕು. ದೋಸೆ ಹಿಟ್ಟಗೂ ಸ್ವಲ್ಪ ತೆಳುವಾದ ಹದದಲ್ಲಿ ಹಿಟ್ಟು ರೆಡಿಯಾದಾಗ-ನುಣ್ಣಗೆ ಅರೆದ ಅಕ್ಕಿ ಹಿಟ್ಟಿನಲ್ಲಿ ಕೈ ಬೆರಳು ಅದ್ದಿದರೆ ಬೆರಳಿಗೆ ತೆಳುವಾಗಿ ಹಿಡಿಯುವಂತಿರಬೇಕು. ತೊಡೆದೇವು ಮಾಡಲೆಂದೆ ಇರುವ ಗಡಿಗೆಯನ್ನು ಒಲೆಯ ಮೇಲಿಟ್ಟು ಶೇಂಗಾ ಎಣ್ಣೆ ಸವರಬೇಕು. ಗಡಿಗೆಯು ಬಿಸಿಯಾದಾಗ ತೆಳುವಾದ ಬಟ್ಟೆ (ಮಲ್ ಪಂಚೆ)ಯನ್ನು ಬಿದಿರಿನ ಕೋಲಿಗೆ ಸ್ವಲ್ಪ ಸುತ್ತಿ ಈ ಬಟ್ಟೆಯನ್ನು ಹಿಟ್ಟಿಗೆ ಅದ್ದಿ ಬಿದಿರಿನ ಕಡ್ಡಿ ಹಿಡಿದು ಗಡಿಗೆಯ ಮೇಲೆ ಪ್ಲಸ್ ಆಕಾರಕ್ಕೆ ಎಳೆಯಬೇಕು. 40-50 ಸೆಕೆಂಡಿನಲ್ಲಿ ಅದು ಕಂದು ಬಣ್ಣಕ್ಕೆ ಬರುತ್ತದೆ. ಹಾಳೆಕಡ್ಡಿ (ಅಡಿಕೆ ಮರದ ಹಾಳೆಯ ಒಂದು ಭಾಗ) ಬಳಸಿ ಅದನ್ನು ಗಡಿಗೆಯಿಂದ ಬಿಡಿಸಿ ತ್ರಿಕೋನಾಕಾರಕ್ಕೆ ಅಥವಾ ಚೌಕಾಕಾರಕ್ಕೆ ಮಡಿಸಿಡಬೇಕು. ಸ್ವಲ್ಪ ಗಾಳಿ ತಾಗುತ್ತಲೇ ಗರಿ ಗರಿ ತೊಡೆದೇವು ಸಿದ್ದ. 1 ಕೆಜಿ ಅಕ್ಕಿಗೆ 15 ತೊಡೆದೇವು ಆಗಬಹುದು.

'ಹಿಂದೆ ತೊಡದೇವಿಗೆ ಒರಳುಕಲ್ಲಿನ ಮುಂದೆ ನುಣ್ಣಗೆ ರುಬ್ಬಬೇಕಿತ್ತು. ಬೆಂಕಿ ಮುಂದೆ ಬೆವರಿಳಿಸಬೇಕಿತ್ತು. ಕಟ್ಟಿಗೆ ಒಲೆಯಿಂದ ಆಗಾಗ ಹೊಮ್ಮುವ ಹೊಗೆ ಕುಡಿಯಬೇಕಿತ್ತು. ಇಷ್ಟೆಲ್ಲಾ ಶ್ರಮಪಟ್ಟರೇ ಮಾತ್ರ ರುಚಿಕರ ಗರಿಗರಿ ತೊಡೆದೇವು ಸವಿಯಲು ಸಿಗುತ್ತಿತ್ತು. ತುಪ್ಪದ ಜತೆ ತಿಂದರೆ ಅದ್ಭುತ ಸವಿರುಚಿ. ಹೆಚ್ಚು ತಿಂದರೆ ಉಷ್ಣ. ಕಟ್ಟಿಗೆ ಒಲೆಯಲ್ಲಿ ಮಾಡಿದ ತೊಡೆದೇವು ಬಹಳ ರುಚಿ' ಎನ್ನುತ್ತಾರೆ 85 ವರ್ಷದ ಕಾನಲೆ ಭವಾನಮ್ಮ.

ಮಾದ್ನಕಳ್ ಬ್ರ್ಯಾಂಡ್

ಸಿದ್ದಾಪುರ ತಾಲೂಕಿನ ಮಾದ್ನಕಳ್ ಊರಿನ ಕುಸುಮ ಕೃಷ್ಣ ಹೆಗಡೆ ಹಾಗೂ ಲಕ್ಷ್ಮಿ ಹೆಗಡೆ ತಯಾರಿಸುವ ತೊಡೆದೇವು ಭಾರಿ ಬೇಡಿಕೆ ಹೊಂದಿದ್ದು 'ಮಾದಿನಕಳ್ ತೊಡೆದೇವು' ಎಂತಲೇ ಬ್ರ್ಯಾಂಡ್ ಆಗಿದೆ. ಪ್ರತಿ ವಾರ ಮೂರರಿಂದ ನಾಲ್ಕು ಸಾವಿರ ತೊಡೆದೇವನ್ನು ಶಿರಸಿ, ಮೈಸೂರು, ಬೆಂಗಳೂರು ಸೇರಿ ರಾಜ್ಯದೆಲ್ಲೆಡೆ ಬೇಡಿಕೆಗೆ ಅನುಗುಣವಾಗಿ ಪೂರೈಸುತ್ತಿದ್ದಾರೆ.

'ಕಳೆದ 20 ವರ್ಷಗಳಿಂದ ಈ ಉದ್ಯೋಗದಲ್ಲಿ ತೊಡಗಿಕೊಂಡಿದ್ದೇವೆ.ದಿನವೊಂದಕ್ಕೆ ಸರಾಸರಿ 400ರಿಂದ 500 ತೊಡೆದೇವು ಮಾಡಬಹುದು. ಮಳೆಗಾಲದಲ್ಲಿ ಆರ್ಡರ್ ಕಡಿಮೆ. ತೇವಾಂಶ ಇರುವ ಕಾರಣ ಹೆಚ್ಚು ದಿನ ಇಡಲಾಗದು. ಇದರ ವಿಲೇವಾರಿ ಕಷ್ಟ. ಗಾಜಿನಷ್ಟೆ ಸೂಕ್ಷ್ಮ. ಕೋರಿಯರ್ ಮೂಲಕ ಕಳುಹಿಸಿದರೆ ಪುಡಿಯಾಗುವ ಅಪಾಯವಿದೆ. ಅಮೆರಿಕ, ಇಂಗ್ಲೆಂಡ್, ಜರ್ಮನಿ, ಆಸ್ಟ್ರೇಲಿಯಾ ಹೀಗೆ ಬೇರೆ ಬೇರೆ ರಾಷ್ಟ್ರಗಳಿಂದ ಬಂದ ಈ ಭಾಗದ ಜನರು ವಾಪಾಸಾಗುವಾಗ ನಮ್ಮ ತೊಡೆದೇವು ತೆಗೆದುಕೊಂಡು ಹೋಗುತ್ತಾರೆ' ಎನ್ನುತ್ತಾರೆ ಕುಸುಮ ಮತ್ತು ಲಕ್ಷ್ಮಿ. ❖

ಈ ಹೆಸರು ಹೇಗೆ ಬಂತು?

'ತೊಡೆಯುವುದು ಎಂದರೆ ಬಳಿಯುವುದು ಗೋಡೆಗೆ ಬಣ್ಣ ಬಳಿದಂತೆ. ಸರ್ವ ಸಿದ್ಧವಾದ ಹಿಟ್ಟನ್ನು ಗಡಿಗೆ ಮೇಲೆ ಬಳಿಯುವ ಕಾರಣ ತೊಡೆದೇವು ಅಂತಾಗಿರಬಹುದು. ತೆಳ್ಳೇವು... ಸುಟ್ಟೇವು.... ಹೀಗೆ ತೊಡೆದೇವು ಬಂದಿರಬಹುದು. ಅಂದು ಡಾ. ಶಿವರಾಮ ಕಾರಂತರು ಇದನ್ನು ಕಂಬನಿ ಕಜ್ಜಾಯ ಎಂದು ಕರೆದರಂತೆ. ಕಂಬನಿಯ ಅಂದರೆ ಕಣ್ಣುಗಳಲ್ಲಿ ನೀರು ಕಜ್ಜಾಯ ಎಂದರೆ ಸಿಹಿ. ಇದನ್ನು ತಯಾರಿಸುವಾಗ ಕಟ್ಟಿಗೆ ಒಲೆಯ ಮುಂದೆ ಹೊಗೆಯಲ್ಲಿ ಕುಳಿತು ತಯಾರಿಸಬೇಕಾದಾಗ ಕಣ್ಣುಗಳಲ್ಲಿ ನೀರು ಬರುವುದು ನಿಶ್ಚಿತ' ಎನ್ನುತ್ತಾರೆ ಸಾಗರದ ಮಾಲತಿ.

ಗಡಿಗೆ ಮೇಲೆ ತೊಡೆದೇವು ಮಾಡುತ್ತಿರುವ ಮಾದ್ನಕಳ್‌ನ ಕುಸುಮ ಕೃಷ್ಣ ಹೆಗಡೆ ಹಾಗೂ ಲಕ್ಷ್ಮಿ ಹೆಗಡೆ.

ಹೆಣ್ಣುಮಕ್ಕಳ ಉದ್ಯಮ

'ಸಾಗರ ತಾಲ್ಲೂಕಿನ ಕೆರೆಕೊಪ್ಪ, ಶಿರಸಿಯ ಪಡಿಗೇರೆ ಮೊದಲಾದ ಊರುಗಳಲ್ಲಿ ಪ್ರತಿ ಮನೆಯಲ್ಲೂ ತೊಡೆದೇವು ಮಾಡಿ ಬೃಹತ್ ಕಾರ್ಯಕ್ರಮಗಳಿಗೆ ಪೂರೈಸುತ್ತಾರೆ. ಯಲ್ಲಾಪುರದ ತುಡುಗುಣಿ ಪಾರ್ವತಿ-ಪರಮೇಶ್ವರ ಹೆಗಡೆ ಯಕ್ಷಗಾನದ ಮೇಳಗಳಿಗೆ ತೊಡೆದೇವು ಒದಗಿಸುತ್ತಾರೆ. ಹಲವು ಊರುಗಳಲ್ಲಿ ನಾಲ್ಕಾರು ಹೆಣ್ಣುಮಕ್ಕಳು ಒಟ್ಟುಗೂಡಿ ಇದನ್ನು ಸ್ವ ಉದ್ಯೋಗದಂತೆ ಮಾಡಿಕೊಂಡಿದ್ದಾರೆ. ಶಿರಸಿ ತಾಲ್ಲೂಕು ಒಂದರಲ್ಲಿಯೇ ಈ ಉದ್ಯಮ ಲಕ್ಷಾಂತರ ರೂಪಾಯಿ ಆದಾಯದ ಮೂಲವಾಗಿದೆ. ಒಂದು ತೊಡೆದೇವಿಗೆ ₹14 ರಿಂದ 17ರ ತನಕ ಇದೆ. ಬೆಂಗಳೂರಿನ ಕೆಲ ಹೊಟೇಲ್, ಮಳಿಗೆಗಳಿಗೂ ಇಲ್ಲಿಂದ ತೊಡೆದೇವು ಪೂರೈಕೆಯಾಗುತ್ತದೆ' ಎನ್ನುತ್ತಾರೆ ಶಿರಸಿಯ ಕದಂಬ ಸೌಹಾರ್ದ ಸಹಕಾರ ಸಂಸ್ಥೆಯ ಅಧಿಕಾರಿ ಶ್ವೇತಾ ಹೆಗಡೆ.

ರಂಗದ ಮೇಲೆ ಮಹದೇವ ಮೈಲಾರ

ರೂಪಾ ಕೆ.ಎಂ

ಕಾಂತನ ಕಳಕೊಂಡ
ಕಾಮಿನಿಯಂತೆ ಭಾರತ
ಹಾಕುವುದ ಕಣ್ಣೀರ
ಶಾಂತಿ ಸಮರದೊಳು
ಗುಂಡಿನೇಟಿನೊಳು ಮಡಿದ
ಮಹದೇವ ಮೈಲಾರ....

ಮುಗ್ಧ ಮಕ್ಕಳು ಒಕ್ಕೊರಲಿನಿಂದ ಈ ಹಾಡು ಹೇಳುತ್ತಿದ್ದಂತೆ ಮೈಲಾರ ಅವರ ಕಥೆ ರಂಗದ ಮೇಲೆ ಇಷ್ಟಿಷ್ಟೆ ಅನಾವರಣಗೊಂಡಿತು. ನಾಟಕದ ಆರಂಭದ ಹಾಡಿನಲ್ಲಿಯೇ ಮೈಲಾರ ಅವರು ಗುಂಡಿನೇಟಿಗೆ ಬಲಿಯಾಗಿದ್ದರ ಸಾಲು ಬರುವುದರಿಂದ ಮೈಲಾರ ಅವರ ವೀರಗಾಥೆಯನ್ನು ಅರಿಯುವ ಕುತೂಹಲವಂತೂ ನೆರೆದ ಕಣ್ಣುಗಳಲ್ಲಿ ಹೆಚ್ಚಿತ್ತು. ಅರಳಿಕಟ್ಟೆಯಲ್ಲಿ ಕುಳಿತ ಅಜ್ಜನ ಪಾತ್ರಧಾರಿ ಮಕ್ಕಳಿಗೆ ಮೈಲಾರ ಯಾರು?, ಈ ಕರುನಾಡಿನ ಕಣ್ಮಣಿ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಕಥೆಯನ್ನು ಸವಿಸ್ತಾರವಾಗಿ ಹೇಳಲು ಮುಂದಾದರು.

ನಾಟಕ ಪ್ರದರ್ಶನದಲ್ಲಿ ಅಭಯಾಶ್ರಮ ವಾತ್ಸಲ್ಯ ಮಕ್ಕಳ ಮಂದಿರ ತಂಡ

ಈಚೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಆಯೋಜಿಸಿದ್ದ 'ಮಕ್ಕಳ ರಂಗ ಹಬ್ಬ'ದಲ್ಲಿ ನಡೆದ 'ಮೈಲಾರ ಮಹದೇವ' ನಾಟಕದ ಝಲಕ್ ಇದಾಗಿತ್ತು. ಬೆಂಗಳೂರಿನ ಅಭಯಾಶ್ರಮ ವಾತ್ಸಲ್ಯ ಮಕ್ಕಳ ಮಂದಿರದ ಮಕ್ಕಳು ಈ ನಾಟಕದಲ್ಲಿ ಅಭಿನಯಿಸಿ, ನೋಡುಗರ ಮನಸ್ಸನ್ನು ಗೆದ್ದರು.

ಭಾರತವನ್ನು ಬ್ರಿಟಿಷರ ಕಪಿಮುಷ್ಠಿಯಿಂದ ಬಿಡಿಸಲು, ಸ್ವಾತಂತ್ರ್ಯಕ್ಕಾಗಿ ಹೋರಾಟದ ಕಹಳೆ ಊದಿದ ಹಲವು ಮಹನೀಯರಲ್ಲಿ ಮೈಲಾರ ಮಹದೇವ ಕೂಡ ಪ್ರಾತಃಸ್ಮರಣೀಯರು. ಅಭಯಾಶ್ರಮದ ಪುಟ್ಟ ಮಕ್ಕಳು ತಮ್ಮ ಮೃದುದನಿಯನ್ನೇ ತಾರಕ ಸ್ವರಕ್ಕೆ ಏರಿಸಿ, ದೇಶಭಕ್ತಿಯನ್ನು ಉಕ್ಕಿಸುವ ಗೀತೆಗಳನ್ನು ಹಾಡಿದ್ದು ಎಂಥವರನ್ನೂ ಮೈನವಿರೇಳಿಸುವಂತೆ ಮಾಡಿತು.

ಮಹಾತ್ಮ ಗಾಂಧೀಜಿಯನ್ನು ತಮ್ಮ ಬದುಕಿನ ಆದರ್ಶವಾಗಿಸಿಕೊಂಡಿದ್ದ ಮೈಲಾರ ಮಹದೇವ ಅವರು ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಅತ್ಯಂತ ಕಿರಿಯ ಹೋರಾಟಗಾರರಾಗಿದ್ದರು. ತಮ್ಮ 18ನೇ ವಯಸ್ಸಿಗೆ ಗಾಂಧೀಜಿಯೊಂದಿಗೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪ್ರತಿಭಾಶಾಲಿಯಾಗಿದ್ದರು. ಇದೇ ಸಂದರ್ಭದಲ್ಲಿ ಗಾಂಧೀಜಿ ಜತೆ ಸೆರೆಮನೆ ವಾಸ ಅನುಭವಿಸಿದ್ದರು. ಸೆರೆಮನೆಯಲ್ಲಿದ್ದುಕೊಂಡೇ ಮಹದೇವ ಅವರು ಅಪ್ಪ-ಅಮ್ಮನಿಗೆ ಬರೆದ ಪತ್ರವನ್ನು ಅಭಯಾಶ್ರಮದ ಮಕ್ಕಳು ಓದುತ್ತಿದ್ದರೆ, ಎಂಥ ಕ್ರಾಂತಿಗೀತೆಯೂ, ಕೆಚ್ಚಿನ ಮಾತುಗಳು ಆರ್ದ್ರಭಾವವನ್ನು ಸ್ಫುರಿಸಬಲ್ಲವು ಎಂಬುದಕ್ಕೆ ಸ್ಪಷ್ಟ ಉದಾಹರಣೆಯಾಗಿತ್ತು.

ಈ ಮಕ್ಕಳು ಪಾತ್ರವೇ ತಾವಾದರು. ಸೆರೆಮನೆಯಲ್ಲಿದ್ದುಕೊಂಡೇ ಅಪ್ಪ ಅಮ್ಮನನ್ನು ನೆನೆಯುವ ಮಹದೇವ ಅವರನ್ನು ರಂಗದ ಮೇಲೆ ಬಿಂಬಿಸುವಂತೆ ಕಂಡರೂ ಆಂತರ್ಯದಲ್ಲಿ ಪ್ರೀತಿಗಾಗಿ ಹಪಾಹಪಿಸುವ ಮುಗ್ಧ ಮಕ್ಕಳ ದನಿಯಾಗಿ ಪ್ರಕಟಗೊಂಡರು.

'ಅಪ್ಪ- ಅಮ್ಮ ನಾನಿಲ್ಲಿ ಗಾಂಧೀಜಿಯವರ ಜತೆ ಆರಾಮಾಗಿಯೇ ಇದ್ದೇನೆ ನೀವು ನನ್ನ ಬಗ್ಗೆ ಚಿಂತೆ ಮಾಡಬೇಡಿ.' ಎಂಬ ಒಕ್ಕಣೆಯುಳ್ಳ ಪತ್ರವನ್ನು ಮೈಲಾರ ಪಾತ್ರಧಾರಿ ಕತ್ತಲು-ಬೆಳಕಿನ ವಿಶಿಷ್ಟ ಸಂಯೋಜನೆಯಲ್ಲಿ ಓದುತ್ತಿದ್ದರೆ, ತಂದೆ, ತಾಯಿ ಮತ್ತು ಮಕ್ಕಳ ಸಂಬಂಧಗಳು ಎಲ್ಲ ಕಾಲಕ್ಕೂ ಒಂದೇ. ಆಳವಾಗಿ ಯೋಚಿಸಿದಷ್ಟು ಮನುಷ್ಯನ ಹುಡುಕಾಟ ಇರುವುದೇ ಹಿಡಿ ಪ್ರೀತಿಗಾಗಿ ಮತ್ತು ಅವನ ಬದುಕು ಸವೆಯುವುದು ಆ ಪ್ರೀತಿಯ ಹಂಬಲದಲ್ಲಿಯೇ.

1942ರಲ್ಲಿ ಚಲೇಜಾವ್ ಚಳವಳಿ ಆರಂಭವಾಯಿತು. ಇದಾದ ಮೇಲೆ ಗಾಂಧೀಜಿ ಬ್ರಿಟಿಷರಿಗೆ ಸೆರೆ ಸಿಕ್ಕರು. ಈ ಚಳವಳಿ ಉಗ್ರ ರೂಪ ತಾಳಿತು. ಇತ್ತ ಮೈಲಾರ ಮಹದೇವ ಅವರು ಯುವ ಹೋರಾಟಗಾರರನ್ನು ಸಂಘಟಿಸಿದರು. ತಮ್ಮ ಎದುರಿಗೆ ಬಂದ ಪ್ರತಿಯೊಬ್ಬರಲ್ಲಿಯೂ ದೇಶಭಕ್ತಿಯನ್ನು ತುಂಬುವ ಕಾಯಕವನ್ನು ನಿಷ್ಠೆಯಿಂದ ಮಾಡಿದರು. ಈ ರೀತಿ ಸಂಘಟನೆ ಮಾಡುತ್ತಿರುವಾಗಲೇ ಬ್ರಿಟಿಷರ ಗುಂಡಿಗೆ ಬಲಿಯಾಗಿ ಹುತಾತ್ಮರಾದರು.

ಇದು ಮಹಾದೇವ ಅವರ ಜೀವನಾಧಾರಿತ ನಾಟಕವಾಗಿದ್ದರೂ, ರಂಗದ ತುಂಬಾ ಓಡಾಡಿದ ಮಕ್ಕಳು ಎಲ್ಲಿಯೂ ನಾಟಕದ ಕಥಾವಸ್ತುವಿಗೆ ಚ್ಯುತಿ ತರಲಿಲ್ಲ. ಅವರ ಚುರುಕುತನವೇ ಈ ನಾಟಕದ ಜೀವಾಳ. ಇಷ್ಟುದ್ದ ಸಂಭಾಷಣೆಯನ್ನು ಒಂದೇ ಗುಕ್ಕಿಗೆ ಹೇಳುವ ಮಕ್ಕಳ ಉತ್ಸಾಹದ ಮುಂದೆ ಉಳಿದೆಲ್ಲವೂ ಗೌಣವೇ ಆಗಿತ್ತು.

ಮನು ಬಳಿಗಾರ್ ಅವರ ಕಥೆಗೆ, ಕೆಎಸ್‌ಡಿಎಲ್ ಚಂದ್ರು ಅವರ ನಿರ್ದೇಶನವಿತ್ತು. ಬೆಳಕಿನ ಪರಿಕರಗಳನ್ನು ಮತ್ತು ಸಂಗೀತವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸುವ ಅವಕಾಶವಿತ್ತು. ❖

ಬರಹ-ಬದುಕಿನ...

6ನೇ ಪುಟದಿಂದ...

ಮನೆಯಲ್ಲಿ ಹಿರಿಯವಳಾಗಿ ಸಣ್ಣ ವಯಸ್ಸಿನಿಂದಲೇ ಜವಾಬ್ದಾರಿಯನ್ನು ಹೊತ್ತುಕೊಂಡವರು ಬಾನು. ಒಮ್ಮೆ ತಂದೆಗೆ ದೂರದ ಊರಿಗೆ ವರ್ಗವಾದಾಗ ಅವರ ಸೋದರ ತಾನೇ ಮನೆಯ ಯಜಮಾನ ಎಂದುಕೊಂಡು, ಶಾಲೆಗೇ ಹೋಗದ ಕಾರಣಕ್ಕೆ ಬಾನು ತಂಗಿಗೆ ಬೆಲ್ಟಿನಿಂದ ಹೊಡೆದಾಗ ಬಾನು ಬೆಲ್ಟ್ ಕಿತ್ತುಕೊಂಡಿದ್ದರು. 'ಬೆರಳುಗಳನ್ನು ಕತ್ತರಿಸಿಬಿಡುತ್ತೇನೆ, ಹುಷಾರ್. ಮನೆಯಿಂದ ಓಡಿಸಿಬಿಡುತ್ತೇನೆ' ಎಂದು ಬೆದರಿಸಿ ಪರಿಸ್ಥಿತಿಯನ್ನು ತಮ್ಮ ಕೈಗೆತ್ತಿಕೊಂಡಿದ್ದರು. ಮನೆಯ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿದ್ದಾಗ, ಬಟ್ಟೆ ಹೊಲಿದು ಹಣ ಸಂಪಾದಿಸಿದರು. ಅವರ ತಂದೆಯು ಮಗಳ ಪ್ರತಿಭೆ ವೃಥಾ ಹಾಳಾಗುತ್ತಿದೆ ಎಂದು ಮರುಗಿ, ಮುನಿಸಿಪಲ್ ಚುನಾವಣೆಗೆ ನಿಲ್ಲಿಸಿದಾಗ ಅವರ ಚಿಹ್ನೆ ಹೊಲಿಗೆ ಮಷೀನ್ ಆಗಿತ್ತು! ಮುಸಲ್ಮಾನಳಾಗಿ ಚುನಾವಣೆಗೆ ನಿಂತಿದ್ದಕ್ಕೆ ಬೈದು ಅವರ ಸಮುದಾಯದವರೇ ವೋಟು ಹಾಕದೇ ಪ್ರತಿರೋಧಿಸಿದ್ದರು. ಆ ಚುನಾವಣೆಯಲ್ಲಿ ಬಾನು ಕೇವಲ ಒಂದು ವೋಟಿನಲ್ಲಿ ಸೋತಿದ್ದರು! ಛಲಬಿಡದ ಬಾನು ಮತ್ತೆ ಸ್ಪರ್ಧಿಸಿ ಎರಡು ಸಲ ಹಾಸನ ಮುನಿಸಿಪಲ್ ಚುನಾವಣೆಯಲ್ಲಿ ಗೆದ್ದರು.

ದಲಿತ ಸಂಘರ್ಷ ಸಮಿತಿ, ರೈತ ಸಂಘದ ಹೋರಾಟಗಳಲ್ಲಿ ನಂತರ ಬಂಡಾಯ ಚಳವಳಿಯಲ್ಲಿ, ಬಾಬಾಬುಡನ್ ಗಿರಿಗೆ ಸಂಬಂಧಿಸಿದ ಪ್ರತಿಭಟನೆಗಳಲ್ಲಿ... ಹೀಗೆ ಹಲವಾರು ಸಾರ್ವಜನಿಕ ಹೋರಾಟಗಳಲ್ಲಿ ಭಾಗವಹಿಸಿದರು. 'ಒಮ್ಮೆ ಹೆಣ್ಣಾಗು ಪ್ರಭುವೇ' ಎನ್ನುವ ಕಥೆ ಬರೆದದ್ದು ಮುಸಲ್ಮಾನ ಮಹಿಳೆಯರು ಅನುಭವಿಸುವ ಶೋಷಣೆಗಳನ್ನು ನಿರೂಪಿಸಲು. ಮುಸಲ್ಮಾನ ಸಮಾಜ ಅದರಿಂದ ಪಾಠ ಕಲಿಯುವ ಬದಲು ಬಾನು ಅವರನ್ನು ಕುಟುಂಬ ಸಮೇತ ಬಹಿಷ್ಕರಿಸಿ ಚಿತ್ರಹಿಂಸೆಗೆ ಗುರಿಮಾಡಿತು! ಆ ಸಮಯದ ಸಂಕಷ್ಟಗಳ ಬಗ್ಗೆ ಬಾನು ವಿವರವಾಗಿ ದಾಖಲಿಸಿದ್ದಾರೆ. ಮುಸಲ್ಮಾನ ಸಮುದಾಯದ ಬಗ್ಗೆ ಭಿಡೆ ಇಲ್ಲದೇ ವಿಮರ್ಶಿಸಿದ್ದಾರೆ. ಇಂತಹ ಅನುಭವಗಳಿಗೆ ಪಕ್ಕಾದ ಮಹಿಳೆ ತನ್ನ ಕೃತಿಗಳಲ್ಲಿ ಅದನ್ನು ಬಿಂಬಿಸುವುದು ಆಶ್ಚರ್ಯಕರವೇನೂ ಅಲ್ಲ. ಬಾನು ಅವರ ಕತೆಗಳು ಕೇವಲ ಸಮುದಾಯದ ಒಡಕುಗಳನ್ನು ದಾಖಲಷ್ಟೇ ಮಾಡಿಲ್ಲ, ಅವು ಅಪ್ಪಟ ಕಲಾಭಿವ್ಯಕ್ತಿಯಾಗಿ ಗೆದ್ದಿವೆ, ಓದುಗರನ್ನು ಕಾಡುತ್ತವೆ. ಪುರುಷಪ್ರಾಬಲ್ಯದ ದುಷ್ಟತನಗಳನ್ನು ಅನುಭವಿಸುವುದು ಮಾತ್ರವಲ್ಲ, ಅವನ್ನು ಪ್ರತಿರೋಧಿಸುವ ಶಕ್ತಿ ಇದ್ದವರಷ್ಟೇ ಇಂತಹ ಕತೆಗಳನ್ನು ಬರೆಯಲು ಸಾಧ್ಯ. ಒಂದು ಕಡೆ ಮುಸಲ್ಮಾನ ಸಮುದಾಯದ ಪುರುಷ ಪ್ರಧಾನ ಸಮಾಜದ ಕಟ್ಟುಪಾಡುಗಳು, ಮತ್ತೊಂದೆಡೆ ಇಡೀ ಸಮುದಾಯವೇ ಪ್ರತ್ಯೇಕತೆಯತ್ತ ಸಾಗುತ್ತಿರುವ ಹತಾಶೆ. ಹೀಗಿರುವಾಗ ಬಾನು ಅವರಿಗೆ ಸೃಜನಶೀಲ ಅಭಿವ್ಯಕ್ತಿಯೇ ಬಿಡುಗಡೆಯ ಮಾರ್ಗ ಎನ್ನಿಸಿದೆ. ಸಮಾಜದಲ್ಲಿನ ಮೂಲಭೂತ ಬದಲಾವಣೆಗಳು ಮಾತ್ರ ಲಿಂಗ ಅಸಮಾನತೆಯನ್ನು ತೊಡೆದುಹಾಕಬಹುದು ಎನ್ನಿಸಿದೆ.

ಬಾನು ಮುಷ್ತಾಕ್ ಅವರಿಗೆ ಬುಕರ್ ಪ್ರಶಸ್ತಿ ಪ್ರದಾನ ಮಾಡುವ ಸಂದರ್ಭದಲ್ಲಿ ತೀರ್ಪುಗಾರರ ಮಂಡಳಿ ಅಧ್ಯಕ್ಷರಾದ ಮ್ಯಾಕ್ಸ್ ಪೋರ್ಟರ್ ಅವರು ಬಾನು ಅವರ ಕೃತಿ 'ಹಾರ್ಟ್ ಲ್ಯಾಂಪ್' ಅನ್ನು 'ಇಂಗ್ಲಿಷ್ ಓದುಗರಿಗೆ 'ನಿಜವಾಗಿಯೂ ಹೊಸತೇನನ್ನೋ' ನೀಡುವ, 'ರ್‍ಯಾಡಿಕಲ್ ಅನುವಾದ' ಮತ್ತು 'ರೋಮಾಂಚಕ, ಸ್ಫೂರ್ತಿದಾಯಕ ನಿರೂಪಣೆಗಳನ್ನು' ಒಳಗೊಂಡಿರುವ, ಕನ್ನಡದ ಬೇರುಗಳನ್ನು ವೈವಿಧ್ಯಮಯ ಸಾಮಾಜಿಕ-ರಾಜಕೀಯ ಉಪಭಾಷೆಗಳೊಂದಿಗೆ ಬೆಸೆಯುವ ಕೃತಿ' ಎಂದು ವರ್ಣಿಸಿದರು. ಅವರ ಕತೆಗಳು ಹಿಂದಿ, ಉರ್ದು, ಇಂಗ್ಲಿಷ್, ಮಲಯಾಳ, ತಮಿಳು, ಪಂಜಾಬಿ, ಮರಾಠಿ ಮತ್ತಿತರ ಭಾಷೆಗಳಿಗೆ ಅನುವಾದಗೊಂಡು ಚರ್ಚೆಗೆ ಒಳಗಾಗುತ್ತಿರುವುದೇ ಇದಕ್ಕೆ ಸಾಕ್ಷಿ.

ಬಾನು ಅವರ 'ಕರಿನಾಗರ ಹಾವುಗಳು' ಕತೆಯನ್ನು ನಿರ್ದೇಶಕ ಗಿರೀಶ ಕಾಸರವಳ್ಳಿ 'ಹಸೀನಾ' ಎನ್ನುವ ಶೀರ್ಷಿಕೆಯಲ್ಲಿ ಚಲನಚಿತ್ರ ಮಾಡಿದಾಗ ಅದು ಹಲವಾರು ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದುಕೊಂಡಿತು. ಮಹಿಳೆಯರನ್ನು ದಮನಿಸಲು, ಇಸ್ಲಾಂ ಅನ್ನು ತಪ್ಪಾಗಿ ವ್ಯಾಖ್ಯಾನಿಸಿ ಪ್ರಚೋದಿಸುವ ಪಿತೃಪ್ರಭುತ್ವದ ಶಕ್ತಿಗಳನ್ನು ವಿರೋಧಿಸಲು ಮತ್ತು ಅವುಗಳನ್ನು ಎದುರಿಸಲು ಬಾನು ಬರಹವನ್ನು ಅವರು ಅಭಿವ್ಯಕ್ತಿ ಮಾಧ್ಯಮ ಮಾಡಿಕೊಂಡಿದ್ದು, ಜೊತೆಗೆ ನೇರ ಹೋರಾಟದಲ್ಲಿ ತೊಡಗಿಕೊಂಡಿದ್ದು ಸಾಮಾನ್ಯ ಸಂಗತಿಯೇನೂ ಅಲ್ಲ. ಕೆಲವೊಮ್ಮೆ ಕಡು ಸಿಟ್ಟನ್ನು ಹಸಿಹಸಿಯಾಗಿಯೇ ಕಾರಿಕೊಳ್ಳುವ ಕತೆಗಳನ್ನೂ ಬರೆದಿದ್ದಾರೆ. ಆದರೆ, ಅವರ ಯಾವ ಕತೆಯೂ ಓದುಗರಿಂದ ಸಹಾನುಭೂತಿಯನ್ನು ಅಪೇಕ್ಷಿಸುವುದಿಲ್ಲ. ಹೆಂಡತಿಯನ್ನು ಅಪಾರವಾಗಿ ಪ್ರೀತಿಸುವ, ಅವಳಿಗಾಗಿ ಮತ್ತೊಂದು ತಾಜ್ ಮಹಲನ್ನು ಕಟ್ಟುವ ವಚನ ನೀಡುವ ಗಂಡ, ಅವಳು ಸತ್ತ ನಲವತ್ತನೇ ದಿನವೇ ಚಿಕ್ಕವಯಸ್ಸಿನ ಹುಡುಗಿಯನ್ನು ಮದುವೆಯಾಗುವ ಕಟುಸತ್ಯವನ್ನು ತಣ್ಣಗಿನ ದನಿಯಲ್ಲಿ ದಾಖಲಿಸುತ್ತಾರೆ. ಕೆಲವೊಮ್ಮೆ ಮುಸಲ್ಮಾನ ಹೆಣ್ಣುಮಕ್ಕಳ ಜಗತ್ತಿನ ಕಷ್ಟಕೋಟಲೆಗಳಿಗೆ ಮುಕ್ತಿಯೇ ಇಲ್ಲವೇನೋ ಎನ್ನಿಸುವ ಹತಾಶೆಯ ಸಣ್ಣ ಸುಳಿಯನ್ನು ಕಾಣಿಸುತ್ತಾರೆ. ಆದರೆ, ಒಂದರ್ಥದಲ್ಲಿ ಅದರ ದಾಖಲಾತಿಯೂ ಒಂದು ಶಕ್ತಿಶಾಲೀ ಅಭಿವ್ಯಕ್ತಿಯೇ. ಹಾಗೆ ನೋಡಿದರೆ ಅವರ ಬದುಕಿನ ಒಂದೊಂದು ಹೆಜ್ಜೆಯೂ ಒಂದೊಂದು ಘಟನೆಯಿಂದ ಪ್ರೇರಿತವೇ ಆಗಿದೆ. ಅವರ ಪರಿಚಯದ ಮಹಿಳೆಯೊಬ್ಬರು ದುಷ್ಟ ಗಂಡನಿಂದ ವಿಚ್ಛೇದನ ಪಡೆಯಲು ಕೋರ್ಟ್ ಮೆಟ್ಟಿಲು ಹತ್ತಿದಾಗ ಆರು ವರ್ಷಗಳಾದರೂ ಕೇಸು ಇತ್ಯರ್ಥವಾಗಲೇ ಇಲ್ಲ. ವಕೀಲರಿಗೆ ಸ್ವಲ್ಪ ಬೇಗ ಕ್ಲೋಸ್ ಮಾಡಿಸಿ ಅಂದಾಗ ಆತ ತನ್ನ ಜೊತೆ ಆಕೆ ಹೊರಗೆ 'ವಿಹಾರ'ಕ್ಕೆ ಬಂದರೆ ಬೇಗ ಮುಗಿಸುತ್ತೇನೆ ಎಂದರಂತೆ. ಆ ಘಟನೆಯಿಂದ ನೊಂದು ಬಾನು, ತಾವು ಅರ್ಧಕ್ಕೇ ನಿಲ್ಲಿಸಿದ್ದ ಕಾನೂನು ಪದವಿಯನ್ನು ಪೂರೈಸಿ, ವಕೀಲೆಯಾಗಿ ಸಾವಿರಾರು ಕೇಸುಗಳನ್ನು ನಡೆಸಿ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಟ್ಟರು. ಅದಕ್ಕೇ ಹೇಳಿದ್ದು, ಬಾನು ಅವರ ಬದುಕು ಮತ್ತು ಬರಹಗಳ ನಡುವಿನ ಗೆರೆ ಅಳಿಸಿಹೋಗಿದೆ ಎಂದು. ❖

ಮುನ್ನೋಟ 25-05-2025 ರಿಂದ 31-05-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಾರದ ಆರಂಭ ಬಹಳ ಆನಂದದಾಯಕವಾಗಿರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಎಲ್ಲ ರೀತಿಯ ಸಹಾಯಧನಗಳು ಹರಿದು ಬರುತ್ತವೆ. ಭೂಮಿಯ ವ್ಯವಹಾರ ಮಾಡುವವರಿಗೆ ಆದಾಯವಿರುವುದಿಲ್ಲ. ಉಷ್ಣದಿಂದ ಬಾಯಲ್ಲಿ ತೊಂದರೆಯಾಗಬಹುದು. ಕ್ರೀಡಾಪಟುಗಳು ನಿರೀಕ್ಷಿತ ಸಾಧನೆ ಮಾಡುವುದರಲ್ಲಿ ವಿಫಲರಾಗುವರು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಎಲ್ಲರೊಂದಿಗೆ ಬಹಳ ವ್ಯಾವಹಾರಿಕವಾಗಿ ನಡೆದುಕೊಳ್ಳುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಬಂಧುಗಳಿಂದ ನಿರೀಕ್ಷಿತ ಸಹಾಯ ದೊರೆಯುವುದಿಲ್ಲ. ಕುಟುಂಬದಲ್ಲಿ ಸ್ವಲ್ಪ ಸಮಸ್ಯೆಗಳು ತಲೆದೋರಬಹುದು. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ದೊರೆಯುತ್ತದೆ. ಕಬ್ಬಿಣದ ವ್ಯಾಪಾರಿಗಳಿಗೆ ಆದಾಯ ಹೆಚ್ಚುತ್ತದೆ. ಸಂಗಾತಿಯಿಂದ ಸಿಗುವ ಸಹಾಯ ಕಡಿಮೆಯಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ಕಡಿಮೆ ಇರುತ್ತದೆ. ಬಂಧುಗಳಿಂದ ನಿಮಗೆ ಒಳಏಟು ಬೀಳಬಹುದು. ಕುಟುಂಬದ ವ್ಯವಹಾರಗಳಲ್ಲಿ ಸ್ವಲ್ಪ ಏರುಪೇರಾಗುವ ಸಾಧ್ಯತೆಗಳಿವೆ. ಮಕ್ಕಳಿಂದ ಆರ್ಥಿಕ ಸಹಾಯವನ್ನು ನಿರೀಕ್ಷೆ ಮಾಡಬಹುದು. ದೇಹದಲ್ಲಿ ಉಷ್ಣ ವ್ಯತ್ಯಾಸವಾಗುವ ಸಾಧ್ಯತೆಗಳಿವೆ. ಸಂಗಾತಿಯಿಂದ ಸೂಕ್ತ ಸಮಯದಲ್ಲಿ ಧನಸಹಾಯ ಸಿಗುತ್ತದೆ. ಈಗ ವೃತ್ತಿಯಲ್ಲಿದ್ದ ಗೊಂದಲಗಳು ನಿವಾರಣೆಯಾಗುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕೃಷಿಯಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ಆದಾಯವು ಕಡಿಮೆ ಇರುತ್ತದೆ. ಬಂಧುಗಳಿಂದ ನಿಮ್ಮ ಕೆಲಸಗಳಿಗೆ ಸಹಕಾರ ದೊರೆಯುತ್ತದೆ. ಬಂಧುಗಳೊಡನೆ ಯಾವುದೇ ರೀತಿಯ ವ್ಯವಹಾರಗಳು ಬೇಡ. ಪಿತ್ತವಿಕಾರಗಳು ನಿಮ್ಮನ್ನು ಸ್ವಲ್ಪ ಬಾಧಿಸಬಹುದು. ಸಂಗಾತಿ ಕಡೆಯವರು ಈಗ ನಿಮಗೆ ಒಡವೆ ವಸ್ತುಗಳನ್ನು ಕೊಡಬಹುದು. ವಿದೇಶಿ ವ್ಯವಹಾರಗಳಿಂದ ಅನಿರೀಕ್ಷಿತವಾಗಿ ಲಾಭ ಬರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಧಾರ್ಮಿಕ ಆಚರಣೆಯ ಬಗ್ಗೆ ಸಾಕಷ್ಟು ಒಲವಿರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಮಹಿಳೆಯರು ನಿಮ್ಮ ಕೆಲಸ ಕಾರ್ಯಗಳಿಗೆ ಬೇಕಂತಲೇ ಅಡ್ಡಿ ಮಾಡುವರು. ವಿದ್ಯಾರ್ಥಿಗಳಿಗೆ ನಿರೀಕ್ಷೆ ಮೀರಿದ ಫಲಿತಾಂಶವಿರುತ್ತದೆ. ಆರೋಗ್ಯದಲ್ಲಿ ಕೊಂಚ ಏರುಪೇರಾಗಬಹುದು. ಹೂವು, ಹಣ್ಣು ಮಾರುವವರಿಗೆ ಲಾಭವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ಆದಾಯವು ಮಧ್ಯಮಗತಿಯಲ್ಲಿದ್ದರೂ, ಸಂಗಾತಿಯ ಆದಾಯವು ತುಸು ಹೆಚ್ಚಿರುತ್ತದೆ. ಆಸ್ತಿ ಖರೀದಿ ಮಾಡಲು ಹಣವನ್ನು ಒಟ್ಟು ಮಾಡಬಹುದು. ಮಕ್ಕಳ ಬಗ್ಗೆ ಉತ್ತಮ ವಾರ್ತೆಗಳು ಕೇಳಿ ಬರುತ್ತವೆ. ಕೀಲುನೋವು ಅಥವಾ ಶ್ವಾಸಕೋಶದ ತೊಂದರೆ ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಉಪಾಯವಾಗಿ ಸ್ವಲ್ಪ ಧನ ಸಹಾಯವನ್ನು ಪಡೆಯಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಬಹಳ ಆಲಸಿತನ ನಿಮ್ಮಲ್ಲಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಸಂಸಾರದಲ್ಲಿ ಸುಖವಿದ್ದರೂ ಸಂಗಾತಿಯಿಂದ ಕೆಲವೊಮ್ಮೆ ಮನೆಯ ವಾತಾವರಣ ಕೆಡಬಹುದು. ಮೂತ್ರ ಸಂಬಂಧಿ ದೋಷವಿದ್ದವರು ಎಚ್ಚರ ವಹಿಸಿ. ಪ್ರೀತಿ ಪ್ರೇಮಗಳಲ್ಲಿರುವವರಿಗೆ ಹಿರಿಯರ ಒಪ್ಪಿಗೆ ಸಿಗುವ ಸಾಧ್ಯತೆಗಳಿವೆ. ಗಣಿಗಾರಿಕೆ ಮಾಡುವವರಿಗೆ ಕಾನೂನು ತೊಡಕುಗಳು ಎದುರಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ನಿಮ್ಮ ಯಾವುದೇ ನಿರ್ಧಾರಗಳಲ್ಲೂ ದೃಢತೆ ಇರುವುದಿಲ್ಲ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವಾಹನ ರಿಪೇರಿ ಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ. ಮಕ್ಕಳಿಂದ ಧನಸಹಾಯವನ್ನು ನಿರೀಕ್ಷೆ ಮಾಡಬಹುದು. ಶೀತ ಸಂಬಂಧಿ ಕಾಯಿಲೆಗಳು ಕೆಲವರನ್ನು ಕಾಡಬಹುದು. ಈಗ ಸಂಗಾತಿಯ ಸಹಾಯದಿಂದ ಸರ್ಕಾರಿ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಕೆಲಸ ಕಾರ್ಯಗಳಲ್ಲಿ ನಿಶ್ಚಿತ ಮಾರ್ಗಸೂಚಿಯನ್ನು ಅನುಸರಿಸುವಿರಿ. ಆದಾಯವು ಕಡಿಮೆ ಇರುತ್ತದೆ. ಸಂಸಾರದಲ್ಲಿ ಹೆಚ್ಚು ಶಾಂತಿಯಿರುತ್ತದೆ. ಸರ್ಕಾರದ ಜತೆಗಿನ ವ್ಯವಹಾರಗಳಲ್ಲಿ ಲಾಭವಿರುವುದಿಲ್ಲ. ಹಿರಿಯರ ಮೂಲಕ ವಿವಾಹ ಸಂಬಂಧಗಳು ಒದಗುವ ಸಾಧ್ಯತೆಗಳಿವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಚುರುಕಾದ ನಡವಳಿಕೆಯಿಂದ ಎಲ್ಲರ ಗಮನ ಸೆಳೆಯುವಿರಿ. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಮಹಿಳೆಯರಿಂದ ಹೆಚ್ಚು ಅನುಕೂಲಗಳಾಗುತ್ತವೆ. ಹೈನುಗಾರಿಕೆ ಮಾಡುವವರಿಗೆ ಲಾಭವಿರುತ್ತದೆ. ಭಾಷಾಂತರಕಾರರಿಗೆ ಬೇಡಿಕೆ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರಿಗೆ ವಿದೇಶಿ ವ್ಯಾಮೋಹ ಬಹಳ ಹೆಚ್ಚಾಗಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ತಾಯಿಯಿಂದ ಸಾಕಷ್ಟು ಸಹಕಾರ ದೊರೆಯುತ್ತದೆ. ಸರ್ಕಾರಿ ಗುತ್ತಿಗೆ ಲಾಭದಾಯಕ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಫಲಿತಾಂಶ ಪಡೆಯುವ ಯೋಗವಿದೆ. ಉಷ್ಣ ಸ್ಥಾವರಗಳಲ್ಲಿ ಕೆಲಸಮಾಡುವವರು ಹೆಚ್ಚು ಎಚ್ಚರದಿಂದಿರಿ. ಹಿರಿಯರು ಧರ್ಮ ಕಾರ್ಯಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವರು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಎಲ್ಲರೊಡನೆ ಶ್ರೀಮಂತರಂತೆ ಕಾಣಿಸಿಕೊಳ್ಳಲು ಯತ್ನಿಸುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ನಿಮಗೆ ಹೆಚ್ಚು ಲಾಭವಿರುತ್ತದೆ. ಸಂಗೀತಗಾರರಿಗೆ ಹೆಚ್ಚು ಆದಾಯ ದೊರೆಯುತ್ತದೆ. ಕುಟುಂಬದಲ್ಲಿ ದೈವ ಕಾರ್ಯಗಳಿಗಾಗಿ ಒತ್ತಡ ಹೆಚ್ಚುತ್ತದೆ. ಕೃಷಿಯಲ್ಲಿ ಅಲ್ಪ ಲಾಭವಿರುತ್ತದೆ. ಮಕ್ಕಳ ಬಗ್ಗೆ ಹೆಚ್ಚು ಚಿಂತೆ ಮಾಡುವಿರಿ. ಹಳೆಯ ಅನುವಂಶೀಯ ಕಾಯಿಲೆಗಳು ಈಗ ಕಾಡಬಹುದು.

ಪದಬಂಧ 2893



ಮೇಲಿನಿಂದ ಕೆಳಕ್ಕೆ
1. ನೈರುತ್ಯದಿಂದ ಬೀಸಿದ ಗಾಳಿಗೆ ಮೊದಲು ಸುರಿಯುವ ವರ್ಷಧಾರೆ 5
2. ದಿಲ್ಲಿಯ ಸಮೀಪವಿರುವ ಮಾರ್ಗದರ್ಶಕನ ಊರು 4
3. ಬದ್ರಿ, ಕೇದಾರ ಯಾತ್ರೆಯ ನಾಲ್ಕು ಪುಣ್ಯಕ್ಷೇತ್ರಗಳು 4
4. ನಾಲಿಗೆಗೆ ರುಚಿಯಂತೆ ಅನುಭವಕ್ಕೆ ವೇದ್ಯವಾಗುವ ಸ್ವಪ್ನ 5
7. ಪದ್ಯ ಸಾಹಿತ್ಯವನ್ನು ಪ್ರಸ್ತುತ ಪಡಿಸುವ ಗಮಕಿ 5
8. ಈ ಭೂಮಿ ಶುಭದಾಯಿನಿ ಊರು 5
9. ಸಮುದ್ರವನ್ನು ದಾಟಿದರೆ ಆ ಕಡೆ 5
10. ಹಾಡುಗಾರನ ಅಕ್ಕನ ಗಂಡನಂತಹ ಅಂತರಂಗ 5
12. ಕೆನ್ನೆಗೆ ಒಂದು ಬಿಟ್ಟರೆ ಕಾಣಿಸುವ ಸ್ವರ್ಗ 5
14. ಭಾರವನ್ನು ಹೊತ್ತ ನಮ್ಮ ರಾಷ್ಟ್ರ ಮಾತೆಗೆ ಉಘೇ 5
16. ಮುತ್ತಾತನಿಗೆ ಮಗನಮಗನ ಮಗ 4
18. ಎಲ್ಲೋ ಕಳೆದುಹೋಗುವ ಪದ 4

ಎಡದಿಂದ ಬಲಕ್ಕೆ
1. ಅಲ್ಲೇ ನಿಲ್ಲ ಬೇಡ: ಮುನ್ನಡೆ, ಪೂರಿಗೆ ಬೇಕಾದ ವ್ಯಂಜನ ಸಿಗುತ್ತೆ 4
3. ವ್ರತಕ್ಕೆ ಬರುವ ಆಷಾಢದಿಂದ ಆಶ್ವಯುಜದ ನಾಲ್ಕು ತಿಂಗಳು 4
5. ಇದು ವಿಷ್ಣುವಿನ ರೂಪದಲ್ಲಿ ಶಿವಕೋಪಗೊಂಡ ರೂಪ 5
6. ಅಂತರಂಗದ ಆಸೆ ಹೀಗಿರುತ್ತೆ 5
9. ಹಾಡಿನ ರೂಪದಲ್ಲಿ ಪ್ರಸ್ತುತ ಪಡಿಸುವ ವೇದ ಗಾನ 5
11. ವಂಗ ದೇಶದ ಸಾಂಬಾರು ಪದಾರ್ಥ 3
13. ಎಲ್ಲೋ ರಸ್ತೆಯಲ್ಲಿ ನಡೆದು ಹೋಗುವವ ಹಿಂದು ಮುಂದಾಗಿ ಸಾಗಿದ್ದಾನೆ 3
15. ಕಾಲತಳದಲ್ಲಿ ಅರಳಿದ ತಾವರೆ 5
17. ಅತ್ಯಂತ ಸುಂದರ ಈ ಸ್ವಾಮಿ 5
19. ಮುಖ್ಯ ಕಾರ್ಯ ನಡೆಯಬಹುದಾದ ಬೃಹತ್ ಚಪ್ಪರ 5
20. ಕ್ರಮೇಣ ನಶಿಸುವಂತೆ ಮಾಡುವ ವ್ಯಾಧಿ 4
21. ತುಕಡಿಯ ಒಡೆಯ 4

ಪದಬಂಧ ಉತ್ತರ -2892

ಮೇಲಿಂದ ಕೆಳಕ್ಕೆ
1. ಮದನಿಕಾ 2.ಸಮತಳ 3.ಕರಗಿಸು 4.ಪರಾಶರ 6.ಸವದತ್ತಿ 8.ಕದನಗೃಹ 10.ಚಾಚೂತಪ್ಪದೆ 11.ಕೃತ್ರಿಮ 12.ಕಾರಣ 16.ಸತ್ಯಯುಗ 17.ಸಮಾಗಮ 18.ಸರಿಸಾಟಿ 19. ರಪರಪ 20. ಸೆಣಸಾಟ

ಎಡದಿಂದ ಬಲಕ್ಕೆ
1. ಮನೋಲ್ಲಾಸ 3.ಕಡುಕೋಪ 5.ಮಹಾಸಮರ 7.ಕಾಕತಾಳ 9.ಸುವಿಚಾರ 11.ಕೃತ್ತಿಕಾ 13.ನಡುರಾತ್ರಿ 14.ರಮಾಕಾಂತ 15.ಮಸಣ 17.ಸಹವಾಸ 19.ರವಿದೆಸೆ 21.ಸಾರಂಗಧರ 22.ಮಹಾನಟಿ 23.ಪರದಾಟ

ಪುರಾತನ ನೌಕಾ ಸಾಮರ್ಥ್ಯ ಸಾರುವ 'ಕೌಂಡಿನ್ಯ'

ಯಂತ್ರೋಪಕರಣ ಬಳಸದೆ ಕೇರಳ ಕಾಡಿನ ಮರದ ಹಲಗೆಗಳು, ತೆಂಗಿನ ನಾರಿನ ಹಗ್ಗಗಳಿಂದ ತಯಾರಾದ ನೌಕೆ 'ಐಎನ್‌ಎಸ್‌ವಿ ಕೌಂಡಿನ್ಯ' ಕಾರವಾರದ ಕದಂಬ ನೌಕಾನೆಲೆಗೆ ಸೇರ್ಪಡೆಗೊಂಡಿದೆ. ಇದರ ವಿಶೇಷತೆಯೇನು? ಇದರಿಂದ ನೌಕಾದಳಕ್ಕೆ ಏನೆಲ್ಲ ಪ್ರಯೋಜನಗಳಿವೆ ಎಂಬ ಕುರಿತು ಬೆಳಕು ಚೆಲ್ಲುವ ಲೇಖನ...

ಕಾರವಾರದ ಕದಂಬ ನೌಕಾನೆಲೆಯಲ್ಲಿ ನಿಂತಿರುವ ಭಾರತೀಯ ನೌಕಾಪಡೆಯ ನೌಕಾಯಾನ ಹಡಗು (ಐಎನ್‌ಎಸ್‌ವಿ) 'ಕೌಂಡಿನ್ಯ'

ಐಎನ್‌ಎಸ್‌ವಿ ಕೌಂಡಿನ್ಯದ ಹಾಯಿಗಳ ಮೇಲೆ ಕದಂಬರ ರಾಜಲಾಂಛನವಾಗಿದ್ದ ಗಂಡಭೇರುಂಡ ಪಕ್ಷಿಯ ಚಿತ್ರ.

ಗಣಪತಿ ಹೆಗಡೆ

ಅತ್ಯಾಧುನಿಕ ಯುದ್ಧನೌಕೆಗಳು, ಯುದ್ಧವಿಮಾನ ಹೊತ್ತು ಸಾಗಬಲ್ಲ ಐಎನ್‌ಎಸ್ ವಿಕ್ರಮಾದಿತ್ಯ, ವಿಕ್ರಾಂತ್‌ನಂತಹ ಭಾರಿ ಗಾತ್ರದ ಹಡಗುಗಳನ್ನು ಒಳಗೊಂಡು ಬಲಿಷ್ಠವಾಗಿರುವ ಭಾರತೀಯ ನೌಕಾದಳಕ್ಕೆ ಈಗ ಪುಟ್ಟ ಗಾತ್ರದ 'ಐಎನ್‌ಎಸ್‌ವಿ ಕೌಂಡಿನ್ಯ' ಸೇರ್ಪಡೆಗೊಂಡಿದೆ.

ಭಾರಿ ಗಾತ್ರದ ಯುದ್ಧನೌಕೆಗಳ ನಡುವೆ ಈ ಪುಟ್ಟ ಗಾತ್ರದ ನೌಕೆಗೆ ಏನು ಕೆಲಸ? ಅದರ ಮಹತ್ವ ಏನು? ಎಂಬ ಪ್ರಶ್ನೆ ಮೂಡುವುದು ಸಹಜ.



ಬಾಬು ಶಂಕರನ್

'ಜಗತ್ತಿಗೆ ಸಮುದ್ರಯಾನದ ಅರಿವೇ ಇಲ್ಲದ ಕಾಲಘಟ್ಟದಲ್ಲಿ ಹಿಂದೂ ಮಹಾಸಾಗರದ ಉದ್ದಕ್ಕೂ ಪ್ರಾಚೀನ ಭಾರತದ ಮಹರ್ಷಿ ಕೌಂಡಿನ್ಯ ನೌಕಾಯಾನ ಕೈಗೊಂಡಿದ್ದರು. ಭಾರತ ಪ್ರಾಚೀನ ಕಾಲದಲ್ಲೇ ನೌಕಾಯಾನದಲ್ಲಿ ಮುಂಚೂಣಿಯಲ್ಲಿತ್ತು ಎಂಬುದನ್ನು ಜಗತ್ತಿಗೆ ಪುನಃ ಮನದಟ್ಟು ಮಾಡಿಕೊಡಲು ಕ್ರಿಸ್ತ ಪೂರ್ವ 5ನೇ ಶತಮಾನದ ಮಾದರಿಯಲ್ಲೇ ಸಿದ್ಧಪಡಿಸಿದ ನೌಕೆ ಇದು' ಎಂಬ ಉತ್ತರವನ್ನು ನೌಕಾದಳದ ಅಧಿಕಾರಿಗಳು ನೀಡುತ್ತಾರೆ.

ಗೋವಾದ ಮಾಂಡೋವಿ ನದಿತೀರದಲ್ಲಿ ಹೋದಿ ಇನ್ನೊವೇಶನ್ಸ್ ಪ್ರೇವೇಟ್ ಲಿಮಿಟೆಡ್ ಕಂಪನಿಯ ಶಿಪ್‌ಯಾರ್ಡ್‌ನಲ್ಲಿ ಸಿದ್ಧಗೊಂಡು, ಕಾರವಾರದ ಕದಂಬ ನೌಕಾನೆಲೆಗೆ ಬಂದು ನಿಂತಿರುವ ಭಾರತೀಯ ನೌಕಾಪಡೆಯ ನೌಕಾಯಾನ ಹಡಗು (ಐಎನ್‌ಎಸ್‌ವಿ) 'ಕೌಂಡಿನ್ಯ'ದ ಕಥೆ ರೋಚಕವಾಗಿದೆ.

ಅತ್ಯಾಧುನಿಕ ತಂತ್ರಜ್ಞಾನ, ಬಗೆ ಬಗೆಯ ಯಂತ್ರೋಪಕರಣಗಳಿದ್ದರೂ ಅವುಗಳನ್ನು ಬಳಸದೆ ಕೇರಳ ಕಾಡಿನ ಮರದ ಹಲಗೆಗಳು, ತೆಂಗಿನ ನಾರಿನ ಹಗ್ಗಗಳನ್ನು ಬಳಸಿ ತಯಾರಾದ ನೌಕೆ ನೋಡಲು ಅತ್ಯಾಕರ್ಷಕವಾಗಿದೆ. ಅದಕ್ಕಿಂತಲೂ ಕದಂಬರ ರಾಜಲಾಂಛನ 'ಗಂಡಭೇರುಂಡ ಪಕ್ಷಿ'ಯ ಚಿತ್ರವನ್ನೊಳಗೊಂಡ ನೌಕೆಯ ಹಾಯಿ, ನೌಕೆಯ ತುತ್ತತುದಿಯಲ್ಲಿರುವ ಸಿಂಹ ಲಾಂಛನ ಮತ್ತಷ್ಟು ಗಮನಸೆಳೆಯುತ್ತವೆ.

'ಕೌಂಡಿನ್ಯ ನೌಕೆಯು ತಳಭಾಗದಿಂದ ಮೇಲ್ಭಾಗದವರೆಗೆ ಚೌಕಾಕಾರದಲ್ಲಿ ಸಿದ್ಧಗೊಂಡಿದೆ. ಆಳಸಮುದ್ರದಲ್ಲಿ ಸಾಗುವಾಗ ಅಲೆಗಳ ಅಬ್ಬರಕ್ಕೆ ಅದು ಮುಳುಗದಂತೆ ಈ ರೀತಿ ನಿರ್ಮಿಸಲಾಗಿದೆ. ಇಡೀ ನೌಕೆಯಲ್ಲಿ ಒಂದೇ ಒಂದು ಯಂತ್ರೋಪಕರಣಗಳಿಲ್ಲ' ಎಂಬುದಾಗಿ ನೌಕೆ ನಿರ್ಮಿಸಿದ ಕೇರಳದ ನೌಕಾಶಿಲ್ಪಿ ಬಾಬು ಶಂಕರನ್ ಹೇಳುತ್ತಾರೆ.

ಐಎನ್‌ಎಸ್‌ವಿ ಕೌಂಡಿನ್ಯ ನಿರ್ಮಾಣ ಸಮಯದಲ್ಲಿ...

'ಸಂಪೂರ್ಣವಾಗಿ ಮರದ ಹಲಗೆ, ದಿಮ್ಮಿಗಳನ್ನು ಬಳಸಿಯೇ ನಿರ್ಮಿಸಲಾಗಿದೆ. ಒಂದೊಂದು ಹಲಗೆಗಳನ್ನು ಜೋಡಿಸಲು ತೆಂಗಿನ ನಾರಿನ ಹಗ್ಗಗಳನ್ನು ಬಳಸಿ ಹೊಲಿಗೆ ಹಾಕಲಾಗಿದೆ. 6 ಸಾವಿರ ವರ್ಷಗಳ ಹಿಂದೆ ನೌಕೆಯೊಂದನ್ನು ಹೇಗೆ ಸಿದ್ಧಪಡಿಸುತ್ತಿದ್ದರೋ ಅದೇ ಮಾದರಿಯಲ್ಲೇ ನೌಕೆ ಸಿದ್ಧಗೊಂಡಿದೆ. ಆಧುನಿಕ ತಂತ್ರಜ್ಞಾನ ನೌಕೆಗೆ ಸ್ಪರ್ಶಿಸಿಲ್ಲ' ಎಂದು ಹೆಮ್ಮೆಯಿಂದಲೇ ಹೇಳಿಕೊಂಡರು.

'2023ರಲ್ಲಿ ನೌಕೆ ಸಿದ್ಧಪಡಿಸುವ ಕೆಲಸ ಆರಂಭಿಸಲಾಯಿತು. 20ಕ್ಕೂ ಹೆಚ್ಚು ಕರಕುಶಲ ಕರ್ಮಿಗಳ ತಂಡ ಕಟ್ಟಿಕೊಂಡು ಕೆಲಸ ನಡೆಯಿತು. ಯೋಜನೆ ಆರಂಭಿಸುವ ಮೊದಲು ಹೀಗೆಯೇ ಸಿದ್ಧಪಡಿಸಬೇಕು ಎಂಬ ನಿಖರ ಯೋಜನೆ, ನೀಲನಕ್ಷೆ ಯಾವುದೂ ಇರಲಿಲ್ಲ. ಕಾಲಕಾಲಕ್ಕೆ ನೌಕಾದಳದ ಅಧಿಕಾರಿಗಳು, ಮದ್ರಾಸ್ ಐಐಟಿಯ ತಂತ್ರಜ್ಞರು ಮಾರ್ಗದರ್ಶನ ಮಾಡುತ್ತಿದ್ದರು. ಅದಕ್ಕೆ ತಕ್ಕಂತೆ ಕೆಲಸ ನಡೆಯಿತು' ಎಂಬ ವಿವರಣೆಯನ್ನೂ ನೀಡಿದರು.

'ಸಮುದ್ರ ಯಾನ ಮಾಡುವ ನೌಕೆ ಗಟ್ಟಿಮುಟ್ಟಾಗಿರಬೇಕು. ಅದಕ್ಕಾಗಿ ಬಲಿಷ್ಠ ಹಲಗೆಗಳೇ ಬೇಕಿತ್ತು. ಅಂತಹ ಹಲಗೆಗಳಿಗೆ ಕೇರಳದ ಕಣ್ಣೂರು, ವೈಯನಾಡ್ ಭಾಗದ ಕಾಡುಗಳಲ್ಲಿ ಸಾಕಷ್ಟು ಹುಡುಕಾಟ ನಡೆಸಲಾಯಿತು. ಕೊನೆಗೂ ಹಲಸು ಸೇರಿದಂತೆ ಬೇರೆ ಬೇರೆ ಜಾತಿಯ ಮರಗಳ ಹಲಗೆಗಳು ಲಭಿಸಿದವು. ಅವುಗಳೊಂದಿಗೆ ಮೀನೆಣ್ಣೆ, ಬೇವಿನ ಪುಡಿ, ಪ್ರಾಣಿಗಳ ಕೊಬ್ಬುಗಳನ್ನು ಸವರಿ ಹಲಗೆಗಳನ್ನು ಸುದೀರ್ಘ ಬಾಳಿಕೆಗೆ ಬರುವಂತೆ ಮಾಡಿದ್ದೇವೆ' ಎಂದೂ ನೌಕೆ ತಯಾರಿಕೆಯ ಹಿಂದಿನ ಶ್ರಮದ ಕಥನ ವಿವರಿಸಿದರು.

ನೌಕೆ ತಯಾರಿಕೆಗೆ ಪುಸ್ತಕ ಕಾರಣವಾಯ್ತು

'ಐಎನ್‌ಎಸ್‌ವಿ ಕೌಂಡಿನ್ಯ' ತಯಾರಿಕೆಗೆ ಪ್ರಧಾನ ಮಂತ್ರಿಯವರ ಆರ್ಥಿಕ ಸಲಹೆಗಾರರಲ್ಲಿ ಒಬ್ಬರಾದ ಸಂಜೀವ ಸನ್ಯಾಲ್ ಬರೆದ 'ದಿ ಓಶನ್ ಆಫ್ ಚರ್ನ್' ಪುಸ್ತಕ ಕಾರಣವಾಗಿದೆ. ಬರಹಗಾರರೂ ಆಗಿರುವ ಸಂಜೀವ್ ಪ್ರಾಚೀನ ಭಾರತದ ನೌಕಾಯಾನದ ಕುರಿತು ಪುಸ್ತಕ ಬರೆಯಲಾರಂಭಿಸಿದ್ದರು. ಇದಕ್ಕಾಗಿ ಅವರು ಸಂಶೋಧನೆ ಕೈಗೊಂಡ ವೇಳೆ ದೊರೆತ ಮಾಹಿತಿಗಳು ನೌಕೆ ರೂಪುಗೊಳ್ಳಲು ಕಾರಣವಾಯ್ತು ಎಂಬ ಅಂಶವನ್ನೂ ಸ್ವತಃ ಅವರೇ ನೌಕೆ ಲೋಕಾರ್ಪಣೆ ವೇಳೆ ವಿವರಿಸಿದ್ದಾರೆ.

'ಆಗ್ನೇಯ ಏಷ್ಯಾ ಭಾಗದಲ್ಲಿ ನೌಕಾಯಾನ ಆರಂಭಿಸಿದ್ದ 'ಕೌಂಡಿನ್ಯ' ಮಹರ್ಷಿ ಕಾಂಬೋಡಿಯಾದಲ್ಲಿ ಸಿಲುಕಿಕೊಳ್ಳುತ್ತಾರೆ. ಅಲ್ಲಿನ ನಾಗಾ ಬುಡಕಟ್ಟು ಜನರು ಕೌಂಡಿನ್ಯ ಮತ್ತು ತಂಡದ ಮೇಲೆ ದಾಳಿ ನಡೆಸಲು ಮುಂದಾಗುತ್ತಾರೆ. ಎದೆಗುಂದದ ಕೌಂಡಿನ್ಯ ಬುಡಕಟ್ಟು ಸೈನ್ಯವನ್ನು ಹಿಮ್ಮೆಟ್ಟಿಸಲು ಯತ್ನಿಸುತ್ತಿದ್ದ ಸಮಯದಲ್ಲೇ ಅಲ್ಲಿನ 'ಫುನಾನ್' ಸಾಮ್ರಾಜ್ಯದ ರಾಜಕುಮಾರಿ ಸೋಮಾ ಕಣ್ಣಿಗೆ ಬೀಳುತ್ತಾರೆ. ಕೌಂಡಿನ್ಯನ ಸಾಹಸ, ಸೌಂದರ್ಯಕ್ಕೆ ಮನಸೋತು ಆಕೆ ವರಿಸಲು ಮುಂದಾಗುತ್ತಾಳೆ. ಫುನಾನ್ ಸಾಮ್ರಾಜ್ಯವನ್ನು ಬಲಿಷ್ಠಗೊಳಿಸುವ ಮೂಲಕ ಕೌಂಡಿನ್ಯ ಸಾಮ್ರಾಜ್ಯದ ಅಧಿಪತಿಯಾಗುತ್ತಾನೆ. ಇದಕ್ಕೆಲ್ಲ ಅವರ ನೌಕಾಯಾನವೇ ಕಾರಣವಾಗಿದ್ದರಿಂದ ಆಗಿನ ಮಾದರಿಯ ನೌಕೆ ಸಿದ್ಧಪಡಿಸಲು ನೀಡಿದ ಸಲಹೆ ಕಾರ್ಯರೂಪಕ್ಕೆ ಬಂತು' ಎಂದು ಸಂಜೀವ್ ಹೇಳುತ್ತಾರೆ.

'ಕೌಂಡಿನ್ಯನ ಸಾಹಸಗಾಥೆ ವಿವರಿಸುವ ಚಿತ್ರಗಳು ಅಜಂತಾ ಗುಹೆಗಳಲ್ಲಿ ದಾಖಲಾಗಿವೆ. ಅವುಗಳನ್ನು ಗಮನಿಸಿಯೇ ನೌಕೆಯ ಚಿತ್ರಣಗಳು ಲಭ್ಯವಾದವು. ಅವುಗಳನ್ನು ಆಧರಿಸಿ ಯಥಾವತ್ತಾಗಿ ನೌಕೆ ರೂಪುಗೊಂಡಿದೆ' ಎಂದು ಅವರು ಸಂತಸ ವ್ಯಕ್ತಪಡಿಸಿದರು.

'ಬರವಣಿಗೆ ಒಂದು...

6ನೇ ಪುಟದಿಂದ...

- **ಕನ್ನಡ ವಿಮರ್ಶೆ ನಿಮ್ಮ ಬರಹಗಳಿಗೆ ಹೇಗೆ ಪ್ರತಿಕ್ರಿಯಿಸಿದೆ? ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?**

ತಟಸ್ಥವಾಗಿದೆ. ನನಗೆ ಖುಷಿಯನ್ನೂ ಉಂಟು ಮಾಡಿಲ್ಲ. ಬೇಸರವನ್ನು ಕೂಡ. ವಿಮರ್ಶೆಯಿಂದ -ಪ್ರತಿಕ್ರಿಯೆಯಿಂದ ಹೆಚ್ಚು ಲಾಭ ಆಗಿಲ್ಲ. ಯಾರು ಏನೇ ಹೇಳಲಿ? ಸುಮ್ಮನೆ ನನ್ನ ಪಾಡಿಗೆ ನಾನು ಬರೆಯುತ್ತ ಹೋದೆ. ಬರೆಯುತ್ತ ಹೋಗುತ್ತೇನೆ. ಪ್ರತಿಕ್ರಿಯೆಗಳನ್ನು ಆಧರಿಸಿ ಬರೆಯುವುದು ಅಥವಾ ಬರೆಯುವುದನ್ನು ನಿಲ್ಲಿಸುವುದು ಆಗುವುದಿಲ್ಲ.

- **ಸಾಹಿತ್ಯದ ಗುಂಪುಗಾರಿಕೆ ಬಗ್ಗೆ ಏನು ಹೇಳುತ್ತೀರಿ?**

ನಾನು ಯಾವುದೇ ಸಾಹಿತ್ಯದ ಗುಂಪಿಗೆ ಸೇರಿದವಳಲ್ಲ. ಗುಂಪುಗಾರಿಕೆ ಮಾಡಿದವಳೂ ಅಲ್ಲ. ಸುಮ್ಮನೆ ನನಗೆ ತೋಚಿದ ಹಾಗೆ ಬರೆಯುತ್ತ ಹೋದವಳು. ಬರೆಯುವುದು ನನ್ನ ಪ್ರೀತಿಯ ಕೆಲಸ. ಅದರಿಂದ ಬರುವ ಮನ್ನಣೆ ಹಾಗೂ ಚರ್ಚೆಗಳ ಕುರಿತು ಹೆಚ್ಚಿಗೆ ತಲೆ ಕೆಡಿಸಿಕೊಂಡಿಲ್ಲ.

- **ಲೇಖನ- ಕವಿತೆ- ಪ್ರಬಂಧ ಬರೆದಿದ್ದೀರಿ. ಲೇಖಕನಿಗೆ ಪ್ರಕಾರ ನಿಷ್ಠೆ ಮುಖ್ಯವೇ?**

ಆಯಾ ಸಂದರ್ಭ ಮತ್ತು ವಸ್ತುವಿಗೆ ಅನುಗುಣವಾಗಿ ಬರೆಯುತ್ತ ಹೋದೆ. ಕವಿತೆ-ಲೇಖನ ಅಂತ ಪ್ರತ್ಯೇಕಿಸುವುದಿಲ್ಲ. ಆಯಾ ವಸ್ತುವೇ ಅದರ ಆಕಾರ-ಸ್ವರೂಪವನ್ನು ನಿರ್ಧರಿಸಿತು. ಆದರೆ, ಸಣ್ಣಕತೆ ನನ್ನ ಆತ್ಮಕ್ಕೆ ಹತ್ತಿರವಾದ ಪ್ರಕಾರ. ಸಣ್ಣಕತೆಯಲ್ಲಿ ಅನುಭವ ಲೋಕದ ವಿಸ್ತರಣೆ- ಕಲ್ಪಕತೆಗಳಿವೆ. ಭಾಷೆಯಲ್ಲಿ ಅದನ್ನು ಸೊಗಸಾಗಿ ಕಟ್ಟಬಹುದು. ಕನ್ನಡದ ಸಣ್ಣಕತೆಯ ಲೋಕ ವಿಭಿನ್ನ–ವಿಶಿಷ್ಟ. ಇತ್ತೀಚಿನ ವರ್ಷಗಳಲ್ಲಿ ನಾನು ಬಹುತೇಕ ಲೇಖನ ಬರೆಯುವುದನ್ನೇ ನಿಲ್ಲಿಸಿದ್ದೇನೆ. ಅವುಗಳನ್ನ ಹೇಗೆ ಕತೆಯಾಗಿಸಬಹುದು ಎಂದು ಯೋಚಿಸುತ್ತಿರುತ್ತೇನೆ. ಕತೆಯ ಮೂಲಕ ಕಟ್ಟುವ ಲೋಕ ನನಗೆ ಪ್ರಿಯವಾದದ್ದು.

- **ಮುಂದಿನ ಬರವಣಿಗೆ ಏನು? ಹೇಗಿರುತ್ತದೆ?**

ಈ ಪ್ರಶಸ್ತಿಯ ನಂತರ ಸಹಜವಾಗಿಯೇ ನಿರೀಕ್ಷೆಗಳು ಹೆಚ್ಚಾಗಲಿವೆ. ಅದು ಒತ್ತಡವನ್ನೂ ಉಂಟು ಮಾಡಬಹುದು. ನಾನು ಮಾತ್ರ ಎಂದಿನಂತೆ ನನ್ನದೇ ರೀತಿಯಲ್ಲಿ ಬರವಣಿಗೆ ಮುಂದುವರೆಸುತ್ತೇನೆ. ಬರವಣಿಗೆ ನನಗೆ ಮೊದಲ ಆದ್ಯತೆ. ನನ್ನ ಬದುಕಿನ ಘಟನೆ-ನೆನಪುಗಳನ್ನ ದಾಖಲಿಸುವ ಆತ್ಮಕತೆ ಬರೆಯಬೇಕು ಎಂಬ ವಿಚಾರ ಇದೆ. ಒಂದು ಕಾದಂಬರಿಯ ಹೊಳಹು ಹಾಕಿಕೊಂಡಿರುವೆ. ಅವನ್ನೆಲ್ಲ ಯಾವಾಗ ಆರಂಭಿಸಿ, ಮುಗಿಸುತ್ತೇನೋ ಗೊತ್ತಿಲ್ಲ. ಈ ಪ್ರಶಸ್ತಿಯ ನಂತರ ಬೇರೆ ಬೇರೆ ಸಾಹಿತ್ಯ ಉತ್ಸವ-ಕಾರ್ಯಕ್ರಮಗಳಿಗಾಗಿ ತುಂಬಾ ಬೇಡಿಕೆ ಬರುತ್ತಿದೆ. ಜಗತ್ತಿನಾದ್ಯಂತ ಓಡಾಡಬೇಕಾಗಬಹುದು. ಈ ಓಡಾಟ- ಕಾರ್ಯಕ್ರಮಗಳ ಮಧ್ಯೆ ಬಿಡುವು ಮಾಡಿಕೊಂಡು ಬರೆಯಬೇಕಾಗಲಿದೆ. ಬರೆಯುವುದು ಬಹಳ ಮುಖ್ಯ. ಅದಕ್ಕೆಲ್ಲ ಸ್ವಲ್ಪ ಪ್ಲ್ಯಾನ್ ಮಾಡಬೇಕಾಗುತ್ತದೆ.

'ಅನುವಾದವೂ ಸ್ವತಂತ್ರ ಪಠ್ಯ'

6ನೇ ಪುಟದಿಂದ...

- **ಇಂದಿನ ಸಂದರ್ಭದಲ್ಲಿ ಪ್ರತಿರೋಧದ ಧ್ವನಿ ಸಾಹಿತ್ಯದ ಮೂಲಕ ಬರುತ್ತಾ ಇದೆಯೇ? ಕನ್ನಡದ ಬಂಡಾಯ ಸಾಹಿತ್ಯದ ಮೇರು ದಿನಗಳು ಕಳೆದು ಹೋದ ಮೇಲೆ ಆಗಿನ ಸಂದರ್ಭದಲ್ಲಿ ಸೃಷ್ಟಿಯಾದ ಕಥೆಗಳನ್ನು ಮತ್ತೆ ನೋಡುವಾಗ, ಆ ಚೌಕಟ್ಟಿನಲ್ಲಿ ಹುಟ್ಟಿದ ಕನ್ನಡದ ಧ್ವನಿಯನ್ನು ಹೇಗೆ ಕೇಳಿಸಿಕೊಂಡಿದ್ದೀರಿ?**

ಸಾಹಿತ್ಯದಲ್ಲಿ ಬಂಡಾಯ ಅನ್ನುವಂಥ ಅಲೆ ಅಥವಾ ಪ್ರಾಕಾರ ಈಗಿನ ದಿನಗಳಲ್ಲಿ ಹಿಂದಿನಂತೆ ಇದ್ದ ಸ್ವರೂಪದಲ್ಲಿ ಕಾಣಿಸದೇ ಇರಬಹುದು. ಆದರೆ, ಕೊಂಚ ಆಳದಲ್ಲಿ ನೋಡಿದರೆ protest literature ಅಂದರೆ ಪ್ರತಿಭಟನಾ ಸಾಹಿತ್ಯ ಎಂದೆಂದಿಗೂ ಜೀವಂತವಾಗಿ ಪ್ರಸ್ತುತವಾಗಿಯೇ ಇದೆ. ಅದು ಮುಂದೆಯೂ ಇರುತ್ತದೆ. ಇಂದಿನ ಸಂದರ್ಭದಲ್ಲೂ ಸಿಎಎ ಪ್ರತಿಭಟನೆಯಲ್ಲಿ ಯುವಕವಿ ಆಮೀರ್ ಅಜೀಜ್ ಅವರ ಸಾಲುಗಳು (ಸಬ್ ಯಾದ್ ರಖಾ ಜಾಯೆಗಾ) ದಟ್ಟವಾಗಿಯೇ ಅನುರಣಿಸಿದವು. ಅಂತೆಯೇ ಈಗಲೂ ಎಲ್ಲಾ ಭಾಷೆಗಳಲ್ಲಿ ಆಗುತ್ತಿರುವಂತೆಯೇ ಕನ್ನಡದಲ್ಲೂ ಶಕ್ತ ಪ್ರತಿಭಟನೆಯ ಸೊಲ್ಲುಗಳು ಕೇಳಿ ಬರುತ್ತಾ ಇವೆ. ಅತ್ಯಂತ ಆಸಕ್ತಿಕರ ಸಾಹಿತ್ಯ ಹುಟ್ಟುತ್ತಿದೆ. ಇದು ಖಂಡಿತಾ ಮುಂದುವರೆಯುತ್ತದೆ ಮತ್ತು ಗಮನವಿಟ್ಟು ನೋಡಿದರೆ ಇದು ಇಂದಿಗೂ ಕಾಣಿಸುವ ವಾಸ್ತವವೇ. ಹಾಗಾಗಿ, ಇದು ದೂರದ ವಿಷಯ ಅನ್ನಿಸಿಲ್ಲ.

- **ಕನ್ನಡಕ್ಕೆ ಮನ್ನಣೆ ಸಿಗಬೇಕಾದರೆ ಕನ್ನಡದ ಕೃತಿಗಳು ಇಂಗ್ಲಿಷ್‌ನಲ್ಲಿ ಬರಬೇಕು ಎಂದು ಹಲವರು ನಂಬಿದ್ದಾರೆ. ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಮಾಡುವ ನೀವು ಇದನ್ನು ಹೇಗೆ ನೋಡುತ್ತೀರಿ?**

ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದವಾದರೆ ಮಾತ್ರ ಕನ್ನಡಕ್ಕೆ ಪ್ರಸ್ತುತತೆ ಹಾಗೂ ಮೌಲಿಕತೆ ಬರುತ್ತದೆ ಅಂತ ನನಗೆ ಅನ್ನಿಸೋದಿಲ್ಲ. ಕನ್ನಡವನ್ನೂ ಸೇರಿದಂತೆ ಜಗತ್ತಿನ ಯಾವುದೇ ಭಾಷೆ ತನ್ನದೇ ನೆಲೆಯಲ್ಲಿ ವಿಶಿಷ್ಟ, ಪರಿಪೂರ್ಣ ಹಾಗೂ ಅಂತಃಸತ್ವದಿಂದ ಶ್ರೀಮಂತವಾಗಿದೆ. ಹಾಗಾಗಿ ಇಂಗ್ಲಿಷ್ ಅನುವಾದ ಮಾತ್ರ ಅದನ್ನು ಹೊಳೆಯಿಸಬಲ್ಲದು ಎಂಬ ಮಾತನ್ನು ನಾನು ಖಂಡಿತವಾಗಿಯೂ ಒಪ್ಪಲಾರೆ. ಇಂದಿನ ಸಂದರ್ಭದಲ್ಲಿ ಹಾಗೂ ಬದಲಾಗುತ್ತಿರುವ ಜಗತ್ತಿನಲ್ಲಿ ಇಂಗ್ಲಿಷ್ ಒಂದು ಚಾಲ್ತಿಯಲ್ಲಿರುವ ಭಾಷೆ ಆಗಿರಬಹುದು. ಅಂದರೆ language of currency ಅನ್ನಿಸಬಹುದು.

ಹಾಗೆ ನೋಡಿದರೆ ಭಾಷೆಗಳು ಒಂದಕ್ಕೊಂದು ಸಂವಹಿಸುತ್ತವೆ. ದಕ್ಷಿಣ ಭಾರತದ ವಿಷಯವನ್ನೇ ತೆಗೆದುಕೊಂಡರೆ, ನಮ್ಮಲ್ಲಿ ಬಳಸುವ ಎಷ್ಟೋ ಪದಗಳು, ನುಡಿಗಳು ತಮಿಳು ಅಥವಾ ಮತ್ತೊಂದು ಭಾಷೆಯಲ್ಲೂ ಇವೆ. ಕನ್ನಡ, ಮಲಯಾಳಂ, ತುಳು, ತಮಿಳು, ತೆಲುಗು ಇವೆಲ್ಲಾ ಒಂದರ ಜೊತೆ ಇನ್ನೊಂದು ಮಾತನಾಡುತ್ತವೆ. ಒಂದರಿಂದ ಒಂದು ಕಸುವು ಪಡೆದುಕೊಳ್ಳುತ್ತವೆ, ಒಂದಕ್ಕೆ ಮತ್ತೊಂದು ಕಡ ಕೊಡುತ್ತವೆ, ತಬ್ಬಿಕೊಳ್ಳುತ್ತವೆ. ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಆದ ಕಾರಣ ಕನ್ನಡಕ್ಕೆ ಮಹತ್ವ ಸಿಕ್ಕಿದೆ ಅಂತ ಅನ್ನಿಸಲ್ಲ. ಹಾಗೆ ನೋಡಿದರೆ ಇಂಗ್ಲಿಷ್‌ಗೆ ಇದರಿಂದ ಹೆಚ್ಚು ಶಕ್ತಿ ಬರುತ್ತದೆ. ಇಂಗ್ಲಿಷ್ ಒಂದು ಸ್ಪಾಂಜ್ ಇದ್ದ ಹಾಗೆ. ಮೊದಲಿನಿಂದಲೂ ಬೇರೆ ಭಾಷೆಗಳಿಂದ ಪಡೆದು ಬಲಸಂವರ್ಧನೆ ಮಾಡಿಕೊಳ್ಳುತ್ತಿದೆ, ಬೆಳೆಯುತ್ತಿದೆ, ವಿಸ್ತರಿಸುತ್ತಿದೆ. ಈ ನೆಲೆಯಲ್ಲಿ ಹೇಳುವುದಾದರೆ, ಕನ್ನಡದಿಂದಾಗಿ ಇಂಗ್ಲಿಷ್ ಹೆಚ್ಚು ಪಡೆದುಕೊಂಡಿದೆಯೇ ಹೊರತು ಅಲ್ಲಿಂದ ಇಲ್ಲಿಗೆ ಬಂದದ್ದು ಕಡಿಮೆ ಅನ್ನಬಹುದು.

- **ಸಾಮಾನ್ಯವಾಗಿ ಬೆಂಗಾಲಿ, ಹಿಂದಿ ಇತ್ಯಾದಿ ದಕ್ಷಿಣೇತರ ಭಾಷೆಗಳಿಗೆ ಜಾಗತಿಕ ಸಾಹಿತ್ಯದಲ್ಲಿ ಸ್ಥಾನ ಆಗಲೇ ಸಿಕ್ಕಿದೆ. ಕನ್ನಡದ ಅನುವಾದ ಇಲ್ಲಿ ನಿಲ್ಲಬಹುದು ಹಾಗೂ ಸ್ಥಾನ ಪಡೆಯಬಹುದು ಎಂಬ ನಿರೀಕ್ಷೆ ಇತ್ತೇ? ಪಾಪ್ಯುಲರ್ ಲಿಟರೇಚರ್‌ಗೆ ಹೊರತಾದ ದಾರಿ ಇದು. ಇದನ್ನು ನೀವು ಏಕೆ ಆಯ್ಕೆ ಮಾಡಿದಿರಿ?**

ಅನುವಾದದ ಕೆಲಸ ಕೈಗೆತ್ತಿಕೊಳ್ಳುವಾಗ ಇದಕ್ಕೆ ಪ್ರಶಸ್ತಿ ಬರಬೇಕು ಅನ್ನುವ ಆಲೋಚನೆಯಾಗಲೀ ಪ್ಲ್ಯಾನ್ ಆಗಲೀ ನನಗೆ ಇರುವುದೇ ಇಲ್ಲ. ನಮ್ಮಲ್ಲಿ ಇರುವ ಉತ್ತಮ ಬರಹಗಾರರು ಪ್ರಶಸ್ತಿ ಬರಲಿ ಎಂಬ ಆಲೋಚನೆ ಇಟ್ಟುಕೊಂಡು ತಮ್ಮ ಕೆಲಸ ಶುರು ಮಾಡಿಲ್ಲ ಎಂದು ನಾನು ಕಂಡಿದ್ದೇನೆ. ಉತ್ತಮ ಸಾಹಿತ್ಯ ಸಂರಚನೆ ಹಾಗೂ ಸೃಷ್ಟಿಯ ಬೀಜ ಇಂತಹ ಆಲೋಚನೆಯ ಚೌಕಟ್ಟಿನಲ್ಲಿ ಮೊಳೆಯುವುದಿಲ್ಲ. ಇಷ್ಟು ಹೇಳಿದ ಮೇಲೆ, ಈ ಮನ್ನಣೆಯಿಂದಾಗಿ ನನ್ನ ಭಾಷೆಯ ಒಂದಷ್ಟು ಉತ್ತಮ ಕೃತಿಗಳು ಜಗತ್ತಿನ ಕಣ್ಣಿಗೆ ಬೀಳಲಿ ಅಂತ ಆಶಿಸುತ್ತಿದ್ದೇನೆ. ಆ ಕಾರಣಕ್ಕೆ ಈ ಅನುವಾದವನ್ನು ನಾನು ಆಯ್ಕೆ ಮಾಡಿಕೊಂಡೆ.

- **ಅನುವಾದಕರು ಹಾಗೂ ಮೂಲ ಲೇಖಕರು – ಈ ಸಂಬಂಧ ಸ್ವಲ್ಪ ಸಂಕೀರ್ಣವಾದದ್ದು. ಬಾನು ಅವರು ನಿಮ್ಮ ಅನುವಾದದಲ್ಲಿ ಪಾತ್ರ ವಹಿಸಿದ್ದರೆ ಅಥವಾ ಅನುವಾದಕರಾಗಿ ಇದನ್ನು ನಿಭಾಯಿಸಿದ್ದು ಹೇಗೆ?**

ಹಾರ್ಟ್ ಲ್ಯಾಂಪ್ (ಎದೆಯ ಹಣತೆ) ಅನುವಾದ ಬಹಳ ಸ್ವತಂತ್ರವಾಗಿ ನಡೆಯಿತು. ಆಗಾಗ ನನಗೆ ಯಾವುದಾದರೂ ಪದ ಅಥವಾ ಶಬ್ದ ಗುಚ್ಛ ಅರ್ಥವಾಗದೇ ಹೋದರೆ ಬಾನು ಅವರ ಹತ್ತಿರ ಅದರ ಅರ್ಥ ಅಥವಾ ಅದನ್ನ ಯಾವ ಸಂದರ್ಭದಲ್ಲಿ ಮತ್ತು ಏನನ್ನು ಹೇಳುವ ಸಲುವಾಗಿ ಬಳಸಿದ್ದೀರಿ ಎಂದು ಕೇಳುತ್ತಿದ್ದೆ. ಹಾಗೆ ನೋಡಿದರೆ ಅನುವಾದ ಎನ್ನುವುದೇ ಸ್ವತಂತ್ರವಾದ ಮೂರನೇ ಪಠ್ಯವಾಗಿಬಿಡುತ್ತದೆ. ಮೂಲ ಲೇಖಕರು, ಅನುವಾದಕರು ಇಬ್ಬರನ್ನೂ ಮೀರಿ, ಇಬ್ಬರೂ ಸೇರಿ ಮತ್ತಷ್ಟು ಜನರ ಕುಸುರಿ ಆಗಿ ಹೊರಬರುವ ಕೃತಿ ಅದು. ಅದು ಒಂದು ಬಗೆಯಲ್ಲಿ ಸ್ವತಂತ್ರ ಕೃತಿ ಎನ್ನಿಸಿಕೊಳ್ಳುತ್ತದೆ. ಇಬ್ಬರೂ ಹೊಂದಬಹುದಾದರೂ, ಇಬ್ಬರೂ ಅದನ್ನು ಹೊಂದಲಾರರು ಎನ್ನುವ ಹಾಗೂ ಇದನ್ನು ನೋಡಬಹುದು. ಅನುವಾದದ ಪ್ರತೀ ಪದಕ್ಕೆ ಅನುಮತಿ ಕೇಳುವ ಅಗತ್ಯ ಇಲ್ಲ. ಇದು ನನ್ನ ಅಭಿಪ್ರಾಯ ಹಾಗೂ ಕೆಲಸ ಮಾಡುವ ಶೈಲಿ. ನಾವಿಲ್ಲಿ ಚಾಟ್ ಜಿಪಿಟಿಯಂತೆ ಕೆಲಸ ಮಾಡುತ್ತಿಲ್ಲ ಅಲ್ಲವೇ?

- **ಜಾಗತಿಕ ಸಾಹಿತ್ಯದ ಏಜೆಂಟ್, ಅಂತರರಾಷ್ಟ್ರೀಯ ಪ್ರಕಟಣೆಯ ಲಾಬಿ ಇವೆಲ್ಲಾ ಕನ್ನಡಕ್ಕೆ ಸದ್ಯದಲ್ಲಿ ಹೊರತಾದ ಜಗತ್ತು. ಆದರೆ, ನಿಮಗೆ ಈ ಅಂಶಗಳ ಪರಿಚಯ ಇತ್ತೇ?**

ಹೌದು, ಹಲವರಿಗೆ ಈ ಕೆಲವು ಅಂಶಗಳು ಹೊಸತು ಅನಿಸಬಹುದು. ಸಾಹಿತ್ಯಿಕ ಏಜೆಂಟ್ (ಲಿಟರರಿ ಏಜೆಂಟ್) ಇರ್ತಾರೆ. ಅವರು ಬರಹಗಾರರು ಅಥವಾ ಅನುವಾದಕರು ಮತ್ತು ಪ್ರಕಾಶನ ಸಂಸ್ಥೆಗಳ ಜೊತೆ ಸೇತುವೆಯಾಗಿ ಕೆಲಸ ಮಾಡುತ್ತಾರೆ. ಇಲ್ಲಿ ಭಿನ್ನ ಮಟ್ಟದ ವೃತ್ತಿಪರತೆ ಕಾಣಸಿಗುತ್ತದೆ. ನನ್ನ ಪುಸ್ತಕ ಯಾರು ಪ್ರಕಟ ಮಾಡುತ್ತಾರೆ ಎಂದು ತಲೆಬಿಸಿ ಮಾಡಿಕೊಳ್ಳದೆ ಬರಹಗಾರರು ಅಥವಾ ಅನುವಾದಕರು ಸಮಾಧಾನ ಚಿತ್ತದಿಂದ ತಮ್ಮ ಕೆಲಸ ಮಾಡುತ್ತಾ ಹೋಗಬಹುದು. ಇದರಲ್ಲಿ ಅವರ ಪಾತ್ರವೂ ಮುಖ್ಯ. ಇದೆಲ್ಲಾ ವಿಚಾರಗಳ ಪರಿಚಯ ನನಗೆ ಇತ್ತು. ಹಾಗಾಗಿ ಬೇರೆ ವಿಷಯಗಳ ಬಗ್ಗೆ ತೀರಾ ತಲೆ ಕೆಡಿಸಿಕೊಳ್ಳದೇ ಕೆಲಸದ ಕಡೆ ಹೆಚ್ಚು ಆಸ್ಥೆಯಿಂದ ತೊಡಗಿಕೊಂಡೆ.

ಮೊದಲ ಓದು

ಉಳಿವಿಗಾಗಿ ನೀರ ನೆಮ್ಮದಿಯ ಅರಸುತ್ತ...



ಪು: 244 ₹250

ಭೂಮ್ತಾಯಿಯ ಕಕ್ಷೆಯಲಿ ಪಕ್ಷಿಯಾಗಿ
ಲೇ: ರೂಪ ಹಾಸನ
ಪ್ರ: ಜನ ಪ್ರಕಾಶನ
ಸಂ: 9632329955

ಜೋಗಿಣಿ ಹಕ್ಕಿ ತಾವು ಹುಡುಕುತ್ತಾ... ಎಂಬ ಕವಿತೆಯ ಮೂಲಕ ಈ ಕೃತಿಯೊಳಗಣ ಹಕ್ಕಿ ತನ್ನ ರೆಕ್ಕೆಯನ್ನು ಬಿಚ್ಚಿಕೊಳ್ಳುತ್ತದೆ. ಹಕ್ಕಿಯ ರೆಕ್ಕೆಯಂತೆ ಈ ಕೃತಿಯೂ ಎರಡು ಭಾಗಗಳನ್ನು ಒಳಗೊಂಡಿದೆ. 'ನಮ್ಮ ಉಳಿವಿನ ದಾರಿಗಳ ಹುಡುಕುತ್ತಾ...' ಎಂಬ ಮೊದಲ ಭಾಗದಲ್ಲಿ 12 ಲೇಖನಗಳಿವೆ. ಎರಡನೇ ಭಾಗ 'ನೀರ ನೆಮ್ಮದಿಯ ಹುಡುಕುತ್ತಾ...' 8 ಲೇಖನಗಳನ್ನು ಒಳಗೊಂಡಿದೆ. ಈ ಭಾಗವೂ 'ನೀರೆಂಬ ಮಾಯೆ!' ಎಂಬ ಪದ್ಯದಿಂದ ಆರಂಭವಾಗುತ್ತದೆ. 'ತನ್ನ ತಾನೇ ಮುಗಿಸಿಕೊಳ್ಳಲು' ಎಂಬ ಕವಿತೆಯ ಮೂಲಕ ಕೃತಿ ಕೊನೆಗೊಳ್ಳುತ್ತದೆ.

ಕವಯಿತ್ರಿ ರೂಪ ಹಾಸನ ಅವರು ಸಾಂದರ್ಭಿಕವಾಗಿ ಬರೆದ ಲೇಖನಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಗದ್ಯ–ಪದ್ಯಗಳಲ್ಲಿ ಅಡಗಿರುವ ಲೇಖಕಿಯ ಸೂಕ್ಷ್ಮ ಸಂವೇದನೆಯ ಸ್ವರೂಪವೂ ಇಲ್ಲಿ ಕಾಣುತ್ತದೆ. ಪರಿಸರದ ಮೇಲೆ ಮನುಷ್ಯನ ಹಸ್ತಕ್ಷೇಪದಿಂದ ಆಗುತ್ತಿರುವ ವಿಕೋಪ ಮತ್ತು ವಿಕೃತಿಯ ಬಗ್ಗೆ ಆತಂಕವನ್ನು ಇಲ್ಲಿನ ಲೇಖನಗಳು ವ್ಯಕ್ತಪಡಿಸುತ್ತವೆ.

'ಪ್ರಕೃತಿಯನ್ನು ಮರು ಸೃಷ್ಟಿಸುವ ಅಭಿವೃದ್ಧಿಯಾಗಬೇಕಲ್ಲವೇ?' ಎಂಬ ಪ್ರಥಮ ಲೇಖನದಲ್ಲಿ ಪಶ್ಚಿಮ ಘಟ್ಟದ ಹಸಿರ ಸೆರಗಿನಲ್ಲಿ 'ಗುಂಡ್ಯ ಜಲ ವಿದ್ಯುತ್' ಯೋಜನೆಯನ್ನು ವಿರೋಧಿಸಿದ ಜನ ಹೋರಾಟ ಮತ್ತು ವ್ಯವಸ್ಥೆಯ ಸಂಘರ್ಷದ ವಿವರವನ್ನು ನೀಡುತ್ತದೆ. ನೇತ್ರಾವತಿಯ ಉಪನದಿ ಗುಂಡ್ಯ ನದಿ ವಿದ್ಯುತ್ ಯೋಜನೆಯಿಂದ ಆಗುವ ಅರಣ್ಯನಾಶ, ಶಿರಾಡಿ ಘಾಟ್, ಕೆಂಪು ಹೊಳೆ ಪ್ರದೇಶದ ಜೀವ ವೈವಿಧ್ಯ ಹಾನಿಯನ್ನು ಹೇಳುತ್ತದೆ. ಜತೆಗೆ ಎತ್ತಿನ ಹೊಳೆ ತಿರುವು ಯೋಜನೆಯ ಸಾಧಕ ಬಾಧಕಗಳನ್ನೂ ವಿಶ್ಲೇಷಿಸುತ್ತದೆ.

'ಭೂತಾಯಿ ಬೆದರಿ ನಿಂತಾಳೋ...' ಲೇಖನ ಜಾಗತಿಕ ತಾಪಮಾನ ಮತ್ತು ಹವಾಮಾನ ವೈಪರಿತ್ಯ, ಪ್ರಾಕೃತಿಕ ವಿಕೋಪ ದುರಂತಗಳಿಗೆ ನಾವೇ ಕಾರಣ ಎನ್ನುವ ಆತ್ಮವಿಮರ್ಶೆಯನ್ನು ಮಾಡುವಂತಿದೆ. ಅದುವೇ ಅನೇಕ ಸಾಂಕ್ರಾಮಿಕ ರೋಗ ರುಜಿನಗಳಿಗೂ ಕಾರಣ ಆಗಿರುವ ಸಾಧ್ಯತೆ ಇದೆ ಎನ್ನುವ ಅಂಶವನ್ನು ಕೇಂದ್ರೀಕರಿಸಿ ವಿಸ್ತಾರಗೊಂಡಿದೆ.

ಬೇಂದ್ರೆ ಬದುಕು–ಬರಹದ ದರ್ಶನ



ಪು: 108 ₹150

ಅಂಬಿಕಾತನಯದತ್ತನ ಹಾಡ; ಬೆಳುದಿಂಗಳ ನೋಡ...
ಲೇ:ಎಚ್.ಎಸ್. ಸತ್ಯನಾರಾಯಣ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಸಂ: 9448676770

ಕನ್ನಡ ಕಾವ್ಯ ರಸಿಕರಿಗೆ ಬೇಂದ್ರೆ ಎಂದರೆ ಅವರೇ ಶಕ್ತಿ, ಸ್ಫೂರ್ತಿ, ಅನುಕರಣೀಯ ಆದರ್ಶ ವ್ಯಕ್ತಿ. ಅವರ ಕಾವ್ಯಧಾರೆ ಸವಿಯುವುದು ಒಂದು ಬೆರಗು, ಕುತೂಹಲ, ಸೋಜಿಗ ಎಲ್ಲವೂ. ಬೇಂದ್ರೆ ಕಾವ್ಯದ ಬಗ್ಗೆ, ಈ ಮಹಾನ್ ಕವಿಯ ವ್ಯಕ್ತಿತ್ವದ ಬಗ್ಗೆ ಎಷ್ಟು ಬರೆದರೂ, ಓದಿದರೂ, ಹಾಡಿದರೂ ಹೊಗಳಿದರೂ ಸಾಲದು. ಏಕೆಂದರೆ ಬೇಂದ್ರೆ ಎಂದರೆ ಅವರೊಬ್ಬ ರಸಬುಗ್ಗೆ!

ಪ್ರಸ್ತುತ ಕೃತಿಯಲ್ಲಿ ಲೇಖಕ, 'ಬೇಂದ್ರೆಯವರ ಬದುಕು–ಬರಹಗಳೆರಡು ಸದಾ ನಮ್ಮನ್ನು ಕಾಡುವಂಥವು' ಎನ್ನುತ್ತಲೇ ಬೇಂದ್ರೆ ಬದುಕಿನ ಕೆಲ ಪ್ರಸಂಗಗಳನ್ನು ರಸವತ್ತಾಗಿ ಓದುಗರಿಗೆ ಧಾರೆಯೆರೆಯುವ ಪ್ರಯತ್ನ ಮಾಡಿರುವುದು ಶ್ಲಾಘನೀಯ. ಬೇಂದ್ರೆಯವರ ಬಗೆಗಿನ ಪ್ರಚಲಿತ ಕಥೆ, ಸಂಗತಿಗಳನ್ನು ಸಂಗ್ರಹಿಸಿ ಅದನ್ನು ದಾಖಲಿಸಿ ಮುಂದಿನ ಪೀಳಿಗೆಗೆ ದಾಟಿಸುವ ಮಹತ್ತರ ಜವಾಬ್ದಾರಿಯನ್ನು ಅವರು ಇಲ್ಲಿ ಮಾಡಿದ್ದಾರೆ. ಬೇಂದ್ರೆಯವರ ಬಗ್ಗೆ ಲೇಖಕ ಓದಿದ್ದು, ತಿಳಿದಿದ್ದು, ಬೇರೆಯವರಿಂದ ದಕ್ಕಿಸಿಕೊಂಡದ್ದು, ಭಾಷಣ ಮಾಡಿದ್ದು... ಇವನ್ನೆಲ್ಲ ದಾಖಲಿಸುವ, ಮುಂದಿನ ಪೀಳಿಗೆಗೆ ದಾಟಿಸುವ ಕೆಲಸವನ್ನು ಮಾಡಿದ್ದಾರೆ.

ಈ ಪುಸ್ತಕದಲ್ಲಿ ಬರೆದಿರುವ 'ಒಂಟಿ ಯಾಕ ಆಗತಿ... ಬರಹದಿಂದ ಹಿಡಿದು ಕೊನೆಯತನಕ ಇರುವ ಎಲ್ಲ ಪುಟ್ಟ ಪುಟ್ಟ ರಸ ಪ್ರಸಂಗಗಳು ಸೊಗಸಾಗಿವೆ. ಕೃತಿಯಲ್ಲಿ ಮಧ್ಯೆ ಮಧ್ಯೆ ಬಳಸಿರುವ ಪೂರಕ ರೇಖಾಚಿತ್ರಗಳು ಖುಷಿ ಕೊಡುತ್ತವೆ. ಮಹಾನ್ ವ್ಯಕ್ತಿಯ ಜೀವನವನ್ನು ಕಟ್ಟಿಕೊಟ್ಟ ಪ್ರಸಂಗಗಳು ಕೆಲವೊಮ್ಮೆ ಗಂಭೀರವಾಗಿಯೂ, ಇನ್ನೂ ಕೆಲವು ಕಡೆ ಹಾಸ್ಯ ಪ್ರಸಂಗವಾಗಿಯೂ ಉಲ್ಲೇಖಿಸಿರುವುದು ಲೇಖಕರಿಗೆ ಬೇಂದ್ರೆಯವರ ಮೇಲಿರುವ ಅಭಿಮಾನವನ್ನೇ ಕಟ್ಟಿಕೊಟ್ಟ ಹಾಗೆ ಅನುಭವವಾಗುತ್ತದೆ. ಒಟ್ಟಿನಲ್ಲಿ ಸಂಗ್ರಹಯೋಗ್ಯ ಕೃತಿ ಇದು.

ಭ್ರಾತೃತ್ವ ಭಾರತವೇ ರಾಷ್ಟ್ರೀಯತೆ



ಪು: 288 ₹350

ಜೈ ಭೀಮ್: ಡಾ. ಬಿ.ಆರ್. ಅಂಬೇಡ್ಕರ್ ಜೀವನ ಚರಿತ್ರೆ
ಲೇ: ಎಂ. ವೆಂಕಟಸ್ವಾಮಿ
ಪ್ರ: ನವ ಕರ್ನಾಟಕ ಪಬ್ಲಿಕೇಷನ್ಸ್
ಸಂ: 080-22161900

ಅಂಬೇಡ್ಕರ್ ಬರಹ ಮತ್ತು ಅವರ ಕುರಿತ ಬೇರೆ ಬೇರೆ ಲೇಖಕರು ರೂಪಿಸಿದ ಬರಹಗಳನ್ನೇ ಮೂಲ ಆಕರವನ್ನಾಗಿ ಇಟ್ಟುಕೊಂಡು ಈ ಕೃತಿಯನ್ನು ಎಂ.ವೆಂಕಟಸ್ವಾಮಿ ರಚಿಸಿದ್ದಾರೆ. 'ಕೋಮುಭಾವನೆಗಳು ರಾಷ್ಟ್ರೀಯ ಭಾವೈಕ್ಯತೆಗೆ ಅಪಾಯ' ಎಂಬುದು ಅಂಬೇಡ್ಕರ್ ಆಶಯವಾಗಿತ್ತು. ಈ ಸಂಗತಿ ದಾಖಲಿಸುವ ಲೇಖಕರು, ಭ್ರಾತೃತ್ವ ನೆಲೆಯ ಭಾರತೀಯ ರಾಷ್ಟ್ರೀಯತೆ ಬಾಬಾಸಾಹೇಬರ ಕನಸಾಗಿತ್ತು ಎನ್ನುವ ವಿವರವನ್ನು ಇಲ್ಲಿ ನೀಡುತ್ತಾರೆ.

ಅಂಬೇಡ್ಕರ್ ಅವರ ಬಾಲ್ಯ ಮತ್ತು ವಿದ್ಯಾಭ್ಯಾಸದ ವಿವರದಿಂದ ಆರಂಭವಾಗುವ ಈ ಕೃತಿ ಅವರ ಜೀವನದಲ್ಲಿ ಸಂಭವಿಸುವ ಮಹತ್ವದ ಕೆಲವು ಘಟನೆಗಳನ್ನು ದಾಖಲಿಸುತ್ತದೆ. ಆ ಮೂಲಕ ಅಂಬೇಡ್ಕರ್ ಅವರ ವ್ಯಕ್ತಿಚಿತ್ರವನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದೆ.

ಜೈ ಭೀಮ್ ಕೃತಿ 'ಚೌಡಾರ್ ಕೆರೆಯ ನೀರಿನ ಸ್ಪರ್ಶ', 'ಸೈಮನ್ ಕಮಿಷನ್ ಮುಂದೆ ವಿಷಯ ಮಂಡನೆ', 'ದುಂಡುಮೇಜಿನ ಸಮ್ಮೇಳನಗಳು', 'ಗಾಂಧೀಜಿ ನಿರಶನ ಮತ್ತು ಪೂನಾ ಒಡಂಬಡಿಕೆ', ಭಾರತೀಯ ಸಾಂವಿಧಾನಿಕ ಕರಡು ರಚನಾ ಸಭೆ ಮತ್ತು ಚರ್ಚೆಗಳು', ' ಭಾರತ ಪಾಕಿಸ್ತಾನ ವಿಭಜನೆ ಮತ್ತು ಗಾಂಧಿ ಹತ್ಯೆ', 'ವೃದ್ಧಾಪ್ಯ, ಅನಾರೋಗ್ಯ ಮತ್ತು ಅಂತಿಮ ದಿನಗಳು'– ಹೀಗೆ 25 ಅಧ್ಯಾಯಗಳನ್ನು ಒಳಗೊಂಡಿದೆ.

ಅಂಬೇಡ್ಕರ್ ಅವರ ವೃತ್ತಿ ಬದುಕಿನ ಅಡ್ಡಿ ಆತಂಕಗಳ ನಡುವೆ ಉನ್ನತ ವ್ಯಾಸಂಗದ ಸಾಧನೆಯನ್ನು ಪ್ರಸ್ತಾಪಿಸುತ್ತಾರೆ. ಕಾರ್ಮಿಕ ಪಕ್ಷದ ಸ್ಥಾಪನೆ, ಪತ್ರಿಕೆಗಳ ಸಂಪಾದನೆ, ಸಾಮಾಜಿಕ ಚಳವಳಿ, ಹೋರಾಟವೂ ಸೇರಿದಂತೆ ಸಕ್ರಿಯ ರಾಜಕಾರಣದ ಮುಖವನ್ನೂ ಲೇಖಕ ನಿರೂಪಿಸಿದ್ದಾರೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಐಕಿಲ್‌ಸೋನೆ

ಐಕಿಲ್‌ಸೋನೆ (ನಾ). ಹಿಮ ವೃಷ್ಟಿ

ಹೇಮಂತ ಋತುವಿನಲ್ಲಿಯ ಮಂಜಿನ ವೃಷ್ಟಿಯನ್ನು ಕುವೆಂಪು 'ಐಕಿಲ್‌ಸೋನೆ' ಎಂದು ಕರೆದು ಹೀಗೆ ವರ್ಣಿಸಿದ್ದಾರೆ:

ನೊರೆಯೆ ಇಬ್ಬನಿಯಾಯ್ತೊ ತಾನೆಂಬ
ಕಡಲಾಗೆ ದಟ್ಟಿತೈಕಿಲ್ ಸೋನೆ.

ಬಿಂಕದುರಿ

ಬಿಂಕದುರಿ (ಗು). ಸೊಕ್ಕಿನ ಉರಿ

ಉದಯ ಸಮಯದಲ್ಲಿ ಅರ್ಜುನನು ಪದ್ಮಾಸನದಲ್ಲಿ ಧ್ಯಾನಸ್ಥನಾಗಿ ಕುಳಿತಿದ್ದನು. ಆ ಮನ್ಮಥ ಸಮನಾದ ಪುರುಷ ಮೂರ್ತಿಯನ್ನು ಕಂಡು ಪುರುಷ ವೇಷದ ಚಿತ್ರಾಂಗದೆಯ ಹೃದಯದಲ್ಲಿ ಪ್ರಣಯದ ಮೊದಲ ಆಕರ್ಷಣೆ ಮೊಳೆಯಿತು.

ಅವಳನ್ನು ನೋಡಿದ ಅರ್ಜುನನು 'ಎಲೆ ತರುಣ ವೀರನೇ ನೀನು ಯಾರು?' ಎಂದು ಪ್ರಶ್ನಿಸಿ, 'ನುಡಿ, ಅಂಜದಿರು' ಎಂದು ಹೇಳುವನು. 'ಅಂಜದಿರು' ಎಂಬ ನುಡಿ ಕಿಡಿಸೂಸಲು ಭುಗಿಲ್ಲೆಂದ ಬಿಂಕದುರಿ ಆ ವೀರನಾರಿಯ ಮನದಲ್ಲಿ ಹೊರಹೊಮ್ಮಿತು.

ಅವಳಲ್ಲಿದ್ದ ಜಂಬ, ಸೊಕ್ಕು ಜ್ವಲಿಸಿದುದನ್ನು ಕುವೆಂಪು ಅವರು 'ಬಿಂಕದುರಿ' ಪದರೂಪಿಸಿ ಅಭಿವ್ಯಕ್ತಿಸಿದ್ದಾರೆ.

'... ನುಡಿ, ಅಂಜದಿರು; ನಾವು ಮುನಿವ
ಮುನಿವರರಲ್ಲ!'
'ಅಂಜದಿರು' ಎಂಬ ನುಡಿ ಕಿಡಿಸೂಸೆ,
ಬಿಂಕದುರಿ
ಮಸಗಿದುದು ಭುಗಿಲೆಂದು ವೀರ ನಾರಿಯ
ಮನದಿ.'

ಕವನ
ನೀ.ಗೂ.ರಮೇಶ್ ಅವರ ಗಾಂಧೀವನದ ಒತ್ತುವರಿ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
bhanuvara@prajavani.co.in

ಸೊಬಗಿನ ಸಿರಿ ಸಿಡಿಲು ಮಲ್ಲಿಕಾರ್ಜುನ ಬೆಟ್ಟ

ಭೂಮಿಯಿಂದ ಸಾವಿರಾರು ಅಡಿ ಎತ್ತರದಲ್ಲಿ ನಿಂತು ಸಮುದ್ರದಂತೆ ತೇಲಿಬರುವ ಮಂಜಿನ ಅಲೆಗಳನ್ನು ಕಾಣುವುದೇ ಹೃನ್ಮನಕ್ಕೆ ಆನಂದ. ಮಂಜಿನ ಅಲೆ ಸರಿದಾಗ ಕಾಣುವ ನೋಟ ರಮಣೀಯ. ಇಂತಹ ದೃಶ್ಯಗಳನ್ನು ಅನುಭವಿಸಬೇಕೆಂದರೆ ಪಿರಿಯಾಪಟ್ಟಣದ ಹತ್ತಿರವಿರುವ ಈ ಬೆಟ್ಟ ಹತ್ತಬೇಕು...

ದೇಗುಲದ ಗೋಡೆಯಲ್ಲಿರುವ ಚಿತ್ರಗಲ್ಲಿನಲ್ಲಿ ಶಿವಲಿಂಗಕ್ಕೆ ಹಾಲುಣಿಸುತ್ತಿರುವ ಗೋವು

ಚಿತ್ರ-ಬರಹ: ಗಣಂಗೂರು ನಂಜೇಗೌಡ

ಮುಂಜಾನೆಯೇ ಎದ್ದು ಪಿರಿಯಾಪಟ್ಟಣಕ್ಕೆ 16 ಕಿ.ಮೀ. ದೂರದ ಬೆಟ್ಟದಪುರದ ಕಡೆಗೆ ಪಯಣ ಬೆಳೆಸಿದೆವು. ಸೂರ್ಯ ಕಣ್ಣು ಬಿಡುವ ಮುನ್ನವೇ ಬೆಟ್ಟ ಏರಲು ಶುರು ಮಾಡಿದೆವು. ಕೈಯಲ್ಲಿ ನೀರಿನ ಬಾಟಲಿ, ಬಿಸ್ಕತ್, ಆಸರೆಗೊಂದು ಕೋಲು ಹಿಡಿದು ಒಂದೊಂದೇ ಮೆಟ್ಟಿಲು ಹತ್ತುತ್ತಾ ಹೋದಂತೆ ಹೊಸ ಲೋಕವೊಂದು ತೆರೆದುಕೊಳ್ಳುತ್ತಿರುವಂತೆ ಭಾಸವಾಯಿತು.

ಮೇಲೇರುತ್ತಾ ಹೋದಂತೆ ನೂರಿನ್ನೂರು ಮೆಟ್ಟಿಲುಗಳಿಗೆ ಒಂದೊಂದು ಅರವಟ್ಟಿಗೆಗಳು, ಅರ್ಧ ಅಡಿ ಎತ್ತರದ ಕಲ್ಲು ಚಪ್ಪಡಿಗಳ ಮೆಟ್ಟಿಲುಗಳು, ಗತಕಾಲದ ಕಥೆ ಹೇಳುವ ಶಿಥಿಲ ದೇಗುಲಗಳು, ಹಾದಿಯ ಇಕ್ಕೆಲಗಳಲ್ಲಿ ನೆರಳು ನೀಡುವ ಮರಗಳು, ಪುರ್ರನೆ ಅತ್ತಿಂದಿತ್ತ ಹಾರುವ ಪಕ್ಷಿಗಳು, ಓತಿಕ್ಯಾತಗಳ ನೆಗೆದಾಟ, ಚಿಟ್ಟೆಗಳ ಹಾರಾಟ- ಇವು ನಮ್ಮ ಆಯಾಸವನ್ನು ದೂರ ಮಾಡಿ ಬೆಟ್ಟ ಹತ್ತಲು ಹುರುಪು ನೀಡಿದವು.

ಕೆಲವೇ ದಿನಗಳ ಹಿಂದೆ ಸುರಿದ ಮಳೆಗೆ ಬೆಟ್ಟದ ಕೊರಕಲುಗಳಲ್ಲಿ ತಿಳಿಗೆಂಪು ಬಣ್ಣದ ಲಿಲ್ಲಿ ಹೂಗಳು ಅರಳಿ ನಗುತ್ತಿದ್ದವು. ಬೇಸಿಗೆಯಲ್ಲಿ ಬೋಳಾಗಿದ್ದ ಮರ, ಗಿಡಗಳು ಹೊಚ್ಚ ಹೊಸ ಹಸಿರುಡುಗೆ ತೊಟ್ಟು, ಚಾಮರ ಬೀಸಿ ನಮ್ಮನ್ನು ಸ್ವಾಗತಿಸುತ್ತಿರುವಂತೆ ತೋರಿತು. ಮುಕ್ಕಾಲು ಬೆಟ್ಟ ಹತ್ತಿ ನಿಂತು ಹಿಂತಿರುಗಿ ನೋಡಿದಾಗ ಕಂಡ ನಯನ ಮನೋಹರ ದೃಶ್ಯ ನಮ್ಮನ್ನು ಪುಳಕಿತರನ್ನಾಗಿಸಿತು. ಬೆಟ್ಟ ಹತ್ತುವ ನಮ್ಮ ಹುಮ್ಮಸ್ಸನ್ನು ಇಮ್ಮಡಿಗೊಳಿಸಿತು.

ಈ ಬೆಟ್ಟದ ತುತ್ತ ತುದಿಯವರೆಗೆ 3108 ಮೆಟ್ಟಿಲುಗಳಿವೆ...

ಬಸವನ ಶಿಲಾ ಸ್ತಂಭ

ಬೆಟ್ಟದ ತುದಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯ ತಲುಪಲು ಇನ್ನು 300 ಮೆಟ್ಟಿಲು ಏರುವುದಷ್ಟೇ ಬಾಕಿ ಇರುವಾಗ ಎಡಕ್ಕೊಂದು ಕಲ್ಲು ಹಾಸಿನ ಬಂಡೆ, ಅದರ ಹೊಟ್ಟೆ ಕೊರೆದು ನೆಟ್ಟಿರುವ 15 ಅಡಿ ಎತ್ತರದ ಲಂಬಾಕಾರದ ಶಿಲಾಸ್ತಂಭ, ಅದರ ಮೇಲೊಂದು ಬಸವನ ಮೂರ್ತಿ ಕಾಣಿಸಿದವು. ಅದನ್ನು ಕಂಡಿದ್ದೇ ತಡ, ಏನೋ ಅದ್ಭುತ ಕಂಡಂತೆ ಗೆಳೆಯ ಕಿರು ದಾರಿ ಹಿಡಿದು ನಡಿಗೆಯ ವೇಗವನ್ನು ಮತ್ತಷ್ಟು ಚುರುಕುಗೊಳಿಸಿದರು. ನಾವೂ ಅವರನ್ನು ಹಿಂಬಾಲಿಸಿದೆವು. ಬಸವನ ಶಿಲಾಸ್ತಂಭ ತಲುಪುವ ಹೊತ್ತಿಗಾಗಲೇ ಚಾರಣಿಗರ ಗುಂಪೊಂದು ಅಲ್ಲಿಗೆ ತಲುಪಿತ್ತು. ಮೈಸೂರಿನಿಂದ ಬಂದಿದ್ದ ಗುಂಪು ಪ್ರಕೃತಿ ಸೌಂದರ್ಯ ಸವಿಯುತ್ತಾ ಆನಂದದ ಅಲೆಯಲ್ಲಿ ತೇಲುತ್ತಿತ್ತು. ನಾವೂ ಅವರ ಜತೆಗೂಡಿ ಹೃನ್ಮನ ತಣಿಸುವ ರಮಣೀಯ ದೃಶ್ಯವನ್ನು ಮನತುಂಬಿ ಆಸ್ವಾದಿಸಿದೆವು. ತಂಗಾಳಿಗೆ ಮೈಯೊಡ್ಡಿ ಸುಖಿಸಿದೆವು. ಬೆಟ್ಟವೇರಿದ್ದ ದಣಿವು ದೂರಾಗಿ, ನಿರಾಳ ಭಾವ ಮೂಡಿ ಹಾಯ್ ಎನಿಸಿತು.

ಬೆಟ್ಟದ ಬುಡದಲ್ಲಿರುವ ವಿಜಯನಗರ ಶೈಲಿಯ ಗೋಪುರ ಮತ್ತು ಗುಡಿಗಳು

ಬೆಟ್ಟದಿಂದ ಕಾಣುವ ವಿಹಂಗಮ ನೋಟವನ್ನು ಆನಂದಿಸುತ್ತಿರುವ ಚಾರಣಿಗರು

ಪ್ರವಾಸ

ಬಸವನ ಸ್ತಂಭದ ಬಳಿ ನಿಂತು ನೋಡಿದರೆ ಹಿಮದಂತೆ ಮಂಜಿನ ಅಲೆಗಳು ತೇಲಿ ಬರುವಾಗ ಬೆಟ್ಟದ ಫಾಸಲೆ, ಸಹಸ್ರಾರು ಅಡಿಗಳಷ್ಟು ತಗ್ಗಿನಲ್ಲಿರುವ ಹಳ್ಳಿಗಳು, ತೋಟ-ತುಡಿಕೆಗಳು ಸಂಪೂರ್ಣ ಕಣ್ಮರೆಯಾಗುತ್ತಿದ್ದವು. ಕೆಲವೇ ನಿಮಿಷಗಳಲ್ಲಿ ಮಂಜು ಕರಗಿ ಹೋಗುತ್ತಿತ್ತು. ಆಗ ಮತ್ತೆ ಎಲ್ಲವೂ ಬಟಾ ಬಯಲು. ಮೇಲಿಂದ ಮೇಲೆ ನಡೆಯುತ್ತಿದ್ದ ಪ್ರಕೃತಿಯ ಈ ಮೋಜಿನಾಟ ವಿಸ್ಮಯದ ಜತೆಗೆ ಆಹ್ಲಾದವನ್ನೂ ಉಂಟುಮಾಡಿತು.

ಹಸಿರು ಮುಕ್ಕಳಿಸುವ ವನಸಿರಿ, ಹತ್ತಾರು ಮೈಲಿ ದೂರದವರೆಗೂ ಕಾಣುವ ಹಳ್ಳಿಗಳು, ಯಾರೋ ಕಡೆದಿಟ್ಟಂತೆ ಕಾಣುವ ಬೆಟ್ಟ-ಗುಡ್ಡಗಳು, ಕೆರೆ-ಕುಂಟೆಗಳು, ಮೇಲೆ ತಿಳಿನೀಲಿ ಆಗಸವನ್ನು ದಿಟ್ಟಿಸಿದಾಗ ಏನೋ ಅವ್ಯಕ್ತ ಆನಂದ. ಅರ್ಧ ತಾಸಿಗೂ ಹೆಚ್ಚು ಅಲ್ಲಿಯೇ ಸೆಲ್ಫಿ, ಗ್ರೂಪ್ ಫೋಟೊ, ವಿಡಿಯೋ ಮಾಡಿಕೊಂಡು ಕಣ್ಣಳತೆಯ ದೂರದಲ್ಲಿ ಕಾಣುತ್ತಿದ್ದ ದೇಗುಲದತ್ತ ಹೆಜ್ಜೆ ಹಾಕಿದೆವು.

ಚೋಳ-ಹೊಯ್ಸಳ ಶೈಲಿಯ ಸಂಗಮ

ಬೆಟ್ಟದ ತುತ್ತತುದಿಯಲ್ಲಿ, ಸಮತಟ್ಟಾದ ಜಾಗದಲ್ಲಿರುವ ಮಲ್ಲಿಕಾರ್ಜುನ ದೇವಾಲಯ ತಲುಪಿದಾಗ ನಿಜಕ್ಕೂ 3,108 ಮೆಟ್ಟಿಲುಗಳನ್ನು ಏರಿ ಬಂದಿದ್ದೇವೆಯೆ ಎಂಬ ಪ್ರಶ್ನೆ ಮೂಡಿದ್ದು ದಿಟ. ಭಾಗಶಃ ಶಿಥಿಲಾವಸ್ಥೆ ತಲುಪಿರುವ ಚೋಳರ ಕಾಲದ ಈ ದೇಗುಲದಲ್ಲಿ ಹೊಯ್ಸಳ ಶೈಲಿಯ ಛಾಪುಗಳೂ ಇವೆ. ಶೇಕಡ 90 ಭಾಗ ಕಲ್ಲಿನಿಂದಲೇ ನಿರ್ಮಾಣವಾಗಿರುವ 12ನೇ ಶತಮಾನದ ಈ ದೇಗುಲವನ್ನು 'ಚೋಳ- ಹೊಯ್ಸಳ ಶೈಲಿಯ ಶಿಲ್ಪಾಗಾರ' ಎಂದೇ ಕರೆಯಲಾಗುತ್ತದೆ. ದೇಗುಲದ ಶಿಲಾಸ್ತಂಭಗಳು, ಗರ್ಭಗುಡಿ, ಶುಕನಾಸಿ, ನವರಂಗ ಚೋಳ ಶೈಲಿಯಲ್ಲಿವೆ. ಬಾಗಿಲುವಾಡ ಮತ್ತು ಗೋಪುರದಲ್ಲಿ ಹೊಯ್ಸಳ ಶೈಲಿಯ ಲಕ್ಷಣಗಳು ಗೋಚರಿಸುತ್ತವೆ. ಬೆಟ್ಟಕ್ಕೆ ಏರುವ ಪ್ರವೇಶ ದ್ವಾರದಲ್ಲಿ ವಿಜಯನಗರ ಶೈಲಿಯ ಆಕರ್ಷಕ ಗೋಪುರವಿದೆ.

ಸಿಡಿಲು ಮಲ್ಲಿಕಾರ್ಜುನ ದೇಗುಲದ ಪಾರ್ಶ್ವ ನೋಟ

ಮೂರು ಅಂತಸ್ತಿನ ಈ ಗೋಪುರದಲ್ಲಿ ಋಷಿಗಳು ಮತ್ತು ಹೂಗಳ ರಚನೆಗಳಿವೆ.

ಶಾಸನ: ದೇವಾಲಯದ ಗೋಡೆಯ ಮೇಲಿರುವ ಕ್ರಿ.ಶ.1586ರ ಶಾಸನವು ಪಿರಿಯ ಚೆಂಗಾಳ್ವ ಎಂಬ ದೊರೆ 33 ಗ್ರಾಮಗಳ ಹುಟ್ಟುವಳಿಯನ್ನು ಮಲ್ಲಿಕಾರ್ಜುನ ದೇವರ ಸೇವೆಗೆಂದು ದತ್ತಿ ಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಇದೇ ಗುಡಿಯ ಮತ್ತೊಂದು ಶಾಸನದಲ್ಲಿ ಸೋಸಲೆಯ ಮಹಾಪ್ರಭು ದೇವರ ಪೂಜೆಗೆ ದಾನ ನೀಡಿರುವ ವಿವರಗಳಿವೆ. ಚಿತ್ರಗಲ್ಲುಗಳು, ಉಬ್ಬು ಶಿಲ್ಪಗಳು ಸಾಕಷ್ಟಿವೆ.

ಎಲ್ಲಿದೆ ಈ ಬೆಟ್ಟ?

ಮೂರು ತಾಸಿನಲ್ಲಿ ಹತ್ತಿ ಇಳಿಯಬಹುದಾದ ಸಿಡಿಲು ಮಲ್ಲಿಕಾರ್ಜುನ ಬೆಟ್ಟ ಮೈಸೂರಿನಿಂದ 80 ಕಿ.ಮೀ. ಹಾಗೂ ಪಿರಿಯಾಪಟ್ಟಣದಿಂದ 16 ಕಿ.ಮೀ ದೂರದಲ್ಲಿದೆ. ಭಾರತೀಯ ಪುರಾತತ್ವ ಮತ್ತು ಸರ್ವೇಕ್ಷಣಾ ಇಲಾಖೆಯ ಸುಪರ್ದಿಯಲ್ಲಿರುವ ಈ ಪ್ರಾಕೃತಿಕ ಸೊಬಗಿನ ತಾಣ ಚಾರಣಕ್ಕೆ ಹೇಳಿ ಮಾಡಿಸಿದಂತಿದೆ. ಮಡಿಕೇರಿ, ಕೇರಳ, ಬೇಲೂರು- ಹಳೇಬೀಡು ಪ್ರವಾಸ ಮಾಡುವವರು ತಮ್ಮ ಪಟ್ಟಿಯಲ್ಲಿ ಈ ಸ್ಥಳವನ್ನೂ ಸೇರಿಸಿಕೊಳ್ಳಬಹುದು. ಅಂದಹಾಗೆ ಈ ಬೆಟ್ಟಕ್ಕೆ ಚಾರಣ ಮಾಡಲು ಮುಂಜಾನೆಯ ಸಮಯ ಹೆಚ್ಚು ಸೂಕ್ತ.

ದಂತಕಥೆ

ಒಂದಾನೊಂದು ಕಾಲದಲ್ಲಿ ಮಲ್ಲಿಕಾರ್ಜುನ ದೇವಾಲಯಕ್ಕೆ ಸಿಡಿಲು ಬಡಿದು ಶಿವಲಿಂಗದ ನೆತ್ತಿಯ ಮೇಲೆ ತಗ್ಗು ಸೃಷ್ಟಿಯಾಯಿತು. ಆ ಕಾರಣಕ್ಕೆ ಇಲ್ಲಿನ ಶಿವಲಿಂಗವನ್ನು ಸಿಡಿಲು ಮಲ್ಲಿಕಾರ್ಜುನ ಎಂದು ಕರೆಯುತ್ತಾರೆ.

ಬೆಟ್ಟದ ಪಕ್ಕದ ಊರಿನ ಹಸುವೊಂದು ರಾತ್ರಿ ವೇಳೆ ಬೆಟ್ಟವನ್ನೇರಿ ಶಿವಲಿಂಗಕ್ಕೆ ಹಾಲುಣಿಸಿ ಬರುತ್ತಿತ್ತು. ಇದನ್ನು ಕಂಡ ಹಸುವಿನ ಒಡತಿ ಶಿವಲಿಂಗದ ಮೇಲೆ ಗುಡಿಯನ್ನು ಕಟ್ಟಿಸಿದಳು ಎಂಬ ಪುರಾಣ ಕಥೆಯೂ ಚಾಲ್ತಿಯಲ್ಲಿದೆ. 'ಸಿಡಿಲು ಮಲ್ಲಿಕಾರ್ಜುನ ದೇವರನ್ನು 'ಅನ್ನದಾನಿ ಮಲ್ಲಿಕಾರ್ಜುನ' ಎಂಬ ಹೆಸರಿನಿಂದಲೂ ಕರೆಯುತ್ತಾರೆ' ಎಂದು ಬೆಟ್ಟದಪುರ ಗ್ರಾಮದ ಹಿರೀಕ ಚನ್ನಪ್ಪ ಹೇಳುತ್ತಾರೆ. ದೀಪಾವಳಿಯಲ್ಲಿ ನೂರಾರು ಭಕ್ತರು ಈ ಬೆಟ್ಟವನ್ನು ಹತ್ತಿ ಮಲ್ಲಿ ಕಾರ್ಜುನಸ್ವಾಮಿಗೆ ಪಂಜಿನ ಸೇವೆ ಸೇರಿದಂತೆ ಇತರೆ ಸಾಂಪ್ರದಾಯಿಕ ಪೂಜೆ ಸಲ್ಲಿಸುತ್ತಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ದನಿ	+	ಮಲ್ಲ	+	ಳೆ	=	
2	ಪಣ	+	ಗುಡಿ	+	ಸು	=	
3	ಮಾನ	+	ತರಿ	+	ಸೋ	=	
4	ನಗಿ	+	ಮಾವ	+	ಡ್ಡ	=	
5	ಪ್ರತಿ	+	ಗರ	+	ಪ	=	

ಗಣಿತದಲ್ಲಿ ಗರ್ದಿಗಮ್ಮತ್ತು.. ತಾರ್ಕಿಕ ಗಣಿತ

ಯಾರು ಎಲ್ಲಿ ಯಾವ ಸಿನಿಮಾ ನೋಡಿದರು. ಪತ್ತೆ ಹಚ್ಚಿ...

ವಿನೋದ, ಪ್ರಸಾದ, ಉಲ್ಲಾಸ, ಭಾಗ್ಯಶ್ರೀ ನಾಲ್ವರೂ ಸೇರಿ ಗದಗ ನಗರಕ್ಕೆ ಸಿನಿಮಾ ನೋಡಲು ಹೋದರು. ಅವರು ನೋಡಿದ ಸಿನಿಮಾಗಳು-**ಪರಮಾತ್ಮ, ಡ್ರಾಮಾ, ಜಾಕಿ, ಅಣ್ಣಾಬಾಂಡ್.** ಇವುಗಳನ್ನು **ಕರ್ನಾಟಕ ಟಾಕೀಸ್, ಮಹಾಲಕ್ಷ್ಮಿ ಟಾಕೀಸ್, ಕೃಷ್ಣಾ ಟಾಕೀಸ್** ಹಾಗೂ **ವೆಂಕಟೇಶ ಟಾಕೀಸ್**‌ನಲ್ಲಿ ನೋಡಿದ್ದಾರೆ. ಆದರೆ ಕೊಟ್ಟ ಕ್ರಮದಲ್ಲಿ ಮಾತ್ರ ನೋಡಿಲ್ಲ! ಈಗ ಮೇಲೆ ಹೇಳಿರುವ ಸಿನಿಮಾಗಳನ್ನು ಯಾರು ಎಲ್ಲಿ? ಯಾವ ಸಿನಿಮಾ ನೋಡಿದ್ದಾರೆಂದು ಪತ್ತೆ ಹಚ್ಚಲು ಕೆಲವು ಸುಳಿವು ಕೊಡಲಾಗಿದೆ. ನಿಮ್ಮ ತಾರ್ಕಿಕ ಬುದ್ಧಿವಂತಿಕೆಯಿಂದ ವಿಚಾರಮಾಡಿ ಪತ್ತೆಹಚ್ಚಬಲ್ಲಿರಾ?

ಸುಳಿವುಗಳು

1.ವಿನೋದ ಕರ್ನಾಟಕ ಟಾಕೀಸ್‌ನಲ್ಲಿ ಸಿನಿಮಾ ನೋಡಿದ್ದಾನೆ.
2.ಡ್ರಾಮಾ ಸಿನಿಮಾ ವೆಂಕಟೇಶ ಟಾಕೀಸ್‌ನಲ್ಲಿದೆ.
3.ಉಲ್ಲಾಸ ಸಿನಿಮಾ ನೋಡಿದ್ದು ಕೃಷ್ಣಾ ಟಾಕೀಸ್‌ನಲ್ಲಿ
4.ಭಾಗ್ಯಶ್ರೀ ನೋಡಿದ ಸಿನಿಮಾ ಡ್ರಾಮಾ.
5.ವಿನೋದ ಅಣ್ಣಾಬಾಂಡ್ ಸಿನಿಮಾ ನೋಡಿಲ್ಲ.
6.ಮಹಾಲಕ್ಷ್ಮಿ ಟಾಕೀಸ್‌ನಲ್ಲಿ ಜಾಕಿ ಸಿನಿಮಾ ಇಲ್ಲ.

	ಹೆಸರು	ಸಿನಿಮಾ ಹೆಸರು	ಟಾಕೀಸ್ ಹೆಸರು
1			
2			
3			
4			

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಅನುಸ್ವಾರ ಹಾಗೂ ಒಂದು ಅಕ್ಷರಕ್ಕೆ ಅಕ್ಷರ ಪಟ್ಟಿಯಿಂದ ಅಕ್ಷರವನ್ನೊಂದನ್ನು ಆಯ್ದು ಹಿಂದೊಂದು ಮುಂದೊಂದು ಅಕ್ಷರ ಸೇರಿಸಿ ಅರ್ಥಬದ್ಧ ಪದ ರಚಿಸಿ.

1		ಂಗಾ	
2		ಂಗಾ	
3		ಂಗಾ	
4		ಂಗಾ	
5		ಂಗಾ	
6		ಂಗಾ	
7		ಂಗಾ	
8		ಂಗಾ	
9		ಂಗಾ	
10		ಂಗಾ	

ಪದ ಪಟ್ಟಿ

ಬ	ಇ	ತ	ಬ	ಲ
ಮ	ಟ	ಅ	ಳಿ	ತ
ರ	ಕ	ಮು	ಸ	ಲು
ಹ	ಗ	ತಿ	ಳ	ಳ

ಡಬ್ಬ ಚಿಕ್ಕು ಕೇಳ್ರಪ್ಪ ಕಥೆಯ — ಬಾಯಾರಿದ ಕೊಕ್ಕರೆ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಬಿಸಿಲಲ್ಲಿ ನಡೆದು ಆಯಾಸಗೊಂಡಿದ್ದ ಗುಂಡ ಎಳನೀರು ಖರೀದಿಸಿದ. ಅಂಗಡಿಯವ ಅದನ್ನು ಕೆತ್ತಿಕೊಟ್ಟು ಸ್ಟ್ರಾ ಹಾಕಿ ನೀಡಿದ. ಅದನ್ನು ಕುಡಿಯುತ್ತಿರಲು ಆಕಾಶದಲ್ಲಿ ಹಾರುತ್ತಿದ್ದ ಕೊಕ್ಕರೆಯೊಂದಕ್ಕೆ ಗುಂಡನ ಕೈಯಲ್ಲಿದ್ದ ಎಳನೀರು ಕಂಡಿತು. ಅದಕ್ಕೂ ಬಾಯಾರಿಕೆಯಾಗಿತ್ತು. ಆಕಾಶದಿಂದಲೇ ರಾಕೆಟ್ ವೇಗದಲ್ಲಿ ಧುಮುಕಿದ ಆ ಕೊಕ್ಕರೆ ಸ್ಟ್ರಾದಂತಿದ್ದ ತನ್ನ ಉದ್ದನೆಯ ಕೊಕ್ಕನ್ನು ನೇರವಾಗಿ ಎಳನೀರಿನೊಳಗೆ ಹಾಕಿ ಎಲ್ಲವನ್ನೂ ಕುಡಿಯಿತು. ಇದನ್ನು ನೋಡಿದ ಗುಂಡ ಅವಾಕ್ಕಾದ. ಆಕಾಶದಲ್ಲಿದ್ದ ಸೂರ್ಯನಿಗೆ ನಗು ಬಂತು.

ಸಿನಿ ಸ್ವಾರಸ್ಯ

ಒಂದು ಹೂವಿನ ಹೆಸರಿಗೆ ಒಂದು ಜಿಲ್ಲೆಯ ಹೆಸರು ಸೇರಿಸಿ ಓದಿದರೆ ಅದು ಒಬ್ಬ ಖ್ಯಾತ ನಟನ ಹೆಸರಾಗುತ್ತದೆ. ಅದು ಯಾವುದು?.

ಉತ್ತರ:

....

ಸಣ್ಣಾಟ

341

ಈ ಸಂಖ್ಯೆಗೆ ಮೇಲೆ ಒಂದು ಅಡ್ಡಗೆರೆ ಎಳೆದರೆ ಹಿಂದಿಯಲ್ಲಿ ಉಮಾ ಎಂದಾಗುತ್ತದೆ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಸಹಜೀವನ 2.ಮರುಚಿಂತನೆ 3.ಮಹಾಸಾಗರ 4.ಹಳದಿಕಣ್ಣು 5.ಬೇವಿನಮರ

ಹುಡುಕಾಟ: ಜೋಗ ಜಲಪಾತ

ಮೋಜಿನ ಇಂಗ್ಲಿಷ್: 1.BUCKET 2.CRICKET 3.JACKET 4.LOCKET 5.POCKET 6.ROCKET 7.TICKET 8.WICKET

ಸಂಖ್ಯಾ ಪಿರಮಿಡ್:

120
65 55
26 39 16

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಸ್ವೇಚಿತ್ ಜಿ.ಎಲ್.
ಚಿಕ್ಕಮಗಳೂರು

ಶ್ರಾವ್ಯ ಧಾತ್ರಿ
ರಾಣೆಬೆನ್ನೂರು

ವೈಷ್ಣವಿ ಬನ್ನಿಗಿಡದ
ನರಗುಂದ

ಹರ್ಷವರ್ಧನ್ ಕೆ.ಎಂ
ದಾವಣಗೆರೆ



ನಝ್ನೀನ್ ಕೌಸರ್
ಚಳ್ಳಕೆರೆ



ಸುಹಾಸ್ ಪಿ.
ಬೆಂಗಳೂರು

ಭಾರತದ ಐಫೋನ್‌ಗಳಿಗೆ ಸುಂಕ ವಿನಾಯಿತಿ ನೀಡಲ್ಲ: ಟ್ರಂಪ್

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): 'ಭಾರತದಲ್ಲಿ ಆ್ಯಪಲ್ ಕಂಪನಿಯು ತನ್ನ ತಯಾರಿಕಾ ಘಟಕ ಸ್ಥಾಪಿಸುವುದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ, ಅಲ್ಲಿ ತಯಾರಿಸುವ ಉತ್ಪನ್ನಗಳನ್ನು ಸುಂಕರಹಿತವಾಗಿ ಅಮೆರಿಕದಲ್ಲಿ ಮಾರಾಟ ಮಾಡಲು ಸಾಧ್ಯವಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಅಮೆರಿಕದ ಪರಮಾಣು ಶಕ್ತಿಗೆ ಮತ್ತಷ್ಟು ಉತ್ತೇಜನ ನೀಡುವುದಕ್ಕೆ ಸಂಬಂಧಿಸಿದಂತೆ ಓವಲ್ ಕಚೇರಿಯಲ್ಲಿ ಶನಿವಾರ ಹಲವು ಕಾರ್ಯಕಾರಿ ಆದೇಶಗಳಿಗೆ ಸಹಿ ಹಾಕಿದ ವೇಳೆ ಅವರು ಮಾತನಾಡಿದರು.

'ಭಾರತದಲ್ಲಿ ಟಿಮ್ ಕುಕ್ ಐಫೋನ್ ತಯಾರಿಕಾ ಘಟಕ ಸ್ಥಾಪಿಸುವುದಿಲ್ಲ ಎಂದುಕೊಂಡಿದ್ದೆ. ಆದರೆ, ಅವರು ಅಲ್ಲಿಗೆ ಹೋಗುವುದಾಗಿ ಹೇಳಿದ್ದಾರೆ. ಅವರ ನಿರ್ಧಾರ ಸರಿಯಾಗಿದೆ. ಆದರೆ, ಸುಂಕ ಪಾವತಿಸದೆಯೇ ಆ್ಯಪಲ್ ಉತ್ಪನ್ನಗಳ ಬಿಕರಿಗೆ ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.

'ಅಮೆರಿಕದಲ್ಲಿ ಮಾರಾಟ ಮಾಡುವ ಐಫೋನ್‌ಗಳನ್ನು ಅಮೆರಿಕದಲ್ಲಿಯೇ ತಯಾರಿಕೆ ಮಾಡಬೇಕು ಎಂಬುದು ನನ್ನ ಇಚ್ಛೆಯಾಗಿದೆ' ಎಂದರು.

ಅಮೆರಿಕದ ಬದಲಾಗಿ ಭಾರತ ಸೇರಿ ವಿಶ್ವದ ಯಾವುದೇ ರಾಷ್ಟ್ರಗಳಲ್ಲಿ ತಯಾರಿಸುವ ಆ್ಯಪಲ್ ಕಂಪನಿಯ ಎಲ್ಲಾ ಉತ್ಪನ್ನಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸುವುದಾಗಿ ತಮ್ಮ 'ಟ್ರುತ್ ಸೋಷಿಯಲ್' ವೇದಿಕೆಯಲ್ಲಿ ಟ್ರಂಪ್ ಪೋಸ್ಟ್ ಹಂಚಿಕೊಂಡಿದ್ದರು.

'ಸುಂಕ ವಿನಾಯಿತಿಯ ಸೌಲಭ್ಯ ಬೇಕಿದ್ದರೆ ಅಮೆರಿಕದಲ್ಲಿಯೇ ಆ್ಯಪಲ್ ಉತ್ಪನ್ನಗಳನ್ನು ತಯಾರಿಸಬೇಕು ಎಂಬ ಬಗ್ಗೆ ಟಿಮ್ ಕುಕ್‌ಗೆ ಬಹಳ ಹಿಂದೆಯೇ ಮನವರಿಕೆ ಮಾಡಿಕೊಟ್ಟಿದ್ದೇನೆ' ಎಂದು ಟ್ರಂಪ್ ಹೇಳಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ಅಮೆರಿಕದಲ್ಲಿ ಮಾರಾಟವಾಗುವ ಹೆಚ್ಚಿನ ಐಫೋನ್‌ಗಳು ಭಾರತದಿಂದ ಪೂರೈಕೆಯಾಗಲಿವೆ. ವಿಯೆಟ್ನಾಂನಿಂದ ಐಪಾಡ್, ಮ್ಯಾಕ್, ಆ್ಯಪಲ್ ವಾಚ್ ಮತ್ತು ಏರ್‌ಪಾಡ್‌ಗಳು ಸರಬರಾಜಾಗಲಿವೆ ಎಂದು ಇತ್ತೀಚೆಗೆ ಟಿಮ್ ಕುಕ್ ಹೇಳಿದ್ದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100ಕ್ಕೆ	₹600
	12 ಕ್ಕೆ	₹80
ಮೈಸೂರು	100ಕ್ಕೆ	₹605

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹250-542

ದ್ವಿತಳಿ (ಬಿ.ವಿ) ₹300-695

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹194

ಆರ್‌ಎಸ್‌ಎಸ್-5 ₹189.50

ಗುಡ್ ಲಾಟ್ ₹179.50

(ಪ್ರತಿ ಕೆ.ಜಿಗೆ)

ಮಾರುಕಟ್ಟೆಯಲ್ಲಿ ಬಾದಾಮಿಗೆ ತಗ್ಗಿದ ಬೇಡಿಕೆ • ಸೇಂದೂರ, ತೋತಾಪುರಿ ಕೇಳುವವರಿಲ್ಲ

ಬೆಳೆಗಾರರ ಪಾಲಿಗೆ ಕಹಿಯಾದ ಮಾವು

• ಆರ್. ಜಿತೇಂದ್ರ

ಮೈಸೂರು: ರಾಜ್ಯದಾದ್ಯಂತ ಮಾವಿನ ಸಗಟು ಧಾರಣೆಯು ತೀವ್ರವಾಗಿ ಕುಸಿತ ಕಂಡಿದ್ದು, ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ.

ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ಮಾವಿನ ಫಸಲು ವಿಳಂಬವಾಗಿದ್ದು, ರಾಜ್ಯದಾದ್ಯಂತ ಏಕಕಾಲಕ್ಕೆ ಉತ್ಪನ್ನ ಮಾರುಕಟ್ಟೆಗೆ ಬಂದಿರುವುದೇ ಬೆಲೆ ಕುಸಿತಕ್ಕೆ ಪ್ರಮುಖ ಕಾರಣ. ಈ ಹಂಗಾಮಿನಲ್ಲಿ ಶೇ 30-40ರಷ್ಟು ಫಸಲಷ್ಟೇ ಇದ್ದರೂ ಬೆಲೆ ಕುಸಿಯುತ್ತಲೇ ಇದೆ.

ರಾಮನಗರ ಹಾಗೂ ಮೈಸೂರು ಭಾಗದಲ್ಲಿ ಏಕಕಾಲಕ್ಕೆ ಕೊಯ್ಲು ನಡೆಯುತ್ತಿದೆ. ಕೋಲಾರ-ಚಿಕ್ಕಬಳ್ಳಾಪುರದಲ್ಲಿಯೂ ಮಾವು ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಹೀಗಾಗಿ ಅಲ್ಲಿನ ಉತ್ಪನ್ನ ಅಲ್ಲಿನ ಮಾರುಕಟ್ಟೆಗೆ ಸೀಮಿತಗೊಂಡಿದ್ದು, ರಫ್ತು ಸಹ ಈ ಬಾರಿ ಆಶಾದಾಯಕವಾಗಿಲ್ಲ ಎನ್ನುತ್ತಾರೆ ಬೆಳೆಗಾರರು.

'ರಾಜ್ಯದಲ್ಲಿ ಅತಿ ಹೆಚ್ಚು ಬೆಳೆಯುವ, ತನ್ನ ಸ್ವಾದದಿಂದ ಹೆಸರಾದ 'ಬಾದಾಮಿ' ಮಾವಿನ ಹಣ್ಣು ಈ ಬಾರಿ ಬೆಳೆಗಾರರಿಗೆ ಕಹಿಯಾಗುತ್ತಿದೆ. ಈ ವರ್ಷ ಈ ತಳಿಯ ಹಣ್ಣಿಗೆ ಬೇಡಿಕೆ ಕುಸಿದಿದ್ದು, ಕಾಯಿಯ ಬೆಲೆ ₹100ಕ್ಕಿಂತ ಏರಿಕೆಯಾಗಿಲ್ಲ. ಕಾಯಿಯ ಫ್ಯಾಕ್ಟರಿ ದರ ಬುಧವಾರ ಟನ್‌ಗೆ ₹32 ಸಾವಿರ ಇದ್ದದ್ದು (ಪ್ರತಿ ಕೆ.ಜಿ.ಗೆ ₹32) ಗುರುವಾರ-ಶುಕ್ರವಾರದಂದು ₹28 ಸಾವಿರಕ್ಕೆ ಕುಸಿದಿದೆ. ಒಂದೇ ದಿನದಲ್ಲಿ ಟನ್‌ಗೆ ₹4 ಸಾವಿರ ಇಳಿಕೆ ಆಗಿದೆ' ಎಂದು ರಾಮನಗರ ಜಿಲ್ಲೆಯ ಅರೇಹಳ್ಳಿಯ ಮಾವು ಬೆಳೆಗಾರ ಜೋಗಿ ಶಿವರಾಮು ತಿಳಿಸಿದರು.

ಮೈಸೂರಿನ ಕುಪ್ಪಣ್ಣ ಉದ್ಯಾನದಲ್ಲಿ ನಡೆದಿರುವ ಮಾವು ಮೇಳದಲ್ಲಿ ಮಾರಾಟಕ್ಕಿಟ್ಟಿರುವ ಮಾವಿನ ಹಣ್ಣು ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ರಸಪೂರಿ ಮಾವು ಬೆಳೆಯುವ ಪ್ರದೇಶ ಕಡಿಮೆ ಆಗುತ್ತಿದೆ. ಹಾಗಾಗಿ, ಈ ತಳಿಯ ಹಣ್ಣಿನ ಬೆಲೆ ಹೆಚ್ಚಳವಾಗುತ್ತಿದೆ

ಶಶಾಂಕ್ ಮಾವು ಬೆಳೆಗಾರ, ಮೈಸೂರು

ರಸಪೂರಿಗೆ ಬಂಪರ್ ಬೆಲೆ



ಈ ಬಾರಿ ರಸಪೂರಿ ಮಾವಿನ ದರವು 'ಬಾದಾಮಿ'ಯನ್ನೂ ಹಿಂದಿಕ್ಕಿದ್ದು, ಬೆಲೆ ಕುಸಿತದ ನಡುವೆಯೂ ಬೆಳೆಗಾರರಿಗೆ ಬಂಪರ್ ಕೊಡುಗೆ ನೀಡುತ್ತಿದೆ. ಕೊಯ್ಲಿನ ಆರಂಭದಲ್ಲಿ ಸಗಟು ದರ ಪ್ರತಿ ಕೆ.ಜಿ.ಗೆ ₹180ರಿಂದ ₹200ಕ್ಕೆ ತಲುಪಿತ್ತು. ಈಗಲೂ ಕಾಯಿಗೆ ಸರಾಸರಿ ₹80ರಿಂದ ₹90 ಬೆಲೆ ಇದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಹಣ್ಣಿನ ದರ ₹120ರ ಸಮೀಪದಲ್ಲಿದೆ.

'ಸಣ್ಣ ತೊಗಟೆ, ಹೆಚ್ಚು ರುಚಿ ಹಾಗೂ ಹಣ್ಣಿನ ಪ್ರಮಾಣ ಹೆಚ್ಚು ಎನ್ನುವ ಕಾರಣಕ್ಕೆ ರಸಪೂರಿ ಜನರಿಗೆ ಇಷ್ಟವಾಗುತ್ತಿದೆ. ಅದರಲ್ಲೂ ಬೆಂಗಳೂರು-ಮೈಸೂರು ಭಾಗದಲ್ಲಿ ಹೆಚ್ಚು ಬೇಡಿಕೆ ಇದೆ' ಎನ್ನುತ್ತಾರೆ ಮೈಸೂರಿನ ಮಾವು ಬೆಳೆಗಾರ ಶಶಾಂಕ್.

ಸೇಂದೂರ, ತೋತಾಪುರಿ, ಸಿರಿ ಮೊದಲಾದ ತಳಿಯ ಮಾವಿನ ಹಣ್ಣನ್ನು ಈ ಬಾರಿ ಕೇಳುವವರೂ ಇಲ್ಲ. 'ನೀಲಂ' ಇನ್ನಷ್ಟೇ ಮಾರುಕಟ್ಟೆಗೆ ಬರಬೇಕಿದೆ.

ವರ್ತಕರಿಗೆ ಲಾಭ: ಸಗಟು ಧಾರಣೆ ಕುಸಿದಿದ್ದರೂ ಚಿಲ್ಲರೆ ಮಾರುಕಟ್ಟೆಯಲ್ಲಿ ಇನ್ನೂ ಹಣ್ಣಿನ ಬೆಲೆ ಇಳಿಕೆ ಕಂಡಿಲ್ಲ. ರಸಪೂರಿ, ಬಾದಾಮಿ, ಮಲಗೋವಾ, ಮಲ್ಲಿಕಾ ಸೇರಿ ಪ್ರಮುಖ ತಳಿಯ ಹಣ್ಣುಗಳೆಲ್ಲವೂ ಚಿಲ್ಲರೆ ಮಾರುಕಟ್ಟೆಯಲ್ಲಿ ದುಬಾರಿಯಾಗಿಯೇ ಇವೆ. ಹಾಪ್‌ಕಾಮ್ಸ್‌ನಲ್ಲಿ ಪ್ರತಿ ಕೆ.ಜಿ.ಗೆ (ಹಣ್ಣು) ಕೇಸರಿ ₹160, ದಶೇರಿ-₹180, ಇಮಾಮ್ ಪಸಂದ್ ₹250ರ ದರದಲ್ಲಿ ಮಾರಾಟವಾಗುತ್ತಿದೆ.

ಸೂರ್ಯಕಾಂತಿ ಧಾರಣೆ ಕನಿಷ್ಠ ಬೆಂಬಲ ಬೆಲೆಗಿಂತಲೂ ಕಡಿಮೆ

ದರ ಕುಸಿತಕ್ಕೆ ನಲುಗಿದ ಅನ್ನದಾತ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಮುಕ್ತ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಬೆಲೆಯು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ನಿಗದಿಪಡಿಸಿರುವ ದರಕ್ಕಿಂತಲೂ ಕಡಿಮೆ ಇದೆ. ಇದರಿಂದ ಬೆಳೆಗಾರರು ಕಂಗಾಲಾಗಿದ್ದಾರೆ.

ಜಿಲ್ಲೆಯಲ್ಲಿ 2024-25ನೇ ಹಿಂಗಾರು ಹಂಗಾಮಿನಲ್ಲಿ 84.11 ಹೆಕ್ಟೇರ್‌ನಲ್ಲಿ ಸೂರ್ಯಕಾಂತಿ ಬಿತ್ತನೆಯಾಗಿದ್ದು, 2,840 ಕ್ವಿಂಟಲ್ ಇಳುವರಿ ಅಂದಾಜಿಸಲಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಪ್ರತಿ ಕ್ವಿಂಟಲ್‌ಗೆ ₹5,700ರಿಂದ ₹5,800ರವರೆಗೆ ಮಾರಾಟವಾಗುತ್ತಿದೆ.

ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ ಎಫ್‌ಎಕ್ಯೂ ಗುಣಮಟ್ಟದ ಕ್ವಿಂಟಲ್ ಸೂರ್ಯಕಾಂತಿಗೆ ₹7,280 ದರ ನಿಗದಿಪಡಿಸಿದೆ.

ಜಿಲ್ಲಾ ಕಾರ್ಯಪಡೆ ಸಮಿತಿಯು ಕೆಒಎಫ್ ಸಂಸ್ಥೆಯ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳನ್ನು ಖರೀದಿ ಕೇಂದ್ರಗಳೆಂದು ಪರಿಗಣಿಸಿದ್ದು, ರೈತರ ಹೆಸರು ನೋಂದಣಿಯೊಂದಿಗೆ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಬಬಲೇಶ್ವರ, ಸವನಹಳ್ಳಿ, ಬೆಳ್ಳುಬ್ಬಿ, ತಾಜಪುರ, ವಿಜಯಪುರ, ತಂಗಡಗಿ, ಚಡಚಣ, ಹಲಸಂಗಿ, ಸಿಂದಗಿ ಹಾಗೂ ಬಸವನಬಾಗೇವಾಡಿಯಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ. ಪ್ರತಿ ರೈತರಿಂದ ಎಕರೆಗೆ ಗರಿಷ್ಠ 4 ಕ್ವಿಂಟಲ್‌ನಂತೆ ಹಾಗೂ ಗರಿಷ್ಠ 20 ಕ್ವಿಂಟಲ್‌ನಷ್ಟು ಸೂರ್ಯಕಾಂತಿ ಖರೀದಿಸಲಾಗುತ್ತಿದೆ.

ಗದಗ: ಖರೀದಿ ಕೇಂದ್ರ ವಿಳಂಬ

ಗದಗ: ಜಿಲ್ಲೆಯ ನರಗುಂದ ತಾಲ್ಲೂಕು ಮಲಪ್ರಭಾ ಹೊಳೆ, ಕಾಲುವೆ ಆಶ್ರಿತ ಅರೆನೀರಾವರಿ ಪ್ರದೇಶವಾಗಿದೆ. ಈ ಭಾಗದಲ್ಲಿ ಅಲ್ಪಮಟ್ಟಿಗೆ ಸೂರ್ಯಕಾಂತಿ ಬೆಳೆಯಲಾಗಿದೆ.

ಈ ವರ್ಷ ಹಿಂಗಾರು ಅವಧಿಯಲ್ಲಿ ಶೇ 60ರಷ್ಟು ರೈತರು ಸೂರ್ಯಕಾಂತಿ ಬೆಳೆದಿದ್ದಾರೆ. ಆದರೆ, ಬೆಲೆ ಇಳಿಕೆಯಿಂದಾಗಿ ಪರದಾಡುತ್ತಿದ್ದಾರೆ.

ಸದ್ಯ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹5 ಸಾವಿರದಿಂದ ₹6 ಸಾವಿರ ದರವಿದೆ. ಸರ್ಕಾರ ಖರೀದಿ ಕೇಂದ್ರ ತೆರೆಯಲು ಆದೇಶಿಸಿದ್ದರೂ ಇನ್ನೂ ಆರಂಭವಾಗಿಲ್ಲ. ಆದರೆ, ಸೂರ್ಯಕಾಂತಿ ಬೆಳೆದ ಶೇ 80ರಷ್ಟು ರೈತರು ಈಗಾಗಲೇ ಮಾರಾಟ ಮಾಡಿದ್ದಾರೆ.

'ಈಗಾಗಲೇ, ಕಡಿಮೆ ಬೆಲೆಗೆ ಸೂರ್ಯಕಾಂತಿ ಮಾರಾಟ ಮಾಡಿ ಕೈ ಸುಟ್ಟುಕೊಂಡಿದ್ದೇವೆ. ಈಗ ಬೆಂಬಲ ಬೆಲೆಯಡಿ ಖರೀದಿ ಕೇಂದ್ರ ಆರಂಭಿಸಲು ಆದೇಶ ಹೊರಡಿಸಿದರೆ ಪ್ರಯೋಜನ ಏನು? ಸರ್ಕಾರ ರೈತರ ಅನುಕೂಲಕ್ಕೆ ತಕ್ಕಂತೆ ಖರೀದಿ ಕೇಂದ್ರ ತೆರೆಯುವುದಿಲ್ಲ. ವಿಳಂಬ ಮಾಡುವ ಮೂಲಕ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸಿದೆ' ಎಂದು ತಾಲ್ಲೂಕಿನ ಭೈರನಹಟ್ಟಿ ಗ್ರಾಮದ ರೈತ ಸಣ್ಣ ಶಿವಪ್ಪ ತೆಗ್ಗಿನಮನಿ ದೂರಿದರು.

ವಿಜಯನಗರ: ಬಿತ್ತನೆ ಪ್ರದೇಶ ಕ್ಷೀಣ

ಹೊಸಪೇಟೆ: ವಿಜಯನಗರ ಜಿಲ್ಲೆಯಲ್ಲಿ ಬೆಲೆ ಏರಿಳಿತದಿಂದಾಗಿ ಸೂರ್ಯಕಾಂತಿ ಬಿತ್ತನೆ ಪ್ರದೇಶ ಕ್ರಮೇಣ ಕಡಿಮೆಯಾಗುತ್ತಿದೆ.

ಜಿಲ್ಲೆಯಲ್ಲಿ ಮುಂಗಾರಿನಡಿ 4,636 ಹೆಕ್ಟೇರ್, ಹಿಂಗಾರಿನಲ್ಲಿ 422 ಹೆಕ್ಟೇರ್ ಮತ್ತು ಬೇಸಿಗೆಯಲ್ಲಿ 543 ಹೆಕ್ಟೇರ್‌ನಲ್ಲಿ ಸೂರ್ಯಕಾಂತಿ ಬೆಳೆಯಲಾಗುತ್ತಿದೆ.

'ಪ್ರತಿ ಹೆಕ್ಟೇರ್‌ಗೆ 8.7 ಕ್ವಿಂಟಲ್‌ನಷ್ಟು ಇಳುವರಿ ಇದೆ. ಜಿಲ್ಲೆಯಲ್ಲಿ ವಾರ್ಷಿಕ 47 ಸಾವಿರ ಕ್ವಿಂಟಲ್ ಇಳುವರಿ ನಿರೀಕ್ಷಿಸಲಾಗುತ್ತಿದೆ' ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶರಣಪ್ಪ ಮುದುಗಲ್ ತಿಳಿಸಿದರು.

ಕೊಟ್ಟೂರು ಎಪಿಎಂಸಿಯಲ್ಲಿ ಏಪ್ರಿಲ್‌ನಲ್ಲಿ ಕ್ವಿಂಟಲ್‌ಗೆ ₹7,229 ಇದ್ದ ಧಾರಣೆಯು, ಈಗ ₹7,779ಕ್ಕೆ ಮುಟ್ಟಿದೆ.

'ಹಲವು ವರ್ಷಗಳ ಹಿಂದೆ ಸೂರ್ಯಕಾಂತಿ ಬೆಳೆಯಲು ರೈತರು ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಕೂಲಿ ಕಾರ್ಮಿಕರ ಕೊರತೆ ಕಂಡು ಬರುತ್ತಿರಲಿಲ್ಲ. ಬದಲಾದ ಕಾಲಘಟ್ಟದಲ್ಲಿ ಕಾರ್ಮಿಕರ ಕೊರತೆ ಆಗುತ್ತಿದೆ' ಎಂದು ಹರಪನಹಳ್ಳಿ ತಾಲ್ಲೂಕು ಚಿಗಟೇರಿಯ ಕೃಷಿಕ ಎಸ್.ಎಸ್. ಬಸವನಗೌಡ ಹೇಳಿದರು.

'ರೋಹಿಣಿ ಮಳೆ ಹೆಚ್ಚು ಸುರಿದರೆ ಬೆಳೆಗೆ ಹಾನಿಯಾಗುವ ಭಯದಿಂದ ಹೆಚ್ಚಿನ ರೈತರು ಸೂರ್ಯಕಾಂತಿಗೆ ಒಲವು ತೋರಿಸುತ್ತಿಲ್ಲ. ಇಳುವರಿ ಬಂದಾಗ ವ್ಯಾಪಾರಸ್ಥರು ಬೇಕಾಬಿಟ್ಟಿ ಬೆಲೆಗೆ ಕೇಳುತ್ತಾರೆ. ಹಾಗಾಗಿ, ಸೂರ್ಯಕಾಂತಿ ಬೆಳೆಯುವ ಪ್ರದೇಶ ಕಡಿಮೆಯಾಗುತ್ತಿದೆ' ಎಂದು ಹೇಳಿದರು.

HEALTH SPECIAL

ಶ್ರೀ ಶಕ್ತಿ ಮಸಾಜ್ ಥೆರಪಿ

ಬೆಂಗಳೂರು ಇವರ ವತಿಯಿಂದ

ಉಚಿತ ಚಿಕಿತ್ಸೆ (ಬೆಂಗಳೂರುನಲ್ಲಿ)

ದಿನಾಂಕ ರಿಂದ 19/05/2025 ಪ್ರಾರಂಭವಾಗಿದೆ

ಸಮಯ ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ವರಗೆ

ವಿಳಾಸ : ಆನಂದ್ ರಾವ್ ಸರ್ಕಲ್ ಹತ್ತಿರ SC ರೋಡ್, ಕುಮಾರಕೀನೊ ಅಪಾಟ್ಮೆರ್ಂಟ್ ಎದುರು, ಶೇಷಾದ್ರಿಪುರಂ, ಬೆಂಗಳೂರು 20

9019626612

ಮಂಡಿ, ಬೆನ್ನು, ಕತ್ತುನೋವು, ಕೀಲುನೋವು, ಲಕ್ವ, ಹಿಮ್ಮಡಿ ನೋವು, ಟೆನ್ನಿಸ್ ಎಲಬೋ ಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕನ್‌ಗುನ್ಯ ಗಂಟುನೋವು, ರೊಮೆಟೆಡ್ ಅರ್ಥೈಟಿಸ್, ವೆರಿಕೋಸ್ ವೇಯನ್ಸ್ ಸಮಸ್ಯೆ ಕಾಲುಗಳಲ್ಲಿ ಊತ ಮತ್ತು ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಯಾಟಿಕ್, ಮೂಳೆ ನೋವುಗಳಿಗೆ ಯಾವುದೇ ರೀತಿಯ ಔಷದಿ ಇಲ್ಲದೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಇಲ್ಲದೆ ವಿಶೇಷವಾದ A C U ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ.

ಪಾಶ್ವವಾಯು ಪೀಡಿತರಿಗೆ ದೇಶೀಯ ಚಿಕಿತ್ಸೆ

ಸೂಚನೆ : ಪಾರ್ಶ್ವವಾಯುವಿಗೆ ಗುರಿಯಾಗಿ ಒಂದು ವರ್ಷದಿಂದ ಮೇಲ್ಪಟ್ಟ ವಯೋವೃದ್ಧಿಯಾಗಿ ಬಾಯಿಯ ಮುಖಾಂತರ ಔಷಧಿಯನ್ನು ಸೇವಿಸಲು ಸಾಧ್ಯವಾಗುವಂತಹ ರೋಗಿಗಳಿಗೆ ಮಾತ್ರ ಈ ಚಿಕಿತ್ಸೆ ಮಾಡಲಾಗುವುದು.

ಸಂಕ್ಷಿಪ್ತ ಸುದ್ದಿ

ಪಿಎಫ್‌ಗೆ ಶೇ 8.25 ಬಡ್ಡಿದರ ಕೇಂದ್ರ ಸರ್ಕಾರದ ಒಪ್ಪಿಗೆ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ಸಾಲಿನಡಿ ನೌಕರರ ಭವಿಷ್ಯ ನಿಧಿ ಠೇವಣಿಗಳಿಗೆ ಶೇ 8.25ರಷ್ಟು ಬಡ್ಡಿದರ ನೀಡಲು ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ.

ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) 7 ಕೋಟಿಗೂ ಹೆಚ್ಚು ಇರುವ ಚಂದಾದಾರರ ಖಾತೆಗಳಿಗೆ ಈ ಬಡ್ಡಿ ಮೊತ್ತವನ್ನು ಜಮೆ ಮಾಡಲಿದೆ.

ಫೆಬ್ರುವರಿ ಅಂತ್ಯದಲ್ಲಿ ನಡೆದ ಇಪಿಎಫ್‌ಒ ಕೇಂದ್ರೀಯ ಧರ್ಮದರ್ಶಿ ಮಂಡಳಿ (ಸಿಬಿಟಿ) ಸಭೆಯು 2024-25ನೇ ಸಾಲಿಗೆ ಇಷ್ಟು ಮೊತ್ತದ ಬಡ್ಡಿ ಪಾವತಿಸಲು ಒಪ್ಪಿಗೆ ನೀಡಿ, ಅನುಮೋದನೆಗಾಗಿ ಕೇಂದ್ರ ಹಣಕಾಸು ಸಚಿವಾಲಯಕ್ಕೆ ವರದಿ ಸಲ್ಲಿಸಿತ್ತು. ಇದಕ್ಕೆ ಸಮ್ಮತಿ ದೊರೆತಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಅತಿಹೆಚ್ಚು ವಿಮಾ ಪಾಲಿಸಿ ಮಾರಾಟ: ಎಲ್‌ಐಸಿ ದಾಖಲೆ

ನವದೆಹಲಿ (ಪಿಟಿಐ): 24 ಗಂಟೆಯಲ್ಲಿ ಅತಿಹೆಚ್ಚು ಜೀವ ವಿಮಾ ಪಾಲಿಸಿಗಳ ಮಾರಾಟದ ಮೂಲಕ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಗಿನ್ನಿಸ್ ದಾಖಲೆ ಬರೆದಿದೆ.

ಜನವರಿ 20ರಂದು ಒಟ್ಟು 4,52,839 ಏಜೆಂಟ್‌ಗಳು ದೇಶದಾದ್ಯಂತ ಒಟ್ಟು 5,88,107 ಪಾಲಿಸಿಗಳನ್ನು ಮಾರಾಟ ಮಾಡಿದ್ದಾರೆ. ಜಾಗತಿಕ ವಿಮಾ ಕ್ಷೇತ್ರದಲ್ಲಿ ಇದೊಂದು ವಿಶಿಷ್ಟ ದಾಖಲೆಯಾಗಿದೆ ಎಂದು ನಿಗಮ ತಿಳಿಸಿದೆ.

'ಮ್ಯಾಡ್ ಮಿಲಿಯನ್ ಡೇ' ಆದ ಆ ದಿನದಂದು ಕನಿಷ್ಠ ಒಂದು ವಿಮಾ ಪಾಲಿಸಿ ಮಾರಾಟ ಮಾಡುವಂತೆ ಪ್ರತಿ ಏಜೆಂಟ್‌ಗೂ ಮನವಿ ಮಾಡಲಾಗಿತ್ತು. ಗ್ರಾಹಕರು, ಏಜೆಂಟರು ಮತ್ತು ಉದ್ಯೋಗಿಗಳ ಪರಿಶ್ರಮದಿಂದ ಈ ಐತಿಹಾಸಿಕ ಸಾಧನೆ ಮಾಡಲಾಗಿದೆ ಎಂದು ನಿಗಮದ ಸಿಇಒ ಸಿದ್ಧಾರ್ಥ ಮೊಹಂತಿ ತಿಳಿಸಿದ್ದಾರೆ.

ಜಿಎಸ್‌ಟಿ ಬಾಕಿ: ಫಸ್ಟ್ ಗೇಮ್ಸ್‌ಗೆ ನೀಡಿದ್ದ ನೋಟಿಸ್‌ಗೆ ತಡೆ

ನವದೆಹಲಿ (ಪಿಟಿಐ): ಒನ್97 ಕಮ್ಯುನಿಕೇಷನ್ ಒಡೆತನದ ರಿಯಲ್ ಮನಿ ಗೇಮಿಂಗ್ ವೇದಿಕೆಯಾದ ಫಸ್ಟ್ ಗೇಮ್ಸ್‌ಗೆ ₹5,712 ಕೋಟಿ ಜಿಎಸ್‌ಟಿ ಬಾಕಿ ಪಾವತಿಸುವಂತೆ ನೀಡಿದ್ದ ಷೋಕಾಸ್ ನೋಟಿಸ್‌ಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

ದೆಹಲಿಯ ಕೇಂದ್ರ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯವು (ಡಿಜಿಜಿಐ) ಏಪ್ರಿಲ್‌ನಲ್ಲಿ ನೋಟಿಸ್ ಜಾರಿಗೊಳಿಸಿತ್ತು.

ಈ ನೋಟಿಸ್ ವಿರುದ್ಧ ಫಸ್ಟ್ ಗೇಮ್ಸ್ ಕಂಪನಿಯು ನ್ಯಾಯಾಲಯದ ಮೊರೆ ಹೋಗಿತ್ತು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ ಎಂದು ಪೇಟಿಎಂನ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್, ಶನಿವಾರ ಷೇರುಪೇಟೆಗೆ ಮಾಹಿತಿ ನೀಡಿದೆ.

ತೆರಿಗೆ ವಿಚಾರವು ಇಡೀ ಗೇಮಿಂಗ್ ವಲಯಕ್ಕೆ ಸಂಬಂಧಿಸಿದ್ದಾಗಿದೆ. ಫಸ್ಟ್ ಗೇಮ್ಸ್‌ಗಷ್ಟೇ ಸಂಬಂಧಿಸಿದ್ದಲ್ಲ. ಈ ವಿಷಯವನ್ನು ಸುಪ್ರೀಂ ಕೋರ್ಟ್ ತೀರ್ಮಾನಿಸಲಿದೆ ಎಂದು ತಿಳಿಸಿದೆ.

ನವದೆಹಲಿಯಲ್ಲಿ ಶನಿವಾರ ನಡೆದ ನೀತಿ ಆಯೋಗದ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಜತೆಗೆ ಮುಖ್ಯಮಂತ್ರಿಗಳಾದ ತೆಲಂಗಾಣದ ಎ.ರೇವಂತ್ ರೆಡ್ಡಿ, ಪಂಜಾಬ್‌ನ ಭಗವಂತ ಮಾನ್, ಮೇಘಾಲಯದ ಕಾನ್ರಾಡ್ ಸಂಗ್ಮಾ, ಜಾರ್ಖಂಡ್‌ನ ಹೇಮಂತ್ ಸೊರೇನ್ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ನೀರು, ನಿಧಿ: ಕೇಂದ್ರಕ್ಕೆ ಸಿ.ಎಂಗಳ ಬೇಡಿಕೆ

ಒಂದನೇ ಪುಟದಿಂದ...

ಪ್ರತಿಯೊಂದು ರಾಜ್ಯವನ್ನು ವಿಕಸಿತ, ಪ್ರತಿ ನಗರವನ್ನು ವಿಕಸಿತ, ಪ್ರತಿ ನಗರಪಾಲಿಕೆಯನ್ನು ವಿಕಸಿತ ಮತ್ತು ಪ್ರತಿ ಹಳ್ಳಿಯನ್ನು ವಿಕಸಿತ ಮಾಡುವ ಗುರಿಯನ್ನು ನಾವು ಹೊಂದಿರಬೇಕು. ಈ ದಿಕ್ಕಿನಲ್ಲಿ ನಾವು ಕೆಲಸ ಮಾಡಿದರೆ, ಅಭಿವೃದ್ಧಿ ಹೊಂದಿದ ಭಾರತ ಆಗಲು ನಾವು 2047 ರವರೆಗೆ ಕಾಯಬೇಕಾಗಿಲ್ಲ' ಎಂದು ಮೋದಿ ಹೇಳಿದರು.

'ಭಾರತವು ವೇಗವಾಗಿ ನಗರೀಕರಣಗೊಳ್ಳುತ್ತಿದೆ' ಎಂದ ಅವರು, 'ಭವಿಷ್ಯಕ್ಕೆ ಸಿದ್ಧವಾದ ನಗರಗಳತ್ತ ನಾವು ಕೆಲಸ ಮಾಡಬೇಕು. ಬೆಳವಣಿಗೆ, ಆವಿಷ್ಕಾರ ಮತ್ತು ಸುಸ್ಥಿರತೆಯು ಭಾರತದ ನಗರಗಳ ಅಭಿವೃದ್ಧಿಯ ಎಂಜಿನ್ ಆಗಿರಬೇಕು' ಎಂದರು.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಯೋಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ.ಆರ್.ಸುಬ್ರಹ್ಮಣ್ಯಂ, 'ಹೂಡಿಕೆದಾರರನ್ನು ಆಕರ್ಷಿಸಲು, ಉತ್ಪಾದನೆ ಉತ್ತೇಜಿಸಲು, ಉದ್ಯೋಗಗಳನ್ನು ಸೃಷ್ಟಿಸಲು ಅಡೆತಡೆಗಳನ್ನು ನಿವಾರಿಸುವಂತೆ ಪ್ರಧಾನಿ ಮೋದಿ ಅವರು ರಾಜ್ಯಗಳಿಗೆ ಸಲಹೆ ನೀಡಿದರು. ಕೃಷಿ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕೆಂದು ಸೂಚಿಸಿದರು' ಎಂದರು.

ಸಿದ್ದರಾಮಯ್ಯ ಸೇರಿ ನಾಲ್ವರು ಸಿ.ಎಂ ಗೈರು

ಆಯೋಗದ ಸಭೆಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ (ಕರ್ನಾಟಕ), ಮಮತಾ ಬ್ಯಾನರ್ಜಿ (ಪಶ್ಚಿಮ ಬಂಗಾಳ), ನಿತೀಶ್ ಕುಮಾರ್ (ಬಿಹಾರ) ಹಾಗೂ ಎನ್.ರಂಗಸಾಮಿ (ಪುದುಚೆರಿ) ಗೈರುಹಾಜರಾದರು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸಂಪುಟ ಸಹೋದ್ಯೋಗಿ ಕೆ.ಎನ್. ಬಾಲಗೋಪಾಲ್ ಅವರನ್ನು ಕಳುಹಿಸಿಕೊಟ್ಟರು.

ಸಿದ್ದರಾಮಯ್ಯ ಅವರು ಮೈಸೂರಿನಲ್ಲಿ ಇಂದಿರಾ ಕ್ಯಾಂಟೀನ್‌ಗಳ ಉದ್ಘಾಟನೆ ಹಾಗೂ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. 'ಸಿದ್ದರಾಮಯ್ಯ ಅವರು ಸಭೆಯನ್ನು ಬಹಿಷ್ಕರಿಸಿಲ್ಲ. ಮೈಸೂರಿನಲ್ಲಿ ಪೂರ್ವನಿಗದಿತ ಕಾರ್ಯಕ್ರಮ ಇದ್ದುದರಿಂದ ಗೈರುಹಾಜರಾಗಿದ್ದಾರೆ. ಅವರ ಭಾಷಣವನ್ನು ಆಡಳಿತ ಮಂಡಳಿ ಸಭೆಗೆ ಕಳುಹಿಸಿಕೊಡಲಾಗಿದೆ' ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ಸ್ಪಷ್ಟಪಡಿಸಿವೆ. ಆದರೆ, ಅವರ ಭಾಷಣವನ್ನು ಸಭೆಯಲ್ಲಿ ಯಾರು ಮಂಡಿಸುತ್ತಾರೆ ಎಂಬುದನ್ನು ತಿಳಿಸಲಿಲ್ಲ. ಮುಖ್ಯಮಂತ್ರಿಗಳ 16 ಪುಟಗಳ ಭಾಷಣದ ಪ್ರತಿಯನ್ನು ಸಂಜೆ 6.40ಕ್ಕೆ ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಯಿತು.

ಅಯೋಗ್ಯ ಸಂಸ್ಥೆ ಎಂದ ಜೈರಾಮ್: ಟೀಕೆ

ನೀತಿ ಆಯೋಗವನ್ನು 'ಅಯೋಗ್ಯ (ಅಸಮರ್ಥ)' ಸಂಸ್ಥೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಜರಿದರು. ಆಯೋಗದ ಆಡಳಿತ ಮಂಡಳಿ ಸಭೆಯು ಬೂಟಾಟಿಕೆ ಎಂದು ಕಿಡಿಕಾರಿದರು. ಇದಕ್ಕೆ ಬಿಜೆಪಿ ನಾಯಕರು ತೀಕ್ಷ್ಣವಾದ ಪ್ರತಿಕ್ರಿಯೆ ನೀಡಿದರು.

ಅಧಿಕಾರದಲ್ಲಿ ಇರುವವರು ದುರುದ್ದೇಶ ಪೂರಿತ ಮಾತು ಮತ್ತು ಕಾರ್ಯಗಳಿಂದ ಸಾಮಾಜಿಕ ಸಾಮರಸ್ಯದ ಬಂಧಗಳನ್ನು ನಾಶ ಪಡಿಸಿದರೆ ಅದು ಹೇಗೆ ವಿಕಸಿತ ಭಾರತ ಆಗುತ್ತದೆ ಎಂದು ಜೈರಾಮ್ ಪ್ರಶ್ನಿಸಿದರು.

'ದೇಶದ ಅಭಿವೃದ್ಧಿಗಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸೇರಿರುವ ಟೀಮ್ ಇಂಡಿಯಾದ ಸಭೆ ಇದು. ಜೈರಾಮ್ ರಮೇಶ್ ಇದರಲ್ಲಿಯೂ ತಪ್ಪು ಹುಡುಕುತ್ತಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸೈಯದ್ ಶಹನವಾಜ್ ಹುಸೇನ್ ಟೀಕಿಸಿದರು.

ಕೇಂದ್ರದ ತೆರಿಗೆಗಳಲ್ಲಿ ರಾಜ್ಯದ ಪಾಲನ್ನು ಶೇ 50ಕ್ಕೆ ಏರಿಸಬೇಕು. 15ನೇ ಹಣಕಾಸು ಆಯೋಗವು ರಾಜ್ಯಗಳಿಗೆ ಶೇ 42ರಷ್ಟು ಪಾಲು ನಿಗದಿಪಡಿಸಲಾಗಿದೆ. ಆದರೆ, ರಾಜ್ಯವು ಕೇವಲ ಶೇ 33.16ರಷ್ಟು ಪಡೆಯುತ್ತಿದೆ

ಎಂ.ಕೆ.ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ತಮ್ಮ ಸರ್ಕಾರವು 2047ರ ವೇಳೆಗೆ ದೇಶದ ಜಿಡಿಪಿಗೆ ಶೇಕಡ 8ರಷ್ಟು ಕೊಡುಗೆ ನೀಡುವ ಗುರಿ ಹೊಂದಿದೆ. ಆರು ಪ್ರಮುಖ ಮಹಾನಗರಗಳನ್ನು ಅಭಿವೃದ್ಧಿಪಡಿಸಲು ರಾಷ್ಟ್ರೀಯ ಕಾರ್ಯಪಡೆ ರಚಿಸಬೇಕು

ಎ. ರೇವಂತ್ ರೆಡ್ಡಿ, ತೆಲಂಗಾಣ ಮುಖ್ಯಮಂತ್ರಿ

'ವಿಕಸಿತ ಭಾರತ 2047' ಗುರಿ ಮುಟ್ಟಲು ವೇಗವಾಗಿ ಕೆಲಸ ಮಾಡಲು ನೀತಿ ಆಯೋಗದಲ್ಲಿ ಜಿಡಿಪಿ ಬೆಳವಣಿಗೆ, ಜನಸಂಖ್ಯಾ ನಿಯಂತ್ರಣ ಹಾಗೂ ಕೃತಕ ಬುದ್ಧಿಮತ್ತೆ ಬಳಕೆಗೆ ಮೂರು ಉಪ ಗುಂಪುಗಳನ್ನು ರಚಿಸಬೇಕು

ಎನ್.ಚಂದ್ರಬಾಬು ನಾಯ್ಡು, ಆಂಧ್ರಪ್ರದೇಶದ ಮುಖ್ಯಮಂತ್ರಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

Hosur Road

WANTED VGP Plots & VHF Farm land inHosur Tamil Nadu. You have any property for sale in Hosur Contact: 9365816356

ಉದ್ಯೋಗಾವಕಾಶ

Multiple Vacancy

IYENGARS HOME PRODUCTS Pvt Ltd. Wanted experienced marketing Executives (minimum 3 years) & Drivers for LMV Send your resume to Below Address Email: contactus@ihpiyengars.com What's Up No.: 95351 21181

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಲೇಡಿಸ್ ಬ್ಯೂಟಿ ಪಾರ್ಲರ್ ನಲ್ಲಿ ಲೇಡಿಸ್ ಬ್ಯೂಟಿಷಿಯನ್ಸ್ ಬೇಕಾಗಿದ್ದರೆ. ತಿಂಗಳಿಗೆ ವೇತನ 25000/- Full ಟೈಮ್ & Part ಟೈಮ್ ಶೇಷಾದ್ರಿಪುರಂ ಬೆಂಗಳೂರು, ಸಂಪರ್ಕಿಸಿ: 7349494852

ಶಿಕ್ಷಣ

Admission

ಪಲೋಮ ಪದವಿ ಕಾಲೇಜು ಕೋರ್ಸ್ :ಬಿ.ಕಾಂ (B.Com)100% Placement Assistance.ಶುಲ್ಕ ಕೇವಲ 10 ಸಾವಿರ ಮಾತ್ರ.ಉಚಿತ ಬಸ್ ವ್ಯವಸ್ಥೆ.ಮೊ:9902865643, 8904460239.ವಿಳಾಸ:ಚಂದಾಪುರ, ಆನೇಕಲ್ ತಾಲ್ಲೂಕು.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ ವಿ.ವಿ ಪುರಂ:ಜೂನ್ 22,28 ಜುಲೈ 05,22,28 ಹಾಗೂ ಆಗಸ್ಟ್, ಸೆಪ್ಟಂಬರ್ ತಿಂಗಳಿನಲ್ಲಿ ಮಾನಸಸರೋವರ ಯಾತ್ರೆ ಮೌಂಟ್‌ಕೈಲಾಸ,ಕಠ್ಮಂಡು ಮುಕ್ತಿನಾಥ. 01.06.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ,ಪಾರೋ,ಪುನಕಾ ಫೂಚಲಿಂಗ್.8073824856 9206979202 9606032154

★07.06.2025,08.09.2025 ★ 13ದಿನಗಳು ಚಾರ್‌ದಾಮ್. 23.06.2025,17.07.2025 7 ದಿನಗಳು ಕಾಶಿ ಯಾತ್ರಾ. 30.06.2025 9ದಿನಗಳು (ರಾತ್ರಿ ಕಾಶಿಯಲ್ಲಿ ತಂಗುವುದು)ಮತ್ತು ಮೃತ್ಯುಂಜಯ ಹೋಮ ಮಾಡಲಾಗುತ್ತದೆ.ಆರ್.ಗಾಂಧಿ ಟೂರ್ಸ್:9845445809 8861545809

★ಶ್ರೇಯಸ್ ಟೂರ್ಸ್★ 10.06.2025 13ದಿನಗಳು ಆದಿಕೈಲಾಸ ಓಂಪರ್ವತ ನೈನಿತಾಲ್,ಅಲ್ಮೋರಾ,ಇತರೆ. 10.06.2025 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಅಯೋಧ್ಯೆ 24.06.2025 7ದಿನಗಳು ಕಾಶಿ ಅಯೋಧ್ಯೆ,ಪ್ರಯಾಗ್,ಗಯಾ ದೇವಘರ್.13.07.2025 25.07.2025 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯದ ವಿಜಯವಾಢ,ಮಂಗಳಗಿರಿ ಪಂಚರಾಮಕ್ಷೇತ್ರಗಳು ವಾಸವಿಪೆನುಗೊಂಡ,ಅನ್ನಾವರಂ ವಿಶಾಖಪಟ್ಟಣ,ಶ್ರೀಕೂರ್ಮಂ ಅರಕು,ಭದ್ರಾಚಲಂ,ವಾರಂಗಲ್ ಸ್ವರ್ಣಗಿರಿ,ರಾಮಾನುಜಾಚಾರ್ಯ 26.06.2025,15.07.2025 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ (ಅಮರಕಂಟಕ ಮಯ್ಯಾರ್ ಸಹಿತ).8073824856 9206979202 9606032154

ಜುಲೈ 5 ರಿಂದ ಲೇಹ್, ಲಡಾಕ್, ಕಾರ್ಗಿಲ್, ಅಮರ್ನಾಥ್, ವೈಷ್ಣೋ ಮಾತಾ, ಜಮ್ಮು, 11 ದಿನ, ಶ್ರೀಗಂಗಾ ಟೂರಿಸ್ಟ್ Ph: 9480253807/ 8105522133.

ಭಾರತಪರಂಪರ ದರ್ಶನ: 9.6.2025 7 ದಿನಗಳು ಅಯೋಧ್ಯ ಕಾಶಿಯಾತ್ರೆ ವಿಮಾನದಲ್ಲಿ. 18.6.2025 ಚಾರ್ ಧಾಮ್ 13 ದಿನಗಳು ವಿಮಾನದಲ್ಲಿ. ಪ್ರಕಾಶ್ ಹೆಬ್ಬಾರ್: 9448792891.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಶಿಕ್ಷಣ

ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ

www.dhclassifieds.com ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9731810277 | +91 9845114560 | +91 9900428036

*Conditions apply

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

ವೈಕುಂಠ ಸಮಾರಾಧನೆ ಶ್ರೀ ಆರ್. ಲಕ್ಷ್ಮೀನಾರಾಯಣ (ಬಾಬು)

(ದಿವಂಗತ ಎಂ. ರಾಮಕೃಷ್ಣರವರ ಪುತ್ರ)



ಜನನ: 16.02.1970 ನಿಧನ: 15.05.2025

ಇವರು ದಿನಾಂಕ 15-05-2025ರಂದು ರಾತ್ರಿ 11 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ತತ್ಸಂಬಂಧವಾದ ಉತ್ತರ ಕ್ರಿಯಾದಿಗಳು ದಿನಾಂಕ 25-05-2025ನೇ ಭಾನುವಾರ ಬೆಳಗ್ಗೆ 9-00 ಗಂಟೆಗೆ ಹಾಗೂ ಮಧ್ಯಾಹ್ನ 1-30 ಗಂಟೆಗೆ ವೈಕುಂಠ ಸಮಾರಾಧನೆಯನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುತ್ತೇವೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಪ್ರಾರ್ಥಿಸುತ್ತೇನೆ.

ಇಂತಿ ದುಃಖತಪ್ತರು ಆರ್. ಮುನಿರಾಜು, ನಂ. 637, 63ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010. ಫೋ: 9845033334

15ನೇ ವರ್ಷದ ಚಿರಸ್ಮರಣೆ



ಶ್ರೀ|| ಹೆಚ್.ಕೆ.ಚಿಂದಯ್ಯ

(ನಿವೃತ ಅಡಿಷನಲ್ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟಿ)

ನೀವು ನಮ್ಮನ್ನೆಲ್ಲಾ ಅಗಲಿ ಇಂದಿಗೆ ಹದಿನೈದು ವರ್ಷವಾಯಿತು ನೀವು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿರುವಿರಿ ನಿಮ್ಮ ಆತ್ಮಕ್ಕೆ ಶಾಂತಿನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಸವಿನೆನಪು

ಶ್ರೀ ವಿ. ಗೋಪಾಲ್ ರೆಡ್ಡಿ

(ಜನನ: 02.06.1972 • ಮರಣ: 25.05.2021)

ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೆಯಾಗಿ ಉಳಿದಿದೆ.

ಸದಾ ನಿಮ್ಮ ನೆನಪಿನಲ್ಲಿ: ತಂದೆ-ತಾಯಿ ಹಾಗೂ ಕುಟುಂಬಸ್ಥರು

For Online Classified Booking

Name Change / Education / Property / Job / Services & many more

Log on to : dhclassifieds.com

ಸಂಕ್ಷಿಪ್ತ ಸುದ್ದಿ

ಕೊಲಿಜಿಯಂನಲ್ಲಿ ನ್ಯಾಯಮೂರ್ತಿ ಬಿ.ವಿ.ನಾಗರತ್ನ

ನಾಗರತ್ನ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಹಿರಿಯ ಮಹಿಳಾ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಕೊಲಿಜಿಯಂನ ಸದಸ್ಯರಾಗಿದ್ದಾರೆ. ನ್ಯಾಯಮೂರ್ತಿ ಅಭಯ್ ಎಸ್ ಓಕಾ ನಿವೃತ್ತರಾದ ನಂತರ ಶನಿವಾರ ನಾಗರತ್ನ ಅವರು ಕೊಲಿಜಿಯಂನ ಭಾಗವಾದರು.

ಕರ್ನಾಟಕದ ಮಂಡ್ಯ ಜಿಲ್ಲೆ ಪಾಂಡವಪುರದವರಾದ ಬಿ.ವಿ. ನಾಗರತ್ನ ಅವರು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆಗುವ ಸರದಿಯಲ್ಲಿದ್ದಾರೆ. 2027ರ ಸೆಪ್ಟೆಂಬರ್ 23ರಂದು ದೇಶದ ಮೊದಲ ಮಹಿಳಾ ಸಿಜೆಐ ಆಗಿ ಬಿ.ವಿ.ನಾಗರತ್ನ ಅವರ ಕಾರ್ಯಭಾರ ಆರಂಭವಾಗಲಿದೆ. ಅವರ ಸೇವಾವಧಿ 2027ರ ಅಕ್ಟೋಬರ್ 29ರಂದು ಕೊನೆಗೊಳ್ಳಲಿದೆ.

ಸಿಂಧೂ ನದಿ ನೀರು ಹಂಚಿಕೆ ಒಪ್ಪಂದ: ವಿಶ್ವಸಂಸ್ಥೆಯಲ್ಲಿ ತಪ್ಪು ಮಾಹಿತಿ

ಪಾಕ್‌ಗೆ ಭಾರತ ತಕ್ಕ ಪ್ರತ್ಯುತ್ತರ

ವಿಶ್ವಸಂಸ್ಥೆ (ಪಿಟಿಐ): ಸಿಂಧೂ ನದಿ ನೀರು ಹಂಚಿಕೆ ಒಪ್ಪಂದದ (ಐಡಬ್ಲ್ಯುಟಿ) ಬಗ್ಗೆ ಪಾಕಿಸ್ತಾನದ 'ತಪ್ಪು ಮಾಹಿತಿ'ಗೆ ಭಾರತವು ವಿಶ್ವಸಂಸ್ಥೆಯಲ್ಲಿ ತಕ್ಕ ಪ್ರತ್ಯುತ್ತರ ನೀಡಿದೆ.

ಭಾರತದ ಮೇಲೆ ಮೂರು ಯುದ್ಧಗಳು ಮತ್ತು ಸಾವಿರಾರು ಭಯೋತ್ಪಾದಕ ದಾಳಿಗಳನ್ನು ನಡೆಸುವ ಮೂಲಕ ಪಾಕಿಸ್ತಾನವು ಈ ಒಪ್ಪಂದದ ಆಶಯವನ್ನು ಉಲ್ಲಂಘಿಸಿದೆ ಎಂದು ಭಾರತ ಪ್ರತಿಪಾದಿಸಿದೆ.

ಪಹಲ್ಗಾಮ್‌ನಲ್ಲಿ ನಡೆದ ದಾಳಿಯು ತೀವ್ರ ಸ್ವರೂಪದ ಭೀತಿಯನ್ನು ಸೃಷ್ಟಿಸುವ ಹಾಗೂ ಧಾರ್ಮಿಕ ವೈಷಮ್ಯ ಮೂಡಿಸುವ ಉದ್ದೇಶ ಹೊಂದಿತ್ತು
ಎಸ್.ಜೈಶಂಕರ್, ವಿದೇಶಾಂಗ ಸಚಿವ

'ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ನಿಯೋಗ ನೀಡುತ್ತಿರುವ ತಪ್ಪು ಮಾಹಿತಿಗೆ ನಾವು ಪ್ರತಿಕ್ರಿಯೆ ನೀಡಲು ನಿರ್ಬಂಧಿತರಾಗಿದ್ದೇವೆ. ಈ ಒಪ್ಪಂದದ ವಿಷಯದಲ್ಲಿ ಭಾರತವು ಯಾವಾಗಲೂ ಜವಾಬ್ದಾರಿಯುತ ರೀತಿಯಲ್ಲಿ ವರ್ತಿಸಿದೆ' ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಶುಕ್ರವಾರ ಹೇಳಿದ್ದಾರೆ.

'ಸಶಸ್ತ್ರ ಸಂಘರ್ಷದ ಸಮಯದಲ್ಲಿ ನೀರು– ನಾಗರಿಕ ಜೀವಗಳ ರಕ್ಷಣೆ' ಕುರಿತು ವಿಶ್ವಸಂಸ್ಥೆಯಲ್ಲಿ ಸ್ಲೋವೇನಿಯಾ ಆಯೋಜಿಸಿದ್ದ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಭಾರತವು ಪಾಕಿಸ್ತಾನದ ಜತೆ 65 ವರ್ಷಗಳ ಹಿಂದೆ ಸಿಂಧೂ ಜಲ ಒಪ್ಪಂದವನ್ನು ಪ್ರಾಮಾಣಿಕತೆಯಿಂದ ಮಾಡಿಕೊಂಡಿತ್ತು. ಆದರೆ, ಯುದ್ಧ ಮತ್ತು ಭಯೋತ್ಪಾದಕ ದಾಳಿ ನಡೆಸುವ ಮೂಲಕ ಪಾಕಿಸ್ತಾನವು ಈ ಒಪ್ಪಂದದ ಆಶಯವನ್ನು ಉಲ್ಲಂಘಿಸಿದೆ' ಎಂದು ಅವರು ಸಭೆಗೆ ತಿಳಿಸಿದ್ದಾರೆ.

'ಕಳೆದ 4 ದಶಕಗಳಲ್ಲಿ ಭಾರತದಲ್ಲಿ ನಡೆದ ಭಯೋತ್ಪಾದಕ ದಾಳಿಗಳಲ್ಲಿ 20 ಸಾವಿರಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಗಡಿಯಾಚೆಗಿನ ಭಯೋತ್ಪಾದನೆಗೆ ಪಾಕಿಸ್ತಾನ ಬೆಂಬಲ ನೀಡುತ್ತಿರುವುದು, ಭಾರತವು ಈ ಅವಧಿಯುದ್ದಕ್ಕೂ ಅಸಾಧಾರಣ ತಾಳ್ಮೆ ತೋರಿಸಿದೆ' ಎಂದಿದ್ದಾರೆ.

'ಸಿಂಧೂ ಒಪ್ಪಂದ ಅಮಾನತಿಗೆ ಪಾಕ್ ನಡೆ ಕಾರಣ'

ನವದೆಹಲಿ (ಪಿಟಿಐ): ಸಿಂಧೂ ಜಲ ಒಪ್ಪಂದಕ್ಕೆ ಮಾರ್ಗದರ್ಶಕನ ಸ್ಥಾನದಲ್ಲಿ ಇರುವ ತತ್ವಗಳನ್ನು ಪಾಕಿಸ್ತಾನವು ಗಾಳಿಗೆ ತೂರಿದ್ದರ ಸಹಜ ಪರಿಣಾಮವಾಗಿ ಈ ಒಪ್ಪಂದವನ್ನು ಅಮಾನತಿನಲ್ಲಿ ಇರಿಸುವ ತೀರ್ಮಾನ ಕೈಗೊಳ್ಳಬೇಕಾಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಸಂಸತ್ತಿನ ಸಮಿತಿಯೊಂದಕ್ಕೆ ವಿವರಿಸಿದೆ.

ಎಂಜಿನಿಯರಿಂಗ್ ತಂತ್ರಗಳು, ಹವಾಮಾನ ಬದಲಾವಣೆ ಮತ್ತು ನೀರ್ಗಲ್ಲುಗಳ ಕರಗುವಿಕೆ ಸೇರಿದಂತೆ ವಾಸ್ತವ ಪರಿಸ್ಥಿತಿಯಲ್ಲಿನ ಬದಲಾವಣೆಗಳ ಕಾರಣದಿಂದಾಗಿ ಒಪ್ಪಂದದ ಬಗ್ಗೆ ಮರುಚರ್ಚೆ ಅನಿವಾರ್ಯವಾಗಿದೆ ಎಂದು ಅದು ಹೇಳಿದೆ.

ಪಹಲ್ಗಾಮ್ ದಾಳಿ ನಂತರ ಈ ಒಪ್ಪಂದವನ್ನು ಅಮಾನತಿನಲ್ಲಿ ಇರಿಸಲು ಕೇಂದ್ರ ತೆಗೆದುಕೊಂಡ ತೀರ್ಮಾನವನ್ನು ಸಮರ್ಥಿಸಿಕೊಳ್ಳುವ ಸಂದರ್ಭದಲ್ಲಿ, ವಿದೇಶಗಳಿಗೆ ತೆರಳಿರುವ ಭಾರತದ ಸಂಸದರ ನಿಯೋಗಗಳು ಈ ಅಂಶವನ್ನೂ ಹೇಳಲಿವೆ ಎಂದು ಮೂಲಗಳು ಹೇಳಿವೆ.

ಸ್ನೇಹ ಮತ್ತು ಸದ್ಭಾವನೆ ನೆಲೆಯಲ್ಲಿ 1960ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಈ ತತ್ವವನ್ನು ಪಾಕಿಸ್ತಾನವು ವಾಸ್ತವದಲ್ಲಿ ಅಮಾನತಿನಲ್ಲಿ ಇರಿಸಿತ್ತು ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ವಿವರಣೆ ನೀಡಿದ್ದಾರೆ.

ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯ ನಂತರ ಭಾರತ ಕೈಗೊಂಡ ಕ್ರಮಗಳ ಬಗ್ಗೆ ಮಿಸ್ರಿ ಅವರು ಸಂಸತ್ತಿನ ಸಮಿತಿಗೆ ಈಚೆಗೆ ಮಾಹಿತಿ ಒದಗಿಸಿದ್ದಾರೆ. ಅಲ್ಲದೆ, ಪಾಕಿಸ್ತಾನದ ಜೊತೆಗಿನ ಸಂಘರ್ಷದ ನಂತರ ಭಾರತದ ನಿಲುವು ತಿಳಿಸಲು ಏಳೂ ಒಕ್ಕೂಟ ಮತ್ತು 33 ದೇಶಗಳಿಗೆ ಭೇಟಿ ನೀಡುತ್ತಿರುವ ಸಂಸದರ ಏಳು ನಿಯೋಗಗಳ ಜೊತೆ ಕೂಡ ಮಿಸ್ರಿ ಮಾತುಕತೆ ನಡೆಸಿದ್ದಾರೆ.

ಸಿಂಧೂ ಜಲ ಒಪ್ಪಂದಕ್ಕೆ ಸಹಿ ಮಾಡಿದ ನಂತರದಲ್ಲಿ ಆಗಿರುವ ಬದಲಾವಣೆಗಳ ಕುರಿತು ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಯಬೇಕು ಎಂದು ಭಾರತ ಹಲವು ಬಾರಿ ಬಯಸಿದ್ದರೂ ಪಾಕಿಸ್ತಾನವು ಅಡ್ಡಿ ಸೃಷ್ಟಿಸುತ್ತಿದೆ ಎಂದು ಕೂಡ ವಿದೇಶಾಂಗ ಸಚಿವಾಲಯ ಹೇಳಿದೆ.

1950 ಹಾಗೂ 1960ರ ದಶಕದಲ್ಲಿನ ಎಂಜಿನಿಯರಿಂಗ್ ತಂತ್ರ ಆಧರಿಸಿ ಒಪ್ಪಂದ ಮಾಡಿಕೊಳ್ಳಲಾಗಿತ್ತು, ಹೀಗಾಗಿ, 21ನೆಯ ಶತಮಾನಕ್ಕೆ ಈ ಒಪ್ಪಂದ ಸರಿಹೊಂದುವಂತೆ ಮಾಡಲು ಮರುಮಾತುಕತೆ ನಡೆಯುವ ಅಗತ್ಯ ಇದೆ ಎಂದು ಸಚಿವಾಲಯ ಹೇಳಿದೆ.

ಪಾಕಿಸ್ತಾನಿ ಪಡೆಗಳು ನಡೆಸಿದ ಶೆಲ್ ದಾಳಿಯ ಸಂತ್ರಸ್ತರನ್ನು ರಾಹುಲ್ ಗಾಂಧಿ ಅವರು ಶನಿವಾರ ಭೇಟಿಯಾದರು ಪಿಟಿಐ ಚಿತ್ರ

ಪಾಕ್ ದಾಳಿ; ಸಂತ್ರಸ್ತರ ಭೇಟಿಯಾದ ರಾಹುಲ್

ಪೂಂಛ್ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್‌ನಲ್ಲಿ ಪಾಕಿಸ್ತಾನ ಪಡೆಗಳು ಈಚೆಗೆ ನಡೆಸಿದ ಶೆಲ್ ದಾಳಿಯ ಸಂತ್ರಸ್ತರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಭೇಟಿಯಾದರು.

ಶೆಲ್ ದಾಳಿಯಿಂದ ಆಗಿರುವ ಹಾನಿಯನ್ನು 'ದೊಡ್ಡ ದುರಂತ' ಎಂದು ಬಣ್ಣಿಸಿದ ಅವರು, ಎಲ್‌ಒಸಿ ಸಮೀಪದ ಗ್ರಾಮಗಳ ನಿವಾಸಿಗಳು ಅನುಭವಿಸಿರುವ ಸಂಕಷ್ಟವನ್ನು ದೇಶದ ಎಲ್ಲರ ಗಮನಕ್ಕೆ ತರಲಾಗುವುದು ಎಂದರು.

ಪೂಂಛ್ ಪಟ್ಟಣಕ್ಕೆ ಭೇಟಿ ನೀಡಿದ ರಾಹುಲ್, ಮೇ 7ರಿಂದ 10ರ ನಡುವಿನ ಅವಧಿಯಲ್ಲಿ ಶೆಲ್ ದಾಳಿಯಿಂದ ಮೃತಪಟ್ಟವರ ಕುಟುಂಬದ ಸದಸ್ಯರೂ ಸೇರಿದಂತೆ ಸಂತ್ರಸ್ತರ ಜತೆ ಸುಮಾರು ಒಂದು ಗಂಟೆಗೂ ಹೆಚ್ಚುಹೊತ್ತು ಮಾತುಕತೆ ನಡೆಸಿದರು.

'ಇದು ಒಂದು ದೊಡ್ಡ ದುರಂತ. ಅವರು (ಪಾಕಿಸ್ತಾನ ಸೇನೆ) ಜನವಸತಿ ಪ್ರದೇಶಗಳನ್ನು ಗುರಿಯಾಗಿಸಿ ಶೆಲ್ ದಾಳಿ ನಡೆಸಿದ್ದಾರೆ. ಇದರಿಂದ ಹಲವು ಮಂದಿ ತಮ್ಮ ಪ್ರಾಣವನ್ನು ಕಳೆದುಕೊಂಡರು. ನಾನು ಸಂತ್ರಸ್ತರ ಜತೆ ಮಾತನಾಡಿ ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ತಮ್ಮ ಸಮಸ್ಯೆಗಳನ್ನು ರಾಷ್ಟ್ರಮಟ್ಟದಲ್ಲಿ ಪ್ರಸ್ತಾಪಿಸುವಂತೆ ಅವರು ನನ್ನಲ್ಲಿ ಕೇಳಿಕೊಂಡಿದ್ದು, ಆ ಕೆಲಸ ಮಾಡುತ್ತೇನೆ' ಎಂದು ರಾಹುಲ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಆ ಬಳಿಕ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ ಅವರು, 'ಪಾಕಿಸ್ತಾನಿ ಪಡೆಗಳ ಶೆಲ್ ದಾಳಿಯಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಗಳನ್ನು ಭೇಟಿಯಾದೆ. ಹಾನಿಗೊಳಗಾದ ಮನೆಗಳು, ಚದುರಿ ಬಿದ್ದಿರುವ ವಸ್ತುಗಳು, ಒದ್ದೆಯಾದ ಕಣ್ಣುಗಳು ಮತ್ತು ಪ್ರೀತಿಪಾತ್ರರನ್ನು ಕಳೆದುಕೊಂಡವರ ನೋವಿನ ಕಥೆಗಳು– ಈ ದೇಶಭಕ್ತ ಕುಟುಂಬಗಳು ಪ್ರತಿ ಬಾರಿಯೂ ಧೈರ್ಯದಿಂದ ಯುದ್ಧದ ದೊಡ್ಡ ಹೊರೆಯನ್ನು ಹೊರುತ್ತವೆ. ಅವರ ಧೈರ್ಯಕ್ಕೆ ನನ್ನ ನಮನಗಳು' ಎಂದು ಹೇಳಿಕೊಂಡಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್ ಘಟಕದ ಅಧ್ಯಕ್ಷ ತಾರಿಕ್ ಹಮೀದ್ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜಿ.ಎ. ಮಿರ್ ಒಳಗೊಂಡಂತೆ ಕಾಂಗ್ರೆಸ್‌ನ ಹಿರಿಯ ಮುಖಂಡರು ರಾಹುಲ್ ಜತೆಗಿದ್ದರು.

ಪಾಕಿಸ್ತಾನಿ ಪಡೆಗಳು ನಡೆಸಿದ ಶೆಲ್ ದಾಳಿಗೆ ಪೂಂಛ್ ಜಿಲ್ಲೆಯಲ್ಲಿ 13 ಮಂದಿ ಸೇರಿದಂತೆ ಒಟ್ಟು 28 ನಾಗರಿಕರು ಮೃತಪಟ್ಟಿದ್ದಾರೆ.

ಬಿಎಸ್‌ಎಫ್ ಗುಂಡಿಗೆ ನುಸುಳುಕೋರ ಬಲಿ

ಅಹಮದಾಬಾದ್: ದೇಶದೊಳಗೆ ಅಕ್ರಮವಾಗಿ ಪ್ರವೇಶಿಸಲು ಯತ್ನಿಸಿದ ಪಾಕಿಸ್ತಾನದ ಒಳನುಸುಳುಕೋರನೊಬ್ಬನನ್ನು ಬನಾಸ್‌ಕಾಂಠಾ ಜಿಲ್ಲೆಯ ಗಡಿಯಲ್ಲೇ ಹತ್ಯೆ ಮಾಡಲಾಗಿದೆ ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಶನಿವಾರ ತಿಳಿಸಿದೆ.

ಗುಜರಾತ್‌ನ ಗಡಿಯಲ್ಲಿ ಭಾರತೀಯ ಭೂಪ್ರದೇಶವನ್ನು ಪ್ರವೇಶಿಸಲು ಯತ್ನಿಸಿದ ಒಳನುಸುಳುಕೋರನಿಗೆ ಬಿಎಸ್‌ಎಫ್ ಶುಕ್ರವಾರ ರಾತ್ರಿ ಎಚ್ಚರಿಕೆ ನೀಡಿತು. ಇದನ್ನು ಪರಿಗಣಿಸದ ಆತ, ಯೋಧರತ್ತ ಗುಂಡು ಹಾರಿಸಲು ಮುಂದಾದ. ತಕ್ಷಣವೇ ಭದ್ರತಾ ಪಡೆಗಳು ಗುಂಡಿನ ಮಳೆಗರೆದವು. ಅತಿಕ್ರಮ ಪ್ರವೇಶಕ್ಕೆ ಮುಂದಾಗಿದ್ದ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಹೇಳಿದೆ.

ದೇಶ ವಿರೋಧಿ ಪೋಸ್ಟ್: ಬಂಧನ

ಬರೇಲಿ (ಪಿಟಿಐ): ಸಾಮಾಜಿಕ ಜಾಲತಾಣದಲ್ಲಿ 'ದೇಶ ವಿರೋಧಿ' ವಿಷಯವನ್ನು ಹಂಚಿಕೊಂಡಿರುವ ಆರೋಪದಡಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಇರ್ಫಾನ್ ಮತ್ತು ವಾಜಿದ್ ಶಾ, 'ಪಾಕಿಸ್ತಾನ ಜಿಂದಾಬಾದ್' ಎಂದು ಘೋಷಣೆ ಕೂಗುವ ಮತ್ತು ಜನರ ನಾಲಿಗೆ ಕತ್ತರಿಸುವುದಾಗಿ ಬೆದರಿಕೆ ಹಾಕಿರುವ ವಿಡಿಯೊವೊಂದನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ' ಎಂದು ಬಿತ್ರಿ ಚೈನಪುರದ ಠಾಣಾಧಿಕಾರಿ ಅಭಿಷೇಕ್ ಕುಮಾರ್ ತಿಳಿಸಿದ್ದಾರೆ.

ಜೆಜೆಎಂಪಿ ಮುಖ್ಯಸ್ಥ ಪಪ್ಪು ಲೋಹ್ರಾ ಹತ್ಯೆ

ಲಾತೇಹಾರ್ (ಪಿಟಿಐ): ಜಾರ್ಖಂಡ್‌ನ ಲಾತೇಹಾರ್ ಜಿಲ್ಲೆಯಲ್ಲಿ ಶನಿವಾರ ಬೆಳಿಗ್ಗೆ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಜೆಜೆಎಂಪಿ ಮುಖ್ಯಸ್ಥ ಪಪ್ಪು ಲೋಹ್ರಾ ಹಾಗೂ ಸಂಘಟನೆಯ ಉಪ ವಲಯ ಕಮಾಂಡರ್ ಪ್ರಭಾತ್ ಗಂಝೂ ಹತರಾಗಿದ್ದಾರೆ.

ಪಪ್ಪು ಲೋಹ್ರಾ

ಗುಂಡಿನ ಚಕಮಕಿಯಲ್ಲಿ ಗಾಯಗೊಂಡಿದ್ದ ಸಂಘಟನೆಯ ಆಶೀಶ್ ಕುಮಾರ್‌ನನ್ನು ಬಂಧಿಸಲಾಗಿದ್ದು, ಆತನ ಬಳಿಯಿದ್ದ ಶಸ್ತ್ರಾಸ್ತ್ರ ವಶಪಡಿಸಿಕೊಳ್ಳಲಾಗಿದೆ.

ಪೊಲೀಸ್ ಸಿಬ್ಬಂದಿ ಅವಧ್ ಸಿಂಗ್ ಸಹ ಗುಂಡಿನ ಕಾಳಗದಲ್ಲಿ ಗಂಭೀರವಾಗಿ ಗಾಯಗೊಂಡಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ರಾಂಚಿಗೆ ಏರ್‌ಲಿಫ್ಟ್ ಮಾಡಲಾಗಿದೆ.

'ಇಬ್ಬರು ನಕ್ಸಲರು ಮೃತಪಟ್ಟಿದ್ದಾರೆ. ಇವರ ಶವಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ' ಎಂದು ಡಿಐಜಿ ವೈ.ಎಸ್. ರಮೇಶ್ ತಿಳಿಸಿದ್ದಾರೆ.

ಗುಜರಾತ್: ಗುಪ್ತಚರ ಅಧಿಕಾರಿಗಳಿಗೆ ಸೇನೆಯ ಫೋಟೊ

ಪಾಕಿಸ್ತಾನಕ್ಕೆ ಮಾಹಿತಿ: ಬಂಧನ

ಅಹಮದಾಬಾದ್ (ಪಿಟಿಐ): ಪಾಕಿಸ್ತಾನದ ಗುಪ್ತಚರ ಅಧಿಕಾರಿಗಳಿಗೆ ಭಾರತದ ಸೇನಾ ಕಾರ್ಯ ಚಟುವಟಿಕೆಗಳ ಕುರಿತು ಸೂಕ್ಷ್ಮ ಮಾಹಿತಿ ನೀಡಿದ ಆರೋಪದಲ್ಲಿ ಗುಜರಾತ್ ಭಯೋತ್ಪಾದಕ ನಿಗ್ರಹ ಪಡೆ (ಎಟಿಎಸ್), ಕಛ್ ಜಿಲ್ಲೆಯಲ್ಲಿ ಆರೋಗ್ಯ ಕಾರ್ಯಕರ್ತರೊಬ್ಬರನ್ನು ಬಂಧಿಸಿದೆ.

ಕಛ್ ಜಿಲ್ಲೆಯ ಲಖ್‌ಪತ್ ತಾಲ್ಲೂಕಿನ ನಿವಾಸಿ 28 ವರ್ಷದ ಸಹದೇವ್‌ಸಿಂಗ್ ಗೋಹಿಲ್ ಬಂಧಿತ ಆರೋಪಿ. ಇವರು ಇಲ್ಲಿನ ಮಾತಾ ನೊ ಮಧ್ ಗ್ರಾಮದ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅದಿತಿ ಭಾರದ್ವಾಜ್ ಎಂಬ ಹೆಸರಿನಿಂದ ಪರಿಚಯಿಸಿಕೊಂಡ ಪಾಕಿಸ್ತಾನಿ ಏಜೆಂಟ್, ಹಣದ ಆಮಿಷ ವೊಡ್ಡಿ ಗೋಹಿಲ್‌ನಿಂದ ಭಾರತೀಯ ಸೇನೆಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆದುಕೊಂಡಿದ್ದಾಳೆ. ಕಛ್ ಜಿಲ್ಲೆಯಲ್ಲಿ ಗಡಿ ಭದ್ರತಾ ಪಡೆ ಮತ್ತು ಭಾರತೀಯ ನೌಕಾಪಡೆಗೆ ಸೇರಿದ ಸೌಲಭ್ಯಗಳು ಹಾಗೂ ನಿರ್ಮಾಣಗೊಳ್ಳುತ್ತಿರುವ ಹೊಸ ಸೌಲಭ್ಯಗಳ ಬಗ್ಗೆ ಮಾಹಿತಿ ಹಂಚಿಕೊಳ್ಳುವಂತೆ ಆಮಿಷವೊಡ್ಡಲಾಗಿದೆ ಎಂದು ಎಟಿಎಸ್ ಪ್ರಕಟಣೆ ತಿಳಿಸಿದೆ.

ಮುಖ್ಯಾಂಶಗಳು
- 28 ವರ್ಷದ ಸಹದೇವ್‌ಸಿಂಗ್ ಗೋಹಿಲ್ ಬಂಧಿತ ಆರೋಪಿ
- ಬಿಎಸ್‌ಎಫ್, ನೌಕಾಪಡೆಯ ಮಾಹಿತಿ ಹಂಚಿಕೆ
- ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸಿದ್ದ ಪಾಕ್ ಏಜೆಂಟ್

ಗೋಹಿಲ್ 2023ರ ಜೂನ್‌ನಿಂದ ಕಛ್ ಜಿಲ್ಲೆಯ ವಿವಿಧೆಡೆಯಿರುವ ಬಿಎಸ್‌ಎಫ್ ಮತ್ತು ನೌಕಾಪಡೆಯ ಸೌಲಭ್ಯಗಳ ಫೋಟೊಗಳು ಮತ್ತು ವಿಡಿಯೊಗಳನ್ನು ಪಾಕಿಸ್ತಾನಿ ಏಜೆಂಟ್ ಜತೆ ವಾಟ್ಸ್‌ಆ್ಯಪ್ ಮೂಲಕ ಹಂಚಿಕೊಂಡಿದ್ದರು ಎಂದು ಎಸ್‌ಪಿ (ಎಟಿಎಸ್) ಸಿದ್ಧಾರ್ಥ್ ಕೊರುಕೊಂಡ ಹೇಳಿದ್ದಾರೆ.

ಪಾಕಿಸ್ತಾನಿ ಏಜೆಂಟ್ 2023ರ ಜೂನ್‌ನಲ್ಲಿ ಗೋಹಿಲ್ ಅವರನ್ನು ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸಿ ಸ್ನೇಹ ಬೆಳೆಸಿದ್ದಳು. ಅವರ ವಿಶ್ವಾಸ ಗಳಿಸಿದ ಬಳಿಕ ಬಿಎಸ್‌ಎಫ್ ಮತ್ತು ನೌಕಾಪಡೆಯ ಕಚೇರಿಗಳು ಹಾಗೂ ಆ ಗ್ರಾಮದ ಸುತ್ತಲೂ ನಡೆಯುತ್ತಿರುವ ನಿರ್ಮಾಣ ಕಾಮಗಾರಿಗಳ ಫೋಟೊ ಮತ್ತು ವಿಡಿಯೊಗಳನ್ನು ಕಳುಹಿಸುವಂತೆ ಕೇಳಿಕೊಂಡಿದ್ದಳು. ಗೋಹಿಲ್ ಅವುಗಳನ್ನು ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದರು. ಆಕೆ (ಏಜೆಂಟ್) ಪಾಕಿಸ್ತಾನಿ ಗೂಢಚಾರಳು ಎಂಬುದು ಗೋಹಿಲ್‌ಗೆ ತಿಳಿದಿತ್ತು' ಎಂದಿದ್ದಾರೆ.

'ಇದೇ ವರ್ಷ ಜನವರಿಯಲ್ಲಿ ಗೋಹಿಲ್ ತಮ್ಮ ಆಧಾರ್ ಕಾರ್ಡ್ ಬಳಸಿ ಸಿಮ್ ಪಡೆದುಕೊಂಡಿದ್ದು, ಒಟಿಪಿಯನ್ನು ಪಾಕಿಸ್ತಾನಿ ಏಜೆಂಟ್ ಜತೆ ಹಂಚಿಕೊಂಡಿದ್ದರು. ಆ ಮೂಲಕ ಅದೇ ಸಂಖ್ಯೆಗೆ ಲಿಂಕ್ ಆಗಿರುವ ವಾಟ್ಸ್‌ಆ್ಯಪ್‌ಅನ್ನು ಬಳಸಲು ಆಕೆಗೆ ಅವಕಾಶ ಮಾಡಿಕೊಟ್ಟಿದ್ದರು. ಮಾಹಿತಿ ಹಂಚಿದ್ದಕ್ಕೆ ಕೆಲ ದಿನಗಳ ಹಿಂದೆ ಅಪರಿಚಿತ ವ್ಯಕ್ತಿಯಿಂದ ₹40 ಸಾವಿರ ಪಡೆದುಕೊಂಡಿದ್ದರು. ಖಚಿತ ಮಾಹಿತಿ ಮೇರೆಗೆ ಅವರನ್ನು ಕೆಲ ದಿನಗಳ ಹಿಂದೆ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಯಿತು' ಎಂದು ಮಾಹಿತಿ ನೀಡಿದ್ದಾರೆ.

ವಿಚಾರಣೆಯ ಬಳಿಕ ಗೋಹಿಲ್‌ನನ್ನು ಬಂಧಿಸಿ ಸರ್ಕಾರಿ ರಹಸ್ಯ ಕಾಯ್ದೆ ಮತ್ತು ಭಾರತೀಯ ನ್ಯಾಯಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

ಗಡೀಪಾರಾದ ಬೆನ್ನಲ್ಲೇ ಸೆರೆ

ಸಿಬಿಐ ಕಾರ್ಯಾಚರಣೆ: ಅಂಗದ್ ನ್ಯಾಯಾಂಗ ವಶಕ್ಕೆ

ನವದೆಹಲಿ (ಪಿಟಿಐ): ವಂಚನೆ ಪ್ರಕರಣದಲ್ಲಿ ಭಾರತಕ್ಕೆ ಬೇಕಾಗಿದ್ದ ಅಂಗದ್ ಛಾಂದೋಕ್‌ನನ್ನು ಸಿಬಿಐ ಅಧಿಕಾರಿಗಳು ನವದೆಹಲಿಯಲ್ಲಿ ಬಂಧಿಸಿದರು.

ಇಂಟರ್‌ಪೋಲ್‌ನಿಂದ ರೆಡ್ ಕಾರ್ನರ್ ನೋಟಿಸ್ ಜಾರಿಯಾದ ಬಳಿಕ ಅಂಗದ್‌ನನ್ನು ಅಮೆರಿಕದಿಂದ ಗಡೀಪಾರು ಮಾಡಲಾಗಿತ್ತು. ಇಲ್ಲಿನ ಇಂದಿರಾ ಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆಯೇ, ವಶಕ್ಕೆ ಪಡೆದು ಬಂಧಿಸಲಾಯಿತು' ಎಂದು ಸಿಬಿಐನ ಅಧಿಕಾರಿಗಳು ತಿಳಿಸಿದರು. ನಂತರ ಅವರನ್ನು ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ನ್ಯಾಯಾಂಗ ವಶಕ್ಕೆ ಒಪ್ಪಿಸಲಾಯಿತು.

'ಅಂತರರಾಷ್ಟ್ರೀಯ ತಂತ್ರಜ್ಞಾನ ನೆರವು ಹಗರಣದಲ್ಲಿ ವಂಚಿಸಿದ ಆರೋಪದ ಮೇಲೆ 2022ರಲ್ಲಿ ಅಮೆರಿಕದ ನ್ಯಾಯಾಲಯವು ಅಂಗದ್‌ನನ್ನು ಅಪರಾಧಿ ಎಂದು ಘೋಷಿಸಿತ್ತು. ವಂಚನೆಗೊಳಗಾದವರಲ್ಲಿ ಅಮೆರಿಕದ ಹಿರಿಯ ನಾಗರಿಕರೇ ಹೆಚ್ಚಿದ್ದು, ತಮ್ಮ ಉಳಿತಾಯದ ಹಣವನ್ನು ಕಳೆದುಕೊಂಡಿದ್ದರು' ಎಂದು ಅಮೆರಿಕದ ಕಾನೂನು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

'ಅಮೆರಿಕದಲ್ಲಿ ಆಶ್ರಯ ಪಡೆದ ಭಾರತೀಯ ಪ್ರಜೆ ಅಂಗದ್ ನೂರಾರು ಅಮೆರಿಕನ್ನರಿಗೆ ವಂಚಿಸಿದ್ದರು. ಈ ಪ್ರಕರಣದಲ್ಲಿ ಅವರಿಗೆ 6 ವರ್ಷಗಳ ಕಾಲ ಜೈಲುಶಿಕ್ಷೆ ವಿಧಿಸಲಾಗಿತ್ತು' ಎಂದು ಅಮೆರಿಕದ ವಕೀಲ ಝುಕರಿ ಎ.ಕುನ್ಹಾ ತಿಳಿಸಿದರು.

'ಕ್ಯಾಲಿಫೋರ್ನಿಯಾದಲ್ಲಿ ಅಂಗದ್ ದೀರ್ಘಕಾಲದಿಂದ ಹಣ ಅಕ್ರಮ ವರ್ಗಾವಣೆಯ ಜಾಲ ನಡೆಸುತ್ತಿದ್ದ. ತಂತ್ರಜ್ಞಾನದ ನೆರವು ಯೋಜನೆ, ಪ್ರಯಾಣ ಶುಲ್ಕ ಯೋಜನೆ ಅಡಿಯಲ್ಲಿ ಅಮೆರಿಕದ ಸಾವಿರಾರು ಹಿರಿಯ ನಾಗರಿಕರಿಗೆ ವಂಚಿಸಿದ್ದರು. ಈ ಹಣವನ್ನು ನಕಲಿ ಕಂಪನಿ ಸೃಷ್ಟಿಸಿ, ಅದರ ಮೂಲಕ ಅಕ್ರಮವಾಗಿ ವರ್ಗಾಯಿಸುತ್ತಿದ್ದರು. ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಬೃಹತ್ ಜಾಲ ಹೊಂದಿದ್ದರು' ಎಂದು ಝುಕರಿ ಎ.ಕುನ್ಹಾ ವಿವರಿಸಿದರು.



ಅಂಗದ್

ಭಾರತದಲ್ಲೂ ವಂಚನೆ: 2014ರಲ್ಲಿ ಯೂನಿಯನ್ ಬ್ಯಾಂಕ್‌ಗೆ ವಂಚಿಸಿದ್ದ ಪ್ರಕರಣದಲ್ಲಿಯೂ ಅಂಗದ್ ಪ್ರಮುಖ ಆರೋಪಿ. ತಂದೆ ಸುರೇಂದ್ರಸಿಂಗ್, ತಾಯಿ ಹರ್ಲೀನ್ ಕೌರ್, ಸಹೋದರ ಹರ್‌ಸಾಹೀಬ್ ಸಿಂಗ್, ಅಂಗದ್ ಹಾಗೂ ಬ್ಯಾಂಕ್‌ನ ಸಿಬ್ಬಂದಿ ಜೊತೆಗೂಡಿ ವಂಚಿಸಿದ್ದರು. ಇದರಿಂದ ಯೂನಿಯನ್ ಬ್ಯಾಂಕ್‌ಗೆ ನಷ್ಟ ಉಂಟಾಗಿತ್ತು. ಕಾನೂನಿನ ವಿಚಾರಣೆಯಿಂದ ಪಾರಾಗಲು 2016ರಲ್ಲಿ ಕುಟುಂಬ ಸದಸ್ಯರೊಂದಿಗೆ ಅಮೆರಿಕಕ್ಕೆ ಪರಾರಿಯಾಗಿದ್ದರು.

ಇದಾದ ಬಳಿಕ ಅಂಗದ್ ಹಾಗೂ ಕುಟುಂಬಸ್ಥರನ್ನು ಘೋಷಿತ ಅಪರಾಧಿಗಳು ಎಂದು ಘೋಷಿಸಿದ್ದ ನ್ಯಾಯಾಲಯವು ಬಂಧನ ವಾರಂಟ್ ಹೊರಡಿಸಿತ್ತು. 2017ರಲ್ಲಿ ಇಂಟರ್‌ಪೋಲ್ ನೆರವಿನಿಂದ ಸಿಬಿಐ ರೆಡ್‌ಕಾರ್ನರ್ ನೋಟಿಸ್ ಜಾರಿಗೊಳಿಸಿತ್ತು.

'2012ರಿಂದ ದೇಶಕ್ಕೆ ಬೇಕಿದ್ದ 100 ಮಂದಿ ಕುಖ್ಯಾತ ಕ್ರಿಮಿನಲ್‌ಗಳನ್ನು ಇಂಟರ್‌ಪೋಲ್ ನೆರವಿನಿಂದ ಭಾರತಕ್ಕೆ ಕರೆತರಲಾಗಿದೆ' ಎಂದು ಸಿಬಿಐನ ವಕ್ತಾರರು ತಿಳಿಸಿದ್ದಾರೆ.

ಬಾಂಗ್ಲಾದೇಶ ಯೂನುಸ್ ಮುಂದುವರಿಕೆ

ಢಾಕಾ (ಪಿಟಿಐ): ಬಾಂಗ್ಲಾದೇಶ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರರಾಗಿ ಮೊಹಮ್ಮದ್ ಯೂನುಸ್ ಅವರೇ ಮುಂದುವರಿಯಲಿದ್ದಾರೆ ಎಂದು ಸಚಿವ ಸಂಪುಟದ ಸಲಹೆಗಾರರೊಬ್ಬರು ಶನಿವಾರ ಸ್ಪಷ್ಟಪಡಿಸಿದ್ದಾರೆ.

ಯೂನುಸ್

ಯೂನುಸ್ ರಾಜೀನಾಮೆ ನೀಡಲು ನಿರ್ಧರಿಸಿದ್ದಾರೆ ಎಂದು ಎರಡು ದಿನಗಳ ಹಿಂದೆ ಅವರ ಆಪ್ತರೊಬ್ಬರು ಹೇಳಿಕೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

'ಅವರು(ಯೂನುಸ್) ಎಂದಿಗೂ ಹುದ್ದೆ ತ್ಯಜಿಸುವುದಾಗಿ ತಿಳಿಸಿರಲಿಲ್ಲ. ನಮಗೆ ವಹಿಸಿದ ಜವಾಬ್ದಾರಿಯಲ್ಲಿ ಹಲವು ಅಡೆತಡೆಗಳು ಎದುರಾಗಿದ್ದರೂ ಕೂಡ ಅದನ್ನು ನಿವಾರಿಸಿ ಮುನ್ನಡೆಯಲಿದ್ದೇವೆ' ಎಂದು ಸರ್ಕಾರದ ಯೋಜನಾ ಸಲಹೆಗಾರ ವಹೀದುದ್ದೀನ್ ಮಹಮೂದ್ ತಿಳಿಸಿದ್ದಾರೆ.

'ಯೂನುಸ್ ಅವರು ಖಂಡಿತವಾಗಿಯೂ ಆ ಹುದ್ದೆಯಲ್ಲಿ ಉಳಿಯಲಿದ್ದಾರೆ' ಎಂದು ಸ್ಪಷ್ಟಪಡಿಸಿದರು.

ತೈಲ ತುಂಬಿದ್ದ ಕಂಟೇನರ್ ಹೊತ್ತ ಹಡಗು ವಾಲಿರುವುದು

ಕಂಟೇನರ್ ಸಮುದ್ರಪಾಲು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೊಚ್ಚಿಗೆ ಬರುತ್ತಿದ್ದ ಸರಕು ಸಾಗಣೆ ಹಡಗಿನಲ್ಲಿದ್ದ ತೈಲ ತುಂಬಿದ ಕಂಟೇನರ್‌ಗಳು ಸಮುದ್ರಕ್ಕೆ ಬಿದ್ದ ಕಾರಣ ಆತಂಕ ಸೃಷ್ಟಿಯಾಗಿದೆ. ಕಂಟೇನರ್‌ಗಳು ದಡಕ್ಕೆ ಬಂದರೆ ಅವುಗಳ ಬಳಿ ತೆರಳದಂತೆ ಕೇರಳ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಪ್ರಾಧಿಕಾರವು (ಕೆಎಸ್‌ಡಿಎಂಎ) ಜನರಿಗೆ ಎಚ್ಚರಿಸಿದೆ.

ಕೊಚ್ಚಿ ಕರಾವಳಿಯಿಂದ ನೈರುತ್ಯಕ್ಕೆ 38 ನಾಟಿಕಲ್ ಮೈಲುಗಳಷ್ಟು ದೂರದಲ್ಲಿ ಅರಬ್ಬಿ ಸಮುದ್ರದಲ್ಲಿ ಅಪಘಾತ ಸಂಭವಿಸಿದೆ. ಲೈಬೀರಿಯಾ ಧ್ವಜ ಹೊತ್ತಿದ್ದ ಹಡಗು ವಿಝಿಂಜಂನಿಂದ ಕೊಚ್ಚಿಗೆ ಪ್ರಯಾಣಿಸುತ್ತಿದ್ದಾಗ ಒಂದು ಭಾಗಕ್ಕೆ ವಾಲಿದ್ದರಿಂದ ಸುಮಾರು ಹತ್ತು ಕಂಟೇನರ್‌ಗಳು ಸಮುದ್ರಕ್ಕೆ ಬಿದ್ದಿವೆ ಎಂದು ಪ್ರಾಥಮಿಕ ವರದಿಗಳಿಂದ ತಿಳಿದುಬಂದಿದೆ.

ಹಡಗಿನಲ್ಲಿದ್ದ ಎಲ್ಲ 24 ಸಿಬ್ಬಂದಿಯನ್ನು ಕರಾವಳಿ ಕಾವಲು ಪಡೆ ಮತ್ತು ನೌಕಾಪಡೆ ರಕ್ಷಿಸಿದೆ. ಕಂಟೇನರ್‌ಗಳಲ್ಲಿ ಮರೀನ್ ಗ್ಯಾಸ್ ಆಯಿಲ್ (ಹಡಗು, ನೌಕೆಗಳಲ್ಲಿ ಬಳಸುವ ಇಂಧನ) ಸಾಗಿಸಲಾಗುತ್ತಿತ್ತು ಎನ್ನಲಾಗಿದೆ.

'ಅಪಾಯಕಾರಿ ವಸ್ತು' ಹೊಂದಿರುವ ಕಂಟೇನರ್‌ಗಳು ಸಮುದ್ರಕ್ಕೆ ಬಿದ್ದಿದ್ದು, ಅವು ದಡಕ್ಕೆ ಸೇರಬಹುದು ಎಂದು ಕರಾವಳಿ ಕಾವಲು ಪಡೆ ಎಚ್ಚರಿಸಿದೆ. ಆದ್ದರಿಂದ, ಜನರು ಕಂಟೇನರ್‌ಗಳು ಬಳಿ ಹೋಗಬಾರದು ಎಂದು ಕೆಎಸ್‌ಡಿಎಂಎ ತಿಳಿಸಿದೆ.

ಕೋವಿಡ್ ದೃಢಪಟ್ಟಿದ್ದ ವ್ಯಕ್ತಿ ಸಾವು

ಠಾಣೆ (ಪಿಟಿಐ): ಮಹಾರಾಷ್ಟ್ರದ ಪುಣೆಯಲ್ಲಿ ಕೋವಿಡ್‌ನಿಂದಾಗಿ ವ್ಯಕ್ತಿಯೊಬ್ಬರು ಶನಿವಾರ ಮೃತಪಟ್ಟಿದ್ದಾರೆ. ಹೊಸದಾಗಿ 8 ಮಂದಿಯಲ್ಲಿ ಕೋವಿಡ್ ಸೋಂಕು ಇರುವುದು ದೃಢಪಟ್ಟಿದೆ ಎಂದು ಠಾಣೆ ಮಹಾನಗರ ಪಾಲಿಕೆ ಮಾಹಿತಿ ನೀಡಿದೆ. ಇದರೊಂದಿಗೆ ನಗರದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 18ಕ್ಕೆ ಏರಿಕೆಯಾಗಿದೆ.

ಮೃತ ವ್ಯಕ್ತಿಯು 21 ವಯಸ್ಸಿನವರಾಗಿದ್ದು, ಕಲ್ವಾದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜ ಆಸ್ಪತ್ರೆಯಲ್ಲಿ ಸಕ್ಕರೆ ಕಾಯಿಲೆ ಸಂಬಂಧಿತ ಸಮಸ್ಯೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಶುಕ್ರವಾರ ಅವರಿಗೆ ಕೋವಿಡ್ ದೃಢಪಟ್ಟಿತ್ತು. ಮಧುಮೇಹ ಸಂಬಂಧಿತ ಸಮಸ್ಯೆಯಿಂದಲೇ ಅವರು ಮೃತಪಟ್ಟಿದ್ದಾರೆ ಎಂದು ಪಾಲಿಕೆ ತಿಳಿಸಿದೆ.

'ಆತಂಕ ಬೇಡ

ನವದೆಹಲಿ ವರದಿ: 'ಜೆನ್.1' ಉಪತಳಿಗೆ ಸಂಬಂಧಿಸಿದ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಜನರು ಆತಂಕ-ಪಡಬೇಕಿಲ್ಲ ಎಂದು ದೆಹಲಿಯ ವೈದ್ಯರು ಸಲಹೆ ನೀಡಿದ್ದಾರೆ. ಈ ಉಪತಳಿಯು ಅಪಾಯಕಾರಿಯಲ್ಲ ಮತ್ತು ಹೆಚ್ಚಿನ ರೋಗಿಗಳಲ್ಲಿ ಸೌಮ್ಯ ಲಕ್ಷಣಗಳು ಮಾತ್ರ ಕಂಡುಬಂದಿವೆ ಎಂದು ಹೇಳಿದ್ದಾರೆ.

ದೆಹಲಿಯಲ್ಲಿ ಈಚೆಗೆ ದೃಢಪಟ್ಟ ಎಲ್ಲ 23 ಪ್ರಕರಣಗಳಲ್ಲಿ ರೋಗಿಗಳು ಸೌಮ್ಯ ಲಕ್ಷಣಗಳನ್ನು ಹೊಂದಿದ್ದು, ಮನೆಯಲ್ಲೇ ಕ್ವಾರಂಟೈನ್‌ನಲ್ಲಿದ್ದಾರೆ. ಇದರಲ್ಲಿ 22 ಮಂದಿ ಚೇತರಿಸಿಕೊಳ್ಳುತ್ತಿದ್ದು, ಯಾರೂ ಆಸ್ಪತ್ರೆಗೆ ದಾಖಲಾಗಿಲ್ಲ ಎಂದು ದೆಹಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್‌ನ ಹೊಸ ಉಪತಳಿ ದೇಶದಲ್ಲಿ ಮೊದಲ ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ಭಾರತದಲ್ಲಿ ಕೋವಿಡ್‌ನ ಹೊಸ ಉಪತಳಿ 'ಎನ್‌ಬಿ. 1.8.1'ರ ಒಂದು ಪ್ರಕರಣ ಹಾಗೂ 'ಎಲ್‌ಎಫ್.7'ರ ನಾಲ್ಕು ಪ್ರಕರಣಗಳು ದೃಢಪಟ್ಟಿವೆ ಎಂದು ವೈರಾಣು ಸಂರಚನಾ ವಿಶ್ಲೇಷಣೆ ಸಂಸ್ಥೆ (ಐಎನ್‌ಎಸ್‌ಎಸಿಒಜಿ) ದತ್ತಾಂಶಗಳಿಂದ ಶನಿವಾರ ತಿಳಿದುಬಂದಿದೆ.

'ಎನ್‌ಬಿ. 1.8.1' ಮತ್ತು 'ಎಲ್‌ಎಫ್.7' ಉಪತಳಿಗಳು 'ಅಪಾಯಕಾರಿ' ಅಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಈಚೆಗೆ ಹೇಳಿತ್ತು. ಇದನ್ನು ನಿಗಾ ವಹಿಸಬೇಕಾದ ಉಪತಳಿ ಎಂದು ವರ್ಗೀಕರಿಸಿತ್ತು. ಆದರೆ, ಇದೇ ಉಪತಳಿಯು ಚೀನಾ ಮತ್ತು ಏಷ್ಯಾದ ಕೆಲವು ಭಾಗಗಳಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗುತ್ತಿವೆ ಎಂದು ವರದಿಯಾಗಿದೆ.

ಐಎನ್‌ಎಸ್‌ಎಸಿಒಜಿ ಪ್ರಕಾರ, 'ಎನ್‌ಬಿ. 1.8.1' ಉಪತಳಿಯ ಒಂದು ಪ್ರಕರಣ ತಮಿಳುನಾಡಿನಲ್ಲಿ ಏಪ್ರಿಲ್‌ನಲ್ಲಿ ಪತ್ತೆಯಾಗಿದೆ. 'ಎಲ್‌ಎಫ್.7'ರ ನಾಲ್ಕು ಪ್ರಕರಣಗಳು ಗುಜರಾತ್‌ನಲ್ಲಿ ಇದೇ ತಿಂಗಳಲ್ಲಿ ದೃಢಪಟ್ಟಿದೆ.

ದೇಶದಲ್ಲಿ ಈಗ ಕೋವಿಡ್ ಹರಡಲು ಕಾರಣವಾಗಿರುವ ಪ್ರಮುಖ ಉಪತಳಿ 'ಜೆನ್.1' ಆಗಿದೆ. ಕೋವಿಡ್‌ನ ಸಕ್ರಿಯ ಪ್ರಕರಣಗಳಲ್ಲಿ ಶೇ 53ರಷ್ಟು ಇದೇ ಉಪತಳಿಯಿಂದ ಹರಡಿದೆ. 'ಬಿಎ.2' ಉಪತಳಿ ಶೇ 26 ಪ್ರಕರಣಗಳಿಗೆ ಕಾರಣವಾದರೆ ಶೇ 21ರಷ್ಟು ಪ್ರಕರಣಗಳು ಇತರ ಉಪತಳಿಗಳಿಂದ ಹರಡಿದೆ.

ಮೇ 19ರವರೆಗಿನ ಮಾಹಿತಿ ಪ್ರಕಾರ ದೇಶದಲ್ಲಿ ಕೋವಿಡ್‌ನ 257 ಸಕ್ರಿಯ ಪ್ರಕರಣಗಳು ಇವೆ.



ವಿಜಯ್ ಶಾ ವಿರುದ್ಧ ತನಿಖೆ ಆರಂಭಿಸಿದ ಎಸ್‌ಐಟಿ

ಭೋಪಾಲ್/ಇಂದೋರ್ (ಪಿಟಿಐ): ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರ ವಿವಾದಾತ್ಮಕ ಮಾತುಗಳ ಕುರಿತು ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಸೂಚನೆ ಅನುಸಾರ ರಚನೆ ಆಗಿರುವ ವಿಶೇಷ ತಂಡವು (ಎಸ್‌ಐಟಿ) ತನ್ನ ಕೆಲಸ ಆರಂಭಿಸಿದೆ.

ವಿಜಯ್ ಶಾ

ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಗುರಿಯಾಗಿಸಿಕೊಂಡು ಶಾ ಆಕ್ಷೇಪಾರ್ಹ ಮಾತುಗಳನ್ನಾಡಿದ ಸ್ಥಳಕ್ಕೆ ತೆರಳಿ, ಅಲ್ಲಿನ ಜನರ ಜೊತೆ ಮಾತುಕತೆ ನಡೆಸುವ ಕೆಲಸವನ್ನು ಎಸ್‌ಐಟಿ ಶುರು ಮಾಡಿದೆ ಎಂದು ಮೂಲಗಳು ಹೇಳಿವೆ.

'ನಾವು ಗುರುವಾರ ತನಿಖೆ ಆರಂಭಿಸಿದ್ದೇವೆ' ಎಂದು ಎಸ್‌ಐಟಿಯ ಸದಸ್ಯರೊಬ್ಬರು ಹೇಳಿದ್ದಾರೆ. ಮಧ್ಯಪ್ರದೇಶ ಹೈಕೋರ್ಟ್‌ನ ಸೂಚನೆ ಆಧರಿಸಿ ಪೊಲೀಸರು ವಿಜಯ್ ಶಾ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ಎಫ್‌ಐಆರ್ ಅನ್ನು ಎಸ್‌ಐಟಿ ಅಧಿಕಾರಿಗಳಿಗೆ ಹಸ್ತಾಂತರ ಮಾಡಲಾಗಿದೆ.

ಸಚಿವ ವಿಜಯ್ ಶಾ ಅವರನ್ನು ಯಾವಾಗ ವಿಚಾರಣೆಗೆ ಗುರಿಪಡಿಸಲಾಗುತ್ತದೆ ಎಂಬ ಪ್ರಶ್ನೆಗೆ ಹೆಚ್ಚಿನ ವಿವರ ಒದಗಿಸಲು ಎಸ್‌ಐಟಿ ಸದಸ್ಯರು ನಿರಾಕರಿಸಿದ್ದಾರೆ. ಮೇ 28ರೊಳಗೆ ಪ್ರಥಮ ವಸ್ತುಸ್ಥಿತಿ ವರದಿ ಸಲ್ಲಿಸಬೇಕು ಎಂದು ಎಸ್‌ಐಟಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

'ಕಾಣೆಯಾಗಿದ್ದಾರೆ' ಎಂದು ಭಿತ್ತಿಪತ್ರ: ಸಚಿವ ವಿಜಯ್ ಶಾ ಅವರು ನಾಪತ್ತೆಯಾಗಿದ್ದಾರೆ ಎಂದು ಹೇಳುವ ಭಿತ್ತಿಪತ್ರಗಳನ್ನು ಮಧ್ಯಪ್ರದೇಶದ ಇಂದೋರ್ ಜಿಲ್ಲೆಯ ಕಾಂಗ್ರೆಸ್ ಮುಖಂಡ ವಿವೇಕ್ ಖಂಡೇಲ್ವಾಲ್ ವಿವಿಧೆಡೆ ಅಂಟಿಸಿದ್ದಾರೆ. 'ನಾಪತ್ತೆಯಾದ ವ್ಯಕ್ತಿಯ ಶೋಧ' ಎಂಬ ಶೀರ್ಷಿಕೆಯ ಅಡಿಯಲ್ಲಿ ಈ ಭಿತ್ತಿಪತ್ರ ಅಂಟಿಸಲಾಗಿದೆ. ಸಚಿವರ ಬಗ್ಗೆ ಮಾಹಿತಿ ಕೊಟ್ಟವರಿಗೆ ₹11 ಸಾವಿರ ನೀಡಲಾಗುತ್ತದೆ ಎಂದು ಹೇಳಿದ್ದಾರೆ.

ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ

6 ವರ್ಷ ನಂತರ ಫೈನಲ್‌ಗೆ ಶ್ರೀಕಾಂತ್

ಕ್ವಾಲಾಲಂಪುರ (ಪಿಟಿಐ): ಭಾರತದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಆರು ವರ್ಷಗಳಲ್ಲಿ ಇದೇ ಮೊದಲ ಬಾರಿ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಟೂರ್ನಿಯೊಂದರ ಫೈನಲ್ ತಲುಪಿದರು. ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಅವರು ಶನಿವಾರ ಜಪಾನಿನ ಯುಶಿ ತನಾಕ ಅವರನ್ನು ನೇರ ಗೇಮ್‌ಗಳಿಂದ ಹಿಮ್ಮೆಟ್ಟಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟರು.

2021ರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ವಿಜೇತ, 32 ವರ್ಷ ವಯಸ್ಸಿನ ಶ್ರೀಕಾಂತ್ ತಮ್ಮ ಉತ್ತುಂಗದ ದಿನಗಳನ್ನು ನೆನಪಿಸುವಂತೆ ಸೊಗಸಾದ ಆಟವಾಡಿ ವಿಶ್ವ ಕ್ರಮಾಂಕದಲ್ಲಿ 23ನೇ ಸ್ಥಾನದಲ್ಲಿರುವ ತನಾಕ ಅವರನ್ನು 21–18, 24–22 ರಿಂದ ಪರಾಭವಗೊಳಿಸಿದರು. ತಮ್ಮ ಚುರುಕಿನ ಚಲನೆ, ನಿಖರ ನೆಟ್ ಪ್ಲೇ, ಆಕ್ರಮಣದ ಆಟದಿಂದ ಶ್ರೀಕಾಂತ್ ಎದುರಾಳಿಯನ್ನು ಮಣಿಸಿದರು.

'ನನಗೆ ಸಂತಸವಾಗಿದೆ. ಈ ಹಂತಕ್ಕೆ ಬರದೇ ತುಂಬಾ ದಿನಗಳಾಗಿದ್ದವು' ಎಂದು ಶ್ರೀಕಾಂತ್ ಗೆಲುವಿನ ನಂತರ ಪ್ರತಿಕ್ರಿಯಿಸಿದರು. 2019ರ ಇಂಡಿಯಾ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದ ಶ್ರೀಕಾಂತ್ ನಂತರ ಇದೇ ಮೊದಲ ಬಾರಿ ಪ್ರಶಸ್ತಿ ಸುತ್ತಿಗೆ ಕಾಲಿಟ್ಟಿದ್ದಾರೆ.

ಅವರು ಭಾನುವಾರ ನಡೆಯುವ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಚೀನಾ ಆಟಗಾರ ಲಿ ಶಿ ಅವರನ್ನು ಎದುರಿಸಲಿದ್ದಾರೆ. ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಲಿ ಶಿ ಇನ್ನೊಂದು ಸೆಮಿಫೈನಲ್‌ನಲ್ಲಿ 21–15, 21–15 ರಿಂದ ಜಪಾನಿನ ಕೊಡೈ ನರವೊಕಾ ಅವರನ್ನು ಸೋಲಿಸಿದರು.

ಗೆಲುವಿನ ಸಂಭ್ರಮದಲ್ಲಿ ಕಿದಂಬಿ ಶ್ರೀಕಾಂತ್ ಎಕ್ಸ್ ಚಿತ್ರ

ಈ ಹಿಂದೆ ಒಮ್ಮೆ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನಕ್ಕೇರಿದ್ದ ಶ್ರೀಕಾಂತ್ ಇತ್ತೀಚಿನ ವರ್ಷಗಳಲ್ಲಿ ಫಾರ್ಮ್ ಮತ್ತು ಫಿಟ್ನೆಸ್ ಸಮಸ್ಯೆ ಎದುರಿಸಿ 65ನೇ ಸ್ಥಾನಕ್ಕೆ ಕುಸಿದಿದ್ದರು.

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ
ದೂರವಾಣಿ : 08472 –220196 midnglb@rediffmail.com/midnglb1@gmail.com

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–3/2025–26/ 751 ದಿನಾಂಕ: 22–05–2025

–: ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2 & 3) :–

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2024–25ನೇ ಸಾಲಿನ ಎಸ್.ಡಿ.ಎಂ.ಎಫ್. ಹಾಗೂ 2024–25ನೇ ಸಾಲಿನ ಆಣೆಕಟ್ಟು, ಪಿಕಪ್ ಬಂದಾರು, ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಟ ರೂ. 12,47,276.33, ಗರಿಷ್ಠ ರೂ. 79,99,334.31,** 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಮೇಲ್ಪಟ್ಟು (ಬಿಡ್‌ನಲ್ಲಿ ಇರುವಂತೆ), 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆಪಿಪಿ ಪೋರ್ಟಲ್‌ನಂತೆ, ಇ.ಎಂ.ಡಿ. ಮೊತ್ತ ಕನಿಷ್ಠ ರೂ. 16,000.00, ಗರಿಷ್ಠ ರೂ. 1,60,000.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: 03–06–2025 ಸಮಯ 11–00ರ ವರೆಗೆ, 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 04–06–2025 ಸಮಯ 17–30ರ ವರೆಗೆ, 7) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 05–06–2025 ಸಮಯ 17.30ರ ವರೆಗೆ, 8) ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 06–06–2025 ಸಮಯ 17.30ರ ವರೆಗೆ, 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: www. kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/146/ಕೆ.ಎಸ್.ಎಂ.ಸಿ.&ಎ/2025–26

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

EXECUTIVE / ASST. MANAGER / MANAGER - CIRCULATION

Work Location : Bangalore & Tumkur
No. Of Position : 4
Experience : 4-12 years of experience in sales and possess excellent interpersonal skills.
Skills : Sales or Circulation of newspapers.
Qualification : Any Graduate
Job Purpose :
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers and investigates and adjusts dealer complaints.
- Early morning reporting on field is mandatory.
- Two-wheeler is mandatory.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

18 ಆಟಗಾರರ ತಂಡದಲ್ಲಿ ಯುವ ಪ್ರತಿಭೆಗಳೇ ಹೆಚ್ಚು • ಬಳಗದಲ್ಲಿ ಮೂವರು ಕನ್ನಡಿಗರು • ಪಂತ್ ಉಪನಾಯಕ

ಟೆಸ್ಟ್ ಪಡೆಗೆ ಯುವನಾಯಕ ಗಿಲ್

ಮುಂಬೈ (ಪಿಟಿಐ): ಬ್ಯಾಟಿಂಗ್ ಯುವತಾರೆ ಶುಭಮನ್ ಗಿಲ್ ಅವರನ್ನು ಭಾರತ ಟೆಸ್ಟ್ ಕ್ರಿಕೆಟ್ ತಂಡದ ನೂತನ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಶನಿವಾರ ಇಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರಕರ್ ಅವರು 18 ಆಟಗಾರರ ತಂಡವನ್ನು ಪ್ರಕಟಿಸಿದರು. ಗಿಲ್ ಈ ತಂಡದ ನಾಯಕರಾಗಿದ್ದಾರೆ. ತಂಡವು ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ನಡೆಯುವ ಐದು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಆಡಲಿದೆ.

25 ವರ್ಷ ವಯಸ್ಸಿನ ಗಿಲ್ ಅವರು ಭಾರತ ತಂಡದ ಚುಕ್ಕಾಣಿ ಹಿಡಿದ ಕಿರಿಯ ವಯಸ್ಸಿನ ಐದನೇ ಆಟಗಾರನಾಗಿದ್ದಾರೆ. ಈ ಹಿಂದೆ ಮನ್ಸೂರ್ ಅಲಿ ಖಾನ್ ಪಟೌಡಿ (21 ವರ್ಷ), ಸಚಿನ್ ತೆಂಡೂಲ್ಕರ್ (23 ವರ್ಷ), ಕಪಿಲ್ ದೇವ್ (24 ವರ್ಷ) ಮತ್ತು ರವಿ ಶಾಸ್ತ್ರಿ (25 ವರ್ಷ) ಅವರು ಕಿರಿಯ ವಯಸ್ಸಿನಲ್ಲಿ ನಾಯಕರಾಗಿದ್ದರು.

‘ನಾಯಕತ್ವವನ್ನು ವಹಿಸಲು ಹೋದ ವರ್ಷದಿಂದಲೆ ಶುಭಮನ್ ಅವರತ್ತ ಗಮನ ಹರಿಸಿದ್ದೆವು. ಇದೊಂದು ಬಹಳ ಒತ್ತಡ ಭರಿತವಾದ ಕಾರ್ಯವಾಗಿದೆ. ಶುಭಮನ್ ಉತ್ತಮ ಆಟಗಾರನಾಗಿದ್ದು ಒತ್ತಡ ನಿಭಾಯಿಸುವ ಭರವಸೆ ಇದೆ’ ಎಂದು ಅಜಿತ್ ಅಗರಕರ್ ಹೇಳಿದರು.

ತಂಡಕ್ಕೆ ವಿಕೆಟ್‌ಕೀಪರ್ ರಿಷಭ್ ಪಂತ್ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ. ಜೂನ್ 20ರಂದು ಲೀಡ್ಸ್‌ನಲ್ಲಿ ನಡೆಯುವ ಮೊದಲ ಟೆಸ್ಟ್‌ನಲ್ಲಿ ತಂಡವು ಕಣಕ್ಕಿಳಿಯಲಿದೆ.

ಗಿಲ್‌ಗಿಂತ ತುಸು ಹೆಚ್ಚು ಅನುಭವಿಯಾಗಿರುವ 27 ವರ್ಷದ ಪಂತ್ ಅವರು 43 ಟೆಸ್ಟ್‌ಗಳನ್ನು ಆಡಿದ್ದಾರೆ. 42.11ರ ಸರಾಸರಿಯಲ್ಲಿ 2948 ರನ್ ಪೇರಿಸಿದ್ದಾರೆ. ಕೆಳಕ್ರಮಾಂಕ ದಲ್ಲಿ ಉತ್ತಮ ಬ್ಯಾಟರ್ ಆಗಿರುವ ಅವರು 6 ಶತಕ ಮತ್ತು 15 ಅರ್ಧ ಶತಕಗಳನ್ನು ಗಳಿಸಿದ್ದಾರೆ. 2018ರಲ್ಲಿ ಟೆಸ್ಟ್‌ಗೆ ಪದಾರ್ಪಣೆಮಾಡಿದ್ದರು.

ಈಚೆಗಷ್ಟೇ ರೋಹಿತ್ ಶರ್ಮಾ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರು. ವಿರಾಟ್ ಕೊಹ್ಲಿ ಕೂಡ ನಿವೃತ್ತರಾಗಿದ್ದರು. ಆದ್ದರಿಂದ ತಂಡಕ್ಕೆ ಹೊಸ ನಾಯಕನನ್ನು ನೇಮಕ ಮಾಡಲಾಯಿತು. ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಮಾತ್ರ ಆಯ್ಕೆಗೆ ಲಭ್ಯರಾಗಿಲ್ಲ.

ಸಾಯಿ, ಅರ್ಷದೀಪ್‌ಗೆ ಅವಕಾಶ: ಎಡಗೈ ಬ್ಯಾಟರ್ ಸಾಯಿ ಸುದರ್ಶನ್ ಮತ್ತು ಎಡಗೈ ವೇಗಿ ಅರ್ಷದೀಪ್ ಅವರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಮೊದಲ ಬಾರಿಗೆ ಕಣಕ್ಕಿಳಿಯುವ ಅವಕಾಶ ಲಭಿಸಿದೆ. ಸಾಯಿ ಸುದರ್ಶನ್ ಅವರು ಸದ್ಯ ನಡೆಯುತ್ತಿರುವ ಐಪಿಎಲ್‌ನಲ್ಲಿ 638 ರನ್‌ಗಳನ್ನು ಪೇರಿಸಿದ್ದಾರೆ.

ಅರ್ಷದೀಪ್ ಅವರೂ ಈಚೆಗೆ ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ಆಡಿ ಬಂದಿದ್ದಾರೆ. ಅವರ ಆ ಅನುಭವವು ತಂಡಕ್ಕೆ ಉಪಯುಕ್ತವಾಗಲಿದೆ.

ಅಲ್ಲದೇ ಅಭಿಮನ್ಯು ಈಶ್ವರನ್, ಕರುಣ್ ನಾಯರ್ ಮತ್ತು ಎರಡನೇ ವಿಕೆಟ್‌ಕೀಪರ್ ಆಗಿ ಧ್ರುವ ಜುರೇಲ್ ಕೂಡ ಸ್ಥಾನ ಗಳಿಸಿದ್ದಾರೆ. ಫಿಟ್‌ನೆಸ್ ಸಮಸ್ಯೆ ಎದುರಿಸುತ್ತಿರುವ ಜಸ್‌ಪ್ರೀತ್ ಬೂಮ್ರಾ ಕೂಡ ತಂಡದಲ್ಲಿದ್ದಾರೆ. ಆದರೆ, ಅವರು ಎಲ್ಲ ಐದು ಪಂದ್ಯಗಳಲ್ಲಿಯೂ ಆಡುವುದು ಖಚಿತವಿಲ್ಲ.

ತಂಡ ಇಂತಿದೆ: ಶುಭಮನ್ ಗಿಲ್ (ನಾಯಕ), ರಿಷಭ್ ಪಂತ್ (ಉಪನಾಯಕ), ಯಶಸ್ವಿ ಜೈಸ್ವಾಲ್, ಕೆ.ಎಲ್. ರಾಹುಲ್, ಸಾಯಿ ಸುದರ್ಶನ್, ಅಭಿಮನ್ಯು ಈಶ್ವರನ್, ಕರುಣ್ ನಾಯರ್, ನಿತೀಶ್ ರೆಡ್ಡಿ, ರವೀಂದ್ರ ಜಡೇಜ, ಧ್ರುವ ಜುರೇಲ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಪ್ರಸಿದ್ಧಕೃಷ್ಣ, ಆಕಾಶ್ ದೀಪ್, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್.

ರಿಷಭ್ ಪಂತ್ ಮತ್ತು ಶುಭಮನ್ ಗಿಲ್

ಶುಭಮನ್ ಗಿಲ್ ಸಾಧನೆ

ಮಾದರಿ	ಪಂದ್ಯಗಳು	ರನ್	ಸರಾಸರಿ	ಶತಕ	ಅರ್ಧಶತಕ	ಗರಿಷ್ಠ
ಟೆಸ್ಟ್	32	1893	35.05	5	7	128
ಏಕದಿನ	55	2775	59.04	8	15	208
ಟಿ20	21	578	30.42	1	3	126*
ಪ್ರಥಮ ದರ್ಜೆ	61	4587	47.28	14	19	268

ಕರುಣ್‌ಗೆ ‘ಇನ್ನೊಂದು ಅವಕಾಶ’ ಕೊಟ್ಟ ಕ್ರಿಕೆಟ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಕರುಣ್ ನಾಯರ್ ಅವರು ಎಂಟು ವರ್ಷಗಳ ನಂತರ ಭಾರತ ಟೆಸ್ಟ್ ಕ್ರಿಕೆಟ್ ತಂಡಕ್ಕೆ ಮರುಪ್ರವೇಶ ಮಾಡುತ್ತಿದ್ದಾರೆ. ಟೆಸ್ಟ್ ಮಾದರಿಯಲ್ಲಿ ತ್ರಿಶತಕ ದಾಖಲಿಸಿದ ಭಾರತದ ಎರಡನೇ ಬ್ಯಾಟರ್ ಎಂಬ ಹೆಗ್ಗಳಿಕೆಯ ಕರುಣ್ ಅಪ್ಪಟ ಛಲದಂಕಮಲ್ಲ.

ವೈಫಲ್ಯದ ಪ್ರಪಾತಕ್ಕಿಳಿದರೂ ಗಟ್ಟಿ ಛಲ ಮತ್ತು ಕಠಿಣ ಪರಿಶ್ರಮದಿಂದ ಪುಟಿದೆದ್ದು ನಿಂತವರು ಕರುಣ್. 2016ರಲ್ಲಿ ಮೊಹಾಲಿಯಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಬೆಂಗಳೂರಿನ ಕರುಣ್ ಪದಾರ್ಪಣೆ ಮಾಡಿದ್ದರು. ಆಡಿದ ಮೂರನೇ ಟೆಸ್ಟ್‌ನಲ್ಲಿಯೇ (ಚೆನ್ನೈನಲ್ಲಿ ಇಂಗ್ಲೆಂಡ್ ವಿರುದ್ಧ) ತ್ರಿಶತಕ (ಅಜೇಯ 303) ಹೊಡೆದರು. ವೀರೇಂದ್ರ ಸೆಹ್ವಾಗ್ ನಂತರ ತ್ರಿಶತಕ ಸಾಧನೆ ಮಾಡಿದ ಭಾರತೀಯ ಆಟಗಾರನಾದರು. ಆದರೆ ಅದರ ನಂತರ ಅವರಿಗೆ ಸಿಕ್ಕಿದ್ದು ಕೇವಲ ಮೂರು ಟೆಸ್ಟ್ ಪಂದ್ಯಗಳು ಮಾತ್ರ. ಅದೇಕೋ ಆಯ್ಕೆಗಾರರು ಅವರಿಗೆ ಇದಕ್ಕಿಂತ ಹೆಚ್ಚು ಅವಕಾಶ ಗಳನ್ನು ಕೊಡುವ ಔದಾರ್ಯ ತೋರಲಿಲ್ಲ. ದೇಶಿ ಕ್ರಿಕೆಟ್‌ನಲ್ಲಿ ಅವರು ಕ್ರಮೇಣ ವೈಫಲ್ಯಗಳ ಸುಳಿಗೆ ಸಿಲುಕಿದರು. 2022ರ ಸುಮಾರಿಗೆ ತವರಿನ ತಂಡದಲ್ಲಿಯೂ ಸ್ಥಾನ ಕೈತಪ್ಪಿತು.

ಆಗ ಅವರು ಹಾಕಿದ್ದ ‘ಪ್ರಿಯ ಕ್ರಿಕೆಟ್ ನನಗೆ ಇನ್ನೊಂದು ಅವಕಾಶ ಕೊಡು’ ಎಂಬ ಎಕ್ಸ್ ಸಂದೇಶ ಕ್ರಿಕೆಟ್ ಅಭಿಮಾನಿಗಳ ಮನಕಲಕಿದ್ದು ಸುಳ್ಳಲ್ಲ.

ಅವರಿಗೆ ಮತ್ತೆ ಅವಕಾಶಗಳು ಲಭಿಸಿದವು. ವಿದರ್ಭ ತಂಡಕ್ಕೆ ವಲಸೆ ಹೋದ ಅವರು ತಮ್ಮ ಪ್ರತಿಭೆಯನ್ನು ಪಣಕ್ಕೊಡ್ಡಿದರು. ಕಳೆದ ದೇಶಿ ಋತುವಿನಲ್ಲಿ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ ಟೂರ್ನಿಗಳಲ್ಲಿ ರನ್‌ಗಳ ಹೊಳೆಯನ್ನೇ ಹರಿಸಿದರು. ಐಪಿಎಲ್‌ನಲ್ಲಿಯೂ ಮಿಂಚಿದರು. ಅವರ ಛಲದ ಆಟದ ಮುಂದೆ ಬಿಸಿಸಿಐ ಆಯ್ಕೆ ಸಮಿತಿ ತಲೆದೂಗಲೇಬೇಕಾಯಿತು. ಇಂಗ್ಲೆಂಡ್ ಪ್ರವಾಸಕ್ಕೆ ತೆರಳುವ ಭಾರತ ಎ ತಂಡಕ್ಕೆ ಈಚೆಗಷ್ಟೇ ಆಯ್ಕೆ ಮಾಡಲಾಯಿತು. ಇದೀಗ ನವನಾಯಕ ಶುಭಮನ್ ಗಿಲ್ ನಾಯಕತ್ವದ ತಂಡದಲ್ಲಿ ಕರುಣ್ ಸ್ಥಾನ ಪಡೆದಿದ್ದಾರೆ. 33 ವರ್ಷದ ಕರುಣ್ ಇಂಗ್ಲೆಂಡ್ ಅಂಗಳದಲ್ಲಿ ತಮ್ಮ ಬ್ಯಾಟಿಂಗ್ ಸಾಮರ್ಥ್ಯ ಮೆರೆಯಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಒಂದೊಮ್ಮೆ ಶುಭಮನ್ ಅವರು ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ನಿರ್ಧಾರ ಕೈಗೊಂಡರೆ ಕರುಣ್ ಅಥವಾ ಕೆ.ಎಲ್. ರಾಹುಲ್ ಅವರು ಯಶಸ್ವಿ ಜೈಸ್ವಾಲ್ ಜೊತೆಗೆ ಇನಿಂಗ್ಸ್ ಆರಂಭಿಸಬಹುದು. ಇಲ್ಲದಿದ್ದರೆ ವಿರಾಟ್ ಕೊಹ್ಲಿ ನಿವೃತ್ತಿಯಿಂದ ತೆರವಾಗಿರುವ ನಾಲ್ಕನೇ ಕ್ರಮಾಂಕದಲ್ಲಿಯೂ ಕರುಣ್ ಆಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಸದ್ಯ ಕರುಣ್ ಸೇರಿದಂತೆ ಟೆಸ್ಟ್ ತಂಡದಲ್ಲಿ ಮೂವರು ಕನ್ನಡಿಗರು ಇದ್ದಾರೆ. ರಾಹುಲ್ ಮತ್ತು ವೇಗಿ ಪ್ರಸಿದ್ಧ ಕೃಷ್ಣ ಅವರು ಕಣಕ್ಕಿಳಿಯಲಿದ್ದಾರೆ.



ಕರುಣ್ ನಾಯರ್

ಅಜೇಯ ಅರ್ಧಶತಕ ದಾಖಲಿಸಿದ ಸಮೀರ್ ರಿಝ್ವಿ ಎಎಫ್‌ಪಿ ಚಿತ್ರ

ಡೆಲ್ಲಿಗೆ ಸಮಾಧಾನದ ಗೆಲುವು

ಜೈಪುರ (ಪಿಟಿಐ): ಯುವ ಆಟಗಾರ ಸಮೀರ್ ರಿಝ್ವಿ ಅವರ ಬಿರುಸಿನ ಅರ್ಧಶತಕ (ಅಜೇಯ 58, 25ಎ) ಮತ್ತು ಇತರ ಅಗ್ರ ಬ್ಯಾಟರ್‌ಗಳ ಉಪಯುಕ್ತ ಆಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡಕ್ಕೆ ಆರು ವಿಕೆಟ್‌ಗಳಿಂದ ಸೋಲುಣಿಸಿತು. ಇದರಿಂದ ಸತತ ಮೂರನೇ ದಿನ, ಪ್ಲೇಆಫ್‌ಗೆ ಅರ್ಹತೆ ಪಡೆದ ತಂಡವನ್ನು, ರೇಸ್‌ನಿಂದ ಹೊರಬಿದ್ದ ತಂಡವೊಂದು ಸೋಲಿಸಿದಂತೆ ಆಯಿತು.

ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಬ್ಯಾಟಿಂಗ್ ಮಾಡಲು ಕಳಿಸಲ್ಪಟ್ಟ ಪಂಜಾಬ್ ಕಿಂಗ್ಸ್ 8 ವಿಕೆಟ್‌ಗೆ 206 ರನ್‌ಗಳ ಸವಾಲಿನ ಮೊತ್ತ ಗಳಿಸಿತು. ನಾಯಕ ಶ್ರೇಯಸ್ ಅಯ್ಯರ್ (53, 34ಎ, 4x5, 6x2) ಮತ್ತು ಸ್ಟೊಯಿನಿಸ್ (ಔಟಾಗದೇ 44, 16ಎ, 4x3, 6x4) ಅವರು ಪ್ರಮುಖ ಕೊಡುಗೆ ನೀಡಿದರು. ಈ ಗುರಿ ಬೆನ್ನಟ್ಟಿದ ಡೆಲ್ಲಿ ತಂಡ ಮೂರು ಎಸೆತ ಗಳಿರುವಂತೆ 4 ವಿಕೆಟ್‌ಗೆ 208 ರನ್‌ಗಳಿಸಿ, ಗೆಲುವಿನೊಡನೆ ಲೀಗ್ ಅಭಿಯಾನ ಮುಗಿಸಿತು.

ಡೆಲ್ಲಿ ತಂಡಕ್ಕೆ ಕೆ.ಎಲ್.ರಾಹುಲ್ ಮತ್ತು ಫಾಫ್ ಡುಪ್ಲೆಸಿ 5.3 ಓವರುಗಳಲ್ಲಿ 55 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಭಾರತ ಟೆಸ್ಟ್ ತಂಡಕ್ಕೆ ಆಯ್ಕೆಯಾದ ಸಂಭ್ರಮದಲ್ಲಿರುವ ಕರುಣ್ ನಾಯರ್ 44 (27ಎ, 4x5, 6x2) ಕೂಡ ಉಪಯುಕ್ತ ಕೊಡುಗೆ ನೀಡಿದರು. ಅವರ ವಿಕೆಟ್ ಕಳೆದುಕೊಂಡಾಗ ಡೆಲ್ಲಿ ತಂಡಕ್ಕೆ (4 ವಿಕೆಟ್‌ಗೆ 155) ಐದು ಓವರುಗಳಲ್ಲಿ 52 ರನ್‌ಗಳು ಬೇಕಿದ್ದವು.

ಆದರೆ, 21 ವರ್ಷ ವಯಸ್ಸಿನ ಸಮೀರ್ ರಿಝ್ವಿ ಬಿರುಸಿನ ಆಟವಾಡಿದರು. ಟ್ರಿಸ್ಟನ್ ಸ್ಟಬ್ಸ್ ಜೊತೆಗೂಡಿ (ಔಟಾಗದೇ 18, 14ಎ) ಮುರಿಯದ ಐದನೇ ವಿಕೆಟ್‌ಗೆ 53 ರನ್ ಸೇರಿಸಿದರು. ಅವರ ಆಟದಲ್ಲಿ ಮೂರು ಬೌಂಡರಿ, ಐದು ಭರ್ಜರಿ ಸಿಕ್ಸರ್ ಗಳಿದ್ದವು. ಸ್ಟೊಯಿನಿಸ್ ಮಾಡಿದ ಅಂತಿಮ ಓವರಿನ ಮೂರನೇ ಎಸೆತವನ್ನು ಸಿಕ್ಸರ್‌ಗೆತ್ತಿ ಗೆಲುವಿನ ರನ್ ಕೂಡ ಹೊಡೆದರು.

ಶ್ರೇಯಸ್, ಸ್ಟೊಯಿನಿಸ್ ಅಬ್ಬರ: ಇದಕ್ಕೆ ಮೊದಲು ನಾಯಕ ಶ್ರೇಯಸ್ ಅಯ್ಯರ್ ಅವರ ಸೊಗಸಾದ ಅರ್ಧ ಶತಕದ ಬಳಿಕ ಅಂತಿಮ ಹಂತದಲ್ಲಿ ಮಾರ್ಕಸ್ ಸ್ಟೊಯಿನಿಸ್ ತೋಳ್ಬಲ ಮೆರೆದಿದ್ದರಿಂದ ಡೆಲ್ಲಿ ಕ್ಯಾಪಿಟಲ್ಸ್ ಸವಾಲಿನ ಮೊತ್ತ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರುಗಳಲ್ಲಿ 8ಕ್ಕೆ 206 (ಪ್ರಭಸಿಮ್ರನ್ ಸಿಂಗ್ 28, ಜೋಶ್ ಇಂಗ್ಲಿಸ್ 32, ಶ್ರೇಯಸ್ ಅಯ್ಯರ್ 53, ಮಾರ್ಕಸ್ ಸ್ಟೊಯಿನಿಸ್ ಔಟಾಗದೇ 44; ಮುಸ್ತಫಿಝುರ್ ರೆಹಮಾನ್ 33ಕ್ಕೆ3, ವಿಪ್ರಜ್ ನಿಗಂ 38ಕ್ಕೆ2, ಕುಲದೀಪ್ ಯಾದವ್ 39ಕ್ಕೆ2); ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್: 19.3 ಓವರುಗಳಲ್ಲಿ 4 ವಿಕೆಟ್‌ಗೆ 208 (ಕೆ.ಎಲ್.ರಾಹುಲ್ 35, ಫಾಫ್ ಡುಪ್ಲೆಸಿ 23, ಕರುಣ್ ನಾಯರ್ 44, ಸೇದಿಕುಲ್ಲಾ ಅಟಲ್ 22, ಸಮೀರ್ ರಿಝ್ವಿ ಔಟಾಗದೇ 58, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 18; ಹರ್‌ಪ್ರೀತ್ ಬ್ರಾರ್ 41ಕ್ಕೆ2). ಪಂದ್ಯದ ಆಟಗಾರ: ಸಮೀರ್ ರಿಝ್ವಿ.

ಇನ್ನಷ್ಟು ಕ್ರೀಡಾ ಸುದ್ದಿಗಳು 5E

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ಕೆ.ಎನ್. ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ ರೇಸ್‌ನಲ್ಲಿ ಗೆದ್ದ ಕ್ರಾಸ್‌ವಾಟರ್ ಕುದುರೆ ಮಾಲೀಕರಾದ ರಾಜಗಿರಿ ರಬ್ಬರ್ ಅಂಡ್ ಪ್ರೊಡ್ಯೂಸ್ ಕಂಪನಿ ಲಿಮಿಟೆಡ್‌ನ ಪ್ರತಿನಿಧಿ ದಿಲೀಪ್ ಥಾಮಸ್ ಅವರಿಗೆ ‘ಡೆಕ್ಕನ್ ಹೆರಾಲ್ಡ್’ ಮತ್ತು ‘ಪ್ರಜಾವಾಣಿ’ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್. ತಿಲಕ್ ಕುಮಾರ್ ಅವರು ಟ್ರೋಫಿ ಪ್ರದಾನ ಮಾಡಿದರು. ಬಿಟಿಸಿ ಆಡಳಿತ ಮಂಡಳಿ ಸದಸ್ಯರಾದ ಸಿ.ಮಹೇಶ್ ಮೇದಪ್ಪ, ಕೆ.ಹರೀಶ್ ನಾಯಕ್, ಚದುರಂಗ ಕಾಂತರಾಜ್ ಅರಸ್ ಚಿತ್ರದಲ್ಲಿದ್ದಾರೆ ಪ್ರಜಾವಾಣಿ ಚಿತ್ರ

ಕೆ.ಎನ್. ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ ಜಯಿಸಿದ ಕ್ರಾಸ್‌ವಾಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ರೋಚಕ ರೇಸ್‌ನಲ್ಲಿ ಕ್ರಾಸ್‌ವಾಟರ್ ಅಶ್ವವು ಕೆ.ಎನ್. ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ ಜಯಿಸಿತು.

ಈ ರೇಸ್‌ನಲ್ಲಿ ಮುಂಬೈ ಸ್ಪರ್ಧಿ ಕಾವ್ಯ ಪ್ರಶಸ್ತಿ ಗೆಲ್ಲುವ ನೆಚ್ಚಿನ ಕುದುರೆಯಾಗಿತ್ತು. ಬೇಡಿಕೆಯಲ್ಲಿ ಫೇವರಿಟ್ ಕೂಡ ಆಗಿತ್ತು. ಆದರೆ, ಕ್ರಾಸ್‌ವಾಟರ್ ಕುದುರೆಯು ಆರಂಭದಿಂದಲೂ ಮುನ್ನಡೆ ಸಾಧಿಸಿತ್ತು.

ಅರ್ಜುನ್ ಮಂಗ್ಲೋರ್ಕರ್ ತರಬೇತಿಯಲ್ಲಿ ಪಳಗಿರುವ ಕ್ರಾಸ್‌ವಾಟರ್ ಕುದುರೆಯನ್ನು ಜಾಕಿ ಅಲೀಮುದ್ದಿನ್ ಸವಾರಿ ಮಾಡಿದರು. ಕೊನೆಯವರೆಗೂ ತನ್ನ ಲೀಡ್ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾದರು. ಕಾವ್ಯ ಕುದುರೆ ಕೊನೆಯ 300 ಮೀಟರ್ಸ್ ಓಟದಲ್ಲಿ ತೀವ್ರ ಪೈಪೋಟಿ ಒಡ್ಡಿತು. ಆದರೂ ಗೆಲುವು ಸಾಧಿಸಲಿಲ್ಲ. ಮಿಸ್ ಸ್ಮೈಲಿ ಏಂಜೆಲ್ ಮತ್ತು ಚೋಟಿಪಾರಿ ಕ್ರಮವಾಗಿ ಮೂರನೇ ಮತ್ತು ನಾಲ್ಕನೇ ಸ್ಥಾನ ಪಡೆದವು.

ದಿನದ ಪ್ರಧಾನ ರೇಸ್ ವಾರ್ ಹ್ಯಾಮರ್ ಮಿಲಿಯನ್ ರೇಸ್‌ನಲ್ಲಿ ಸುಲೈಮಾನ್ ಅತೋಲಾಹಿ ತರಬೇತಿಯಲ್ಲಿ ಪಳಗಿರುವ ಸರ್ಕಲ್ ಆಫ್ ಡ್ರೀಮ್ಸ್ ಗೆಲುವು ಸಾಧಿಸಿತು. ರೆಡ್ ಬಿಷಪ್, ಸ್ವಾರ್ಮಿ ಸೀ ಮತ್ತು ಐಸ್ ಆಫ್ ಫೈರ್ ಕ್ರಮವಾಗಿ ಉಳಿದ ಸ್ಥಾನಗಳನ್ನು ಪಡೆದವು.

ಜೂನಿಯರ್ ವಿಶ್ವಕಪ್ ಶಾಂಭವಿಗೆ ಚಿನ್ನ

ಝೂಲ್ (ಜರ್ಮನಿ), (ಪಿಟಿಐ): ಭಾರತದ ಶಾಂಭವಿ ಕ್ಷೀರಸಾಗರ್ ಮತ್ತು ಓಜಸ್ವಿ ಠಾಕೂರ್ ಅವರು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.

ಇದರೊಂದಿಗೆ ಭಾರತವು ಎರಡು ಚಿನ್ನ, ಮೂರು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳೊಂದಿಗೆ ಅಂಕಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನ ಪಡೆಯಿತು.

ಫೈನಲ್‌ನಲ್ಲಿ ಶಾಂಭವಿ 253.0 ಅಂಕ ಗಳಿಸಿ ಅಗ್ರಸ್ಥಾನ ಪಡೆದರು. ಓಜಸ್ವಿ 1.2 ಅಂಕಗಳಿಂದ ಚಿನ್ನದ ಪದಕ ತಪ್ಪಿಸಿಕೊಂಡರು.

ಮುಕೇಶ್‌ಗೆ ಕಂಚು: ಭಾರತದ ಮುಕೇಶ್ ನೆಲವಳ್ಳಿ ಅವರು ಪುರುಷರ 25 ಮೀಟರ್ ರ‍್ಯಾಪಿಡ್ ಫೈರ್ ಪಿಸ್ತೂಲ್‌ನಲ್ಲಿ ಕಂಚು ಗೆದ್ದರು. ಫ್ರಾನ್ಸ್‌ನ ಥಾಮಸ್ ಚಿನೋರ್ಸ್ ಮತ್ತು ಪೋಲೆಂಡ್‌ನ ಲುಕಾಸ್ಜ್ ಕೊಪಿವೊಡಾ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.

ಪ್ರಣವ್‌ಗೆ ಕಂಚು: ಹದಿಹರೆಯದ ಸ್ಪರ್ಧಿ ನಾರಾಯಣ್ ಪ್ರಣವ್ ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ಶನಿವಾರ ಕಂಚಿನ ಪದಕ ಗೆದ್ದುಕೊಂಡರು. ಖೇಲೊ ಇಂಡಿಯಾ ಯೂತ್ ಗೇಮ್ಸ್ ಚಾಂಪಿಯನ್ ಆಗಿರುವ ಪ್ರಣವ್ ಫೈನಲ್‌ನಲ್ಲಿ 227.9 ಪಾಯಿಂಟ್ಸ್ ಕಲೆಹಾಕಿದರು.

ಸಂಕ್ಷಿಪ್ತ ಸುದ್ದಿ

ಪಾಟೀದಾರ್, ಕಮಿನ್ಸ್‌ಗೆ ದಂಡ



ಪಾಟೀದಾರ್

ಲಖನೌ (ಪಿಟಿಐ): ಶುಕ್ರವಾರ ನಡೆದ ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಓವರುಗಳನ್ನು ಪೂರೈಸದ ಕಾರಣ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಾಯಕ ರಜತ್ ಪಾಟೀದಾರ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರಿಗೆ ದಂಡ ವಿಧಿಸಲಾಗಿದೆ.

ಸನ್‌ರೈಸರ್ಸ್ ಇದೇ ಮೊದಲ ಬಾರಿ ಈ ತಪ್ಪು ಮಾಡಿದ ಕಾರಣ ಕಮಿನ್ಸ್‌ಗೆ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

ಆರ್‌ಸಿಬಿ ಎರಡನೇ ಬಾರಿ ಈ ತಪ್ಪು ಮಾಡಿದಕ್ಕೆ ₹24 ಲಕ್ಷ ದಂಡ ಹೇರಲಾಯಿತು.

‘ಇಂಪ್ಯಾಕ್ಟ್ ಪ್ಲೇಯರ್ ಸೇರಿ ಆಡುವ 11ರಲ್ಲಿದ್ದ ತಂಡದ ಆಟಗಾರರು ₹6 ಲಕ್ಷ ಅಥವಾ ಪಂದ್ಯ ಸಂಭಾವನೆಯ ಶೇ 25 ರಷ್ಟು– ಇದರಲ್ಲಿ ಯಾವುದು ಕಡಿಮೆಯೊ ಅದನ್ನು ತೆರಬೇಕಾಗಿದೆ’ ಎಂದು ಐಪಿಎಲ್ ಹೇಳಿಕೆಯಲ್ಲಿ ತಿಳಿಸಿದೆ.

ಈ ಪಂದ್ಯವನ್ನು ಪ್ಯಾಟ್ ಕಮಿನ್ಸ್ ಪಡೆ 42 ರನ್‌ಗಳಿಂದ ಗೆದ್ದುಕೊಂಡಿತ್ತು.

ಬಶೀರ್‌ಗೆ 9 ವಿಕೆಟ್; ಇಂಗ್ಲೆಂಡ್‌ಗೆ ಜಯ

ನಾಟಿಂಗ್‌ಹ್ಯಾಮ್ (ಇಂಗ್ಲೆಂಡ್), (ಎಪಿ): ಇಂಗ್ಲೆಂಡ್ ತಂಡ ಏಕೈಕ ಕ್ರಿಕೆಟ್ ಟೆಸ್ಟ್ ಪಂದ್ಯದ ಮೂರನೇ ದಿನವಾದ ಶನಿವಾರ ಜಿಂಬಾಬ್ವೆ ತಂಡವನ್ನು ಇನಿಂಗ್ಸ್ ಮತ್ತು 45 ರನ್‌ಗಳಿಂದ ಸೋಲಿಸಿತು. ಆಫ್ ಬ್ರೇಕ್ ಬೌಲರ್ ಶೋಯೆಬ್ ಬಶೀರ್ (62ಕ್ಕೆ3 ಮತ್ತು 81ಕ್ಕೆ6) ಪಂದ್ಯದಲ್ಲಿ 9 ವಿಕೆಟ್ ಪಡೆದು ಗೆಲುವಿನಲ್ಲಿ ಮಿಂಚಿದರು.

ಪಂದ್ಯದ ಮೊದಲ ದಿನದಾಟದಲ್ಲಿ (ಗುರುವಾರ) ಇಂಗ್ಲೆಂಡ್ ತಂಡವು ತವರಿನಲ್ಲಿ ದಾಖಲೆಯ ಅತ್ಯಧಿಕ (3 ವಿಕೆಟ್‌ಗೆ 498) ಮೊತ್ತ ದಾಖಲಿಸಿತ್ತು. ಆದರೆ 22 ವರ್ಷಗಳ ನಂತರ ಇಂಗ್ಲೆಂಡ್‌ನಲ್ಲಿ ಆಡಿದ ಜಿಂಬಾಬ್ವೆ ಸ್ವಲ್ಪ ಪ್ರತಿರೋಧ ತೋರಿತು. ಜಿಂಬಾಬ್ವೆ ವೇಗಿ ರಿಚರ್ಡ್ ನರಾವ ಬೆನ್ನುನೋವಿನಿಂದ 9 ಓವರ್ ಅಷ್ಟೇ ಮಾಡಿ ನಿರ್ಗಮಿಸಿದ್ದು ಹಿನ್ನಡೆಯಾಗಿತ್ತು. ಆದರೆ ಮೊದಲ ಇನಿಂಗ್ಸ್‌ನಲ್ಲಿ ಬ್ರಿಯಾನ್ ಬೆನೆಟ್ (139) ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಸಿಯಾನ್ ವಿಲಿಯಮ್ಸ್ (88) ಅವರು ಇಂಗ್ಲೆಂಡ್ ದಾಳಿಗೆ ಎದೆಯೊಡ್ಡಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಇಂಗ್ಲೆಂಡ್: 6 ವಿಕೆಟ್‌ಗೆ 565 ಡಿ; ಜಿಂಬಾಬ್ವೆ: 63.2 ಓವರುಗಳಲ್ಲಿ 265 ಮತ್ತು ಎರಡನೇ ಇನಿಂಗ್ಸ್: (ಫಾಲೊಆನ್) 59 ಓವರುಗಳಲ್ಲಿ 255.

CRONTA LUXURIA
PRIVATE RESIDENCES

EXCLUSIVE **3 BHK ULTRA SPACIOUS**
LUXURIOUS RESIDENCES SIZES **2,231 SQ.FT** FOR SALE

OPPOSITE PARK, 1ST MAIN ROAD,
SUBASH NAGAR, MYSURU

LUXURIOUS AND RICH IN AMENITIES

- BIOMETRIC DIGITAL DOOR LOCK
- HIGH SPEED WI-FI
- PIPED GAS CONNECTION
- VIDEO DOOR INTERCOM
- IMPORTED ITALIAN MARBLE FLOORING
- CCTV 24 HOURS SECURITY
- ELECTRIC CHARGER FOR 2 & 4 WHEELER
- 100 % VASTU
- SPACIOUS STILT FLOOR CAR PARKING
- LIFT PROVISION

SMART LIGHTING | **HIGH QUALITY CONSTRUCTION** | **BRANDED MATERIALS**

FOR BOOKING **+91 9591367402**

Raksheenda Publicity: 9845064970

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

SESHADRIPURAM EDUCATIONAL TRUST
(Since 1930)

Seshadripuram Institute of Technology
(Affiliated to Visvesvaraya Technological University, Belagavi, Karnataka and Approved by AICTE, New Delhi.)

Tuition Fee Support for Meritorious Students

ComedK Code : E-212 | K-CET Code : E-307

ADMISSIONS OPEN FOR 2025-26
for the following Engineering Programs

B.E.
- Mechanical Engineering
- Artificial Intelligence and Machine Learning
- Computer Science & Engineering
- Electrical & Electronics Engineering
- Information Science & Engineering
- Electronics and Communication Engineering

The institute is nestled on an expansive 10-acre Campus amidst serene environs on the outskirts of the Heritage City of Mysuru. Housed in a modern building with revolutionary design, it is embellished with state-of-the-art infrastructure and facilities. The highly experienced faculty facilitates excellent Academic Foundation for budding professionals.

Seshadripuram Institute of Technology
Campus No. 4, 5, 6A, 6B & 7B, Kadakola Industrial Area, Mysuru - 571 311.
Contact : Phone No. +91-96064 50926 / +91-96064 50925 / 0821-2440024
E-Mail: sitsetmysuru@gmail.com Website: sitmysore.ac.in

N. R. Pandith Aradhya – President
Dr. Wooday P. Krishna – Honorary General Secretary
Dr. Prahalad Rao K. – Principal

ಇಂಡಿಯನ್ ಹೈಸ್ಕೂಲ್
INDIAN EDUCATION SOCIETY · KNOWLEDGE IS POWER · ESTD. 1978
ಬಸವೇಶ್ವರನಗರ, ಮಂಜುನಾಥನಗರ, ಕಮಲಾನಗರ
7204610551 / 7204610559 / 7204610560

EXCELLENT RESULT SSLC TOPPERS 2024-25

611 ಜಶೋದರಿ ಡಿ
610 ನವ್ಯಾ ಗುಪ್ತಾ ವಿ
603 ಝೂನ್ಸಿ ಡಿ
601 ಸಮನ್ವಿತಾ ದೊಡಮನಿ
595 ಶಾಂಭವಿ ಝಾ
589 ಸೋನಂ ದೇವಿ
585 ಪದ್ಮಾವತಿ .ಟಿ
582 ಮನುಶ್ರೀ ಎಚ್.ಪಿ
580 ಶೃತಿ ಎಸ್. ತೋಟಗಿ
577 ದಿವ್ಯಾಂಶಿ ಜಾಂಗಿದ್
576 ಮೊಹಮ್ಮದ್ ಅರ್ಷದ್
571 ಬಾಲಾಜಿ ಯು
568 ಸಮನ್ವಿತ್ ಆರ್
566 ನಿರಂಜನ್ ಜೆ
565 ಧನುಷ್ ಗೌಡ ಎಲ್
565 ಅನುಪ್ ಕೊತ್ವಾಲ್
552 ಮಾನ್ಯ ಹೆಚ್.ಎಂ.
550 ಪ್ರಿಯಂವಡ ಎಂ
547 ಶರದ್ ಬಿಲೇಭವಿ
545 ಲಹರಿ ಎಸ್
544 ಚೇತನ ಜೆಕೆ
542 ಮೋನಿಷ ಎ
537 ಹಿತೇಶ್ ಎಸ್
536 ಸ್ಫೂರ್ತಿ ಎಲ್ ಮುತ್ತಗಿ
536 ಜೀವಿತ ಕೆ
534 ಚಿನ್ಮಯಿ ಜಿ.ವೈ
534 ಮನು ಡಿ ಪಾಟೀಲ್
533 ಹರ್ಷ ಎನ್ ದೊಡಿಯ
532 ಸಾತ್ವಿಕ್ ಆರ್
532 ಅರ್ಜುನ್ ಸುಬ್ರಮಣ್ಯ
524 ಶಶಾಂಕ್ ವಿ
522 ಗಾನವಿ ಆರ್
521 ಶ್ವೇತ ಜೆ
520 ಸಿಂಚನ ಎ.ಎಂ.
517 ಭೂಮಿಕ ಬಿ.ಎಂ
514 ಮೋನಿಕ ಎಸ್
513 ನಂದನ್ ಕೆಬಿ
506 ವರ್ಷಿಣಿ ಎನ್
502 ಗಗನ್ ಎಂ

2025-26ನೇ ಸಾಲಿನ ದಾಖಲಾತಿ ಪ್ರಾರಂಭವಾಗಿದೆ (ಪ್ರೀ-ನರ್ಸರಿ ಯಿಂದ 10ನೇ ತರಗತಿಯವರೆಗೆ)

REAL ESTATE SELLING

Sites

Banashankari

BANASHANKARI 6TH Stage,4thT'Block 30x40,East/West 2Sides Roads 500Metres From Talaghattapura Metro Station:9845698489, 9620511276

BANASHANKARI 6TH-STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

"BDA SITE 30x40 South Facing, Banashankari 6th_Stage 9th Block, Full White, Owner- 9845088449/ 9845249799"

BANASHANKARI 6TH Stage, 9th Block, #33/A, 40x60 S/F, 100_Feet Parallel, 2.60Cr._Negotiable. OWNER: 9799099699, 9740075563.

BANASHANKARI 6TH Stage,6th Block 20x30, W/F, BCC Layout, 50x80, North/East, Corner: 9632822225/9448618094

SITE FOR Sale Banashankari 5th Stage Near NPS SCHOOL 30x40 North 40ft Road: 9241082155/ 9739685459

HSR Layout

HARALUR NEAR HSR LAYOUT: Reliable Lakedew 40x70 North East Corner Site Sale 4.63 crores- 9845067070

"AVAILABLE BDA_SITE in HSR_Layout 6th_Sector 14th_Cross 40x80 South East CORNER. Contact: 9632788913"

Jayanagar

JAYANAGAR 3RD Block Near Swimming Pool 28x60 BDA Allotment Corner Vacant Site Sale Call: 9980501366

PRIME LOCATION Site For Sale 50x56=2800 sqft at 4th T Block Rs.10 cr not negotiable call Farid Consultant 9880178656/9740066035

Kengeri

40X60 NORTH Facing KHB Site Near Kengeri Satellite Club Circle Reasonable Price Call: 9945191143/ 9945694783

Koramangala

AUSTIN TOWN 6000 Sft 3 Sides Road, BDA Site, Suitable: Appartment, Complex, Hospital, Rs.18,500/-Sft. 9980577227.

Kempegowda Layout

KEMPEGOWDA LAYOUT, Commercial / Residential BDA Site for Sale 30x40, 40x60, 50x80 Contact Kumar 9945119449

BDA APPROVED LAYOUT KNS ANIRVAN 20×30 EAST FACING VACANT SITE NEAR NPK LAYOUT. CONTACT: 8105889812

KEMPEGOWDA LAYOUT 50x80,Site #4233,West-facing 3rd Block"L"sector 300feet-road and 40x60 Site #547,East-facing 1st Block "K"sector 40feet-road. Contact:9845143613

KEMPEGOWDA LAYOUT. BDA 40X60. Close To 100ft Road. 5th. Block. East Facing Site Sale Only Genuine Buyer. Contact Owner. 9731594565/ 9663005859

Magadi Road

ANDRAHALLI MAIN road attach commercial site sale. Also Residential site (600, 800, 1000 sqft). 9113212170

Nagarabhavi

SALE: 30X45 West Facing Plot in Rajajinagar Housing Co-Operative Society Nagarabhavi Srigandhadhakaval 30 feet Road Prime Location. Mob: 9742028999/ 9663077749

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

"NAGARABHAVI BDA-COMPLEX 30x40 West facing BDA Site 40 feet Road Genuine Buyers Contact: 7022218837"

Rajarajeshwari Nagar

RAJARAJESHWARINAGAR IDEAL Homes 73x93 corner BEML, 30x40, 40x60 50x80 Banashankari VI Stage. 30x40 40x60 50x80. 9448483699.

R T Nagar

R.T.NAGAR HMT LAYOUT 40X60 Old House For Sale Excellent Location With 2 Carparking Space Call:9738111222

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

"VISVESHWARAIAH LAYOUT 6th Block 40x60 East Opp.KLE.College 100%_Vastu, Genuine_Buyers Contact: 9739395078"

SMV 6TH BLOCK BDA 30x40 West Facing Near KLE Law College Prime Location. Contact: 7975986504

DC CONVERTED BBMP E-Katha Sites Available for Sale Visveswaraiah Layout East & West Facing Measuring 3500 Sqft to 9000 Sqft 6366232222/ 6366242222

Mysore

0% BROKERAGES FOR BUYING AND SELLING ANY LANDS AND SITES AROUND MYSORE. SRINATH MYSORE: 9945180000



SALE
CHAMRAJPET
COMMERCIAL BUILDING
18,000 SFT,
RENTAL INCOME 7 LACS
SALE PRICE 12 CRORES
Call: 96322-37557 / 96069-07557

RESIDENTIAL LAND FOR SALE
Residentially Converted & approved land of 1,40,000 Sq. feet out of 4.5 Acres land suitable for Apartments, Villas, Row Houses, Plotted development located very close to Bengaluru-Mysore Expressway near WONDERLA, Bengaluru Urban.
Call / WhatsApp
73584 77799 | 78922 55733

Srirampura

SITE 30X100 - 30X50 SRIRAMPURAM
30X100 North facing Site, 30x50 also available on split basis, 1st Cross, A Khata, Single Owner, 2mins from Metro, 17000/sqft, SALE ONLY.
OWNER 9916800300

Mangaluru

15 CENTS Converted Land at Near City Beach Bolar Live well Mangalore Suitable-for Appartment/Residence Contact-Owner 8088524495 8746855588

Udupi

KHB SITE 1725 SQFT PRIME LOCATION IN HEBRI TOWN WESTERN GHATS 23 LAKHS OWNER 9606866368

Sadashiva Nagar

SADASHIVANAGAR 60X90 Dollars Colony 50X90 Sanjaynagar 55X70 R.T.Nagar 40X60 Kumarapark 40X63 Jayamahal 70X100. For-More Information Niti-Estates 9900001973

Anjanapura

ANJANAPURA 2ND Block 40×60 East Facing Ready To Construct BDA Site For Sale Contact: 9972223222

Flat

Double Road

FOR SELL 967 sq.ft flat Municipal no. 79 48/Sudhamanagar, K.H.Road +91 9909106555

Best Commercial
PROPERTY
Invest Smart, Grow Strong with Prime Commercial Plots
60x40, 80x50
COMMERCIAL
Plot for Sale
KHB Surya City
Near Electronic City & Bannerghatta Road

80 ft and 100 ft Roads
MARKET PRICE ₹6000/- PER SQFT
OFFER PRICE ₹4200/- PER SQFT
Ready for Registration
Loans Approved by SBI Bank
Call: 8904980189

COMMERCIAL LAND FOR SALE
Commercially approved land of 55000 Sq.ft with 17000 Sq.ft built Commercial /Ware house space on proposed 150 Feet Road near BOSCH / Eagleton / BIDADI INDUSTRIAL AREA / Greater Bengaluru Smart City.
Call / WhatsApp
73584 77799 | 78922 55733

Chandra Layout

3 BEDROOM FLAT FOR SALE ON BUILDER FLOOR AT CHANDRA LAYOUT, INCOME TAX LAYOUT. 1600Sft SUPER BUILT-UP AREA. INDIVIDUAL KATHA. PRICE 1.80 CRORE. 9844060483-RAJU

Rajajinagar

RAJAJI NAGAR 5 bedroom flat 4298, 3 car parking, 2 private terrace 2.3 Cr 9600008771

Frazer Town

FULLY RENOVATED 3 BHK, 1610 sq.ft. for sale in Mamta manor, Frazer Town. Contact 9620990404.

Kanakapura Road

SALE LUXURY 2/3 BHK Apartment Starts from 8599/-sft at Doddakalasandra, Near Forum Mall. Contact:7204020888 7204030888

General

North

FOR SALE BBMP A Khata property. North Facing 1200 sft plot with 4500 sft building at MSR Nagar. Includes Borewell, BWSSB & BESCOM connections. Close to MS Ramaiah College. Call 7022106263 / 8970433064

LAND FOR SALE
5 ACRES land adjacent to KHB Housing Board Project. Located close to Bengaluru-Mysore Expressway near WONDERLA, Bengaluru Urban.
Call / WhatsApp
73584 77799 | 78922 55733

LAND FOR SALE ELECTRONIC CITY
Good Residential plot available for Sale in Electronic City, Bengaluru, about **13,000 sqft** for individual or small group to purchase, no apartment to build.
Land Located in a wonderful green surrounding **just 1 km from Wipro.**
Call for details **93412 86903**

LAND FOR SALE
Suitable for Residential / Godown / School / Apartments at Sir M Visweshariah Layout - Ullalu Bengaluru-560110
18,513 Sqft. South Facing
at Ullalu Village, Yeshwantapura Hobli, Bengaluru North Taluk, with clear title deeds for sale.
Interested parties for more details please contact :
99019 85699

Industrial & Factory

Peenya

SALE, KIADB, Peenya 1st stage, 10000, 20000 with shed/ power. Peenya 3rd phase- 8000 sqft vaccant land. 9606601763

Residential/ Commercial

Nagasandra

FOR SALE- Area-13068. sft Residential Land for sale in Nagasandra Main Road towards Nelakadaranahalli. Call: 9071153337.

Agricultural Land

Mysore Road

"CONTACT FOR Buying/ Selling Lands Near Ramnagar, Chanapatna, Maddur, Malvahalli, Good Title, Approach Road 9845178335"

MORE Classifieds IN MAIN ISSUE

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

BHARATH EDUCATION SOCIETY ®

BES GROUP OF INSTITUTIONS

16th Main, 4th Block, Jayanagar, Bangalore - 560 011
Web: www.besinstitutions.edu.in Phone: 080-22447067

ADMISSIONS OPEN FOR THE YEAR 2025-26

SHAPE YOUR CAREER WITH INTEGRATED SKILL ENHANCEMENT PROGRAMMES


Sri B.L. Lakkegowda
Founder,
B.E.S. Institutions

Sri S.T. Somashekhar
Hon. President, Bharath Education Society
MLA, Yashwantpur Constituency,
Former Minister, Govt of Karnataka

INSTITUTION	COURES OFFERED	CONTACT INFO
Degree College (Day) Recognised by the UGC (Affiliated to Bengluru City University & AICTE Approved)	B.Com, B.B.A, B.C.A, B.A Accredited by NAAC with B++ Grade	080-26637295 / 94488 48416 besddcol@yahoo.co.in enquirybescollege@gmail.com
Degree College (Evening) Recognised by the UGC (Affiliated to Bengluru City University)	B.Com, B.A Re-accredited with Grade B by NAAC	080-26638415 / 99455 46840 besedceve@gmail.com
Law (Affiliated to KLSU & BCI)	B.A., LL.B (5 Years Course) LL.B (3 Years Course)	080-26630499 94804 50700 / 98866 60319 beslawcollege@gmail.com
Pre University College (Day)	Science - PCMB, PCMC, Commerce-HEBA, SEBA, CEBA Arts - - HEPS	080-26637018 99459 75240 / 95355 58733 principalas018@gmail.com
Pre University College (Evening)	Arts - - - HEPS Commerce - HEBA	080-26533736 95387 98956
Polytechnic Diploma Courses	Civil Engg Computer Science Engg Mechanical Engg Electronics & Communication	080-26651497 94833 66549 484besit@gmail.com Website: www.besit.edu.in
Pharmacy	Diploma in Pharmacy D.Pharma - 2 Years	93422 44449 / 80507 85014 94487 00130 principalbesip@gmail.com
School	Nursery, Primary, High School (State & CBSE Syllabus)	87620 19895
	Kannada Medium High School	99010 33765 / 99169 51815

Sri. Nirmal Kumar K.R. President | Prof N.S. Vijaya Vice President | Sri M. Krishna Das Secretary | Smt. B.L. Nandini Treasurer

BES-25604

GIRLS HOSTEL FACILITIES AVAILABLE

VLS INTERNATIONAL SCHOOL

AFFILIATED TO CISCE, KA 227, NEW DELHI
#7/1, 7th B Main, 3rd Stage, 4th Block, Sharada Colony, Basaveshwarnagar, B.lore-79

No. of students Appeared-96
No. of Distinctions-68
No. of First class- 21
No. Of Second Class -7

Admissions open for 2025-26 From pre nursery to Grade 10

The Management and Staff of VLSIS Congratulates the Students

for Securing 100% results in the ICSE Examination 2025

100% RESULTS from consecutive 13 year's

Akash S 97.4%, Sumeet R Murthy 96.2%, Binesh Krishna 96.2%, Nayana R 95.6%, Poorna Prakash R 95%, Dhruvin R Shah 94.4%, R Shravani 94.2%, Vathsal K Harish 94.2%
Ishmitha A Choyal 94%, Prakruthi P 93.4%, Rahan Ranjith 93.4%, Bhumika D 93.2%, Manith Rao S 93.2%, Hamsapriya 93.2%, Sujan N 93%, Preetham S 93%
Abdur Rahman Saad 93%, Mohammed Saqib 92.4%, L B Paveesh 92.4%, Anagha H 92.2%, Pal Ramesh Vora 92.2%, Ganvika 92%, Prajwal K N 92%, Neeraj G Prasad 92%
Gunjan P 92%, Nishta Sinha 91.4%, Varsha S M 91%, Sarvesh M 91%, Sushanth Pendimi 91%, Devpreet Singh 90.2%, N S Shobith Gauranga Gupta 90%

SRI HANUMAN GROUP OF EDUCATIONAL INSTITUTIONS®

NATIONAL PUBLIC SCHOOL

(AFFILIATED TO CBSE BOARD, AFFILIATION NO. 830249)
(JP PARK) Bandappa Garden, Gokula Extension, Muthyalanagar, Bengaluru-54.
080-23374802 www.nps.blr.in nps.principal@gmail.com

H Phillanjanappa
Founder & Principal

100% RESULT IN GRADE X CBSE BOARD

TOPPER

Nagma Sulthana, Syeda Safiya, Shashi Kumar C, Harshitha Patel, Divya S, Singala Venkata Charan
Asfiya, Bebe Hajira, Venkat Lakshmi, Vedavathi R, Jagat Jeet Dhal, Zeenath Sulthana
Prithvi M, Akshaj L, Shalini, G Supritha Sai, Jayesh M, Sham M
Yeshwanth G M, Nikhil Teja N, Dharshini Shree K, Mukesh Patel D, Amsavalli Saligha, Yatish K
Joshna Devi C L, Suprith T

Hearty Congratulations to all the Student
From Management, Principal & Staff

ADMISSION OPEN FOR 2025-2026

SRI HANUMAN GROUP OF EDUCATIONAL INSTITUTIONS®
Bandappa Garden, Muthayalnagar, Gokula Extn.
Bengaluru - 560 054.

H Phillanjanappa
Founder & Principal

Inspire | Empower | Growth

C M NATIONAL PU COLLEGE

ADMISSION OPEN FOR PU COURSES 2025-2026

NO DONATION

COURSES OFFERED

SCIENCE:
PCMB / PCME / PCMC

COMMERCE:
GEBA / CEBA / SEBA

MAKE THE RIGHT CHOICE

- Comprehensive study materials
- Mentoring, Performance Analysis and Monitoring
- Special Classes for Learning Enhancement
- Interactive Lecturing and Practical Teaching

ADD ON COURSES
K-CET / NEET, TALLY, EXCEL COURSES

www.npsblr.in
nps.principal@gmail.com

080-23374802
9845054168
9900343399
9148822865

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331